# ಅಧ್ಯಾಯ ೨

## ಇತಿಹಾಸ

**ಪೀಠಿಕೆ:** ಕರ್ನಾಟಕದ ಆಗ್ನೇಯದಂಚಲ್ಲಿ ಪೂರ್ವಘಟ್ಟಗಳಿಗೆ ಸ್ವಲ್ಪ ಹೊಂದಿಕೊಂಡಂತೆ ಇರುವ ಕೋಲಾರ ಜಿಲ್ಲೆಯು, ಭೌಗೋಳಿಕವಾಗಿ ಆಯಕಟ್ಟಿನ ಸ್ಥಳದಲ್ಲಿರುವುದರಿಂದ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ರೂಪಿಸುವಲ್ಲಿ ಬಹು ಹಿಂದಿನಿಂದಲೂ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿದೆ. ಭೌಗೋಳಿಕವಾಗಿ ಜಿಲ್ಲೆಯು ವೈವಿಧ್ಯತೆಯಿಂದ ಕೂಡಿದ ನಂದಿಬೆಟ್ಟ, ಟೇಕಲ್, ಸೀತಿಬೆಟ್ಟ, ಕುರುಡುಮಲೆ, ಮುರಗಮಲೆ, ಆವನಿ, ಅಂಬಾಜಿದುರ್ಗ, ರೆಹಮಾನ್‌ದುರ್ಗ, ಇಟ್ಟಲ್‌ದುರ್ಗ ಮುಂತಾದ ಬೆಟ್ಟ–ಗುಡ್ಡ ಗಿರಿಶ್ರೇಣಿ, ಗಿರಿದುರ್ಗಗಳನ್ನು ಹೊಂದಿದ್ದರೂ ಮೈದಾನ ಪ್ರದೇಶವೇ ಅಧಿಕವಾಗಿದೆ. ಪಾಲಾರ್, ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ, ಚಿತ್ರಾವತಿ, ಹಾಗೂ ಪಾಪಾಘ್ನಿ ನದಿಗಳಿಂದಾಗಿ ಕೋಲಾರ ಜಿಲ್ಲೆಯನ್ನೂ ಪಂಚನದಿಗಳ ನಾಡೆಂದು ಕರೆಯ ಬಹುದಾಗಿದ್ದು, ಅವೂ ಸೇರಿದಂತೆ ಕೌಂಡಿನ್ಯ, ವೃಷಭಾವತಿ, ಮಾರ್ಕಂಡೇಯ ಮುಂತಾದ ನದಿ–ಉಪನದಿಗಳು ಜಿಲ್ಲೆಯಲ್ಲಿದ್ದರೂ ಇವು ವರ್ಷವಿಡಿ ಹರಿಯುವ ಜೀವನದಿಗಳಾಗಿ ಉಳಿದಿಲ್ಲ. ಆದರೂ ಅವುಗಳಲ್ಲಿ ಕೆಲವು ನದಿಗಳ ಒಡಲು ನೂರಾರು ಕೆರೆಗಳ ನಿರಂತರ ಜಾಲವನ್ನು ಜಿಲ್ಲೆಯಲ್ಲಿ ನಿರ್ಮಿಸಲು ನೆರವಾಗಿವೆ. ತತ್ಪರಿಣಾಮವಾಗಿ ಬಹು ಹಿಂದಿನಿಂದಲೂ ಜಿಲ್ಲೆಯು ಕೆರೆ ನೀರಾವರಿಯನ್ನೇ ಅವಲಂಬಿಸಿದ್ದು, ಬಾವಿ, ಕೆರೆ–ಕುಂಟೆ, ಕಟ್ಟೆ–ಕಾಲುವೆಗಳ ನಿರ್ಮಾಣ, ದುರಸ್ತಿ ಹಾಗೂ ದೇವಾಲಯಗಳ ಸ್ಥಾಪನೆ ಮುಂತಾದ ಸಮಾಜಕಲ್ಯಾಣ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಕಾಲದಿಂದಲೂ ವಿವಿಧ ರಾಜಮನೆತನಗಳು ಕೈಗೊಂಡ ಕ್ರಮಗಳನ್ನು ಸಾರುವ ನೂರಾರು ಶಾಸನಗಳು ಜಿಲ್ಲೆಯುದ್ದಕ್ಕೂ ಹರಡಿಕೊಂಡಿದ್ದು, ಅವುಗಳ ನೆರವಿನಿಂದ ಜಿಲ್ಲೆಯ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ಅರಿಯಬಹುದಾಗಿದೆ.

ಜಿಲ್ಲೆಯ ಪೌರಾಣಿಕ ಹಿನ್ನೆಲೆಯನ್ನು ರಾಮಾಯಣ, ಮಹಾಭಾರತಗಳಷ್ಟು ಹಿಂದಕ್ಕೆ ಗುರುತಿಸಲಾಗುತ್ತಿದ್ದು, ಅದನ್ನು ಬಿಂಬಿಸುವ ಐತಿಹ್ಯ–ಸ್ಥಳಪುರಾಣಗಳನ್ನು ಜಿಲ್ಲೆಯಾದ್ಯಂತ ಗಮನಿಸಬಹುದಾಗಿದ್ದು, ಜಿಲ್ಲಾ ಕೇಂದ್ರ ಕೋಲಾರಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆಯಿದೆ. ಜಿಲ್ಲೆಯು ಇತಿಹಾಸಪೂರ್ವ ಕಾಲದ ಸಂಸ್ಕೃತಿಗೂ ಹೆಸರಾಗಿದ್ದು, ವಿವಿಧ ಸಾಂಸ್ಕೃತಿಕ ಘಟ್ಟಗಳಿಗೆ ಸೇರಿದ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ನೆಲೆಗಳನ್ನು ಜಿಲ್ಲೆಯಲ್ಲಿ ಗುರುತಿಸುವಲ್ಲಿ ವಿದ್ವಾಂಸರು ಈವರೆಗೆ ಯಶಸ್ವಿಯಾಗಿದ್ದಾರೆ. ಅವುಗಳನ್ನು ಆಧರಿಸಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ಕನಿಷ್ಠ ನೂತನ ಶಿಲಾಯುಗ ಸಂಸ್ಕೃತಿಯಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಸಿಂಧೂ ನಾಗರಿಕತೆಗೆ ಸೇರಿದ ಹರಪ್ಪಾ ಹಾಗೂ ಮೊಹೆಂಜೋದಾರೋ ಪಟ್ಟಣಗಳಲ್ಲಿ ಲಭಿಸಿರುವ ಚಿನ್ನದ ಪುರಾವಸ್ತುಗಳಲ್ಲಿ ಅಡಕವಾಗಿರುವ ಬೆಳ್ಳಿಯ ಪ್ರಮಾಣವನ್ನು ಆಧರಿಸಿ, ಅವನ್ನು ಕೋಲಾರದ ಚಿನ್ನದ ಗಣಿ ಪ್ರದೇಶದಿಂದ ಆಮದು ಮಾಡಿಕೊಂಡಿರಬಹುದೆಂದು ೧೯೨೮ರಷ್ಟು ಹಿಂದೆಯೇ ಜಾನ್ ಮಾರ್ಷಲ್ ತರ್ಕಿಸಿದ್ದಾರೆ.

ರಾಜ್ಯದ ಇತಿಹಾಸ ಮೌರ್ಯರೊಂದಿಗೆ ಆರಂಭವಾದರೂ ಜಿಲ್ಲೆಯ ಇತಿಹಾಸ ಆರಂಭವಾಗುವುದು, ಶಾತವಾಹನ ಮತ್ತು ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ಬಾಣರ ಆಡಳಿತದೊಂದಿಗೆ. ಗಂಗರ ಆರಂಭದ ರಾಜಧಾನಿ 'ಕುವಲಾಲಪುರ' (ಇಂದಿನ ಕೋಲಾರ) ವಾಗಿದ್ದು, ಶಾಸನಗಳಲ್ಲಿ ಅವರು ತಮ್ಮನ್ನು 'ಕುವಲಾಲಪುರವರಾಧೀಶ್ವರ, ನಂದಗಿರಿ(ಇಂದಿನ ನಂದಿಬೆಟ್ಟ)ನಾಥ'ರೆಂದೇ ಕರೆದುಕೊಂಡಿದ್ದಾರೆಂದು ಹೆಚ್ಚಿನ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಬಿರುದುಗಳು ಸುಮಾರು ೯–೧೦ನೇ ಶತಮಾನಕ್ಕೆ ಸೇರಿದ ಗಂಗ ಶಾಸನಗಳಲ್ಲಿ ಹೆಚ್ಚಾಗಿ ಉಕ್ತವಾಗಿದ್ದು, ಆರಂಭಿಕ ಶಾಸನಗಳು ಮೌನದಿಂದಿವೆ. ಡಾ. ಷೇಕ್‌ಆಲಿಯವರಂತಹ ವಿದ್ವಾಂಸರು, ಸ್ಥಳೀಯರಾಗಿದ್ದ ಗಂಗರು ತಲಕಾಡಿನಿಂದ ತಮ್ಮ ರಾಜ್ಯಭಾರವನ್ನು ಆರಂಭಿಸಿದರೆಂಬ ವಾದವನ್ನು ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ಆದರೆ ಗಂಗರ ಶಾಖೆಗಳು ಕೋಲಾರ ಜಿಲ್ಲೆಯ ಕೈವಾರ ಹಾಗೂ ನೆರೆಯ ಹಿಂದೂಪುರ ತಾಲೂಕಿನ (ಆಂಧ್ರ) ಪರುವಿಗಳಲ್ಲಿ ಅಸ್ತಿತ್ವದಲ್ಲಿದ್ದ ಅಂಶವನ್ನು ಒಪ್ಪುತ್ತಾರೆ. ಜಿಲ್ಲಾ ಕೇಂದ್ರವಾದ ಕೋಲಾರವನ್ನು ಹಿಂದೆ ಆಡಳಿತ ಕೇಂದ್ರವನ್ನಾಗಿ ಹೊಂದಿದ್ದ, ಕುವಲಾಲ–೩೦೦ ಆಡಳಿತ ಘಟಕವನ್ನು ಒಳಗೊಂಡಿದ್ದ ಈ ಪ್ರದೇಶವು, ಗಂಗವಾಡಿ–೬೦೦೦ (ಗಂಗಾರುಸಾಸಿರ) ನಾಡೆಂದೇ ಪ್ರಸಿದ್ಧವಾಗಿದ್ದು, ಗಂಗವಾಡಿ–೯೬೦೦೦ದ ಅವಿಭಾಜ್ಯ ಅಂಗವಾಗಿತ್ತು. ಅಲ್ಲದೇ ಗಂಗ–ರಾಷ್ಟ್ರಕೂಟ ಹಾಗೂ ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದ ನೊಳಂಬರ ಆಳ್ವಿಕೆಗೆ ನಂತರದಲ್ಲಿ ಒಳಪಟ್ಟು, ನೊಳಂಬವಾಡಿ–೩೨೦೦೦ ನಾಡಿನ ಭಾಗವಾಗಿ ಕಾಣಿಸಿಕೊಳ್ಳುವ ಈ ಜಿಲ್ಲೆಯು, ಚೋಳರ ಆಗಮನದೊಂದಿಗೆ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಅವರ ಆಡಳಿತಕ್ಕೆ ಒಳಪಡುವ ಮೂಲಕ ತಮಿಳು ಸಂಸ್ಕೃತಿಯ ಪ್ರಭಾವಕ್ಕೂ ಒಳಪಟ್ಟಿತ್ತು. ಇವರ ಆಳ್ವಿಕೆಯ ಅವಧಿಯಲ್ಲಿ ಕೋಲಾರ ಜಿಲ್ಲೆಯು ತೊಂಡೈಮಂಡಲ, ನಿಗರಲಿ ಚೋಳಮಂಡಲ, ವಿಕ್ರಮ ಚೋಳಮಂಡಲ, ಮಾರಾಯಪಡಿ ಹಾಗೂ ವಿಜಯರಾಜಮಂಡಲಗಳ ಭಾಗವಾಗಿತ್ತು. ಅಲ್ಲದೇ ಜಿಲ್ಲಾ ಕೇಂದ್ರ ಕೋಲಾರದಲ್ಲಿರುವ ಕೋಲಾರಮ್ಮನ ದೇವಾಲಯವೂ ಸೇರಿದಂತೆ ಅನೇಕ ದೇವಾಲಯಗಳು ಚೋಳರ ಆಡಳಿತಾವಧಿಯಲ್ಲಿ ಜಿಲ್ಲೆಯಲ್ಲಿ ಅಭಿವೃದ್ಧಿಗೊಂಡವು. ಕೆರೆ–ಕಟ್ಟೆಗಳು ನಿರ್ಮಾಣಗೊಂಡು ಕೃಷಿ–ಜನವಸತಿಗಳು ವಿಸ್ತರಿಸಲ್ಪಟ್ಟವು. ಆದರೆ ಮುಂದೆ ಚೋಳರನ್ನು ಹೊರದಬ್ಬುವಲ್ಲಿ ಯಶಸ್ವಿಯಾದ ಹೊಯ್ಸಳರ ಆಡಳಿತಕ್ಕೆ ಒಳಪಟ್ಟು, ಒಂದು ಶತಮಾನಕ್ಕೂ ಹೆಚ್ಚು ಕಾಲಾವಧಿ ಆರ್ಥಿಕ ಅಭಿವೃದ್ಧಿಯನ್ನೂ, ಸಾಂಸ್ಕೃತಿಕ ಪ್ರಗತಿಯನ್ನೂ ಸಾಧಿಸಿತು. ಏತನ್ಮಧ್ಯೆ, ಹೊಯ್ಸಳ ಮುಮ್ಮಡಿ ನರಸಿಂಹನ ಅಧಿಕಾರಾವಧಿಯಲ್ಲಿ ಹೊಯ್ಸಳ ಸಾಮ್ರಾಜ್ಯವು ಎರಡು ಹೋಳಾದಾಗ, ಕೋಲಾರ ಪ್ರದೇಶವೂ ಒಳಗೊಂಡಂತೆ ಹೊಯ್ಸಳ ಸಾಮ್ರಾಜ್ಯದ ತಮಿಳುನಾಡು ಭಾಗವು ಸೋದರ ರಾಮನಾಥನ ಆಳ್ವಿಕೆಗೆ ಒಳಪಟ್ಟು, ತಮಿಳುನಾಡಿನ ಕಣ್ಣಾನೂರು ಅವನ ರಾಜಧಾನಿಯಾಯಿತು. ತತ್ಪರಿಣಾಮವಾಗಿ ಜಿಲ್ಲೆಯಲ್ಲಿ ಹೊಯ್ಸಳ ರಾಮನಾಥನ ಕಾಲಕ್ಕೆ ಸೇರಿದ ಸಾಕಷ್ಟು ಶಾಸನಗಳು ಲಭಿಸಿವೆ. ಆದರೆ ಮುಮ್ಮಡಿ ಬಲ್ಲಾಳನು ಅಧಿಕಾರಕ್ಕೆ ಬರುತ್ತಿದ್ದಂತೆ, ಚಿಕ್ಕಪ್ಪ ರಾಮನಾಥನ ಮಗ ವಿರೂಪಾಕ್ಷನ ಕೈಯಲ್ಲಿದ್ದ ಹೊಯ್ಸಳ ಸಾಮ್ರಾಜ್ಯದ ದಕ್ಷಿಣ ಪ್ರದೇಶವೂ ಹೊಯ್ಸಳ ಸಾಮ್ರಾಜ್ಯದ ವ್ಯಾಪ್ತಿಗೊಳಪಟ್ಟಿತು.

ಪರಂಪರಾಗತವಾಗಿ ದ್ವಿಭಾಷಾ ಪ್ರದೇಶವೆಂದೇ ಖ್ಯಾತಿ ಪಡೆದಿರುವ ಕೋಲಾರ ಜಿಲ್ಲಾ ಪ್ರದೇಶವು ಹೊಯ್ಸಳರ ಪತನಾನಂತರ ವಿಜಯನಗರದ ಸಂಗಮ ಮನೆತನದ ಆಳ್ವಿಕೆಗೆ ಒಳಪಟ್ಟಿತು. ಈ ಮನೆತನದ ಪ್ರಾರಂಭದ ಅರಸರಿಗೆ ಸೇರಿದ ಆರಂಭಿಕ ಶಾಸನಗಳಲ್ಲಿ ಕೆಲವು ಕೋಲಾರ ಜಿಲ್ಲೆಯಲ್ಲೂ ಲಭಿಸಿದ್ದು, ಈ ಭಾಗದ ಮುಳಬಾಗಿಲು, ಟೇಕಲ್, ಸಾದಲಿ, ಕೋಲಾರ ಮುಂತಾದ ಪ್ರಾಂತ್ಯಗಳಿಗೆ ರಾಜಕುಟುಂಬದವರೇ ಪ್ರಾಂತಾಧಿಕಾರಿಗಳಾಗಿ ಆಡಳಿತ ನಡೆಸುತ್ತಿದ್ದ ಅಂಶ ಅವುಗಳಿಂದ ವೇದ್ಯವಾಗುತ್ತದೆ. ಆನಂತರದಲ್ಲೂ ಇವೂ ವಿಜಯನಗರ ಸಾಮ್ರಾಜ್ಯದ ಪ್ರಮುಖ ಪ್ರಾಂತಗಳಾಗಿದ್ದವು. ಆದರೆ ವಿಜಯನಗರ ಸಾಮ್ರಾಜ್ಯದ ಅವನತಿ (೧೫೬೫)ಯೊಂದಿಗೆ ಕ್ರಮೇಣ, ಸ್ಥಳೀಯ ಸಾಮಂತರೂ ಪಾಳೇಗಾರರೂ ಆಗಿದ್ದ ಸಾದಲಿ, ತಾಡಿಗೊಳ್ಳ, ಆವತಿ, ಹೊಸಕೋಟೆ, ಚಿಕ್ಕಬಳ್ಳಾಪುರ, ದೇವನಹಳ್ಳಿ, ಸುಗುಟೂರು, ಗುಮ್ಮನಾಯಕನಪಾಳ್ಯ, ಗುಡಿಬಂಡೆ ಮುಂತಾದ ಪಾಳೇಪಟ್ಟುಗಳ ಆಡಳಿತಕ್ಕೂ ಜಿಲ್ಲೆಯು ಭಾಗಶಃ ಒಳಪಟ್ಟಿದ್ದು, ಅವುಗಳ ಆಳ್ವಿಕೆಯಡಿ ಹಲವಾರು ಕೆರೆಗಳು ಜಿಲ್ಲೆಯಾದ್ಯಂತ ನಿರ್ಮಾಣಗೊಂಡ ಅಂಶವನ್ನು ಶಾಸನಗಳು ದಾಖಲಿಸಿವೆ. ಮುಂದೆ ಬಿಜಾಪುರದ ಆದಿಲ್ ಷಾಹಿಗಳ ಧಾಳಿಯಿಂದಾಗಿ ಅವರ ಆಳ್ವಿಕೆಗೆ ಒಳಪಡುವ ಮೂಲಕ ಮರಾಠ ಪ್ರಭಾವಕ್ಕೂ ಸಿಲುಕಿತು. ಮುಂದೆ ಮೊಘಲರ ಧಾಳಿಯಿಂದಾಗಿ ಆದಿಲ್‌ಷಾಹಿಗಳ ಹಿಡಿತದಿಂದ ಮೊಘಲರ ಮಡಿಲಿಗೆ ಬಿತ್ತು. ಆನಂತರದಲ್ಲಿ ಮೈಸೂರು ಸಂಸ್ಥಾನದ ಆಡಳಿತಕ್ಕೂ, ಹೈದರಾಲಿ–ಟಿಪ್ಪುಸುಲ್ತಾನರ ಹಿಡಿತಕ್ಕೂ ಒಳಪಟ್ಟಿತ್ತು. ಅಲ್ಲದೆ ಹರಪ್ಪನಾಯಕನ ಹಳ್ಳಿ (ಮುಳಬಾಗಿಲು ತಾ.) ಪಾಳೇಗಾರರು ಅಲ್ಪಕಾಲ ಆಳಿದ್ದೂ ಇದೇ ಅವಧಿಯಲ್ಲಿ. ಏತನ್ಮಧ್ಯೆ, ಟಿಪ್ಪುವಿನ (೧೭೯೯) ಪತನಾನಂತರ ಮದ್ರಾಸ್ ಪ್ರೆಸಿಡೆನ್ಸಿಯ ನಿರ್ದೇಶನದ ಮೇರೆಗೆ ೧೮೦೦ರಲ್ಲಿ ಮದ್ರಾಸ್, ಮೈಸೂರು ಹಾಗೂ

ಮಲಬಾರ್ ಪ್ರಾಂತಗಳಲ್ಲಿ ಪ್ರವಾಸ ಕೈಗೊಂಡಿದ್ದ ಫ್ರಾನ್ಸಿಸ್ ಬುಕಾನನ್ನನು ಸಮೀಕ್ಷೆ ನಡೆಸಿ ಸಿದ್ಧಪಡಿಸಿರುವ ಪ್ರವಾಸಿ ಕಥನದಲ್ಲಿ, ಕೋಲಾರ ಪರಿಸರದ ಬಗ್ಗೆ ಮಹತ್ವದ ಮಾಹಿತಿಯನ್ನು ಒದಗಿಸಿದ್ದಾನೆ. ಟಿಪ್ಪುವಿನ ಮರಣಾನಂತರ ಮೈಸೂರು ಸಂಸ್ಥಾನದ ಆಡಳಿತ ಮೈಸೂರರಸರಿಗೆ ಪುನರ್ ಪ್ರಾಪ್ತಿಯಾಯಿತಾದರೂ ಬಲುಬೇಗ ಸಂಸ್ಥಾನವು ಬ್ರಿಟೀಷ್ ಕಮೀಷನರ್‌ಗಳ ಆಡಳಿತಕ್ಕೆ (೧೮೩೧–೮೧) ಒಳಪಟ್ಟಿತು. ಆನಂತರದಲ್ಲಿ ಸಂಸ್ಥಾನದ ಆಡಳಿತವು ಮೈಸೂರು ಒಡೆಯರಿಗೆ ಮರುಪ್ರಾಪ್ತಿಯಾಯಿತು (೧೮೮೧). ಈ ಸುದೀರ್ಘ ಅವಧಿಯಲ್ಲಿ ಇನಾಂದಾರ್, ಜೋಡಿದಾರ್ ಹಾಗೂ ಜಹಗೀರುದಾರ್‌ರಂತಹ ಸ್ಥಳೀಯ ಶಕ್ತಿಗಳು ಪ್ರಬಲಗೊಂಡಿದ್ದ ಅಂಶ ಗಮನಾರ್ಹವಾಗಿತ್ತು. ಆದರೂ ಮೈಸೂರು ಸಂಸ್ಥಾನದಲ್ಲಿ ನಿರ್ಮಾಣಗೊಂಡ ಬೆಂಗಳೂರು–ಮದ್ರಾಸ್ ಬ್ರಾಡ್‌ಗೇಜ್ ರೈಲು ಮಾರ್ಗ (೧೮೬೪), ಕೋಲಾರದ ಚಿನ್ನದ ಗಣಿ (೧೮೮೧), ಬೆಂಗಳೂರು–ಹಿಂದೂಪುರ ಮೀಟರ್‌ಗೇಜ್ ಮಾರ್ಗ (೧೮೯೩) ಹಾಗೂ ಬೆಂಗಳೂರು–ಚಿಕ್ಕಬಳ್ಳಾಪುರ–ಕೋಲಾರ–ಬಂಗಾರಪೇಟೆ ನ್ಯಾರೋಗೇಜ್ ರೈಲು ಮಾರ್ಗ (೧೯೧೮)ಗಳಿಂದಾಗಿ ಜಿಲ್ಲೆಯು ಗಣನೀಯ ಪ್ರಮಾಣದಲ್ಲಿ ಆರ್ಥಿಕ ಅಭಿವೃದ್ಧಿಯನ್ನೂ ಸಾಂಸ್ಕೃತಿಕ ಬೆಳವಣಿಗೆಯನ್ನೂ ಸಾಧಿಸಲು ಸಾಧ್ಯವಾಯಿತು. ಸಂಸ್ಥಾನಕ್ಕೆ ಮುಖ್ಯ ಎಂಜಿನಿಯರ್ ಆಗಿ ನೇಮಕಗೊಂಡು ಮುಂದೆ ದಿವಾನ ಹುದ್ದೆಯನ್ನೂ ಅಲಂಕರಿಸಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿಗೆ ಕಾರಣಭೂತರಾದವರಲ್ಲಿ ಪ್ರಮುಖರಾಗಿದ್ದು, ಅವರೂ ಕೂಡ ಮುದ್ದೇನಹಳ್ಳಿ (ಚಿಕ್ಕಬಳ್ಳಾಪುರ ತಾ.)ಯವರೆಂಬ ಅಂಶ ಜಿಲ್ಲೆಗೇ ಕಳಶಪ್ರಾಯವಾಗಿದೆ.

ಬ್ರಿಟೀಷರ ವಿರುದ್ಧ ದೇಶದ ವಿವಿಧೆಡೆಗಳಲ್ಲಿ ಜರುಗಿದ ಸ್ವಾತಂತ್ರ್ಯ ಹೋರಾಟದ ಪ್ರಭಾವ ಸಂಸ್ಥಾನಕ್ಕೂ ವ್ಯಾಪಿಸಿದಾಗ, ಜಿಲ್ಲೆಗೂ ಅದರ ಬಿಸಿ ತಟ್ಟಿತು. ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರು ತೀವ್ರ ಅನಾರೋಗ್ಯಕ್ಕೆ ತುತ್ತಾದಾಗ ವಿಶ್ರಾಂತಿ ಪಡೆಯುವ ಸಲುವಾಗಿ ಜಿಲ್ಲೆಯ ನಂದಿಬೆಟ್ಟಕ್ಕೆ, ಒಂದಲ್ಲ ಎರಡು ಬಾರಿ(೧೯೨೭ ಹಾಗೂ ೧೯೩೬) ಬಂದು ತಂಗಿದ್ದರು. ಅಲ್ಲದೇ ಜಿಲ್ಲೆಯ ವಿದುರಾಶ್ವತ್ಥ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಕೋಲಾರ, ಬಂಗಾರಪೇಟೆ ಹಾಗೂ ಕೆ.ಜಿ.ಎಫ್.ಗಳಿಗೂ ಭೇಟಿ ನೀಡಿ ಹರಿಜನ ನಿಧಿ ಸಂಗ್ರಹಿಸಿದ್ದರು. ಅವರ ಕಟ್ಟಾ ಅಭಿಮಾನಿಗಳಾಗಿದ್ದ ಜಿಲ್ಲೆಯ ಕೆ. ಚೆಂಗಲರಾಯ ರೆಡ್ಡಿ, ಕೆ. ಪಟ್ಟಾಭಿರಾಮನ್, ಟಿ.ರಾಮಾಚಾರ್, ಕೆ.ಸಂಪಂಗಿರಾಮಯ್ಯ, ಎನ್.ಸಿ.ನಾಗಯ್ಯರೆಡ್ಡಿ, ಎನ್.ಸಿ.ತಿಮ್ಮಾರೆಡ್ಡಿ, ಎಂ.ವಿ. ಕೃಷ್ಣಪ್ಪ, ಟಿ.ಚನ್ನಯ್ಯ ಮುಂತಾದ ಸ್ವಾತಂತ್ರ್ಯ ಹೋರಾಟಗಾರರಿಂದಾಗಿ ಜಿಲ್ಲೆಯೂ ಸ್ವಾತಂತ್ರ್ಯ ಆಂದೋಲನದ ವಾಹಿನಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು. ಸಂಸ್ಥಾನದಲ್ಲಿ 'ಜವಾಬ್ದಾರಿ ಸರ್ಕಾರ'ದ ರಚನೆಗಾಗಿ ಜರುಗಿದ (೧೧–೧೦–೧೯೪೭) 'ಮೈಸೂರು ಚಲೋ' ಚಳವಳಿಯ ಪರಿಣಾಮವಾಗಿ ಸಂಸ್ಥಾನದಲ್ಲಿ ರಚಿಸಲ್ಪಟ್ಟ (೨೪–೧೨–೧೯೪೮) ಜವಾಬ್ದಾರಿ ಸರ್ಕಾರದ ಮುಂದಾಳತ್ವವನ್ನು ವಹಿಸಿದವರೂ, ಬ್ರಿಟೀಷರ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿ ಸ್ವತಂತ್ರ ರಾಷ್ಟ್ರವಾಗಿ ತಲೆ ಎತ್ತಿದ ಭಾರತ ಗಣರಾಜ್ಯದಲ್ಲಿ ವಿಲೀನಗೊಂಡ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಗಳೂ ಆಗಿ ಅಧಿಕಾರ ವಹಿಸಿಕೊಂಡ ಕೆ. ಚೆಂಗಲರಾಯ ರೆಡ್ಡಿಯವರು ಕೋಲಾರ ಜಿಲ್ಲೆಯ ಕ್ಯಾಸಂಬಳ್ಳಿ (ಬಂಗಾರಪೇಟೆ ತಾ.)ಯವರೆಂಬುದು ಕೋಲಾರ ಜಿಲ್ಲೆಯ ಹಿರಿಮೆಯನ್ನು ಸಾರುವ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ. ಈ ಹಿನ್ನೆಲೆಯಲ್ಲಿ ನಾಡಿನ ಸಂಸ್ಕೃತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿರುವ ಕೋಲಾರ ಜಿಲ್ಲೆಯು ಇತಿಹಾಸಪೂರ್ವ ಕಾಲದಿಂದ–ಏಕೀಕೃತ ಕರ್ನಾಟಕ ರೂಪುಗೊಳ್ಳುವವರೆಗೆ ನಡೆದು ಬಂದಿರುವ ಸುದೀರ್ಘ ಪಥವನ್ನು ಗುರುತಿಸಿ, ಅದನ್ನು ಸಮಗ್ರವಾಗಿಯೂ ಕ್ರಮಬದ್ಧವಾಗಿಯೂ ದಾಖಲಿಸಲು ಇಲ್ಲಿ ಯತ್ನಿಸಲಾಗಿದೆ. ಅಲ್ಲದೇ ಸ್ವಾತಂತ್ರ್ಯೋತ್ತರ ಅವಧಿಯಲ್ಲಿನ ರಾಜಕೀಯ ಬೆಳವಣಿಗೆಯನ್ನು ಅರಿಯಲು, ಅದಕ್ಕೆ ಪೂರಕವಾಗಿ ೧೯೫೨ರಿಂದ ೨೦೦೪ರವರೆಗೆ ನಡೆದಿರುವ ಲೋಕಸಭಾ, ರಾಜ್ಯಸಭಾ, ವಿಧಾನಸಭಾ ಹಾಗೂ ವಿಧಾನಪರಿಷತ್ ಚುನಾವಣೆಗಳ ಜಿಲ್ಲಾ ಫಲಿತಾಂಶವನ್ನೊಳಗೊಂಡ ಪಟ್ಟಿಯನ್ನು ಈ ಅಧ್ಯಾಯದ ಅಂತ್ಯ ಭಾಗದಲ್ಲಿ ನೀಡಲಾಗಿದೆ.

## ಪೌರಾಣಿಕ ಹಿನ್ನೆಲೆ

ಜಿಲ್ಲೆಯ ಪ್ರಮುಖ ಸ್ಥಳಗಳಿಗೆ ಸಂಬಂಧಿಸಿದಂತೆ ರೂಢಿಯಲ್ಲಿರುವ ಪೌರಾಣಿಕ ಕಥೆಗಳು, ಸ್ಥಳೀಯವಾಗಿ ಎಣೆಯಲ್ಪಟ್ಟಿರುವ ಐತಿಹ್ಯಗಳು ವೈವಿಧ್ಯತೆಯಿಂದ ಕೂಡಿವೆ. ಸ್ಥಳೀಯ ಐತಿಹ್ಯಗಳಿಗೆ ಪವಾಡ ಸದೃಶ ರೂಪು, ಪೌರಾಣಿಕ ಮೆರುಗನ್ನು ನೀಡುವ ಸ್ಥಳ ಪುರಾಣಗಳು, ಜಿಲ್ಲೆಯ ಇತಿಹಾಸವನ್ನು ರಾಮಾಯಣ–ಮಹಾಭಾರತಗಳ ಘಟನೆಗಳೊಂದಿಗೆ ತಳಕು ಹಾಕುವ ಮೂಲಕ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆಯನ್ನು ಪುರಾಣಗಳಷ್ಟು ಹಿಂದಕ್ಕೆ ಗುರುತಿಸಲು ಪ್ರೇರೇಪಿಸುತ್ತವೆ. ಮೇರುಕೃತಿಗಳಾದ ರಾಮಾಯಣ–

ಮಹಾಭಾರತಗಳು ಭಾರತೀಯ ಬದುಕಿನ ಮೇಲೆ ಹೇಗೆ ಪ್ರಭಾವ ಬೀರಿವೆ ಹಾಗೂ ಭಾವನಾತ್ಮಕ ಸಂಬಂಧವನ್ನು ಮೂಡಿಸಿವೆ ಎಂಬುದಕ್ಕೆ ದೇಶದುದ್ದಗಲಕ್ಕೂ ಕಂಡು ಬರುವ ಇಂತಹ ಅಸಂಖ್ಯಾತ ಉದಾಹರಣೆಗಳನ್ನು ಉಲ್ಲೇಖಿಸಬಹುದಾಗಿದೆ.

ಜಿಲ್ಲಾ ಕೇಂದ್ರ ಕೋಲಾರವೂ ಸೇರಿದಂತೆ ಜಿಲ್ಲೆಯ ಸೀತಿಬೆಟ್ಟ, ಆವನಿ, ಕೈವಾರ, ಸಾದಲಿ, ಕುರುಡುಮಲೆ, ವಿದುರಾಶ್ವತ್ಥ, ತೇರುಹಳ್ಳಿ, ಚಿಕ್ಕತಿರುಪತಿ, ಗೌರಿಬಿದನೂರು, ನಂದಿ ಮುಂತಾದ ಸ್ಥಳಗಳು ವೈವಿಧ್ಯಮಯ ಸ್ಥಳ ಪುರಾಣಗಳಿಂದಾಗಿ ಗಮನ ಸೆಳೆಯುತ್ತವೆ. ಬಾಣ ಹಾಗೂ ಗಂಗರಸರ ಸೈನಿಕ ನೆಲೆಯಾಗಿ ಮೆರೆದಿರುವ ನಂದಿ ಕ್ಷೇತ್ರವು, ತ್ರೇತಾಯುಗದಷ್ಟು ಪುರಾತನ ಕೇಂದ್ರವಾಗಿತ್ತೇಂದು ಹೇಳಲಾಗಿದ್ದು, ಅದರ ಸ್ಥಳ ಮಹಾತ್ಮೆಯನ್ನು ಬ್ರಹ್ಮಾಂಡ ಪುರಾಣದ ೨೭ (೮೦ ರಿಂದ ೧೦೬) ಅಧ್ಯಾಯಗಳಲ್ಲಿ ವೈಭವೀಕರಿಸಿ ವರ್ಣಿಸಲಾಗಿದೆ. ಶಿವಗಣಗಳಲ್ಲಿ ಒಬ್ಬನಾದ ನಂದಿಯು ಕೈಲಾಸಪತಿ ಶಂಕರನ ಶಾಪಕ್ಕೆ ತುತ್ತಾಗಿ, ಕ್ಷಾಮದಿಂದ ತತ್ತರಿಸುತ್ತಿದ್ದ ಭೂಲೋಕದಲ್ಲಿ ಸಂಚರಿಸುತ್ತಾ, ಬೆಟ್ಟವೊಂದರ ಬಳಿಗೆ ಬಂದಾಗ, ದೇವಲೋಕದ ಕಾಮಧೇನು ಬಂದು ನಂದಿಯನ್ನು ಕೂಡಿತಂತೆ. ಅವುಗಳ ಸಮಾಗಮದಿಂದ ಸಹಸ್ರಾರು ಕರುಗಳು ಜನಿಸಿದಾಗ, ಅವುಗಳಿಗಾಗಿ ಕಾಮಧೇನುವಿನ ಕೆಚ್ಚಲಿನಿಂದ ಧಾರಾಕಾರವಾಗಿ ಹರಿದ ಹಾಲಿನ ಪ್ರವಾಹವೇ ಕ್ಷೀರನದಿಯಾಯಿತಂತೆ. ಕ್ಷಾಮದಿಂದ ಬಳಲಿದ್ದ ಜನ ಹಾಲನ್ನು ಕುಡಿದು ಸಂತೃಪ್ತರಾದರಂತೆ. ನಂದಿ ತಪಸ್ಸು ಮಾಡಿದ ಆ ಬೆಟ್ಟವೇ ನಂದಿಗಿರಿ (ಇಂದಿನ ನಂದಿಬೆಟ್ಟ) ಎಂದೂ ಪ್ರಸಿದ್ಧಿ ಹೊಂದಿತಂತೆ. ಪುರಾಣೋಕ್ತ ಕ್ಷೀರ ನದಿಯೇ ನಂದಿಬೆಟ್ಟದಲ್ಲಿ ಹುಟ್ಟಿ ಕೋಲಾರ ಜಿಲ್ಲೆಯ ಪೂರ್ವದಲ್ಲಿ ಹರಿದು ಹೋಗುವ ಪಾಲಾರ್ ನದಿ ಎಂದು ಹೇಳಲಾಗುತ್ತದೆ. ತ್ರೇತಾಯುಗದಲ್ಲಿ ಸಾಗರಕ್ಕೆ ಸೇತುವೆ ನಿರ್ಮಿಸಲು ಮುಂದಾದ ರಾಮನಿಗೆ ವಾನರರು ನೆರವಾದ ಸಂದರ್ಭದಲ್ಲಿ ಬ್ರಹ್ಮನ ಅಪ್ಪಣೆಯಂತೆ ಇಂದ್ರಾದಿ ದೇವತೆಗಳು ರಾಮನಿಗೆ ನೆರವಾಗಲೆಂದು ಮೇರುಪರ್ವತದಿಂದ ತಾವು ತಂದಿದ್ದ ಐದು ಶಿಖರಗಳನ್ನು, ಸೇತುವೆ ಪೂರ್ಣಗೊಂಡಿದ್ದರಿಂದ ಅನಿವಾರ್ಯವಾಗಿ ದಂಡಕಾರಣ್ಯದಲ್ಲೇ ಇಳಿಸಿದರಂತೆ. ಅವರು ಇಳಿಸಿದ ಆ ಪಂಚಗಿರಿಗಳೇ ನಂದಿಬೆಟ್ಟ ಶ್ರೇಣಿಯಲ್ಲಿರುವ ನಂದಿಗಿರಿ, ಬ್ರಹ್ಮಗಿರಿ, ಸ್ಕಂದಗಿರಿ, ದಿವ್ಯಗಿರಿ ಹಾಗೂ ವಿಷ್ಣುಗಿರಿಗಳೆಂದು ಪ್ರತೀತಿ ಇದ್ದು, ರಾಮಾಯಣ ಕಾಲದ ದಂಡಕಾರಣ್ಯ ಪ್ರದೇಶ ಇದೆಂದೂ ಹೇಳಲಾಗುತ್ತದೆ. ಕೂಷ್ಮಾಂಡ ಋಷಿಗಳು ಇಲ್ಲಿ ಆಶ್ರಮವನ್ನು ಸ್ಥಾಪಿಸಿ ತಪೋಮಗ್ನರಾಗಿದ್ದರಿಂದ 'ಕೂಷ್ಮಾಂಡ ಪರ್ವತ' ಎಂದೂ ಇದು ಪ್ರಸಿದ್ಧಿ ಪಡೆದಿತ್ತೆಂದು ಹೇಳಲಾಗುತ್ತದೆ. ಜಿಲ್ಲೆಯ ಆರ್ಥಿಕ ಬದುಕನ್ನು ರೂಪಿಸುವಲ್ಲಿ ಇತಿಹಾಸದುದ್ದಕ್ಕೂ ನಿರ್ಣಾಯಕ ಪಾತ್ರವನ್ನು ವಹಿಸುತ್ತಾ ಬಂದಿರುವ ಜಿಲ್ಲೆಯ ಹೆಚ್ಚಿನ ನದಿಗಳ ಉಗಮಸ್ಥಾನ ನಂದಿಬೆಟ್ಟವಾಗಿದ್ದು, ನಂದಿ ಗಿರಿಶ್ರೇಣಿಗಳಲ್ಲಿ ಕ್ರಮವಾಗಿ ಜನಿಸುವ ಪಾಲಾರ್, ಅರ್ಕಾವತಿ, ಪಾಪಾಗ್ನಿ, ಸುವರ್ಣಮುಖಿ ಹಾಗೂ ಪಿನಾಕಿನಿ ನದಿಗಳು ನಾಲ್ಕು ದಿಕ್ಕುಗಳಲ್ಲೂ ಪ್ರವಹಿಸುತ್ತವೆ. ಅದರಿಂದಾಗಿ ಇದು ಜಿಲ್ಲೆಯ ಜಲನಿಕ್ಷೇಪ ತಾಣವಾಗಿ ಬಹು ಹಿಂದಿನಿಂದಲೂ ಮಹತ್ವ ಪಡೆದಿದೆ. ನಂದಿಬೆಟ್ಟದ ಪರಿಸರದಲ್ಲಿ ಗಂಗರು ಹಾಗೂ ಆನಂತರದ ಅರಸರ ಕಾಲಕ್ಕೆ ಸೇರಿದ ಚಾರಿತ್ರಿಕ ಅವಶೇಷಗಳು ಕಂಡು ಬರುತ್ತವೆ. ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನ ಗಳಿಸಿದ್ದು ಇನ್ನೂ ಸೋಜಿಗವಾಗಿಯೇ ಉಳಿದಿರುವ 'ಸಿರಿ ಭೂವಲಯ' ಕೃತಿಕಾರ ಕುಮದೆಂದು ಮುನಿ ನಂದಿಗಿರಿ(ಸಮೀಪದ ಯಲುವಹಳ್ಳಿ)ಯವನೆಂಬ ಅಭಿಪ್ರಾಯವಿದ್ದು, ಆ ಹಿನ್ನೆಲೆಯಲ್ಲಿ ಹಿಂದೆ ಇದೊಂದು ಪ್ರಮುಖ ಜೈನಕೇಂದ್ರವಾಗಿತ್ತೆಂಬ ಅಂಶ ವ್ಯಕ್ತವಾಗುತ್ತದೆ.

ಮುಳಬಾಗಿಲು ತಾಲೂಕಿನಲ್ಲಿರುವ ಕುರುಡುಮಲೆಯನ್ನು ಚಾರಿತ್ರಿಕವಾಗಿ ಹೊಯ್ಸಳರ ಕಾಲಕ್ಕೆ ಗುರುತಿಸಬಹುದಾದರೂ, ಸ್ಥಳಪುರಾಣಗಳಲ್ಲಿ ಈ ಊರ ಬಳಿಯಿರುವ ಬೆಟ್ಟಕ್ಕೆ 'ಕೌಂಡಿಣ್ಯಗಿರಿ' ಎಂದು ಕರೆಯಲಾಗಿದ್ದು, ಅಲ್ಲೇ ಹುಟ್ಟುವ ನದಿಗೆ "ಕೌಂಡಿನ್ಯ" ಎಂದೇ ಕರೆಯಲಾಗಿದೆ. ದೇವತೆಗಳು ತ್ರಿಪುರಾಂತಕನ ಮೇಲೆ ಯುದ್ಧಕ್ಕೆ ಹೋಗುವ ಮೊದಲು ಸಮಾವೇಶಗೊಂಡಿದ್ದ ಸ್ಥಳ ಇದೆಂದೂ ಹೇಳಲಾಗುತ್ತದೆ. ವೃತಾಸುರನನ್ನು ವಧಿಸಲು ಎಲ್ಲಾ ದೇವತೆಗಳು ಇಲ್ಲೇ ಕೂಟ ಸೇರಿ ವಿನಾಯಕನನ್ನು ಪೂಜಿಸಿದ್ದರೆಂಬ ಪ್ರತೀತಿ ಇದ್ದು, ಅದರಿಂದಾಗಿ ಹಿಂದೆ ಇದಕ್ಕೆ 'ಕೂಡುಮಲೆ' ಎಂಬ ಹೆಸರೂ ಇದ್ದು, ಅದೇ ಮುಂದೆ ಕುರುಡುಮಲೆ ಆಗಿದೆಯೆಂದೂ ಹೇಳಲಾಗುತ್ತದೆ. ಮಾಲೂರು ತಾಲೂಕಿನಲ್ಲಿರುವ ಚಿಕ್ಕತಿರುಪತಿಗೆ ಜನಮೇಜಯರಾಯನು ಯಾಗ ಮಾಡಿದ ಸ್ಥಳವೆಂಬ ಪೌರಾಣಿಕ ಹಿನ್ನೆಲೆಯನ್ನು ನೀಡಲಾಗುತ್ತದೆ. ಗೌರಿಬಿದನೂರಿಗೆ ಹಿಂದೆ ಬಿದರೂರು ಎಂಬ ಹೆಸರಿದ್ದು, ಮಹಾಭಾರತದ ವಿಧುರನ ಜನ್ಮಸ್ಥಳ ಇದೆಂದು ಹೇಳುವ ಮೂಲಕ ಪೌರಾಣಿಕ ಸಂಬಂಧವನ್ನು ಕಲ್ಪಿಸಲಾಗಿದೆ. ನೆರೆಯ ವಿಧುರಾಶ್ವತ್ಥ (ಮೂಲತಃ ದೊಡ್ಡ ಕುರುಗೋಡು ಇದರ ಮೂಲ ಹೆಸರು)ಕ್ಕೂ ವಿಧುರನೊಂದಿಗೆ ಪೌರಾಣಿಕ ಸಂಬಂಧವನ್ನು ಕಲ್ಪಿಸಲಾಗಿದೆ. ಮೈತ್ರೇಯಿ ಋಷಿಗಳಿಂದ ನೆಡಲ್ಪಟ್ಟು, ವಿದುರನಿಂದ ಪೋಷಿಸಲ್ಪಟ್ಟಿರುವ ಪುರಾತನವಾದ ಇಲ್ಲಿನ ಆಲದಮರ, ಪುರಾಣ ಪ್ರಸಿದ್ಧವೆಂಬ

ಅಭಿಪ್ರಾಯವೂ ಇದೆ. ಚಿಂತಾಮಣಿ ತಾಲೂಕಿನ ಕೈವಾರ ಕ್ಷೇತ್ರವು ಕೃತಯಗದಲ್ಲಿ ಇಂದ್ರನಿಂದ ಸ್ಥಾಪಿಸಲ್ಪಟ್ಟಿತ್ತೆಂಬ ಪೌರಾಣಿಕ ಹೇಳಿಕೆ ಇದ್ದು, ಮಹಾಭಾರತ ಕಾಲದಲ್ಲಿ ಏಕಚಕ್ರನಗರವೆಂದೇ ಪ್ರಸಿದ್ಧವಾಗಿದ್ದು, ವನವಾಸದಲ್ಲಿದ್ದ ಪಾಂಡವರು ಸ್ವಲ್ಪ ಕಾಲ ಇಲ್ಲೂ ತಂಗಿದ್ದರೆಂಬ ಹೇಳಿಕೆ ಇದೆ. ಇದಕ್ಕೆ ಪೂರಕವಾಗಿ ಕೈವಾರದ ಬಳಿಯ ಬೆಟ್ಟದ ಮೇಲಿರುವ ಬಂಡೆಯೊಂದನ್ನು ಭೀಮ, ಬಕಾಸುರನನ್ನು ವಧಿಸಿದ ಸ್ಥಳವೆಂದು ತೋರಿಸಲಾಗುತ್ತದೆ. ಅಲ್ಲಿಯ ಶೈವ ದೇವಾಲಯಗಳನ್ನು ಪಾಂಡವರ ಹೆಸರಿನಲ್ಲಿ ಕರೆಯಲಾಗುತ್ತಿದ್ದು, ಅವು ಪಾಂಡವ ಪ್ರತಿಷ್ಠಿತ ಲಿಂಗಗಳೆಂಬ ಐತಿಹ್ಯವೂ ಇದೆ. ಮಹಿಷಾಸುರನನ್ನು ವಧಿಸುವ ಮೂಲಕ ಬ್ರಹ್ಮಹತ್ಯಾ ದೋಷಕ್ಕೆ ತುತ್ತಾದ ಚಾಮುಂಡೇಶ್ವರಿಯು ಕೈವಾರದಲ್ಲಿನ ಲಕ್ಷ್ಮಣತೀರ್ಥದಲ್ಲಿ ಮಿಂದು, ಭೀಮಲಿಂಗೇಶ್ವರ, ಅಮರನಾರಾಯಣರನ್ನು ಪೂಜಿಸಿ ದೋಷಮುಕ್ತಳಾದಳೆಂಬ ಐತಿಹ್ಯ ಈ ಭಾಗದಲ್ಲಿ ಜನಜನಿತವಾಗಿದೆ. ಕೈವಾರದ ೧೫೩೮ರ ಶಾಸನದಲ್ಲಿ ಈ ಅಂಶಗಳು ಮಾರ್ದನಿಸಿದ್ದು, ಇಲ್ಲಿಯ ಭೀಮೇಶ್ವರ ಲಿಂಗವನ್ನು ಭೀಮಸೇನನು ಪ್ರತಿಷ್ಠಾಪಿಸಿದನೆಂದೂ ಉತ್ಪ್ರೇಕ್ಷಿಸುತ್ತದೆ.

ಜಿಲ್ಲಾ ಕೇಂದ್ರ ಕೋಲಾರವು ಪೌರಾಣಿಕವಾಗಿ ಶತಶೃಂಗ ಋಷಿಗಳ ತಪೋಕರ್ಮ ಭೂಮಿಯಾಗಿತ್ತೆಂಬ ಅಭಿಪ್ರಾಯವಿದೆ. ಅಲ್ಲದೇ ಈ ಪ್ರದೇಶವು ಪರಶುರಾಮನ ತಂದೆ ಜಮದಗ್ನಿ ಹಾಗೂ ತಾಯಿ ರೇಣುಕೆಯರ ತಪೋ–ಕರ್ಮಭೂಮಿಯಾಗಿದ್ದು, ಜಮದಗ್ನಿ ಋಷ್ಯಾಶ್ರಮದಲ್ಲಿದ್ದ ಕಾಮಧೇನುವಿಗಾಗಿ ಒತ್ತಾಯಿಸಿ, ಮೋಸದಿಂದ ಜಮದಗ್ನಿ ಮುನಿಯನ್ನು ಕೊಂದ ಕಾರ್ತ್ಯವೀರ್ಯಾರ್ಜುನನ ಮೇಲಿನ ರೋಷದಿಂದ ಇಡೀ ಕ್ಷತ್ರಿಯ ಕುಲವನ್ನೇ ನಾಶ ಮಾಡುವುದಾಗಿ ಶಪಥಗೈದ ಪರಶುರಾಮನ ಕೈಯಲ್ಲಿ ಸೋತ ಕಾರ್ತವೀರ್ಯಾರ್ಜುನನನ್ನು ಕೊಲ್ಲುವ ಸಂದರ್ಭದಲ್ಲಿ ಉಂಟಾದ ಕೋಲಾಹಲದಿಂದ ಅಲ್ಲಿನ ಜನ ಮೂಕವಿಸ್ಮಿತರಾದರಂತೆ. ಅದರಿಂದಾಗಿ ಈ ಸ್ಥಳಕ್ಕೆ 'ಕೋಲಾಹಲಪುರ' ಎಂಬ ಹೆಸರು ಬಂದು, ಮುಂದೆ ಅದೇ 'ಕೋಲಾರ' ರೂಪವನ್ನು ಪಡೆಯಿತೆಂದು ಹೇಳಲಾಗುತ್ತದೆ. ಅಲ್ಲದೇ ತಾಯಿ ರೇಣುಕೆಯನ್ನು, ಉಗ್ರರೂಪದಿಂದ ಕೂಡಿದ ಈ ಕೋಲಾರಮ್ಮನ ರೂಪದಲ್ಲಿ ಕೋಲಾರ ಪಟ್ಟಣದಲ್ಲಿ ಪರಶುರಾಮನು ಪ್ರತಿಷ್ಠಾಪಿಸಿದನೆಂದೂ ಐತಿಹ್ಯವಿದೆ. ಆದರೆ ಇನ್ನೊಂದು ಐತಿಹ್ಯದ ಪ್ರಕಾರ ಆದಿವಾಸಿ ಕೋಲನ ಹಲ (ನೇಗಿಲು)ಕ್ಕೆ ನಿಧಿಯಿದ್ದ ಕೊಡ ಸಿಕ್ಕಿತಂತೆ. ಆ ನಿಧಿಯನ್ನು ಪಡೆಯಲು ಅಂದಿನ ಆಳರಸನಾದ ಉತ್ತಮ ಚೋಳನು ರಾಜಧಾನಿ ಕಂಚಿಗೆ ಕೋಲನನ್ನು ಕರೆಯಿಸಿದನಂತೆ. ಆದರೆ ಅಂದು ರಾತ್ರಿ ಕನಸಿನಲ್ಲಿ ರಾಜನಿಗೆ ಕಾಣಿಸಿಕೊಂಡ ರೇಣುಕೆಯು, ತನ್ನ ಭಕ್ತನಾದ ಕೋಲನನ್ನು ಗೌರವಾದರದಿಂದ ಕಂಡು ಅವನಿಗೆ ದೊರೆತಿರುವ ನಿಧಿಯನ್ನು ತನ್ನ ದೇವಾಲಯದ ನಿರ್ಮಾಣ ಕಾರ್ಯಕ್ಕೆ ಬಳಸಿಕೊಳ್ಳುವಂತೆ ಆಜ್ಞಾಪಿಸಿದಳಂತೆ, ಆ ಪ್ರಕಾರ ಅರಸನು ಕೋಲನನ್ನು ಆ ಪ್ರಾಂತದ (ಕೋಲಾರ) ಅಧಿಕಾರಿಯನ್ನಾಗಿ ನೇಮಿಸಿ, ಕೋಲಾರದಲ್ಲಿ ರೇಣುಕಾದೇವಿಯ ಗುಡಿಯನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಆ ಹಿನ್ನೆಲೆಯಲ್ಲಿ ಆದಿವಾಸಿ ಕೋಲನಿಂದಾಗಿ, ಈ ಸ್ಥಳಕ್ಕೆ 'ಕೋಲಾರ' ಎಂದು ಹೆಸರು ಬಂತೆಂದೂ ಅಭಿಪ್ರಾಯವಿದೆ. ದುಷ್ಟಶಕ್ತಿ ಮಹಿಷಾಸುರನ ಪೀಡನೆಗೆ ಜನರು ಒಳಗಾದಾಗ, ದೇವತೆಗಳು ಆದಿಶಕ್ತಿಯ ಮೂಲಕ ಅವನನ್ನು ಸಂಹಾರ ಮಾಡಿಸಿದರಂತೆ. ಸಂಹಾರ ಸಮಯದಲ್ಲಿ ಮಹಿಷಾಸುರನು ಈ ಸ್ಥಳದಲ್ಲಿ ಬಹಳ ಕೋಲಾಹಲವನ್ನುಂಟು ಮಾಡಿದ್ದರಿಂದ ಈ ಪ್ರದೇಶಕ್ಕೆ 'ಕೋಲಾಹಲಪುರ'ವೆಂದೂ ಅವನನ್ನು ಸಂಹರಿಸಿದ ದೇವತೆಗೆ ಕೋಲಾರಮ್ಮನೆಂದೂ ಹೆಸರು ಬಂತೆಂದು ಹೇಳಲಾಗುತ್ತದೆ. ಕೋಲಾರದ ೧೫೩೮ರ ಶಾಸನವೊಂದು ಮುಚುಕುಂದಗಿರಿ ಬಳಿಯಿದ್ದ ಶ್ರೀ ಕಾಲನೇಮಿದಹನ ಕೋಳಾಲಕ್ಕೆ ಪ್ರತಿನಾಮವಾದ ಕೋಳಾಲ ಭಾರ್ಗವ, ಪರಶುರಾಮ ಪ್ರತಿಷ್ಠಿತ ಚತುರ್ಯುಗ ಪೂಜಿತ ಕೋಳಾಲದೇವಿಯ ಪುಣ್ಯಕ್ಷೇತ್ರವೆಂದು ಹೇಳುತ್ತದೆ. ವಿಭೂತಿಪುರದ ೧೨೧೬ರ ಶಾಸನದಲ್ಲೂ ಮುಚುಕುಂದಗಿರಿಯ ಪ್ರಸ್ತಾಪವಿದೆ. ಆದರೆ ಕೋಲಾರ (ಕುವಲಾಲಪುರ)ವು ಗಂಗರ ವ್ಯಾಪ್ತಿಗೊಳಪಟ್ಟಿದ್ದು, ಗಂಗರಸರಿಗೆ 'ಕುವಲಾಲ ಪುರವರಾಧೀಶ್ವರ' ಎಂಬ ಬಿರುದಿದ್ದ ಅಂಶ ಸುಮಾರು ೯–೧೦ನೆಯ ಶತಮಾನಕ್ಕೆ ಸೇರಿದ ಅವರ ಶಾಸನಗಳಿಂದ ವೇದ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಈ ಮೇಲಿನ ಘಟನೆ ಜರುಗುವುದಕ್ಕೆ ಮೊದಲೇ ಕೋಲಾರವು ಅಸ್ತಿತ್ವದಲ್ಲಿತ್ತೆಂಬುದು ವಿದಿತವಾಗುತ್ತದೆ. ಆದರೆ ಕೋಲಾರವು ಗಂಗರಿಗೆ ಕೈವಶವಾಗುವುದಕ್ಕೂ ಮೊದಲು ಬಾಣರ ಅಧೀನದಲ್ಲಿತ್ತೆಂದು ಡಾ.ಟಿ.ವಿ.ಮಹಾಲಿಂಗಂ ಪ್ರತಿಪಾದಿಸಿದ್ದಾರೆ. 'ಕೋಲಾರ' ನಾಮ ನಿಷ್ಪತ್ತಿಗೆ ಸಂಬಂಧಿಸಿದಂತೆ ಈ ಪೌರಾಣಿಕ ವಿವರಣೆಯನ್ನೇ ಸಾಮಾನ್ಯವಾಗಿ ನೀಡಲಾಗುತ್ತದೆ. ಆದರೆ 'ಕೋಲಾರ' ದ ಮೂಲ ರೂಪವು 'ಕೊಳಾಹಲ', 'ಕೊಲಹಳ', 'ಕೋಳಾಲ', 'ಕೊಳಾಲಪುರ', 'ಕುವಲಾಲ' ಎಂದೆಲ್ಲಾ ಇರುವ ಹಿನ್ನೆಲೆಯಲ್ಲಿ 'ಕೋಲಾರ'ದ ನಾಮ ನಿಷ್ಪತ್ತಿಯನ್ನು ಪುನರ್ ವಿವೇಚಿಸುವ ಅಗತ್ಯವಿದೆ. ಈ ಪದವು ಕೊಳ+ಹಳ್ಳ ಎಂಬ ಜಲಸೂಚಿ ಪದಗಳ ಸಂಯುಕ್ತ ರೂಪವಾಗಿದ್ದು, ಕೋಲಾರದ ನಾಮನಿಷ್ಪತ್ತಿಯನ್ನು ಜಲವಾಚಿ ಮೂಲದ್ದೆಂದು ತರ್ಕಿಸಬಹುದಾಗಿದೆ.

ಮುಳಬಾಗಿಲು ತಾಲೂಕಿನಲ್ಲಿರುವ ಆವನಿ (ಆವಂತಿಕಾ ಕ್ಷೇತ್ರ)ಯನ್ನು ಕರ್ನಾಟಕದ ರಾಮೇಶ್ವರವೆಂದು ಪರಿಭಾವಿಸಲಾಗಿದ್ದು, ಶಾಸನಗಳಲ್ಲಿ ಇದು 'ದಕ್ಷಿಣ ಕಾಶಿ, ದಕ್ಷಿಣ ಗಯಾ' ಎಂದೇ ಉಲ್ಲೇಖಿಸಲ್ಪಟ್ಟಿದ್ದು, ಪುರಾಣ ಪ್ರಸಿದ್ಧವಾಗಿತ್ತೆಂದು ಹೇಳಲಾಗುತ್ತದೆ. ಆವನಿಯಲ್ಲಿ ಆದಿಕವಿ ವಾಲ್ಮೀಕಿಯ ಆಶ್ರಮವಿದ್ದು, ಮಡಿವಾಳನೊಬ್ಬನ ಅವಿವೇಕದ ಮಾತಿಗೆ ಕಿವಿಗೊಟ್ಟ ರಾಮನಿಂದ ಕಾಡಿಗೆ ಅಟ್ಟಲ್ಪಟ್ಟ ಸೀತೆಗೆ ಆಶ್ರಯ ನೀಡಿದ ತಾಣ ಹಾಗೂ ಲವ-ಕುಶರಿಗೆ ಜನ್ಮವಿತ್ತ ಸ್ಥಳವಿದಾಗಿತ್ತಂತೆ. ರಾಮನ ಅಶ್ವಮೇಧ ಯಾಗದ ಕುದುರೆಯನ್ನು ಕಟ್ಟಿಹಾಕಿ ರಾಮ-ಲಕ್ಷ್ಮಣರನ್ನು ಸಮರ್ಥವಾಗಿ ಲವ-ಕುಶರು ಎದುರಿಸಿದ್ದು ಇಲ್ಲೇ! ಕಡೆಗೆ ತಂದೆ-ಮಕ್ಕಳ ಸಮಾಗಮ ಸಂದರ್ಭದಲ್ಲಿ ಭೂತಾಯಿಯ ಒಡಲನ್ನು ಸೀತೆ ಹೊಕ್ಕಿದ್ದು ಇಲ್ಲೇ! ಎಂಬ ಪೌರಾಣಿಕ ಕಥೆಗೆ ಸಂಬಂಧಿಸಿದ ವಿವಿಧ ಘಟನೆಗಳನ್ನು ಇಲ್ಲಿನ ಪರಿಸರದಲ್ಲಿ ಗುರುತಿಸಲಾಗುತ್ತದೆ. ಸಮೀಪದ ವಾಲ್ಮೀಕಿ/ಆವಂತೀ ಗಿರಿಯ ಮೇಲಿರುವ ಸೀತಾ-ಪಾರ್ವತಿ ದೇಗುಲ, ವಾಲ್ಮೀಕಿ ಆಶ್ರಮ, ನಡುವಿರುವ ಧನುಷ್ಕೋಟಿ ತೀರ್ಥ, ಲವ-ಕುಶರ ಬಂಡೆ, ಪಾಂಡವರ ಗವಿ ಮುಂತಾದ ಎಡೆಗಳನ್ನು ಅದಕ್ಕೆ ಪೂರಕವಾಗಿ ತೋರಿಸಲಾಗುತ್ತದೆ. ಇದೊಂದು ಇತಿಹಾಸಪೂರ್ವ ಕಾಲದ ನೆಲೆಯಾಗಿರುವ ಹಿನ್ನೆಲೆಯಲ್ಲಿ ಈ ಪೌರಾಣಿಕ ಅಂಶಗಳನ್ನು ಪರಿಶೀಲಿಸುವ ಅಗತ್ಯವಿದೆ. ಆದರೆ ಚಾರಿತ್ರಿಕವಾಗಿ ಈ ಸ್ಥಳವು ನೊಳಂಬರ ಕಾಲದಲ್ಲಿ ಪ್ರಾಮುಖ್ಯತೆ ಪಡೆದ ಅಂಶವನ್ನು ಅಲ್ಲಿರುವ ದೇವಾಲಯ ಹಾಗೂ ಶಾಸನಗಳು ಸ್ಪಷ್ಟಪಡಿಸುತ್ತವೆ. ಬಾಗೇಪಲ್ಲಿ ತಾಲೂಕಿನ ಗಡಿದಂ (ದೇವರ ಗುಡಿಪಲ್ಲಿ) ನಲ್ಲಿರುವ ವೆಂಗಳನಾಥನ ಶಿಲ್ಪವು ಪೌರಾಣಿಕವಾಗಿ ಜನಮೇಜಯರಾಯನಿಂದ ಪ್ರತಿಷ್ಠಾಪಿಸಲ್ಪಟ್ಟ ಮೂಲಮೂರ್ತಿ ಎಂಬ ನಂಬಿಕೆ ಇದ್ದು, ಈ ಪ್ರದೇಶದಲ್ಲಿ ಯಜ್ಞ-ಯಾಗಾದಿಗಳು ಜರುಗುತ್ತಿತ್ತೆಂದು ಹೇಳಲಾಗುತ್ತದೆ. ಇಲ್ಲಿಯ ರಾಮಲಿಂಗೇಶ್ವರ ಲಿಂಗವನ್ನು ಶ್ರೀ ರಾಮಾವತಾರ ಪುರುಷಿಯಾದ ವಿಷ್ಣುವೇ ಪ್ರತಿಷ್ಠಾಪಿಸಿದನೆಂಬ ಅಭಿಪ್ರಾಯವಿದೆ. ತಾಲೂಕು ಕೇಂದ್ರ ಮುಳಬಾಗಿಲನ್ನು ಬ್ರಹ್ಮಾಂಡ ಪುರಾಣದಲ್ಲಿ 'ಶತಕವಾಟಪುರಿ' (ನೂರು ಬಾಗಿಲುಗಳನ್ನುಳ್ಳ ನಗರ) ಎಂದೇ ಕರೆಯಲಾಗಿದ್ದು, ಸಮೀಪದ ಬೆಟ್ಟದ ಮೇಲೆ ಆಂಜನೇಯನ ತಾಯಿ ಅಂಜನಾದೇವಿ ತಪೋನಿರತಳಾಗಿದ್ದರಿಂದ ಆ ಬೆಟ್ಟಕ್ಕೆ 'ಅಂಜನಾದ್ರಿ' ಎಂದೂ ಕರೆಯಲಾಗುತ್ತಿದ್ದು, ಇದು ಮುಳಬಾಗಿಲಿನ ಪ್ರಾಚೀನತೆಯನ್ನು ರಾಮಾಯಣದಷ್ಟು ಹಿಂದಕ್ಕೆ ಗುರುತಿಸಲು ನೆರವಾಗುತ್ತದೆಂಬ ಜನಾಭಿಪ್ರಾಯವಿದೆ.

ಶಿಡ್ಲಘಟ್ಟ ತಾಲೂಕಿನಲ್ಲಿರುವ 'ಸಾದಲಿ' ಪಟ್ಟಣವು ಪಾಂಡವ ಸೋದರ ಸಹದೇವನಿಂದ ನಿರ್ಮಿಸಲ್ಪಟ್ಟಿದ್ದು, ಅದಕ್ಕೆ ಹಿಂದೆ ಸಹದೇವಪಟ್ಟಣ ಎಂಬ ಹೆಸರಿತ್ತೆಂದು ಹೇಳಲಾಗುತ್ತದೆ. ಕೋಲಾರ ತಾಲೂಕಿನ ಸೀತಿಬೆಟ್ಟ ಪುರಾಣ ಪ್ರಸಿದ್ಧವಾಗಿದ್ದು, ಅಲ್ಲಿನ ಶಿವಲಿಂಗವನ್ನು ಶ್ರೀಪತಿ (ವಿಷ್ಣು)ಯು ಪ್ರತಿಷ್ಠಾಪಿಸಿದನೆಂಬ ಅಭಿಪ್ರಾಯವಿದೆ. ಸಮೀಪದ ಭಸ್ಮಾಸುರ ಬೆಟ್ಟವನ್ನು ಪೌರಾಣಿಕವಾಗಿ ಭಸ್ಮಾಸುರನೊಂದಿಗೆ ತಳಕು ಹಾಕಲಾಗುತ್ತದೆ. ಕೋಲಾರ ಪಟ್ಟಣಕ್ಕೆ ಅನತಿ ದೂರದ ಬೆಟ್ಟದ ಮಡಿಲಲ್ಲಿರುವ ತೇರುಹಳ್ಳಿಯ ಬಳಿ 'ಪಾಂಡವರ ಹಜಾರ' ಎಂದು ಕರೆಯಲ್ಪಡುವ ಗುಹೆ ಇದೆ. ಜಿಲ್ಲಾ ಕೇಂದ್ರ ಕೋಲಾರದಲ್ಲಿ ಹಿಂದೆ ಇದ್ದ ದಶರಥಕುಂಟೆಯು ಇಂದು ಜಿಲ್ಲಾ ಬಸ್‌ನಿಲ್ದಾಣವಾಗಿದೆ. ಹೀಗೆ ಜಿಲ್ಲೆಯಲ್ಲಿ ಕಂಡು ಬರುವ ವೈವಿಧ್ಯಮಯವಾದ ಪೌರಾಣಿಕ ಹಿನ್ನೆಲೆ ಹಾಗೂ ಸ್ಥಳೀಯ ಐತಿಹ್ಯಗಳ ಜೊತೆಗೆ ಜಿಲ್ಲೆಯ ಸ್ಥಳನಾಮಗಳೂ ಕೂಡ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಸ್ಥಳೀಯವಾಗಿ ಮಹತ್ವದ ಚಾರಿತ್ರಿಕ ಸುಳಿವನ್ನು ನೀಡುವ ಕುರುಹುಗಳಾಗಿದ್ದು, ಅವುಗಳ ವ್ಯವಸ್ಥಿತ ಅಧ್ಯಯನದ ಅಗತ್ಯವಿದೆ.

## ಇತಿಹಾಸಪೂರ್ವ ಕಾಲ

ಭೌಗೋಳಿಕವಾಗಿ ಬೆಟ್ಟ-ಗುಡ್ಡಗಳಿಂದ ಆವೃತ್ತವಾಗಿರುವ ಈ ಜಿಲ್ಲೆಯಲ್ಲಿನ ಮಾನವ ಚಟುವಟಿಕೆಯನ್ನು ಇತಿಹಾಸಪೂರ್ವ ಕಾಲಕ್ಕೆ ಗುರುತಿಸಬಹುದಾಗಿದೆ. ಜಿಲ್ಲೆಯ ಗಡಿಗೆ ಹೊಂದಿಕೊಂಡಂತಿರುವ ನೆರೆಯ ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ ಹಾಗೂ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕುಗಳಲ್ಲಿ ಆದಿ ಮಾನವನ ಪ್ರಾಚೀನತಮ ಶಿಲಾಯುಧ ಸಂಸ್ಕೃತಿಗೆ ಸೇರಿದ ಆದಿ ಶಿಲಾಯುಗ ಹಂತದ ನೆಲೆಗಳು ಪತ್ತೆಯಾಗಿವೆ. ಇದೇ ರೀತಿ ಜಿಲ್ಲೆಯ ಗಡಿಯಂಚಲ್ಲಿರುವ ನೆರೆಯ ತಮಿಳುನಾಡಿನ ಧರ್ಮಪುರಿ ಹಾಗೂ ಉತ್ತರ ಆರ್ಕಾಟ್; ಹಾಗೂ ಆಂಧ್ರಪ್ರದೇಶದ ಅನಂತಪುರ ಹಾಗೂ ಚಿತ್ತೂರು ಜಿಲ್ಲೆಗಳಲ್ಲೂ ಆದಿಶಿಲಾಯುಗ ಸಂಸ್ಕೃತಿಯ ಮಾನವನಿಗೆ ಸಂಬಂಧಿಸಿದ ಅವಶೇಷಗಳು ಕೆಲವೆಡೆ ದೊರೆತಿದ್ದು, ಅವುಗಳ ಪ್ರಾಚೀನತೆಯನ್ನು ಗರಿಷ್ಟ ನಾಲ್ಕು ಲಕ್ಷ ವರ್ಷಗಳಷ್ಟು ಹಿಂದಕ್ಕೆ ಗುರುತಿಸಲಾಗಿದೆ. ಇದೇ ರೀತಿ ಮಧ್ಯ ಶಿಲಾಯುಗ (ಕ್ರಿಪೂ.೪೦,೦೦೦ – ಕ್ರಿಪೂ.೧೦,೦೦೦) ಹಾಗೂ ಅಂತ್ಯ ಶಿಲಾಯುಗ (ಕ್ರಿಪೂ.೨೫೦೦೦–ಕ್ರಿಪೂ.೧೦,೦೦೦) ಹಂತಗಳಿಗೆ ಸೇರಿದ ನೆಲೆಗಳು ನೆರೆಯ ತುಮಕೂರು ಜಿಲ್ಲೆಯಲ್ಲಿ ಪತ್ತೆಯಾಗಿವೆ. ಅಲ್ಲದೆ ಮಾನವ ವಿಕಾಸದ ಮುಂದಿನ ಸಾಂಸ್ಕೃತಿಕ ಹಂತವಾದ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ (ಕ್ರಿಪೂ.೧೦,೦೦೦

– ಕ್ರಿ.ಪೂ.೨೫೦೦) ಸೇರಿದ ನೆಲೆಗಳು ನೆರೆಯ ತುಮಕೂರು ಜಿಲ್ಲೆಯಲ್ಲಿ ಯಥೇಚ್ಛವಾಗಿಯೂ, ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕು ಹಾಗೂ ಬೆಂಗಳೂರು ನಗರ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಬಿಡಿ–ಬಿಡಿಯಾಗಿಯೂ ಪತ್ತೆಯಾಗಿವೆಯಾದರೂ, ಈ ವಿಭಿನ್ನ ಸಂಸ್ಕೃತಿಗಳಿಗೆ ಸಂಬಂಧಿಸಿದ ನೆಲೆಗಳು ಜಿಲ್ಲೆಯಲ್ಲಿ ಈವರೆಗೆ ಪತ್ತೆಯಾಗಿಲ್ಲ. ಆದರೆ ಮಾನವನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪ್ರಮುಖ ಮೈಲಿಗಲ್ಲಾದ ನೂತನ ಶಿಲಾಯುಗ ಸಂಸ್ಕೃತಿ ಮತ್ತು ಆನಂತರದ ಹಂತಗಳನ್ನು ಬಿಂಬಿಸುವ ಸುಮಾರು ೨೫೦ ಸಾಂಸ್ಕೃತಿಕ ನೆಲೆಗಳನ್ನು ಪುರಾತತ್ವ ಶಾಸ್ತ್ರಜ್ಞರು ಜಿಲ್ಲೆಯಲ್ಲಿ ಈವರೆಗೆ ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ತತ್ಪರಿಣಾಮವಾಗಿ ಜಿಲ್ಲೆಯ ಇತಿಹಾಸಪೂರ್ವ ಕಾಲದ ಚರಿತ್ರೆಯನ್ನು ಕನಿಷ್ಟ ನೂತನ ಶಿಲಾಯುಗ ಸಂಸ್ಕೃತಿಯಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ಅದರ ಕಾಲವನ್ನು ಕ್ರಿ.ಪೂ.೨೫೦೦–ಕ್ರಿ.ಪೂ.೧೦೦೦ ಎಂದು ಪರಿಗಣಿಸಲಾಗಿದೆ.

## ನೂತನ ಶಿಲಾಯುಗ ಸಂಸ್ಕೃತಿ

ಮಾನವನ ಸಾಂಸ್ಕೃತಿಕ ವಿಕಾಸದಲ್ಲಿ ಅತ್ಯಂತ ಮಹತ್ವದ ಘಟ್ಟ ಇದಾಗಿದ್ದು, ಅಲೇಮಾರಿ ಹಂತದಿಂದ ಒಂದೆಡೆ ನೆಲೆಯೂರುವ ಬದುಕಿನತ್ತ ಮುಂದಾದ ಮಾನವ, ಪಶುಪಾಲನೆಯೊಂದಿಗೆ ಬೇಸಾಯಕ್ಕೆ ಮುಂದಾದದ್ದು, ಗುಡ್ಡದ ಬುಡದಲ್ಲಿ ಒಡ್ಡುಕಟ್ಟಿ ಕೆರೆ ನೀರಾವರಿಗೆ ತೊಡಗಿಸಿಕೊಂಡಿದ್ದು; ತನ್ಮೂಲಕ ನಾಗರಿಕ ಬದುಕಿಗೆ ಮುಂದಡಿ ಇಟ್ಟದ್ದು ಈ ಅವಧಿಯಲ್ಲೇ. ಅಲ್ಲದೇ ಶಿಲಾಯುಗದ ಮಡಿಕೆ–ಕುಡಿಕೆಗಳ ತಯಾರಿಕೆಯಲ್ಲಿ ವೈವಿಧ್ಯತೆಯನ್ನೂ, ನಯಗಾರಿಕೆಯನ್ನೂ ಕಂಡುಕೊಂಡಿದ್ದು, ಈ ಸಾಂಸ್ಕೃತಿಕ ಹಂತದಲ್ಲಿಯೇ. ಇವರು ಶಿಲಾಉಪಕರಣಗಳನ್ನು ನಾಲ್ಕು ಹಂತಗಳಲ್ಲಿ ಸಿದ್ಧಪಡಿಸುತ್ತಿದ್ದು, ಮೊದಲು ಕಲ್ಲಿನ ಚಕ್ಕೆ ಎಬ್ಬಿಸಿ, ನಂತರ ಉಬ್ಬುಗಳನ್ನು ಕುಟ್ಟಿ ತೆಗೆದು, ಅನಂತರ ಅದನ್ನು ಉಜ್ಜಿ ನಯಗೊಳಿಸಿ, ಪ್ರಾಣಿಗಳ ಕೊಬ್ಬಿನಂತಹ ಜಿಡ್ಡು ಹಾಗೂ ರಂಗೋಲಿಯಂತಹ ಕಲ್ಲಿನ ನುಣುಪಾದ ಪುಡಿಯನ್ನು ಬಳಸಿ ತಿಕ್ಕುವ ಮೂಲಕ ಅವುಗಳಿಗೆ ಹೊಳಪು ನೀಡುತ್ತಿದ್ದರು. ಸಾಮಾನ್ಯವಾಗಿ ತ್ರಿಭುಜಾಕಾರದಲ್ಲಿರುವ ಈ ಅಯುಧಗಳು ಸಂಯುಕ್ತ ಉಪಕರಣಗಳಾಗಿದ್ದು, ಅವನ್ನು ಮರ–ಮೂಳೆ ಇಲ್ಲವೇ ಕಟ್ಟಿಗೆಗಳಿಗೆ ಸಿಕ್ಕಿಸಿ ಬಳಸಲಾಗುತ್ತಿತ್ತು. ಇವುಗಳ ಜೊತೆಗೆ ಅತಿ ಸೂಕ್ಷ್ಮ ಗಾತ್ರದ ಚಕ್ಕೆ ಕಲ್ಲಿನ ಆಯುಧಗಳನ್ನೂ ಅವರು ಬಳಸುತ್ತಿದ್ದು ಅಂತಹವು ಜಿಲ್ಲೆಯ ಗೊರವನಹಳ್ಳಿಯಲ್ಲಿ ಪತ್ತೆಯಾಗಿವೆ. ಬರಿಗೈಯಲ್ಲಿ ತಯಾರಿಸಿದ ಕೈಮಡಿಕೆಗಳು ಆರಂಭದಲ್ಲಿ ಬಳಕೆಯಲ್ಲಿತ್ತು. ನಂತರದಲ್ಲಿ ಮಂದಗತಿಯಲ್ಲಿ ತಿರುಗುವ ಚಕ್ರ ಹಾಗೂ ಪರಿಷ್ಕೃತ ಚಕ್ರ(ಮರದ ಗಾಲಿ)ಗಳನ್ನು ಬಳಸಿ ತಯಾರಿಸಿದ, ಹೆಚ್ಚು ತೆಳುವಾದ ಮಡಕೆಗಳು ಬಳಕೆಗೆ ಬಂದಿರುವ ಅಂಶವನ್ನು ಸೂಚಿಸುವ ತೆಳು ಮಡಕೆಯ ಚೂರುಗಳು ಪತ್ತೆಯಾಗಿವೆ. ಕಂದು ಮತ್ತು ಬೂದುಬಣ್ಣದ ಮಡಕೆಗಳು ಪ್ರಾತಿನಿಧಿಕವಾಗಿ ಕಂಡುಬಂದರೂ ಪ್ರಾದೇಶಿಕ ವೈವಿಧ್ಯತೆಗೇನೂ ಕಡಿಮೆ ಇಲ್ಲ. ವಿವಿಧ ಆಕಾರ ಹಾಗೂ ಗಾತ್ರದ ಇವುಗಳಲ್ಲಿ ಬಟ್ಟಲು, ಬೋಗುಣಿ, ಕೊಡ; ಹಿಡಿಕೆ ಹಾಗೂ ಮುಚ್ಚಳಗಳುಳ್ಳ ವಿವಿಧ ಗಾತ್ರದ ಕೊಡ, ಕಮಂಡಲದಾಕಾರದ ಹೂಜಿ, ತಳದಲ್ಲಿ ರಂಧ್ರವುಳ್ಳ ಪಾತ್ರೆ ಮುಂತಾದವು ಸಾಮಾನ್ಯವಾಗಿ ಕಂಡುಬರುತ್ತವೆ. ಕೆಲವು ಮಡಕೆಗಳ ಮೇಲೆ ಅಲಂಕಾರಿಕವಾಗಿ ತಿಳಿಯ ಲೇಪವನ್ನು ಮಾಡಿರುವುದು ಅವರ ಕಲಾವಂತಿಕೆಯನ್ನು ಬಿಂಬಿಸುತ್ತದೆ. ಇವರು ಒಂದೆಡೆ ನೆಲೆಸಲಾರಂಭಿಸಿದ ಅಂಶವನ್ನು ಸೂಚಿಸುವ ಜನವಸತಿ ನೆಲೆಗಳೂ ಕಂಡುಬಂದಿದ್ದು ಧಾರ್ಮಿಕ ನಂಬಿಕೆ, ಆಚರಣೆ, ಶವಸಂಸ್ಕಾರ ಪದ್ಧತಿ ಮುಂತಾದವನ್ನು ರೂಢಿಸಿಕೊಂಡು ಸುಸಂಸ್ಕೃತ ಬದುಕನ್ನು ಇವರು ರೂಪಿಸಿಕೊಂಡಿದ್ದರು. ಈ ಎಲ್ಲಾ ಕಾರಣಗಳಿಂದಾಗಿ ಮಾನವ ವಿಕಾಸದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯನ್ನು ನಾಗರಿಕತೆಯ ಮೊದಲ ಮೆಟ್ಟಿಲೆಂದೇ ವಿದ್ವಾಂಸರು ಪರಿಗಣಿಸಿದ್ದಾರೆ.

ಈ ಸಾಂಸ್ಕೃತಿಕ ಹಂತಕ್ಕೆ ಸೇರಿದ ಸುಮಾರು ೨೦೦ ನೆಲೆಗಳು ಈವರೆಗೆ ರಾಜ್ಯದ ವಿವಿಧೆಡೆಗಳಲ್ಲಿ ಲಭಿಸಿದ್ದು, ಜಿಲ್ಲೆಯಲ್ಲೂ ಒಟ್ಟು ೨೦ ನೆಲೆಗಳು ಪತ್ತೆಯಾಗಿವೆ. ಅವುಗಳಲ್ಲಿ ಜಿಲ್ಲೆಯ ತಾಲೂಕು ಕೇಂದ್ರ ಶ್ರೀನಿವಾಸಪುರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ೧೯೧೬ರಷ್ಟು ಹಿಂದೆಯೇ ಪತ್ತೆ ಹಚ್ಚಿ ವರದಿ ಮಾಡಿದ ಕೀರ್ತಿ ರಾಬರ್ಟ್ ಬ್ರೂಸ್‌ಫೂಟ್‌ರವರಿಗೆ ಸಲ್ಲುತ್ತದೆ. ಮಿಗಿಲಾಗಿ ದಕ್ಷಿಣ ಭಾರತದಲ್ಲೇ ಅತ್ಯಂತ ವಿಶಾಲವಾದ ನೆಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬನಹಳ್ಳಿ (ಮಾಲೂರು ತಾಲೂಕು)ಯಿಂದಾಗಿ ಜಿಲ್ಲೆಗೆ ಭಾರತದ ಪುರಾತತ್ವ ನಕಾಶೆಯಲ್ಲಿ ವಿಶೇಷವಾದ ಸ್ಥಾನವಿದೆ. ಅಲ್ಲದೇ ಜಿಲ್ಲೆಯ ಕೋಲಾರ ತಾಲೂಕಿನ ಅಂತರಗಂಗೆ, ತೇರುಹಳ್ಳಿ, ಪಾಪರಾಜನಹಳ್ಳಿ, ಅರಾಭಿಕೊತ್ತನೂರು, ಕಡಗತ್ತೂರು, ಕೆಂದಟ್ಟಿ, ಗುಟ್ಟಹಳ್ಳಿ ಹಾಗೂ ವೆಂಕಟಾಪುರ; ಬಂಗಾರಪೇಟೆ ತಾಲೂಕಿನ ಬೂದಿಕೋಟೆ, ಗೊರವನಹಳ್ಳಿ, ತೂಕಲ್ಲು, ಸೂಲಿಕುಂಟೆ ಹಾಗೂ ಹುನಗುಂದ;

ಮಾಲೂರು ತಾಲೂಕಿನ ಕುಪ್ಪಳ್ಳಿ, ತರ್ನಹಳ್ಳಿ, ದೊಡ್ಡ ಕಡತ್ತೂರು, ನಾಗನಾಳ ಹಾಗೂ ಧನಮಟ್ಟನಹಳ್ಳಿಗಳಲ್ಲಿ ಈ ಸಂಸ್ಕೃತಿಗೆ ಸೇರಿದ ಅವಶೇಷಗಳು ಪತ್ತೆಯಾಗಿವೆ. ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಜನ ಜಿಲ್ಲೆಯ ದಕ್ಷಿಣ ಭಾಗದಲ್ಲಿ ವಿರಳವಾಗಿ ನೆಲೆಗೊಂಡಿದ್ದ ಅಂಶ ಇದರಿಂದ ವ್ಯಕ್ತವಾಗುತ್ತದೆಯಾದರೂ ಈ ಸಂಸ್ಕೃತಿಗೆ ಸೇರಿದ ಮಾಲೂರು ತಾಲೂಕಿನ ಬನ್ನಹಳ್ಳಿಯು ದಕ್ಷಿಣ ಭಾರತದಲ್ಲೇ ಅತಿ ದೊಡ್ಡ ವಸತಿ ನೆಲೆಯಾಗಿತ್ತೆಂಬ ಅಂಶವನ್ನು ಮರೆಯುವಂತಿಲ್ಲ. ಇದನ್ನು ಈವರೆಗೆ ಬನ್ನಹಳ್ಳಿಯಲ್ಲಿ ಜರುಗಿರುವ ಉತ್ಖನನಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ವರದಿಗಳೂ ಪುಷ್ಟೀಕರಿಸುತ್ತವೆ. ಆಂಧ್ರ ಪ್ರದೇಶದ ಪೆನ್ನಾರ್ ನದಿ ಬಯಲು (ಕರ್ನೂಲ್ ಜಿಲ್ಲೆ) ಹಾಗೂ ತಮಿಳುನಾಡಿನ ಪಾಲಾರ್ ನದಿ ಬಯಲಲ್ಲಿದ್ದ (ಉತ್ತರ ಆರ್ಕಾಟ್ ಜಿಲ್ಲೆ) ನೂತನ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗಳ ನಡುವಣ ಸಂಬಂಧವನ್ನು ಅರ್ಥೈಸಿಕೊಳ್ಳುವುದರ ಜೊತೆಗೆ ಕರ್ನೂಲ್ ಪ್ರದೇಶದಲ್ಲಿ ಕಂಡುಬರುವ ವರ್ಣಲೇಪಿತ ಮಡಕೆ ಸಂಸ್ಕೃತಿಯು ಕೋಲಾರ ಜಿಲ್ಲೆಯ ನೂತನ ಶಿಲಾಯುಗ ನೆಲೆಗಳಿಗೆ ಹಬ್ಬಿತ್ತೋ ಹೇಗೆಂದು ಪರಿಶೀಲಿಸುವ ಉದ್ದೇಶದಿಂದ ಭಾರತೀಯ ಪುರಾತತ್ವ ಇಲಾಖೆಯ ಉತ್ಖನನ ವಿಭಾಗವು ಜಿಲ್ಲೆಯಲ್ಲಿ ಕೈಗೊಂಡಿದ್ದ ಸರ್ವೇಕ್ಷಣದ ಸಂದರ್ಭದಲ್ಲಿ ಬೆಳಕಿಗೆ ಬಂದ ನಿವೇಶನಗಳಲ್ಲಿ ಬನಹಳ್ಳಿ ಪ್ರಮುಖ ನಿವೇಶನವಾಗಿದೆ. ಸಮೀಪದ ಟೇಕಲ್ ಬೆಟ್ಟದ ತಪ್ಪಲಿನಲ್ಲಿ ಸುಮಾರು ೩೦೦ x ೧೦೦ ಮೀಟರ್ ಪ್ರದೇಶದಲ್ಲಿ ವ್ಯಾಪಿಸಿರುವ ಈ ಬಯಲು ನೆಲೆಯಲ್ಲಿ ಸುಮಾರು ಐದು ಮೀಟರ್‌ನಷ್ಟು ಆಳದವರೆಗೆ ಶಿಲಾಯುಗ ಸಂಸ್ಕೃತಿಯ ಶಿಲಾ ಉಪಕರಣಗಳು ಲಭಿಸಿದ್ದು, ಇಂದಿನ ಶಾಲಾಕಟ್ಟಡವಿರುವ ಸ್ಥಳವೂ ಸೇರಿದಂತೆ ಹಾಲಿ ಊರಿನ ಅರ್ಧಭಾಗವು ಶಿಲಾಯುಗ ಸಂಸ್ಕೃತಿಯ ಅವಶೇಷವುಳ್ಳ ದಿಬ್ಬದ ಮೇಲೆ ನೆಲೆಗೊಂಡಿದ್ದು, ಸರ್ವೇಕ್ಷಣ–ಉತ್ಖನನ ಸಂದರ್ಭದಲ್ಲಿ ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳು ಹೇರಳವಾಗಿ ಲಭಿಸಿವೆ. ಮಿಗಿಲಾಗಿ ಈ ನಿವೇಶನದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಉಪಕರಣ ಮಾದರಿಗಳಾದ ಕೊಡಲಿ, ಸುತ್ತಿಗೆ, ಉಳಿ–ಕೆತ್ತುಳಿ, ಉಂಗುರಕಲ್ಲು, ಕವಣೆಕಲ್ಲು, ಬಾಚಿಕಲ್ಲು, ಉಜ್ಜುಗಲ್ಲು ಹಾಗೂ ಅರೆಯುವ ಕಲ್ಲುಗಳ ಜೊತೆಗೆ ನಸುಕಂದು ಹಾಗೂ ಬೂದು ಬಣ್ಣದ ಲೇಪನವುಳ್ಳ ಕೆಂಪು ಬಣ್ಣದ ಮಡಕೆಯ ಚೂರುಗಳೂ ದೊರೆತಿವೆ. ಊರ ಸಮೀಪದ ಬೆಟ್ಟದಲ್ಲಿರುವ ಕೆಲವು ಗವಿಗಳಲ್ಲಿ ಬರಿಗೈನಿಂದ ಮಾಡಲ್ಪಟ್ಟಿರುವ ಕೈಮಡಕೆ ಹಾಗು ಶಿಲಾ ಉಪಕರಣಗಳೂ ಲಭಿಸಿವೆ. ಅಲ್ಲದೇ ಪ್ರಾಣಿಗಳ ಅಸ್ಥಿಪಂಜರಗಳೂ ದೊರೆತಿರುವುದು ಗಮನಾರ್ಹವಾಗಿದೆ. ಟೇಕಲ್ ಬೆಟ್ಟದ ತಪ್ಪಲಿನಲ್ಲೇ ಇರುವ ಟೇಕಲ್ ಹಾಗೂ ಬನ್ನಹಳ್ಳಿ ಪರಿಸರವು ಶಿಲಾಯುಗದ ಮಾನವರಿಗೆ ಪ್ರಶಸ್ತವಾದ ಸ್ಥಳವಾಗಿದ್ದು, ಬೆಟ್ಟದ ಮೇಲಿರುವ ಕೊರಕಲು ಕಲ್ಲಾಸರೆ, ನಿಸರ್ಗ ಗವಿಗಳೂ ಅವರ ವಾಸಕ್ಕೆ ಸೂಕ್ತ ತಾಣಗಳಾಗಿದ್ದವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕೆಂದಟ್ಟಿ ಹಾಗೂ ದೊಡ್ಡಕಡತ್ತೂರಿನ ಕಲ್ಲಾಸರೆಗಳಿಗಿಂತ ಭಿನ್ನವಾದ ರೀತಿಯಲ್ಲಿ ಬನ್ನಹಳ್ಳಿ ಬಳಿಯ ಬೆಟ್ಟದಲ್ಲಿರುವ ಕಲ್ಲಾಸರೆಗಳಲ್ಲಿ ನೂತನ ಶಿಲಾಯುಗಕ್ಕೆ ಸೇರಿದ ಶಿಲಾ ಉಪಕರಣ ಹಾಗೂ ಕೈಯಿಂದ ತಯಾರಿಸಿದ ಮಡಕೆಗಳು ಹೇರಳವಾಗಿ ದೊರೆತಿವೆ. ಅಲ್ಲದೇ ಕಂದು ಬೂದು ಬಣ್ಣದ ಬೋಗುಣಿ, ಬೂದು ಬಣ್ಣದ ಬೋಗುಣಿ ಹಾಗೂ ಹೂಜಿಗಳೂ ಲಭಿಸಿದ್ದು, ಅವುಗಳಲ್ಲಿ ಕೆಲವು ಕಾವಿ ಮಣ್ಣಿನ ತೆಳು ಲೇಪನದ ಅಲಂಕಾರವನ್ನೂ ಹೊಂದಿರುವುದು ಗಮನಾರ್ಹವಾಗಿದೆ.

ನೆರೆಯ ಬೂದಿಕೋಟೆಯಲ್ಲೂ ಉಜ್ಜಿ ನಯಗೊಳಿಸಿದ ಶಿಲಾ ಉಪಕರಣಗಳು, ತಿಳಿಕಂದು, ಕೆಂಪು, ಕಪ್ಪು ಹಾಗೂ ಕಪ್ಪು ಕೆಂಪು ವರ್ಣದ ಮಡಕೆಯ ಚೂರುಗಳು ಯಥೇಚ್ಛವಾಗಿ ಲಭಿಸಿವೆ. ಕೋಲಾರ ತಾಲೂಕಿನ ತೇರುಹಳ್ಳಿ (ಮಜರಾ ಪಾಪರಾಜನಹಳ್ಳಿ), ಹಾಗೂ ಮಾಲೂರು ತಾಲೂಕಿನ ತರ್ನಹಳ್ಳಿಯ ನಿವೇಶನಗಳಲ್ಲಿ ಕೊಡಲಿಯ ಮುರಿದ ಭಾಗ ಹಾಗೂ ಕಂದು–ಕೆಂಪು ವರ್ಣದ ಮಡಕೆಯ ಚೂರುಗಳು ದೊರೆತಿವೆ. ಇದೇ ತಾಲೂಕಿನ ಕುಪ್ಪಳ್ಳಿ ಹಾಗೂ ಧನಮತ್ತನಹಳ್ಳಿಗಳಲ್ಲಿ ಕಲ್ಲಿನ ಕೊಡಲಿಯೂ ಸೇರಿದಂತೆ ಅನೇಕ ಶಿಲಾಯುಧಗಳು ಲಭಿಸಿವೆ. ಇದೇ ತಾಲೂಕಿನ ದೊಡ್ಡಕಡತ್ತೂರಿನಲ್ಲಿ ಚೆನ್ನಾಗಿ ಉಜ್ಜಿ ನಯಗೊಳಿಸಿದ ತ್ರಿಕೋನಾಕಾರದ ಕೊಡಲಿ, ಕೊಡಲಿ–ಸುತ್ತಿಗೆ ಹಾಗೂ ವಿವಿಧ ಮಾದರಿಯ ಶಿಲಾ ಉಪಕರಣಗಳ ಜೊತೆಗೆ ಅನೇಕ ಮಾದರಿಯ ಮಡಕೆ, ಕಾವಿವರ್ಣಲೇಪಿತ ಬೋಗುಣಿ, ಮೃತ್ಪಾತ್ರೆಯ ತುಣುಕುಗಳು ಗಣನೀಯ ಪ್ರಮಾಣದಲ್ಲಿ ಪತ್ತೆಯಾಗಿದೆ. ಇಲ್ಲಿ ಜನವಸತಿ ಇದ್ದುದಕ್ಕೆ ಪೂರಕವಾದ ಸಾಕಷ್ಟು ಕುರುಹುಗಳನ್ನು ಪುರಾತತ್ವಜ್ಞರು ಗುರುತಿಸಿದ್ದಾರೆ. ಇದೊಂದು ಬಯಲು ನಿವೇಶನವಾಗಿದ್ದು, ಬಳಿಯ ಬೆಟ್ಟದಲ್ಲಿರುವ ಒಂದೆರಡು ಕಲ್ಲಾಸರೆಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಶಿಲಾ ಉಪಕರಣ ಹಾಗೂ ಮಡಕೆಗಳೂ ಲಭಿಸಿವೆ. ವಸತಿ ಗುಳಿಗಳು (Dwelling Pits) ಈ ನೆಲೆಯ ಪ್ರಧಾನ ಆಕರ್ಷಣೆಯಾಗಿದ್ದು, ಅವುಗಳಲ್ಲಿ ಕೆಲವು ಸ್ಥಳೀಯರ ಅಗೆತಕ್ಕೆ ಬಲಿಯಾಗಿದ್ದು, ಶಿಲಾಕೊಡಲಿಗಳನ್ನು ಆ ನಿವೇಶನದಲ್ಲಿ ಅವರು ಹೇರಳವಾಗಿ ಸಂಗ್ರಹಿಸಿದ್ದಾರೆ. ಈ ವಸತಿ ಗುಂಡಿ/ಗುಳಿಗಳಲ್ಲಿ

ಬೆಂದ ಬತ್ತದ ಹೊಟ್ಟು ಹಾಗೂ ಬೂದಿ ಸಹ ಲಭಿಸಿದ್ದು, ಕೆಲವು ವಸತಿ ಗುಳಿಗಳ ಗೋಡೆಗಳಿಗೆ ಮಣ್ಣನ್ನು ಮೆತ್ತಿ ನಯ ಮಾಡಿದ ಕುರುಹುಗಳೂ ಕಂಡು ಬಂದಿದೆ.

ಕೆಂದಟ್ಟಿ ಬೆಟ್ಟದ ತಪ್ಪಲಿನಲ್ಲಿರುವ ಕೆಂದಟ್ಟಿ ಗ್ರಾಮವು ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ನೆಲೆಗಟ್ಟಾಗಿದ್ದು, ಸಮೀಪದ ಬೆಟ್ಟದಲ್ಲಿರುವ ಕಲ್ಲಾಸರೆಗಳಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ಶಿಲಾ ಉಪಕರಣಗಳಾದ ಕೊಡಲಿ, ಕೊಡಲಿ–ಸುತ್ತಿಗೆ, ಮ್ಯೂಲರ್ಸ್ ಹಾಗೂ ಪೌಂಡರ್ಸ್‌ಗಳ ಜೊತೆಗೆ ಕಂದು, ಬೂದು ಹಾಗೂ ಕೆಂಪು ಬಣ್ಣದ ಮಡಕೆ, ಬಾಯುಳ್ಳ ಬೋಗುಣಿ ಮುಂತಾದವು ಹೇರಳವಾಗಿ ಲಭಿಸಿವೆ. ಬಂಗಾರಪೇಟೆ ತಾಲೂಕಿನ ಹುನುಗುಂದದಲ್ಲಿ, ಬರಿಗೈನಿಂದ ತಯಾರಿಸಿದ ಕಂದು ಹಾಗೂ ಕೆಂಪು ವರ್ಣದ ಮಡಕೆಯ ಮುರಿದ ಚೂರುಗಳು ಲಭಿಸಿವೆ. ಇದೇ ತಾಲೂಕಿನ ಸೂಲಿಕುಂಟೆ, ತೂಕಲ್ಲುಗಳಲ್ಲಿ ಉಜ್ಜಿ ನಯಗೊಳಿಸಿದ ಕಲ್ಲುಕೊಡಲಿ ಹಾಗೂ ತಿಳಿಕಂದು ಬಣ್ಣದ ಮಡಕೆಚೂರುಗಳು ದೊರೆತಿವೆ. ಇದೇ ತಾಲೂಕಿನ ಗೊರವನಹಳ್ಳಿಯಲ್ಲಿ, ಉಜ್ಜಿ ನಯಗೊಳಿಸಿದ ಕೆಲವು ಉಪಕರಣಗಳ ಜೊತೆಗೆ ಬೆಸಾಲ್ಟ್ ಶಿಲೆಯ ಚಕ್ಕೆಗಳೂ ಪತ್ತೆಯಾಗಿರುವುದು ಗಮನಾರ್ಹವಾಗಿದೆ. ಕೋಲಾರ ತಾಲೂಕಿನ ವೆಂಕಟಾಪುರದ ನೆಲೆಯಲ್ಲಿ ಶಿಲಾಉಪಕರಣಗಳ ಜೊತೆಗೆ ಕಂದು ಹಾಗೂ ಕಂದು–ಕೆಂಪು ವರ್ಣದ ಮಡಕೆ ಚೂರುಗಳೂ ಸಿಕ್ಕಿವೆ. ಇದೇ ತಾಲೂಕಿನ ಗುಟ್ಟಹಳ್ಳಿಯಲ್ಲಿ ಕಂದು, ಕೆಂಪು ಹಾಗೂ ಬೂದು ಬಣ್ಣದ ಮಡಕೆ ಚೂರುಗಳು ಲಭಿಸಿದ್ದರೆ, ಕೆಂದಟ್ಟಿಯಲ್ಲಿ ಉಜ್ಜಿ ನಯಗೊಳಿಸಿದ ಕೊಡಲಿ, ಸುತ್ತಿಗೆ, ಅರೆಯುವ ಕಲ್ಲು, ರುಬ್ಬುಕಲ್ಲುಗಳ ಜೊತೆಗೆ ಕಂದು, ಹಾಗೂ ಒರಟು–ಕೆಂಪು ವರ್ಣದ ಮಡಕೆ ಚೂರುಗಳೂ ಲಭಿಸಿವೆ. ಅರಾಭಿಕೊತ್ತನೂರಿನಲ್ಲೂ ಕೊಡಲಿ ಹಾಗೂ ಇತರ ಶಿಲಾಉಪಕರಣಗಳ ಜೊತೆಗೆ ಕಂದು ಹಾಗೂ ಕೆಂಪು ವರ್ಣದ ಮಡಕೆ ಚೂರುಗಳೂ ಯಥೇಚ್ಛವಾಗಿ ದೊರಕಿದೆ. ಚಿಂತಾಮಣಿ ತಾಲೂಕಿನ ಸಂತೆಕಲ್ಲಹಳ್ಳಿಯ ಬೂದಿತಿಟ್ಟು ಪ್ರದೇಶದಲ್ಲಿ ದೊಡ್ಡ ಗಾತ್ರದ ಶಿಲಾಕೊಡಲಿ, ಉಜ್ಜುಕಲ್ಲು, ಮಸೆಯುವ ಕಲ್ಲು, ಮಡಿಕೆ–ಕುಡಿಕೆಯ ಚೂರುಗಳು ಪತ್ತೆಯಾಗಿವೆ. ಅಲ್ಲದೇ ಸುಮಾರು ೮ನೆಯ ಶತಮಾನದ ಶಾಸನವಿರುವ ಮಡಕೆಯ ತ್ರುಟಿತ ಭಾಗಗಳು ಬಹು ಹಿಂದೆಯೇ ವರದಿಯಾಗಿದ್ದು, ಇದೊಂದು ಅಪೂರ್ವ ಉದಾಹರಣೆಯಾಗಿದೆ. ಈ ನಿವೇಶನಗಳಲ್ಲಿ ಬನಹಳ್ಳಿಯೊಂದನ್ನು ಹೊರತುಪಡಿಸಿ ಉಳಿದ ನೆಲೆಗಳಲ್ಲಿ ಉತ್ಖನನ ಕಾರ್ಯ ನಡೆದಿಲ್ಲ. ಅಲ್ಲದೇ ಈ ನಿಟ್ಟಿನಲ್ಲಿ ಸರ್ವೇಕ್ಷಣಾ ಕಾರ್ಯವೂ ನಿರೀಕ್ಷಿತ ಪ್ರಮಾಣದಲ್ಲಿ ಜರುಗಿಲ್ಲ. ಜಿಲ್ಲೆಯಲ್ಲಿ ವಿಸ್ತೃತ ಸರ್ವೇಕ್ಷಣಾ ಹಾಗೂ ವ್ಯವಸ್ಥಿತ ಉತ್ಖನನ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಈ ಸಂಸ್ಕೃತಿಗೆ ಸಂಬಂಧಿಸಿದಂತೆ ಮತ್ತಷ್ಟು ಪೂರಕ ಮಾಹಿತಿಯನ್ನು ಪಡೆಯಬಹುದಾಗಿದೆ.

## ಶಿಲಾ–ತಾಮ್ರಯುಗ ಸಂಸ್ಕೃತಿ

ನೂತನ ಶಿಲಾಯುಗ ಸಂಸ್ಕೃತಿಯ ಬೆನ್ನಲ್ಲೇ ವಿಕಾಸಗೊಂಡ ಸಾಂಸ್ಕೃತಿಕ ಹಂತವಿದು. ಶಿಲಾಯುಧಗಳ ಜೊತೆ ಜೊತೆಯಲ್ಲೇ ತಾಮ್ರದ ಉಪಕರಣಗಳು ಆರಂಭದಲ್ಲಿ ಕ್ವಚಿತ್ತಾಗಿ ರೂಢಿಗೆ ಬಂದು ಕ್ರಮೇಣ ಶಿಲೆಗಳಿಗೆ ಬದಲು ಲೋಹದ ಆಯುಧಗಳಿಗೆ ದಾರಿಮಾಡಿಕೊಟ್ಟ ಸಂಕ್ರಮಣ ಘಟ್ಟವಿದು. ನೀಳಚಕ್ಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ; ಹಾಗೂ ಸುಧಾರಿತ ಬೇಸಾಯ ಕ್ರಮ ಈ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಅಲ್ಪ ಪ್ರಮಾಣದಲ್ಲಿ ಶಿಲಾ ಉಪಕರಣಗಳ ಜೊತೆಗೆ ತಾಮ್ರ ಲೋಹದ ಬಳಕೆ ಹಾಗೂ ಸುಧಾರಿತ ಮಣ್ಣಿನ ಮಡಕೆಗಳ ತಯಾರಿಕೆ ಈ ಸಂಸ್ಕೃತಿಯ ವಿಶಿಷ್ಟ ಲಕ್ಷಣವಾಗಿದೆ. ಆದರೆ ಈ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳಾವುದೂ ಈವರೆಗೆ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ.

ಸಿಂಧೂ ನಾಗರಿಕತೆ (ಕ್ರಿಪೂ.೨೮೦೦–ಕ್ರಿಪೂ.೧೫೦೦) ಯ ಪ್ರಮುಖ ಪಟ್ಟಣಗಳಾಗಿದ್ದ ಹರಪ್ಪಾ ಹಾಗೂ ಮೊಹೆಂಜೋದಾರೋ ನಿವೇಶನಗಳಲ್ಲಿ ದೊರೆತಿರುವ ಚಿನ್ನದ ಆಭರಣಗಳಲ್ಲಿ ಕಂಡು ಬರುವ ಬೆಳ್ಳಿಯ ಪ್ರಮಾಣವನ್ನು ಆಧರಿಸಿ, ಹರಪ್ಪಾ ಜನ ಚಿನ್ನವನ್ನು ದಕ್ಷಿಣದ ಕೋಲಾರ ಚಿನ್ನದ ಗಣಿ ಪ್ರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದರೆಂಬ ಅಭಿಪ್ರಾಯವನ್ನು ೧೯೨೮ರಷ್ಟು ಹಿಂದೆಯೇ ಪುರಾತತ್ವಜ್ಞ ಜಾನ್ ಮಾರ್ಷಲ್ ವ್ಯಕ್ತಪಡಿಸಿದ್ದಾರೆ. ಇದು ಆ ದಿನಗಳಲ್ಲಿ ಹರಪ್ಪಾ ಜನ ದಕ್ಷಿಣದ ಈ ಭಾಗದೊಂದಿಗೆ ಹೊಂದಿದ್ದ ವಾಣಿಜ್ಯ ಸಂಪರ್ಕವನ್ನು ಸೂಚಿಸುತ್ತದೆಂದೂ ಹೇಳಲಾಗುತ್ತದೆ. ಇದಕ್ಕೆ ಪೂರಕವಾಗಿ ಉರಗಾಂವ್ ಚಿನ್ನದ ಗಣಿ ಪರಿಸರದಲ್ಲಿ ೧೯೪೪ರಷ್ಟು ಹಿಂದೆಯೇ ಪತ್ತೆಯಾಗಿರುವ ಒಂದು ಅಡಿಕಲ್ಲು ಹಾಗೂ ನಾಲ್ಕು ಅರೆಯುವ ಕಲ್ಲುಗಳ ಶೋಧ ಉಲ್ಲೇಖಾರ್ಹವಾಗಿದೆ. ಆದರೆ ಹರಪ್ಪಾ ನಾಗರಿಕತೆಯ ಕಾಲಾವಧಿಯಲ್ಲಿ ಲಭ್ಯವಿದ್ದ ಸೀಮಿತ ಸಾರಿಗೆ–ಸಂಪರ್ಕ ಸೌಲಭ್ಯದ

ಹಿನ್ನೆಲೆಯಲ್ಲಿ ದೂರದ ಹರಪ್ಪಾ ನಾಗರಿಕತೆಯೊಂದಿಗೆ ಈ ಭಾಗವು ಹೊಂದಿದ್ದಿರಬಹುದಾದ ಸಾಂಸ್ಕೃತಿಕ ಸಂಬಂಧವನ್ನು ಪುನರ್ ವಿವೇಚಿಸುವ ಅಗತ್ಯವಿದೆ ಎಂಬ ಅಭಿಪ್ರಾಯವೂ ವಿದ್ವಾಂಸರಲ್ಲಿದೆ.

## ಬೃಹತ್ ಶಿಲಾಯುಗ ಸಂಸ್ಕೃತಿ

ಈ ಸಾಂಸ್ಕೃತಿಕ ಘಟ್ಟಕ್ಕೆ ಸೇರಿದ ಮಾನವರು ವಿವಿಧ ಬಗೆಯ ಸಮಾಧಿಗಳನ್ನು ನಿರ್ಮಿಸುವಲ್ಲಿ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸುತ್ತಿದ್ದುದರಿಂದ ಇದಕ್ಕೆ ಬೃಹತ್ ಶಿಲಾಯುಗ ಸಂಸ್ಕೃತಿ ಎಂಬ ಹೆಸರು ಬಂದಿದೆ. ಅಲ್ಲದೆ ಈ ಹಂತದಲ್ಲಿ ವಿಸ್ತೃತ ಪ್ರಮಾಣದಲ್ಲಿ ಕಬ್ಬಿಣದ ಬಳಕೆ ಕಂಡು ಬರುವುದರಿಂದ ಇದನ್ನು 'ಕಬ್ಬಿಣಯುಗ ಸಂಸ್ಕೃತಿ' ಎಂದೂ ಕರೆಯಲಾಗುತ್ತದೆ. ಈ ಸಂಸ್ಕೃತಿಯ ಜನರ ವಾಸಸ್ಥಳವನ್ನು ವಸತಿ ನೆಲೆಗಳೆಂದೂ ಶವಸಂಸ್ಕಾರದ ತಾಣಗಳನ್ನು ಗೋರಿ (ಸಮಾಧಿ) ನೆಲೆಗಳೆಂದೂ ಗುರುತಿಸಲಾಗಿದೆ. ಈ ಸಂಸ್ಕೃತಿಗೆ ಸೇರಿದ ಜನರ ವಸತಿ ನೆಲೆಗಳಿಗಿಂತ ಸಮಾಧಿ ನೆಲೆಗಳೇ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗಿರುವುದು ಈ ಸಂಸ್ಕೃತಿಯ ಮತ್ತೊಂದು ವೈಶಿಷ್ಟ್ಯವಾಗಿದೆ. ಇವುಗಳನ್ನು ಆಧರಿಸಿ ಅವರ ಸಾಂಸ್ಕೃತಿಕ ಬದುಕನ್ನು ಪುನಾರಚಿಸುವಲ್ಲಿ ಪುರಾತತ್ವಜ್ಞರು ಸಾಕಷ್ಟು ಯಶಸ್ವಿಯಾಗಿದ್ದಾರೆ. ಆದರೂ ಈ ಸಂಸ್ಕೃತಿಯ ಉಗಮ, ವಿತರಣೆ ಹಾಗೂ ವೈವಿಧ್ಯತೆಗಳ ಬಗ್ಗೆ ವಿದ್ವಾಂಸರಲ್ಲಿ ಒಮ್ಮತ ಅಭಿಪ್ರಾಯವಿನ್ನೂ ಮೂಡಬೇಕಾಗಿದೆ. ಈ ಸಂಸ್ಕೃತಿಯ ಜನ ಕಪ್ಪು, ಕೆಂಪು ಹಾಗೂ ಕಪ್ಪು–ಕೆಂಪು ವರ್ಣದ ಮಡಕೆಗಳನ್ನು ಅತಿ ಹೆಚ್ಚು ಪ್ರಮಾಣದಲ್ಲಿ ತಯಾರಿಸಿ ಬಳಸುವಲ್ಲಿ ನಿಸ್ಸೀಮರಿದ್ದು, ಕಪ್ಪು–ಕೆಂಪು ವರ್ಣದ ಮಡಕೆಗಳ ಬಳಕೆ ಈ ಸಂಸ್ಕೃತಿಯ ಪ್ರಮುಖ ಲಕ್ಷಣವಾಗಿದೆ. ಈ ಸಂಸ್ಕೃತಿಗೆ ಸಂಬಂಧಿಸಿದ ಒಂಭತ್ತು ಬಗೆಯ ಸಮಾಧಿಗಳನ್ನು ವಿದ್ವಾಂಸರು ಈವರೆಗೆ ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂಸ್ಕೃತಿಯು ಕ್ರಿಪೂ. ೧೫೦೦ ರಿಂದ ಕ್ರಿಪೂ.೨೫೦ರವರೆಗೆ ಪ್ರವರ್ಧಮಾನದಲ್ಲಿತ್ತು.

ಈ ಸಂಸ್ಕೃತಿಯ ವಸತಿ ಹಾಗೂ ಗೋರಿ ನೆಲೆಗಳು ರಾಜ್ಯದೆಲ್ಲೆಡೆ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗಿದ್ದು, ಜಿಲ್ಲೆಯಲ್ಲೂ ಈ ಸಂಸ್ಕೃತಿಗೆ ಸಂಬಂಧಿಸಿದ ಸುಮಾರು ೩೪ ವಸತಿ ನೆಲೆ ಹಾಗೂ ೧೬೨ ಗೋರಿ/ಸಮಾಧಿ ನೆಲೆಗಳು ಪತ್ತೆಯಾಗಿವೆ. ಈ ನೆಲೆಗಳು ವ್ಯಾಪಕವಾಗಿ ಜಿಲ್ಲೆಯ ಕೋಲಾರ, ಬಂಗಾರಪೇಟೆ, ಮಾಲೂರು ಹಾಗೂ ಮುಳಬಾಗಿಲು ತಾಲೂಕುಗಳಲ್ಲೂ ಕ್ವಚಿತ್ತಾಗಿ ಚಿಂತಾಮಣಿ, ಗುಡಿಬಂಡೆ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಹಾಗೂ ಶ್ರೀನಿವಾಸಪುರ ತಾಲೂಕುಗಳಲ್ಲೂ ಕಂಡುಬರುತ್ತವೆ. ಇವುಗಳಲ್ಲಿ ೧೪ ನೆಲೆಗಳು ಮಾತ್ರ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳ ಮುಂದುವರಿಕೆಯಾಗಿ ಕಂಡುಬರುತ್ತಿದ್ದು, ಈ ಹಂತದಲ್ಲಿ ಮಾನವ ಚಟುವಟಿಕೆ ಅಧಿಕಗೊಂಡುದರ ಪರಿಣಾಮವಾಗಿ ಸ್ವತಂತ್ರವಾಗಿ ನೂತನ ನೆಲೆಗಳು ತಲೆ ಎತ್ತಲಾರಂಭಿಸಿದ ಅಂಶವು ಇನ್ನುಳಿದ ನೆಲೆಗಳ ಶೋಧದಿಂದಾಗಿ ವೇದ್ಯವಾಗುತ್ತದೆ. ರಾಜ್ಯದ ಇತರೆಡೆಗಳಂತೆ ಜಿಲ್ಲೆಯಲ್ಲೂ ಈ ಸಂಸ್ಕೃತಿಗೆ ಸಂಬಂಧಿಸಿದ ಗೋರಿ ನೆಲೆಗಳೇ ಅಧಿಕ ಸಂಖ್ಯೆ (೧೬೨)ಯಲ್ಲಿ ಪತ್ತೆಯಾಗಿದ್ದು, ಇದಕ್ಕೆ ಹೋಲಿಸಿದಾಗ ವಸತಿ ನೆಲೆಗಳ ಸಂಖ್ಯೆ (೩೪) ತೀರಾ ಗೌಣವೆನಿಸುತ್ತದೆ. ಈ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳು ೧೮೮೨ರಷ್ಟು ಹಿಂದೆಯೇ ಜಿಲ್ಲೆಯ ಗುಡಿಬಂಡೆ, ಆನೇಗುತ್ತಹಳ್ಳಿ (ಮುಳಬಾಗಿಲು ತಾ.) ಮರಗಲ್ಲು (ಬಂಗಾರಪೇಟೆ ತಾ.) ಹಾಗೂ ಗರುಡನಹಳ್ಳಿ (ಕೋಲಾರ ತಾ.)ಗಳಲ್ಲಿ ಮೊದಲ ಬಾರಿಗೆ ಪತ್ತೆಯಾಗಿವೆ. ಗೌರಿಬಿದನೂರು ತಾಲೂಕಿನ ಬೀರಮಂಗಲ ವಸತಿ ನೆಲೆಯನ್ನು ರಾಬರ್ಟ್ ಬ್ರೂಸ್‌ಫೂಟ್ ಅವರು ೧೯೧೬ರಷ್ಟು ಹಿಂದೆಯೇ ಬೆಳಕಿಗೆ ತರುವಲ್ಲಿ ಯಶಸ್ವಿಯಾಗಿದ್ದರು. ಈ ನಿಟ್ಟಿನಲ್ಲಿ ೧೯೫೦ರ ದಶಕದಿಂದೀಚೆಗೆ ಪುರಾತತ್ವ ಇಲಾಖೆಯು ಜಿಲ್ಲೆಯಲ್ಲಿ ನಡೆಸಿರುವ ವಾರ್ಷಿಕ ಸರ್ವೇಕ್ಷಣಗಳಲ್ಲಿ ಮಹತ್ವದ ಹಲವಾರು ನೆಲೆಗಳು ಪತ್ತೆಯಾಗಿವೆ. ತತ್ಪರಿಣಾಮವಾಗಿ ಜಿಲ್ಲೆಗೆ ಸಂಬಂಧಿಸಿದಂತೆ ಈ ಸಂಸ್ಕೃತಿಯ ಸ್ಥೂಲ ಚಿತ್ರವನ್ನು ನಾವಿಂದು ಪಡೆಯಬಹುದಾಗಿದೆ.

ಈ ಸಂಸ್ಕೃತಿಗೆ ಸಂಬಂಧಿಸಿದಂತೆ ವಸತಿ ನೆಲೆಗಳಿರುವ ಪ್ರದೇಶಗಳಲ್ಲಿ ಪೂರ್ಣ ಕಪ್ಪು, ಪೂರ್ಣ ಕೆಂಪು ಹಾಗೂ ಕಪ್ಪು–ಕೆಂಪು ವರ್ಣದ, ವಿವಿಧ ಬಗೆಯ ಮಡಕೆಯ ಅವಶೇಷಗಳು ಯಥೇಚ್ಛವಾಗಿ ಲಭಿಸುತ್ತಿದ್ದು, ಕೆಲವೊಮ್ಮೆ ಬನಹಳ್ಳಿ ನಿವೇಶನದಲ್ಲಿ ಲಭಿಸಿರುವಂತೆ ಕಬ್ಬಿಣದ ಉಪಕರಣಗಳೂ ದೊರೆಯುತ್ತವೆ. ಜಿಲ್ಲೆಯಿಂದ ವರದಿಯಾಗಿರುವ ಬಹುಪಾಲು ವಸತಿ ನೆಲೆಗಳಲ್ಲಿ, ಕಪ್ಪು–ಕೆಂಪು ಹಾಗೂ ಪೂರ್ಣ ಕೆಂಪುವರ್ಣದ ಮಡಕೆ–ಕುಡಿಕೆಯ ಅವಶೇಷಗಳೇ ಅಧಿಕವಾಗಿ ಲಭಿಸಿವೆ. ಕೆಲವು ನೆಲೆಗಳಲ್ಲಿ ಪೂರ್ಣ ಕಪ್ಪುವರ್ಣದ ಮಡಕೆಗಳು ಮಾತ್ರ ಲಭಿಸಿರುವುದಾಗಿ ವರದಿಯಾಗಿವೆ. ಕೋಲಾರ ತಾಲೂಕಿನ ಕಜ್ಜಿಕಲ್ಲಹಳ್ಳಿ, ಕಡಗತ್ತೂರು, ಕೆಂದಟ್ಟಿ, ಕೊರಟಿ ಮಲ್ಲಾಂಡಹಳ್ಳಿ, ಕೊಂಡರಾಜನಹಳ್ಳಿ (ಬೇಚರಾಕ್), ಕೊಂಗರಾಜನಹಳ್ಳಿ, ತಿರುಮಲಕೊಪ್ಪ ಪಟ್ಣ, ವೆಂಕಟಾಪುರ ಹಾಗೂ ಹಾರೋಹಳ್ಳಿ; ಬಂಗಾರಪೇಟೆ ತಾಲೂಕಿನ ಕದಿರೇನಹಳ್ಳಿ, ಕಿರುಮಂದೆ, ತೊಂಗಲಕೊಪ್ಪ, ಭಟ್ರಕೊಪ್ಪ, ಮರಗಲ್ಲು,

ಬೂದಿಕೋಟೆ, ರಾಮಸಾಗರ, ಸಂತೆಪಲ್ಲಿ ಹಾಗೂ ಹುನಗುಂದ; ಮಾಲೂರು ತಾಲೂಕಿನ ಬನಹಳ್ಳಿ, ದೊಡ್ಡಕಡತ್ತೂರು, ನಾಗನಾಳ, ಹೊಗೇರಿ, ಹೊಂಗೇನಹಳ್ಳಿ ಹಾಗೂ ಹರಹೊಲ್ಲಿ; ಗೌರಿಬಿದನೂರು ತಾಲೂಕಿನ ಬೀರಮಂಗಲ; ಮುಳಬಾಗಿಲು ತಾಲೂಕಿನ ಆವನಿ; ಚಿಂತಾಮಣಿ ತಾಲೂಕಿನ ಕೈವಾರ ಹಾಗೂ ಮುರುಗಮಲ್ಲಾ; ಶಿಡ್ಲಘಟ್ಟ ತಾಲೂಕಿನ ಕೊಂಡರಾಜನಹಳ್ಳಿ ಹಾಗೂ ಶ್ರೀನಿವಾಸಪುರ ತಾಲೂಕಿನ ಹರಳಕುಂಟೆಗಳಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ವಸತಿ ನೆಲೆಗಳು ಪತ್ತೆಯಾಗಿವೆ. ಈ ನೆಲೆಗಳಲ್ಲಿ ಬಂಗಾರಪೇಟೆ ತಾಲೂಕಿನ ಹುನಗುಂದದಿಂದ ಎರಡು ಕಿ.ಮೀ. ನೈಋತ್ಯದಲ್ಲಿ ಪ್ರಾಚೀನ ಚಿನ್ನದ ಗಣಿ ಉದ್ಯಮಕ್ಕೆ ಸಂಬಂಧಿಸಿದ ಅವಶೇಷಗಳು ಪತ್ತೆಯಾಗಿವೆ. ಇಲ್ಲಿರುವ ಬೃಹತ್ ಶಿಲಾಯುಗದ ಮಾನವರ ಕಾಲದ ಕಲ್ಗೋರಿ–ಶಿಲಾವೃತ್ತ ಸಮಾಧಿಗಳ ಆಧಾರದ ಮೇಲೆ, ಇವರೇ ಅಲ್ಲಿನ ಚಿನ್ನದ ಗಣಿ ಉದ್ಯಮದ ನಿರ್ಮಾತೃಗಳೆಂಬ ಅಂಶ ಸ್ಪಷ್ಟವಾಗುತ್ತಿದ್ದು, ಇಲ್ಲಿ ಚಿನ್ನದಾಂಶವಿರುವ ಅದಿರಿನ ಪುಡಿ ಕಳೆದ ಶತಮಾನದಲ್ಲೂ ಲಭಿಸುತ್ತಿತ್ತೆಂದು ಹಿಂದಿನ ಕೋಲಾರ ಗ್ಯಾಸೆಟಿಯರ್(೧೯೬೮)ನಲ್ಲಿ ದಾಖಲಿಸಲಾಗಿದೆ. ಆದರೆ ಈವರೆಗೆ ಜಿಲ್ಲೆಯ ಮಾಲೂರು ತಾಲೂಕಿನ ಬನಹಳ್ಳಿಯಲ್ಲಿ ಮಾತ್ರ ಉತ್ಖನನಗಳೂ ನಡೆದಿದ್ದು, ಅಲ್ಲಿಂದ ಬೃಹತ್ ಶಿಲಾಯುಗ ಸಂಸ್ಕೃತಿಯ ಕಪ್ಪು, ಕೆಂಪು, ಕಪ್ಪು ಹಾಗೂ ಕೆಂಪು ವರ್ಣದ ಮಡಕೆಯ ಚೂರುಗಳು, ಬೋಗುಣಿ, ಬಾಯುಳ್ಳ–ಹಿಡಿಯುಳ್ಳ ಹೂಜಿ, ಕೊಡ ಮುಂತಾದವುಗಳ ಜೊತೆಗೆ ಕಬ್ಬಿಣದ ಉಪಕರಣಗಳ ಅವಶೇಷಗಳೂ ಪತ್ತೆಯಾಗಿವೆ. ಈ ಸಂಸ್ಕೃತಿಗೆ ಸಂಬಂಧಿಸಿದಂತೆ ವಸತಿ ನೆಲೆಗಳಿಗಿಂತ ಗೋರಿ/ಸಮಾಧಿ ನೆಲೆಗಳೇ ಅಧಿಕ ಪ್ರಮಾಣದಲ್ಲಿ ಪತ್ತೆಯಾಗಿದ್ದು, ಇವುಗಳ ಅಧ್ಯಯನದಿಂದ ಆ ಜನರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಗ್ರಹಿಸಬಹುದಾಗಿದೆ.

ಈ ಸಾಂಸ್ಕೃತಿಕ ಘಟ್ಟದ ವಿಶಿಷ್ಟ ನಿರ್ಮಾಣಗಳಾದ ಗೋರಿ/ಸಮಾಧಿ ನೆಲೆಗಳು ವೈವಿಧ್ಯತೆಯಿಂದ ಕೂಡಿದ್ದು, ಶವಸಂಸ್ಕಾರ ಪದ್ಧತಿಯಲ್ಲಿ ಅವರು ಅನುಸರಿಸುತ್ತಿದ್ದ ವೈವಿಧ್ಯತೆಯೇ ಇದಕ್ಕೆ ಕಾರಣವಾಗಿದೆ. ಸತ್ತವರ ಅಂತ್ಯಸಂಸ್ಕಾರವನ್ನು ವಿಧಿವತ್ತಾಗಿ ಮಾಡುತ್ತಿದ್ದ ಅವರು, ಶವಸಂಸ್ಕಾರ ಪದ್ಧತಿಯಲ್ಲಿ ಅನುಸರಿಸುತ್ತಿದ್ದ ಶಿಲಾವೃತ್ತ, ಕಲ್ಗುಪ್ಪೆ, ಶವಗುಣಿ, ಶವಸಂಪುಟ, ಮೃತ್ಪಾತ್ರೆ, ನಿಲುಸುಗಲ್ಲು, ಹಾದಿಕೋಣೆ–ಕಿಂಡಿಕೋಣೆ ಕಲ್ಗೋರಿ, ಮುಂತಾದ ಮಾದರಿಯ ಸಮಾಧಿಗಳನ್ನು ಉದಾಹರಿಸಬಹುದಾಗಿದ್ದು, ಜಿಲ್ಲೆಯಲ್ಲೂ ಇವುಗಳಲ್ಲಿ ಕೆಲವು ಮಾದರಿಯ ಸಮಾಧಿಗಳು ಪತ್ತೆಯಾಗಿವೆ.

ಜಿಲ್ಲೆಯಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದಂತೆ ವರದಿಯಾಗಿರುವ ಗೋರಿ/ಸಮಾಧಿ ನೆಲೆಗಳಲ್ಲಿ ಶಿಲಾವೃತ್ತ (Stone Circle) ಮಾದರಿಯ ಸಮಾಧಿಗಳು ಕೋಲಾರ ತಾಲೂಕಿನ ಉಡಪನಹಳ್ಳಿ, ಗಂಗಾಪುರ, ಚೊಕ್ಕಾಪುರ, ನಂದಂಬಳ್ಳಿ, ಕರುಡಬಂಡೆಹೊಸಳ್ಳಿ, ದೊಡ್ಡವಲ್ಲಭಿ, ಕುರುಗಲ್ಲು, ಕೀಲುಕೋಟೆ, ಕಲ್ಲಹಳ್ಳಿ, ದಿಣ್ಣೇಹೊಸಳ್ಳಿ, ದಿಣ್ಣೇಹಳ್ಳಿ, ದೊಡ್ಡ ಅಯ್ಯಾರು, ಚುಂಚಮಲೆ, ಜೂಹಳ್ಳಿ, ತೇರಹಳ್ಳಿ (ಪಾಪರಾಜನಹಳ್ಳಿ ಸಮೀಪ), ತ್ಯಾವನಹಳ್ಳಿ, ಪೆರ್ಜೇನಹಳ್ಳಿ, ಬೆಟ್ಟಕಲ್ಲಹಳ್ಳಿ, ಬಂಡೂರಕೃಷ್ಣಾಪುರ, ಮದ್ದೇರಿ, ಮಲಿಯಪ್ಪನಹಳ್ಳಿ, ವೆಲಗಲಬುರ್ರೆ ಶೆಟ್ಟಿವಾರಹಳ್ಳಿ, ಸುಗೊಂಡಹಳ್ಳಿ, ಹಾಲೇರಿ, ಹುಲಿಕಲ್ಲು, ಹೊಗರಿ, ಹೊಗರಿಗೊಲ್ಲಹಳ್ಳಿ, ಬಳಗೆರೆ ಹಾಗೂ ಚೋಳಘಟ್ಟ; ಬಂಗಾರಪೇಟೆ ತಾಲೂಕಿನ ಅಕಿಂಟ್ಲಗೊಲ್ಲಹಳ್ಳಿ, ಸೂಲಿಕುಂಟೆ, ಮುಗಳಬೆಲೆ, ಮರಗಲ್ಲು, ಕೆಲಮಂಗಲ, ಕರೆಬೆಲೆ, ಅಡಂಪಲ್ಲಿ, ಅಲ್ಲಿಕುಂಟಾ, ಉಕ್ಕುಂದಿ, ಉಪಾಸಪುರ, ಕನುಮನಹಳ್ಳಿ, ಕನ್ನುಂಬೆಲೆ, ಕುಂದರಸನಹಳ್ಳಿ, ಕೀಲುಕಂಬಳಿ, ಕೊತ್ತೂರು, ಕೋಡಿಹಳ್ಳಿ, ಗೊರವನಹಳ್ಳಿ, ಗುಟ್ಲೂರು, ಚಿಕ್ಕೇನಹಳ್ಳಿ, ಜಂಗಮನಹಳ್ಳಿ, ತಮಟಮಾಕನಹಳ್ಳಿ, ತೋಪನಹಳ್ಳಿ, ದೇಶಿಹಳ್ಳಿ, ದೇವಗಾನಹಳ್ಳಿ, ದೊಡ್ಡಪರಾಂಡಹಳ್ಳಿ, ದೊಡ್ಡೂರು, ನಾಚಪಲ್ಲಿ, ನಾಚಾಂಡ್ಲಪಲ್ಲಿ, ಪರಾಂಡಪಲ್ಲಿ, ಪೆದ್ದಕಳವಂಚಿ, ಬಡಮಾಕನಹಳ್ಳಿ, ಬಿಳಿಗಿರಿಹಳ್ಳಿ, ಮಲ್ಲಂಪಲ್ಲಿ, ಏತೂರು, ರಾಮನಾಯ್ಕನಹಳ್ಳಿ, ರಾಮಾಪುರದ ದಿಣ್ಣೆ, ವಡ್ಡರಹಳ್ಳಿ, ವೇಗಸಂದ್ರ, ಓಬಹಳ್ಳಿ ಹಾಗೂ ಹುನ್ಕುಂದ, ಮಾಲೂರು ತಾಲೂಕಿನ ಹೊಸಹಳ್ಳಿ, ಮಲಿಯಪ್ಪನಹಳ್ಳಿ, ಸೋಮಸಂದ್ರ, ಹನುಮಂತಪುರ, ಅಬ್ಬೇಹಳ್ಳಿ, ಆಲಹಳ್ಳಿ, ಕಾವಲಗಿರಿಯನಹಳ್ಳಿ, ಚಲಗನಹಳ್ಳಿ, ಚಿಕ್ಕ ಇಗಲೂರು, ಚಿಕ್ಕಕುಂಟೂರು, ದೊಡ್ಡಕಲ್ಲಹಳ್ಳಿ, ಪುರಮಾಕನಹಳ್ಳಿ, ಬಾಳಿಗಾನಹಳ್ಳಿ, ಬಂಡಹಟ್ಟಿ, ಊರುಗುರ್ಕಿ, ಜಯಮಂಗಲ, ದೊಡ್ಡಶಿವಾರ, ಬಕರಹಳ್ಳಿ, ರಾಮಾಪುರ ಹಾಗೂ ಬಿಟ್ನಹಳ್ಳಿ; ಮುಳಬಾಗಿಲು ತಾಲೂಕಿನ ಅರಹಳ್ಳಿ, ಕೆರಸಮಂಗಲ, ಜನ್ನನಾಗಾವರ, ಎನ್.ವೆಂಕಟಾಪುರ, ಕಿಳುಹೊಳಲಿ, ಕುರುಬರಹಳ್ಳಿ, ಕೊತ್ತೂರು, ದೊಡ್ಡಟ್ಟಿಹಳ್ಳಿ, ದ್ಯಾವಸಂಸ್ರ, ನಾಗನಹಳ್ಳಿ, ಬೈಯಂಪಲ್ಲಿ, ಮಿಣಜೇನಹಳ್ಳಿ, ವೊಮ್ಮಸಂದ್ರ ಹಾಗೂ ಗುಲಗಂಜಿಗುರ್ಕಿ; ಚಿಂತಾಮಣಿ ತಾಲೂಕಿನ ಕುರುಬೂರು, ಕೊಂಗನಹಳ್ಳಿ ಹಾಗೂ ಚಿನ್ನಸಂದ್ರ; ಮತ್ತು ಶ್ರೀನಿವಾಸಪುರ ತಾಲೂಕಿನ ಶ್ರೀನಿವಾಸಪುರ ಹಾಗೂ ಹೊಸಹಳ್ಳಿಗಳಲ್ಲಿ ಪತ್ತೆಯಾಗಿವೆ. ಅದರಲ್ಲೂ ಕೋಲಾರ ತಾಲೂಕಿನ ಗರುಡನಹಳ್ಳಿಯ ಸಮೀಪದ ಬೆಟ್ಟದ ಸಾಲಿನಲ್ಲಿ ೧೦೦ಕ್ಕೂ ಹೆಚ್ಚು ಕಲ್ಗೋರಿಗಳಿವೆ. ಅವುಗಳಿಗೆ ಒಂದು ಇಂಚು ವ್ಯಾಸದ ಕಿಂಡಿಗಳನ್ನು ಕೊರೆಯಲಾಗಿದ್ದು, ಅವುಗಳನ್ನು

ನಿರ್ಮಿಸುವಲ್ಲಿ ೧೦ ಚದರ ಅಡಿ ಗಾತ್ರದ ಬೆಣಚು ಹಾಗೂ ನೀಸ್ ಕಲ್ಲು ಚಪ್ಪಡಿಗಳನ್ನು ಬಳಸಲಾಗಿದೆ. ಕೆಂದಟ್ಟಿ ಕೆರೆಯ ಹಿಂಬದಿಯ ಹೊಲಮಾಳದಲ್ಲಿರುವ ಈ ಬಗೆಯ ಹತ್ತಾರು ಕಲ್ಗೋರಿಗಳು ಸುಸ್ಥಿತಿಯಲ್ಲಿವೆ. ಕೆಲವು ಗೋರಿಗಳಿಗೆ ಶಿಲಾವೃತ್ತಗಳೂ ಇವೆ ಆದರೆ ಉಳಿದವು ಶಿಥಿಲಾವಸ್ಥೆಯಲ್ಲಿವೆ ಈ ನೆಲೆಯನ್ನು ಉತ್ಖನನಕ್ಕೊಳಪಡಿಸುವ ಅಗತ್ಯವಿದೆ ಇದೇ ರೀತಿ ಮಾಲೂರು ತಾಲೂಕಿನ ಬಿಟ್ನಹಳ್ಳಿ ಹಾಗೂ ಆಲೂರಿನ ನಿವೇಶನಗಳಲ್ಲಿ ತಲಾ ಇನ್ನೂರಕ್ಕೂ ಹೆಚ್ಚು ಶಿಲಾವೃತ್ತಗಳು ಪತ್ತೆಯಾಗಿರುವುದು ಉಲ್ಲೇಖಾರ್ಹವಾಗಿದೆ.

ಇದಲ್ಲದೇ ಕೆಲವೆಡೆ ಶಿಲಾವೃತ್ತಗಳ ಜೊತೆಗೆ ಕಲ್ಗುಪ್ಪೆ ಸಮಾಧಿಗಳೂ ಪತ್ತೆಯಾಗಿದ್ದು, ಕೋಲಾರ ತಾಲೂಕಿನ ಅರಾಭಿಕೊತ್ತನೂರು, ಸುಲೂರು, ಕೆಂದಟ್ಟಿ ಹಾಗೂ ಕೋಲಾರ; ಬಂಗಾರಪೇಟೆ ತಾಲೂಕಿನ ತೂಕಲ್ಲು, ತ್ಯಾಪನಹಳ್ಳಿ, ತ್ಯಾರನಹಳ್ಳಿ, ವರದಾಪುರ ಹಾಗೂ ಸೋರೆಗೌಡನಹಳ್ಳಿ; ಮಾಲೂರು ತಾಲೂಕಿನ ಅಪ್ಪಯ್ಯನಹಳ್ಳಿ, ಉಪ್ಪಾರಹಳ್ಳಿ, ಚಿಕ್ಕಸಂದ್ರ, ಚಿಕ್ಕೇನಹಳ್ಳಿ, ದೇವರಹಳ್ಳಿ ಹಾಗೂ ಭೈರ್ನದೊಡ್ಡಿ ಮುಂತಾದೆಡೆಗಳಲ್ಲಿ ಈ ಮಾದರಿಯ ಸಮಾಧಿಗಳನ್ನು ಪುರಾತತ್ವಜ್ಞರು ಪತ್ತೆಹಚ್ಚಿ ವರದಿ ಮಾಡಿದ್ದಾರೆ.

ಇನ್ನೂ ಕೆಲವೆಡೆ ಶಿಲಾವೃತ್ತಗಳ ಜೊತೆಗೆ ಶವಗುಣಿಗಳೂ ಕಂಡುಬರುತ್ತವೆ. ಕೋಲಾರ ತಾಲೂಕಿನ ಕೊತ್ತಪಾಳ್ಯ, ಗುತ್ತೂರು; ಚಿಕ್ಕಬಳ್ಳಾಪುರ ತಾಲೂಕಿನ ಬಚ್ಚಹಳ್ಳಿ; ಬಂಗಾರಪೇಟೆ ತಾಲೂಕಿನ ಅಕ್ಷಲಗೊಲ್ಲಹಳ್ಳಿ, ಗಟ್ಟಕಾಮದೇನಹಳ್ಳಿ, ಗಾಜಗ, ಗೊದಮಂಡೆ, ಗೊಡುಗುಮಂಡೆ, ನಾಗಕುಪ್ಪ ಬೂವನಹಳ್ಳಿ, ಚಿನ್ನವಾರ, ಬೊಮ್ಮಾಂಡಹಳ್ಳಿ, ರಾಮಯ್ಯನದಿಣ್ಣೆ ಶ್ರೀರಂಗಬಂಡೇಹಳ್ಳಿ, ಮಲ್ಲಂಪಲ್ಲಿ ಹಾಗೂ ಸೂರನಹಳ್ಳಿ; ಮಾಲೂರು ತಾಲೂಕಿನ ಮಂಡಕಲ್ಲು, ಓಬಳಾಪುರ; ಹಾಗೂ ಶ್ರೀನಿವಾಸಪುರ ತಾಲೂಕಿನ ರಾಘವಪಲ್ಲಿಗಳಲ್ಲಿ ಈ ಮಾದರಿಯ ಸಮಾಧಿಗಳು ಪತ್ತೆಯಾಗಿವೆ. ಇದೇ ಸಂಸ್ಕೃತಿಗೆ ಸೇರಿದ ಕಂಡಿಕೋಣೆ ಕಲ್ಗೋರಿಗಳು ಕೋಲಾರ ತಾಲೂಕಿನ ಕೆಂದಟ್ಟಿ, ಗರುಡನಹಳ್ಳಿ, ಗುಟ್ಟಹಳ್ಳಿ; ಬಂಗಾರಪೇಟೆ ತಾಲೂಕಿನ ಕನ್ನಂಬೆಲೆ, ಗೊಡುಗುಮಂಡೆ, ತ್ಯಾಪನಹಳ್ಳಿ; ಮಾಲೂರು ತಾಲೂಕಿನ ಕೃಷ್ಣಾಪುರ, ಶ್ರೀಕಂಠಪುರ, ಹಾಲಹಳ್ಳಿ, ಮಲಕನಹಳ್ಳಿ, ವೀರಕಪುರ, ವೆಂಕಟಾಪುರ ಹಾಗೂ ಮುಳಬಾಗಿಲು ತಾಲೂಕಿನ ಆನೆಗುತ್ತಹಳ್ಳಿಗಳಲ್ಲಿ ಪತ್ತೆಯಾಗಿವೆ. ಈ ಸಂಸ್ಕೃತಿಗೆ ಸಂಬಂಧಿಸಿದ ನಿಲುಸುಗಲ್ಲು ಮಾದರಿಯ ಸಮಾಧಿಗಳು ಕೋಲಾರ ತಾಲೂಕಿನ ಕೆಂದಟ್ಟಿ, ಗರುಡನಹಳ್ಳಿ, ಬಂಡೂರುಕೃಷ್ಣಾಪುರ ಹಾಗೂ ಸುಲೂರುಗಳಿಂದ ಈಗಾಗಲೇ ವರದಿಯಾಗಿವೆ. ಗರುಡನಹಳ್ಳಿಯ ನೆಲೆಯಲ್ಲಿ ೧೦೦ಕ್ಕೂ ಹೆಚ್ಚು ಕಲ್ಗೋರಿಗಳ ಜೊತೆಗೆ ಇರುವ ಶಿಲಾವೃತ್ತಗಳ ಬದಿಯಲ್ಲಿ ಕೆಲವು ನಿಲುಸುಗಲ್ಲುಗಳು ಕಂಡು ಬಂದಿರುವುದು ಗಮನಾರ್ಹವಾಗಿದೆ. ಮಿಗಿಲಾಗಿ ಸುಲೂರಿನ ಗವಿಗಳಲ್ಲೂ ಸಮಾಧಿಗಳಿರುವುದನ್ನೂ ವಿದ್ವಾಂಸರು ದಾಖಲಿಸಿದ್ದಾರೆ. ಮಾಲೂರು ತಾಲೂಕಿನ ಬರಗೂರಿನ ಸಮಾಧಿಯೊಂದರಲ್ಲಿ ಅಸ್ಥಿಯುಳ್ಳ ಮೃತ್ಪಾತ್ರೆಗಳು ಪತ್ತೆಯಾಗಿದೆ. ಈ ರೀತಿ ವೈವಿಧ್ಯಮಯವಾದ ಸಮಾಧಿಗಳನ್ನು ನಿರ್ಮಿಸುವ ಮೂಲಕ ಸತ್ತವರ ಅಂತ್ಯಸಂಸ್ಕಾರವನ್ನು ಅದ್ದೂರಿಯಾಗಿ ನೆರವೇರಿಸುತ್ತಿದ್ದ ಆ ಜನರ ಆರ್ಥಿಕ, ಸಾಮಾಜಿಕ, ಧಾರ್ಮಿಕ ನಂಬಿಕೆಗಳನ್ನು, ಪ್ರತಿಬಿಂಬಿಸುವ ಕೈಗನ್ನಡಿಗಳಾಗಿ ಅವರೇ ನಿರ್ಮಿಸಿರುವ ಈ ಕಲ್ಗೋರಿಗಳು ಇಂದಿಗೂ ಅಳಿದುಳಿದಿದ್ದು, ಅವುಗಳನ್ನು ಸಂರಕ್ಷಿಸುವ ಅಗತ್ಯವಿದೆ.

**ಪ್ರಾಗಿತಿಹಾಸಕಾಲದ ರೇಖಾ ವರ್ಣಚಿತ್ರಗಳು:** ಶ್ರೀನಿವಾಸಪುರ ತಾಲೂಕಿನ ಜಿಂಕಲವಾರಪಲ್ಲಿ ಬಳಿಯ ಸುಣಕಲ್ ಬೆಟ್ಟದಲ್ಲಿರುವ ಕೆಲವು ನೈಸರ್ಗಿಕ ಗುಹೆಗಳಲ್ಲಿ ಬಿಳಿಯ ವರ್ಣದಲ್ಲಿ ರೇಖಿಸಲ್ಪಟ್ಟಿರುವ ಕೆಲವು ಚಿತ್ರಗಳು ಪತ್ತೆಯಾಗಿದ್ದು, ಅವು ಇತಿಹಾಸಪೂರ್ವ ಕಾಲಕ್ಕೆ ಸೇರಿದವೆಂಬ ಅಭಿಪ್ರಾಯವಿದೆ.

## ಇತಿಹಾಸ ಆರಂಭಕಾಲ

ಪೂರ್ವೇತಿಹಾಸ ಕಾಲದ ಸಂಸ್ಕೃತಿ ಎಂದೂ ಕರೆಯಲ್ಪಡುವ ಈ ಸಾಂಸ್ಕೃತಿಕ ಘಟ್ಟವನ್ನು ೧೯೫೪ರವರೆಗೆ 'ಆಂಧ್ರ ಸಂಸ್ಕೃತಿ', 'ಶಾತವಾಹನ ಕಾಲ' ಎಂದೇ ಶೈಕ್ಷಣಿಕವಾಗಿ ಕರೆಯಲಾಗುತ್ತಿತ್ತು. ಅಲಿಖಿತ ಆಧಾರಗಳನ್ನೇ ವಿಶೇಷವಾಗಿ ಅವಲಂಬಿಸುವ 'ಇತಿಹಾಸಪೂರ್ವ ಕಾಲ' ಹಾಗೂ ಲಿಖಿತ ಆಧಾರಗಳನ್ನೇ ಅವಲಂಬಿಸುವ "ಇತಿಹಾಸಕಾಲ"ಗಳ ನಡುವಣ ಸಂಕ್ರಮಣ ಕಾಲ ಇದಾಗಿದ್ದು, ಅದರಿಂದಾಗಿ ಈ ಕಾಲಘಟ್ಟವನ್ನು "ಇತಿಹಾಸ ಆರಂಭ ಕಾಲ" ಎಂದು ಹೆಸರಿಸಿದ್ದಾರೆ. ಈ ಅವಧಿಗಾಗಲೇ ಒಂದೆಡೆ ನೆಲೆಯೂರಿ ಗ್ರಾಮೀಣ ಬದುಕನ್ನು ಆರಂಭಿಸಿದ್ದ ಮಾನವ, ಬರವಣಿಗೆ ಕಲೆಯನ್ನು ಮೈಗೂಡಿಸಿಕೊಳ್ಳುವತ್ತ ದಾಪುಗಾಲು ಹಾಕಲಾರಂಭಿಸಿದ್ದನು. ಈ ಹಂತದಲ್ಲಿ ಬಳಸಲ್ಪಡುತ್ತಿದ್ದ ಮಡಕೆ–ಕುಡಿಕೆಗಳು ಸುಟ್ಟಲ್ಪಟ್ಟವಾಗಿದ್ದು, ಕೆಂಪು/ಕಂದು ಬಣ್ಣದ ಈ ಮಡಕೆಗಳ ಮೇಲೆ ವೈವಿಧ್ಯಮಯವೂ ಕಲಾತ್ಮಕವೂ ಆದ ಬಿಳಿಯ ಬಣ್ಣದ ಅಲಂಕಾರಿಕ ಗೆರೆಗಳು ವಿಶೇಷವಾಗಿ ಕಂಡುಬರುತ್ತವೆ.

ಇಟ್ಟಿಗೆಯಿಂದ ಕಟ್ಟಲ್ಪಟ್ಟ ರಚನೆಗಳು ಈ ಸಂಸ್ಕೃತಿಯ ಇನ್ನೊಂದು ಲಕ್ಷಣವಾಗಿದ್ದು, ಇಟ್ಟಿಗೆಗಳ ಬಳಕೆ ವ್ಯಾಪಕವಾಗಿತ್ತು. ಬೃಹತ್ ಶಿಲಾಯುಗ ಸಂಸ್ಕೃತಿಯ ಅಂತ್ಯಭಾಗದಲ್ಲಿ ಕಾಣಿಸಿಕೊಳ್ಳುವ ಈ ಅವಶೇಷಗಳ ಜೊತೆಗೆ ನಾಡಿನ ವಿವಿಧೆಡೆಗಳಲ್ಲಿ ಶಾತವಾಹನ, ಚುಟು, ಮಹಾರಥಿ ಹಾಗೂ ರೋಮನ್ ನಾಣ್ಯಗಳು ಪತ್ತೆಯಾಗಿವೆ. ಕ್ರಿಪೂ.ನಾಲ್ಕನೆಯ ಶತಮಾನದಿಂದ ಕ್ರಿ.ಶ.ಮೂರನೆಯ ಶತಮಾನದವರೆಗಿನ ಕಾಲಾವಧಿಗೆ ಸೇರಿದ ಈ ಹಂತದ ಸ್ತರಗಳಲ್ಲಿ ಬಿಳಿಯ ಬಣ್ಣದ ಅಲಂಕಾರವುಳ್ಳ ರೌಲೆಟೆಡ್ ಕೆಂಪು ಮಡಿಕೆಗಳ ಅವಶೇಷಗಳು ನಾಡಿನ ವಿವಿಧೆಡೆಗಳಲ್ಲಿ ವಿಶೇಷವಾಗಿ ಕಂಡುಬಂದಿವೆ. ನೆರೆಯ ಬೆಂಗಳೂರು ಜಿಲ್ಲೆಯ ರಾಜಘಟ್ಟದಲ್ಲಿ ರೌಲೆಟೆಡ್ ಮಡಕೆ, ಇಟ್ಟಿಗೆಯ ಕಿರುರಚನೆ, ಚಿಕ್ಕ ಗಾತ್ರದ ಸುಟ್ಟಮಣ್ಣಿನ ಸ್ತೂಪ ಮುಂತಾದ ಬೌದ್ಧ ಅವಶೇಷಗಳು ಯಥೇಚ್ಚವಾಗಿ ಪತ್ತೆಯಾಗಿವೆ.

ಜಿಲ್ಲೆಯಲ್ಲಿ ಈ ಸಾಂಸ್ಕೃತಿಕ ಹಂತಕ್ಕೆ ಸೇರಿದ ನೆಲೆಗಳು ಕೋಲಾರ ತಾಲೂಕಿನ ಉರಟ ಅಗ್ರಹಾರ ಹಾಗೂ ಗುಟ್ಟಹಳ್ಳಿ; ಚಿಂತಾಮಣಿ ತಾಲೂಕಿನ ನೆರ್ನಕಲ್ಲು; ಮಾಲೂರು ತಾಲೂಕಿನ ದಿಂಬ, ಬನಹಳ್ಳಿ, ಧನಮತ್ತನಹಳ್ಳಿ, ರೆಪ್ಪರಹಳ್ಳಿ, ಬೂದಿಹಳ್ಳಿ ಹಾಗೂ ಶಿವಾರಪಟ್ಟಣ; ಮುಳಬಾಗಿಲು ತಾಲೂಕಿನ ಅಂಟ್ಲಿಕಲ್, ಉಪ್ಪಾರಹಳ್ಳಿ, ಚೀಕೂರು, ತಾವರೆಕೆರೆ, ನಂಗಲಿ, ಬುಡದೇರು ಹಾಗೂ ಮುದಿಗೆರೆ; ಹಾಗೂ ತಾಲೂಕು ಕೇಂದ್ರ ಶ್ರೀನಿವಾಸಪುರ, ಹರಳುಕುಂಟೆ ಮುಂತಾದೆಡೆಗಳಿಂದ ವರದಿಯಾಗಿವೆ. ಇವುಗಳಲ್ಲಿ ಹೆಚ್ಚಿನವು ವಸತಿ ನೆಲೆಗಳೆಂದೇ ದಾಖಲಾಗಿದ್ದರೂ, ಕೆಂಪು/ಕಂದು ವರ್ಣದ ಮಡಕೆಯ ಚೂರುಗಳಷ್ಟೆ ಪತ್ತೆಯಾಗಿವೆ. ಇವುಗಳಲ್ಲಿ ಕೋಲಾರ ತಾಲೂಕಿನ ಗುಟ್ಟಹಳ್ಳಿ ಹಾಗೂ ತಾಲೂಕು ಕೇಂದ್ರ ಶ್ರೀನಿವಾಸಪುರ ಹಾಗೂ ಮಾಲೂರು ತಾಲೂಕಿನ ಬನಹಳ್ಳಿ ನೆಲೆಗಳು ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಹಿನ್ನೆಲೆಯನ್ನು ಹೊಂದಿದ್ದರೆ, ಮಾಲೂರು ತಾಲೂಕಿನ ಧನಮತ್ತನಹಳ್ಳಿಯ ನೆಲೆಯು ನೂತನ ಶಿಲಾಯುಗ ಸಂಸ್ಕೃತಿಯನ್ನು ಹಿನ್ನೆಲೆಯಾಗಿ ಹೊಂದಿದೆ. ಅದರಲ್ಲೂ ಬನಹಳ್ಳಿಯಲ್ಲಿ ನಡೆದಿರುವ ಉತ್ಖನನಗಳು ಈ ನಿಟ್ಟಿನಲ್ಲಿ ಮಹತ್ವದ ಬೆಳಕನ್ನು ಚೆಲ್ಲುತ್ತವೆ. ಉಳಿದಂತೆ ಈ ಸಾಂಸ್ಕೃತಿಕ ಹಂತಕ್ಕೆ ಸಂಬಂಧಿಸಿದಂತೆ ಜಿಲ್ಲೆಯಿಂದ ವರದಿಯಾಗಿರುವ ಇತರ ನೆಲೆಗಳಲ್ಲಿ ಇತಿಹಾಸ ಆರಂಭ ಕಾಲದ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳಷ್ಟೇ ಪತ್ತೆಯಾಗಿದ್ದು, ಆ ನೆಲೆಗಳಲ್ಲಿ ಇತರ ಯಾವುದೇ ಪೂರ್ವಭಾವಿ ಸಾಂಸ್ಕೃತಿಕ ಘಟ್ಟವನ್ನು ಸೂಚಿಸುವ ಅವಶೇಷಗಳು ಪತ್ತೆಯಾಗಿಲ್ಲ. ಜಿಲ್ಲೆಯಲ್ಲಿ ಈವರೆಗೆ ಪತ್ತೆಯಾಗಿರುವ ಪೂರ್ವೇತಿಹಾಸ ಕಾಲದ ನೆಲೆಗಳಲ್ಲಿ ಹೆಚ್ಚಿನವು ಈ ಸಾಂಸ್ಕೃತಿಕ ಘಟ್ಟದಲ್ಲಿ ತಲೆ ಎತ್ತಿದ್ದ ಸ್ವತಂತ್ರ ವಸತಿ ನೆಲೆಗಳಾಗಿರುವುದು ಗಮನಾರ್ಹ. ಮಾಲೂರು ತಾಲೂಕಿನ ನೈರುತ್ಯಕ್ಕಾದಂತೆ ಅನತಿ ದೂರದಲ್ಲಿರುವ ನೊಸಗೆರೆಯಲ್ಲಿ ಪುರಾತನ ಅವಶೇಷಗಳಿರುವ ಮಡಕೆಯೊಂದು ಬಹಳ ಹಿಂದೆಯೇ ಪತ್ತೆಯಾಗಿವೆ. ಆ ಮಡಕೆಯಲ್ಲಿ ಚಿನ್ನದ ಆಭರಣಗಳೂ ಸೇರಿದಂತೆ ಮೂರು ರೋಮನ್ ನಾಣ್ಯಗಳು ಕಂಡುಬಂದಿವೆ. ವೃತ್ತಾಕಾರದಲ್ಲಿರುವ ಆ ನಾಣ್ಯಗಳ ಮೇಲೆ ಇದ್ದ ವ್ಯಕ್ತಿಚಿತ್ರ ಹಾಗೂ ಆಲೇಖಗಳು ಸವೆದು ಹೋಗಿದ್ದು, ಅವು ಕ್ರಮವಾಗಿ ೨.೩೬, ೨.೮೯ ಹಾಗೂ ೫.೧೬ ಗ್ರೇನ್ ತೂಕದ್ದಾಗಿವೆ. ಆದರೆ ಇವು ನಾಣ್ಯಗಳಾಗಿರದೆ, ರೋಮನ್ ಚಕ್ರವರ್ತಿ ಸೆಪ್ಟಮಸ್ ಸಿವೆರಸ್ (ಕ್ರಿ.ಶ.೧೯೨–೨೧೧)ನ ನಾಣ್ಯಗಳ ಅನುಕರಣೆಗಳಾಗಿದ್ದು, ಅವುಗಳ ಮೇಲ್ತುದಿಯಲ್ಲಿರುವ ದ್ವಿರಂಧ್ರಗಳಿಂದ ಅವನ್ನು ಪದಕದಂತೆ ಕೊರಳ ಆಭರಣವಾಗಿ ಬಳಸುತ್ತಿದ್ದರೆಂಬ ತೀರ್ಮಾನಕ್ಕೆ ವಿದ್ವಾಂಸರು ಬಂದಿದ್ದಾರೆ. ಆದರೂ ನೆರೆಯ ಬೆಂಗಳೂರು ನಗರದ ಜಾಲಹಳ್ಳಿ (೧೬೩) ಹಾಗೂ ಯಶವಂತಪುರ(೨೫೬)ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪತ್ತೆಯಾಗಿರುವ ರೋಮನ್ನರ ಬೆಳ್ಳಿ ನಾಣ್ಯಗಳಿಂದ ಸುಮಾರು ಕ್ರಿಪೂ.೨೧ ರಿಂದ ಕ್ರಿ.ಶ. ೫೨೭ರ ಅವಧಿಯಲ್ಲಿ ಕರ್ನಾಟಕದೊಂದಿಗೆ ರೋಮನ್ನರಿಗಿದ್ದ ವಾಣಿಜ್ಯ ಸಂಬಂಧ ಸ್ಪಷ್ಟವಾಗುತ್ತಿದ್ದು, ಕೋಲಾರ ಜಿಲ್ಲೆಯ ಮೇಲೆ ಅದರ ಪ್ರಭಾವವಿದ್ದಿರಬಹುದಾದರೂ ಇದನ್ನು ಪುಷ್ಟೀಕರಿಸಲು ಪೂರಕ ದಾಖಲೆಗಳಿಲ್ಲ.

## ಇತಿಹಾಸ ಕಾಲ

ಲಿಖಿತ ಆಧಾರಗಳು ಅಧಿಕವಾಗಿ ಲಭಿಸುವ ಈ ಕಾಲಾವಧಿಯ ಇತಿಹಾಸವನ್ನು ರಚಿಸಲು ಅವೇ ಮೂಲಾಧಾರಗಳಾಗಿದ್ದು, ರಾಷ್ಟ್ರಮಟ್ಟದಲ್ಲಿ ಮೌರ್ಯರೊಂದಿಗೆ ಇತಿಹಾಸ ಕಾಲವು ಆರಂಭವಾಗುತ್ತಿದ್ದು, ರಾಜ್ಯಕ್ಕೆ ಸಂಬಂಧಿಸಿದಂತೆ ಕೂಡ ಮೌರ್ಯ ಅಶೋಕನ ಶಾಸನಗಳೇ ಆರಂಭದ ಲಿಖಿತ ದಾಖಲೆಗಳಾಗಿದ್ದು, ರಾಜ್ಯದ ಇತಿಹಾಸವೂ ಅವರೊಂದಿಗೆ ಪ್ರಾರಂಭವಾಗುತ್ತದೆ. ಕೋಲಾರ ಜಿಲ್ಲೆಯ ಉತ್ತರಕ್ಕಾದಂತೆ ಇರುವ ನೆರೆಯ ಬಳ್ಳಾರಿ ಜಿಲ್ಲೆಯ ನಿಟ್ಟೂರು (೨), ಉಡಗೋಲಂ (೨) ಸೇರಿದಂತೆ, ರಾಜ್ಯದ ಕೊಪ್ಪಳ (೨), ರಾಯಚೂರು (೧), ಚಿತ್ರದುರ್ಗ (೩) ಹಾಗೂ ಗುಲ್ಬರ್ಗ (೪) ಜಿಲ್ಲೆಗಳಲ್ಲಷ್ಟೇ ಅಲ್ಲದೇ ನೆರೆಯ ಆಂಧ್ರವೂ

ಸೇರಿದಂತೆ ದೇಶದ ಇತರೆಡೆಗಳಲ್ಲಿ ಮೌರ್ಯ ಸಾಮ್ರಾಟ ಅಶೋಕನ ಶಾಸನಗಳು ವಿಫುಲವಾಗಿ ದೊರೆತಿದೆ. ಅದರಲ್ಲೂ ನೆರೆಯ ಬಳ್ಳಾರಿ ಜಿಲ್ಲೆಯಲ್ಲಿ ಇವು ಲಭಿಸಿರುವ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯೂ ಅಶೋಕನ ಆಡಳಿತ ಪ್ರಭಾವಕ್ಕೆ ಪರೋಕ್ಷವಾಗಿ ಒಳಗಾಗಿತ್ತೆಂದು ಸಾಂದರ್ಭಿಕವಾಗಿ ಪರಿಭಾವಿಸಬಹುದಾದರೂ ಅದನ್ನು ಪುಷ್ಟೀಕರಿಸಲು ಪೂರಕವಾದ ನಿಖರ ಆಧಾರಗಳಿಲ್ಲ.

**ಬಾಣರು**

ಇತಿಹಾಸದ ಪುಟಗಳಲ್ಲಿ ಪೆರ್ಬಾಣರು, ಬೃಹತ್‌ಬಾಣರು ಎಂದೆಲ್ಲಾ ಕರೆಯಲ್ಪಟ್ಟಿರುವ ಈ ರಾಜಮನೆತನದ ಅರಸರು ಆರಂಭದಲ್ಲಿ ಶಾತವಾಹನ ಅರಸರ ಸಾಮಂತರಾಗಿದ್ದು, ಕರ್ನಾಟಕದ ಬಳ್ಳಾರಿ, ಕೋಲಾರ ಹಾಗೂ ನೆರೆಯ ತಮಿಳುನಾಡಿನ ಧರ್ಮಪುರಿ ಜಿಲ್ಲೆಗಳನ್ನೊಳಗೊಂಡ ಪ್ರದೇಶಗಳ ಮೇಲೆ ಆಡಳಿತಸಾಮ್ಯವನ್ನು ಹೊಂದಿದ್ದರು. ಅನಂತರದಲ್ಲಿ ಇವರು ಪಲ್ಲವ, ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟ ಸಾಮ್ರಾಟರ ಅಧೀನ ಸಾಮಂತರಾಗಿ ರಾಜ್ಯಭಾರ ನಡೆಸುತ್ತಿದ್ದು, ಹನ್ನೆರಡನೆಯ ಶತಮಾನದ ಅಂತ್ಯಕ್ಕೆ ದೂರದ ಗುಲ್ಬರ್ಗಾ ಪ್ರದೇಶದಲ್ಲಿ ಕಲ್ಯಾಣದ ಚಾಳುಕ್ಯರ ಮಾಂಡಳೀಕರಾಗಿದ್ದ ಅಂಶ ಆ ಭಾಗದಲ್ಲಿ ಲಭಿಸಿರುವ ಇವರ ಶಾಸನಗಳಿಂದ ವೇದ್ಯವಾಗುತ್ತದೆ. ಇವರ ಆಡಳಿತಾವಧಿಗೆ ಸೇರಿದ ಶಾಸನಗಳು ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿರುವುದು ಗಮನಾರ್ಹ ಅಂಶವಾಗಿದೆ. ಬಾಣ ರಾಜಮನೆತನವನ್ನು ಕೋಲಾರ ಜಿಲ್ಲಾ ಪ್ರದೇಶದ ಮೇಲೆ ರಾಜಕೀಯ ಪರಮಾಧಿಕಾರವನ್ನು ಹೊಂದಿದ್ದ ಆರಂಭಿಕ ರಾಜಮನೆತನವೆಂದು ಪರಿಗಣಿಸಲಾಗಿದೆ. ಈ ಅರಸರನ್ನು ಬಲಿ ಚಕ್ರವರ್ತಿಯ ವಂಶಜರೆಂದು ಶಾಸನಗಳು ದಾಖಲಿಸಿವೆ.

ಸುಮಾರು ನಾಲ್ಕನೆಯ ಶತಮಾನದ ಮಧ್ಯಭಾಗದಿಂದ ೧೬ನೆಯ ಶತಮಾನದವರೆಗೆ ವಿವಿಧ ಕಾಲಘಟ್ಟಗಳಲ್ಲಿ ದಕ್ಷಿಣ ಭಾಗದ ವಿವಿಧ ಭಾಗಗಳಲ್ಲಿ ಆಯಾಕಾಲದ ರಾಜಕೀಯ ವಿದ್ಯಮಾನಗಳಿಗನುಗುಣವಾಗಿ ವಿವಿಧ ಸಾರ್ವಭೌಮತ್ವಗಳಡಿ ಸಾಮಂತರಾಗಿ ಬಾಣರು ರಾಜ್ಯಭಾರ ಮಾಡಿದ್ದಾರೆ. ಬಾಣರ ಮೊದಲ ಉಲ್ಲೇಖ ಕದಂಬರ ತಾಳಗುಂದ ಶಾಸನದಲ್ಲಿ ಕಂಡು ಬರುತ್ತದೆ. ಬೃಹದ್ ಬಾಣರಿಂದಲೂ ಕದಂಬ ಮಯೂರವರ್ಮನು ಕಪ್ಪಕಾಣಿಕೆ ಪಡೆಯಲಾರಂಭಿಸಿದ ಅಂಶವನ್ನು ಈ ಶಾಸನ ದಾಖಲಿಸಿದೆ. ಈ ಅಂಶವನ್ನು ಒಪ್ಪುವುದಾದರೆ, ಮಯೂರವರ್ಮನು ಬಾಣರನ್ನು ಸೋಲಿಸುವ ಮೊದಲು ಅವರು ಶಾತವಾಹನರ ಸಾಮಂತರಾಗಿದ್ದರೆಂದು ಊಹಿಸಬೇಕಾಗುತ್ತದೆ. ಕದಂಬರ ಮುನ್ನಡೆಯನ್ನು ನಿಯಂತ್ರಿಸುವ ಉದ್ದೇಶವನ್ನು ಹೊಂದಿದ್ದ ಪಲ್ಲವರು ಬಾಣರ ಅಶಕ್ತತೆಯನ್ನು ಮನಗಂಡು, ಬಾಣ (ಬಾಣಮಂಡಲ) ರಾಜ್ಯವನ್ನು ವಶಪಡಿಸಿಕೊಳ್ಳಲು ಗಂಗ ಅರಸ ಒಂದನೆಯ ಮಾಧವನಿಗೆ ಆದೇಶಿಸಿ ಅವನಿಗೆ ನೆರವಾದರೆಂದು ಗಂಗ ಶಾಖಾ (ಪರುವಿ) ಮನೆತನಕ್ಕೆ ಸೇರಿದ ಇಮ್ಮಡಿ ಪೃಥ್ವಿಪತಿಯಿಂದ ನೀಡಲ್ಪಟ್ಟಿರುವ ಹತ್ತನೆಯ ಶತಮಾನಕ್ಕೆ ಸೇರಿದ ಉದಯೇಂದ್ರಂ ತಾಮ್ರಶಾಸನದಿಂದ ಗೊತ್ತಾಗುತ್ತದೆ. ಈ ಗೆಲುವಿನಿಂದಾಗಿ ತಲಕಾಡಿನ ಗಂಗರಿಗೆ 'ಕುವಲಾಲಪುರವರಾಧೀಶ್ವರ' ಎಂಬ ಬಿರುದು ಲಭಿಸಿತು ಎಂದೂ ಅದು ದಾಖಲಿಸಿದೆ.

ಅನಂತರ ಬಾಣರ ಪ್ರಸ್ತಾಪ ಕೇಳಿಬರುವುದು ಎರಡು ಶತಮಾನಗಳ ನಂತರ. ಇಮ್ಮಡಿ ಪುಲಿಕೇಶಿಯ ಕಾಲಕ್ಕೆ ಸೇರಿದ ಪೆದ್ದವಡಗೂರು ಶಾಸನ, ಬಾಣರಾಜನ ಅನುಮತಿಯೊಂದಿಗೆ ನಂದನೂರನ್ನು ಬ್ರಾಹ್ಮಣರಿಗೆ ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದರೆ, ಒಂದನೆಯ ವಿಕ್ರಮಾದಿತ್ಯನ ಕಾಲದ ಗದ್ವಾಲ್ ತಾಮ್ರಶಾಸನದಲ್ಲಿ ಪೆರ್ಬಾಣರ ಉಲ್ಲೇಖವಿದೆ. ವಿನಯಾದಿತ್ಯ ಹಾಗೂ ವಿಜಯಾದಿತ್ಯರ ಕಾಲಕ್ಕೆ ಸೇರಿದ ತಾಮ್ರಶಾಸನಗಳು ತುರಮಾರ ವಿಷಯವನ್ನು ಬಾಣರಾಜನು ಆಳುತ್ತಿದ್ದ ಅಂಶವನ್ನು ದಾಖಲಿಸಿವೆ. ಅದರಲ್ಲೂ ವಿಜಯಾದಿತ್ಯನ ಕಾಲಕ್ಕೆ ಸೇರಿದ ಜಮ್ಮಲಮಡುವು ತಾಮ್ರಶಾಸನ (೭೧೦)ದಿಂದ, ತುರಮಾರ ವಿಷಯವನ್ನು ಆಳುತ್ತಿದ್ದ ವಿಕ್ರಮಾದಿತ್ಯ ಇಂದ್ರ ಬಲಿರಾಜನು, ಚಾಲುಕ್ಯರ ಪರವಾಗಿ ಪೊಲಗೈಚೆರುವಿನ ಮಾಂಡಲೀಕರನ್ನು ಸೋಲಿಸಿದ ಅಂಶ ಗೊತ್ತಾಗುತ್ತದೆ. ಈ ಶಾಸನಗಳಿಂದ ಬಾಣರ ಚಟುವಟಿಕೆ ಆಂಧ್ರಪ್ರದೇಶಕ್ಕೆ ಸೀಮಿತವಾಗಿದ್ದ ಅಂಶ ವೇದ್ಯವಾಗುತ್ತದೆ. ಏತನ್ಮಧ್ಯೆ ಸುಮಾರು ೭೫೦ರ ವೇಳೆಗೆ ರೇನಾಡು ಚೋಡರು ಬಾಣರನ್ನು ಸೋಲಿಸಿ, ಅವರನ್ನು ಸಾಮಂತರನ್ನಾಗಿಸಿಕೊಂಡರು. ಆದರೆ ಈ ಅವಧಿಗೆ ಸೇರಿದಂತೆ ಬಾಣರ ಶಾಸನಗಳಾವುದೂ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ. ಮುಂದೆ ಬಾದಾಮಿ ಚಾಲುಕ್ಯರ ಅವನತಿಯೊಂದಿಗೆ ಉಂಟಾದ ಅನಿರೀಕ್ಷಿತ ರಾಜಕೀಯ ವಿದ್ಯಮಾನಗಳಿಂದಾಗಿ ಮತ್ತಷ್ಟು ದಕ್ಷಿಣಕ್ಕೆ ಹೋಗಬೇಕಾಗಿ ಬಂದ ಬಾಣರು ಚಿತ್ತೂರು, ಉತ್ತರ ಆರ್ಕಾಟ್ ಹಾಗೂ ಕೋಲಾರ ಜಿಲ್ಲೆಗಳ ಕೆಲವು ಭಾಗಗಳ ಮೇಲೆ ರಾಜಕೀಯ ನಿಯಂತ್ರಣವನ್ನು ಸಾಧಿಸಿದ್ದನ್ನು ಅನೇಕ ಶಾಸನಗಳು ದಾಖಲಿಸಿವೆ.

ಗಂಗ ಶಿವಮಾರನ ಆಳ್ವಿಕೆಯಡಿ ಬಾಣರು ಗಂಗರ ಸಾಮಂತರಾಗಿದ್ದಂತೆ ತೋರುತ್ತದೆ. ಎಳೆನಗರನಾಡು–೭೦ ಅವನ್ಯಾನಾಡು–೩೦ ಹಾಗೂ ಪೊನ್ನುಂದ–೧೨ ಪ್ರಾಂತಗಳನ್ನು ಆಳುತ್ತಿದ್ದ ಯುವರಾಜ ಶ್ರೀಪುರುಷನ ಸೇನೆಯು ಮಹಾವಲಿ ಬಾಣರ ಮೇಲೇರಿ ಹೋದಾಗ ತಂಡಗಲ್, ಮಣೆಯತ್ತೂರು ಹಾಗೂ ಕೊಯತ್ತೂರು ಯುದ್ಧಗಳಲ್ಲಿ ಶ್ರೀಪುರುಷನಿಗೆ ಬೆಂಬಲ ನೀಡಿದ ದಂಡನಾಯಕ ದುಂಡುವಿಗೆ 'ಬಾಣಕುಲ ಕಳಾಕಲಹ' ಎಂಬ ಬಿರುದಿದ್ದು, ಇವನು ಪರಮಗೂಳ ಕುಲದ ಪೃಥ್ವಿನಿರ್ಗುಂದ ರಾಜನ ತಂದೆ ಎಂದು ಶಾಸನಗಳಿಂದ ಗೊತ್ತಾಗುತ್ತದೆ. ಅಲ್ಲದೇ ಈ ಯುದ್ಧದಲ್ಲಿ ಹೋರಾಡುತ್ತಾ ಮಡಿದ ಕೋಗಳಿಯ ಎರ್ಮೆಯರ ಮಗ ಬೊಲ್ವಗಂಗ ಗಾಮುಂಡನ ಸಲುವಾಗಿ ಪಾಲ್ಪಡುವಿನ ಪಡುವಲ ಕೆರೆಯ ತಾವರೆಕಟ್ಟೆಯ ಕೆಳಗೆ ಮೂವತ್ತು ಗುಳ ಕಳನಿಯನ್ನು ಕಲ್ನಾಡಾಗಿ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಇಲ್ಲಿ ಉಲ್ಲೇಖಿತವಾಗಿರುವ ಪಾಲ್ಪಡುವ ಪಾಲಾರ್ ನದಿಯನ್ನು ಸೂಚಿಸುತ್ತದೆಂಬ ಅಭಿಪ್ರಾಯವೂ ಇದೆ. ಈ ಅವಧಿಯಲ್ಲಿ ಪಲ್ಲವರಿಗೆ ಸಾಮಂತನಾಗಿದ್ದ ಬಾಣ ದೊರೆ ಜಯನಂದಿವರ್ಮನು, ಗಂಗವಾಡಿ ಮೇಲೆ ಪಲ್ಲವ ಇಮ್ಮಡಿ ನಂದಿವರ್ಮನು ನಡೆಸಿದ ಧಾಳಿಯಲ್ಲಿ, ಪಲ್ಲವರನ್ನು ಬೆಂಬಲಿಸುವ ಮೂಲಕ, ಆವರೆಗೆ ಗಂಗ ದುಗ್ಗಮಾರ ಎರೆಯಪ್ಪನ ಅಧೀನದಲ್ಲಿದ್ದ ಗಂಗಾರುಸಾಸಿರ (ಗಂಗವಾಡಿ–೬೦೦೦) ನಾಡನ್ನು ವಶಪಡಿಸಿಕೊಂಡಿದ್ದ ಪಲ್ಲವ ನಂದೀವರ್ಮನಿಂದ ಅದನ್ನು ಪಡೆಯುವಲ್ಲಿ ಬಾಣರು ಯಶಸ್ವಿಯಾದರು. ಬಂಗಾರಪೇಟೆ ತಾಲೂಕಿನ ಬೂದಿಕೋಟೆ (೭೭೦), ಶ್ರೀನಿವಾಸಪುರ ತಾಲೂಕಿನ ಹರಳಕುಂಟೆ (೭೮೦), ಕೋಲಾರ ತಾಲೂಕಿನ ಶೀಸಂದ್ರ (೮೯೦), ಹಾಗೂ ಬಂಗಾರಪೇಟೆ ತಾಲೂಕಿನ ಹುಲಿಕುಂದ (೯೨೦)ಗಳಿಂದ ವರದಿಯಾಗಿರುವ ಶಿಲಾಶಾಸನಗಳೂ ಸೇರಿದಂತೆ ಹಲವಾರು ಶಾಸನಗಳು, ಮಹಾವಲಿ ಬಾಣರಸರು ಗಂಗ ಆರುಸಾವಿರವನ್ನು ಆಳುತ್ತಿದ್ದ ಅಂಶವನ್ನು ಉಲ್ಲೇಖಿಸುವ ಮೂಲಕ ಇದನ್ನು ಪುಷ್ಟೀಕರಿಸುತ್ತವೆ.

ಪೆರುಂಬಾಣಪ್ಪಾಡಿ ರಾಜ್ಯವನ್ನಾಳಿದ ಬಾಣರಸರಲ್ಲಿ (ಜಯ) ನಂದಿವರ್ಮ (೭೫೦–೯೫), ಒಂದನೆಯ ವಿಜಯಾದಿತ್ಯ (೭೯೫–೮೩೫), ವಧುವಲ್ಲಭ ಮಲ್ಲದೇವ (ಜಗದೇಕಮಲ್ಲ) (೮೩೫–೮೫೦), ಒಂದನೆಯ ವಿಕ್ರಮಾದಿತ್ಯ ಜಯಮೇರು ಬಾಣವಿದ್ಯಾಧರ (೮೫೦–೯೫), ಒಂದನೆಯ ವಿಜಯಾದಿತ್ಯ ಪ್ರಭುಮೇರು ಬಾಣ ವಿದ್ಯಾಧರ (೮೯೫–೯೧೦) ಇಮ್ಮಡಿ ವಿಕ್ರಮಾದಿತ್ಯ (೯೧೦–೧೬), ಮುಮ್ಮಡಿ ವಿಜಯಾದಿತ್ಯ (೯೧೬–೯೫೦) ಹಾಗೂ ಮುಮ್ಮಡಿ ವಿಜಯಬಾಹು ವಿಕ್ರಮಾದಿತ್ಯ (೯೬೫) ಪ್ರಮುಖರಾಗಿದ್ದಾರೆ.

**ಒಂದನೆಯ ವಿಜಯಾದಿತ್ಯ (ಸು.೭೯೫–೮೩೫)**; ಪೆರುಂಬಾಣಪಾಡಿ ಬಾಣರ ಮೂಲಪುರುಷನೆಂದೇ ಪರಿಗಣಿಸಲ್ಪಟ್ಟಿರುವ **ಬಾಣ ಜಯನಂದಿವರ್ಮ (ಸು. ೭೫೦–೯೫)**ನ ಮಗನಾದ ಇವನು ಸುಮಾರು ೭೯೫ ರಲ್ಲಿ ಅಧಿಕಾರಕ್ಕೆ ಬಂದನೆಂದು ಟಿ.ವಿ.ಮಹಾಲಿಂಗಂ ಅಭಿಪ್ರಾಯ ಪಡುತ್ತಾರೆ. ಮುಳಬಾಗಿಲು ತಾಲೂಕಿನ ಸುಮಾರು ೮೫೮ರ ಮುಡಿಯನೂರು ತಾಮ್ರಶಾಸನ ಇವನ ಶೌರ್ಯಾಡಳಿತಗಳ ಬಗ್ಗೆ ಮಾಹಿತಿ ನೀಡುತ್ತದೆ. ಇವನ ಆಡಳಿತಾವಧಿಯಲ್ಲಿ ರಾಷ್ಟ್ರಕೂಟ ಮುಮ್ಮಡಿ ಗೋವಿಂದನು, ಗಂಗ ಇಮ್ಮಡಿ ಶಿವಮಾರನನ್ನು ಸೋಲಿಸಿ ಗಂಗವಾಡಿಯನ್ನು ವಶಪಡಿಸಿಕೊಂಡನು. ಅಲ್ಲದೇ ಪಲ್ಲವರೂ ಇವನಿಂದ ಸೋಲಿಸಲ್ಪಟ್ಟರು. ಆಗ ಬಾಣರು ರಾಷ್ಟ್ರಕೂಟರಿಗೆ ತಮ್ಮ ನಿಷ್ಠೆಯನ್ನು ವರ್ಗಾಯಿಸಿದರು. ಆದರೆ ಮುಂದೆ ಗಂಗವಾಡಿಯಲ್ಲಿ ಗಂಗರು ಪುನರ್ ಸ್ಥಾಪಿತಗೊಂಡಾಗ, ಬಾಣರು ಮತ್ತೆ ಪಲ್ಲವ ದಂತಿವರ್ಮನಿಗೆ ತಮ್ಮ ನಿಷ್ಠೆಯನ್ನು ಬದಲಿಸಿಕೊಂಡರು. ಈ ಅವಧಿಯಲ್ಲಿ ಗಂಗ ಸಾಮ್ರಾಜ್ಯವು ಒಡೆದು, ಒಂದನೆಯ ಪೃಥ್ವಿಪತಿಯ ನೇತೃತ್ವದಲ್ಲಿ ಗಂಗರ ಪರುವಿ ಶಾಖೆಯು ಆರಂಭಗೊಂಡಿತು. ಅಲ್ಲದೇ ನೊಳಂಬರು, ಗಂಗರ ಸಾಮಂತರಾಗಿ ಕೋಲಾರ ಹಾಗೂ ಆನಂತಪುರ ಜಿಲ್ಲೆಯ ಕೆಲವು ಪ್ರದೇಶಗಳನ್ನೊಳಗೊಂಡ ನೊಳಂಬವಾಡಿ ಪ್ರಾಂತವನ್ನು ಆಳುತ್ತಿದ್ದರು. ಇದೇ ಅವಧಿಯಲ್ಲಿ ವೈದುಂಬರು ಕೋಲಾರ ಜಿಲ್ಲೆಯ ಗಡಿಯಲ್ಲಿರುವ ಮದನಪಲ್ಲಿ ಹಾಗೂ ಚಿತ್ತೂರು ಜಿಲ್ಲಾ ಪರಿಸರದಲ್ಲಿ ತಲೆ ಎತ್ತಿದ್ದರು. ಬಾಣ ವಿಜಯಾದಿತ್ಯನು ಗಂಗ ಪೃಥ್ವಿಪತಿ ಹಾಗೂ ವೈದುಂಬರೊಡಗೂಡಿ ಮೂಲ ಗಂಗಶಾಖೆಯ ಒಂದನೆಯ ರಾಚಮಲ್ಲ ಮತ್ತವನ ಸಾಮಂತರಾಗಿದ್ದ ನೊಳಂಬ ಹಾಗೂ ತೆಲುಗು ಚೋಡರೊಂದಿಗೆ ಸೊರೆಮಡಿ ಯುದ್ಧದಲ್ಲಿ ಭಾಗವಹಿಸಿದ್ದನು. ಇವನ ನಂತರ ಅವನ ಮಗನಾದ ಶ್ರೀವಧುವಲ್ಲಭ ಮಲ್ಲದೇವನು ಸುಮಾರು ೮೩೫ರಲ್ಲಿ ಅಧಿಕಾರಕ್ಕೆ ಬಂದನು.

**ಶ್ರೀವಧುವಲ್ಲಭ (ಜಗದೇಕ) ಮಲ್ಲದೇವ (ಸು.೮೩೫–೮೬೦):** ಇವನ ಅಧಿಕಾರಾವಧಿಯಲ್ಲಿ ಪಲ್ಲವರ ಮೇಲೇರಿ ಬಂದ ಗಂಗ–ನೊಳಂಬರ ಸಂಯುಕ್ತ ಧಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ಇವನು ಪಲ್ಲವರಿಗೆ ನೆರವಾದನು. ಇವನ ಆಳ್ವಿಕೆಯ ೨೩ನೆಯ

ವರ್ಷದಲ್ಲಿ ನೀಡಲ್ಪಟ್ಟಿರುವ ಮುದಿಯನೂರು ತಾಮ್ರಶಾಸನ ಇವನನ್ನು ಬೋಧಿಸತ್ವನೆಂದು ಉತ್ಪ್ರೇಕ್ಷೆಯೊಂದಿಗೆ ವರ್ಣಿಸಿದೆ. ಇವನು ತೆಲುಗು ಚೋಡ ಆದಿರಾಜ ಶ್ರೀಕಂಠನನ್ನು ಸೋಲಿಸಿದಂತೆ ತೋರುತ್ತದೆ. ಬಾಣರ ವಶದಲ್ಲಿದ್ದ ಗಂಗಾರುಸಾವಿರ ಭಾಗವು ಇವನ ಆಳ್ವಿಕೆಯ ಅಂತ್ಯ ಭಾಗದಲ್ಲಿ ಕೈಬಿಟ್ಟು ಹೋದಂತೆ ತೋರುತ್ತದೆ. ಇವನು ಗಂಗರ ಪರುವಿ ಶಾಖೆಯ ಒಂದನೆಯ ಪೃಥ್ವಿಪತಿಯ ಮಗಳಾದ ಮಹಾದೇವಿಯನ್ನು ತನ್ನ ಮಗ ಒಂದನೆಯ ವಿಕ್ರಮಾದಿತ್ಯನಿಗೆ ತಂದುಕೊಂಡಿದ್ದು, ಅವನು ಬಾಣ ಸಿಂಹಾಸನವನ್ನು ಸುಮಾರು ೯೬೦ರಲ್ಲಿ ಏರಿದನು.

**ಒಂದನೆಯ ವಿಕ್ರಮಾದಿತ್ಯ ಜಯಮೇರು (ಸು.೮೬೦–೮೯೫):** ಇವನೂ ಪಲ್ಲವರಿಗೆ ಸಾಮಂತನಾಗಿದ್ದು, ಬಾಣ ವಿದ್ಯಾಧರ, 'ಬಾಣ ಕಂದರ್ಪ ಜಯಮೇರು' ಮುಂತಾದ ಬಿರುದುಗಳನ್ನು ಹೊಂದಿದ್ದನು. ರಾಷ್ಟ್ರಕೂಟ ಮುಮ್ಮಡಿ ಗೋವಿಂದನು ಪಲ್ಲವರಿಂದ ಕಪ್ಪ ಸ್ವೀಕರಿಸಿ ಗಂಗವಾಡಿ ಮೂಲಕ ತೆರಳುತ್ತಿದ್ದ ಸಂದರ್ಭದಲ್ಲಿ ಗಂಗಾರು ಸಾವಿರವನ್ನು ಗಂಗರಿಂದ ಇವನು ಪುನರ್ ವಶಪಡಿಸಿಕೊಂಡನೆಂದು ಶಾಸನವೊಂದರಿಂದ ಗೊತ್ತಾಗುತ್ತದೆ. ಕೋಲಾರ ತಾಲೂಕಿನ ಮಡಿವಾಳದ ಸುಮಾರು ೮೯೦ರ ಶಾಸನ, ಗಂಗ ಒಂದನೆಯ ನೀತಿಮಾರ್ಗನು ನಂದಿಗಿರಿ, ಕುವಲಾಲಪುರಗಳನ್ನು ಆಳುತ್ತಿದ್ದಾಗ, ನೊಳಂಬಾಧಿರಾಜನು ಗಂಗಾರುಸಾವಿರವನ್ನು ಆಳುತ್ತಿದ್ದು, ಆ ಸಂದರ್ಭದಲ್ಲಿ ಧಾಳಿ ಮಾಡಿದ ಬಾಣರಸರ ವಿರುದ್ಧ ಮುರ್ಗೆಪಾಡಿಯಲ್ಲಿ ಹೋರಾಡುತ್ತಾ ಮಡಿದ ಪೊಂಪಲ ಪೊಡೆಯನಿಗೆ ಸೂರೂರನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಇದು ಬಾಣ–ಗಂಗರಿಗೆ ನಡೆದ ಯುದ್ಧವನ್ನು ದಾಖಲಿಸುತ್ತಾ, ಗಂಗಾರುಸಾಸಿರನಾಡು ಗಂಗರ ಸಾಮಂತರಾದ ನೊಳಂಬರ ಅಧೀನದಲ್ಲಿದ್ದ ಅಂಶವನ್ನೂ ಅರಹುತ್ತದೆ. ಇದಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅನೇಕ ವೀರಗಲ್ಲುಗಳು ಲಭ್ಯವಿದ್ದು, ಪ್ರಭುಮೇರುವಿನ ನಾಯಕತ್ವದಲ್ಲಿ ಪಲ್ಲವರ ವಿರುದ್ಧ ಹೋರಾಡುತ್ತಾ ಮಡಿದ ಸೈನಿಕರಿಗೆ ಬಿಟ್ಟ ಕಲ್ನಾಡು ದತ್ತಿಯನ್ನು ಅವು ದಾಖಲಿಸಿವೆ. ಅದರಲ್ಲೊಂದು ಶಾಸನ, ಬಾಣ ವಿದ್ಯಾಧರ ವಿಕ್ರಮಾದಿತ್ಯ ಜಯಮೇರುವನ್ನು ಉಲ್ಲೇಖಿಸುತ್ತಾ, ಜಯಮೇರು (ಇಮ್ಮಡಿ ವಿಜಯಾದಿತ್ಯ)ವಿನ ಆದೇಶದಂತೆ ಪೊಕ್ಕಿರಿಲಿ ಊರಿನ ದೋಸಿರಾಜನು ಕಾಡುವೆಟ್ಟಿಗಳ ವಿರುದ್ಧ ಮಾವಿನೂರಲ್ಲಿ ಕಾದಾಡುತ್ತಾ ವೀರಸ್ವರ್ಗ ಪಡೆದ ಅಂಶವನ್ನು ದಾಖಲಿಸಿದೆ. ಗಂಗಾರುಸಾವಿರ ನಾಡಿಗಾಗಿ ನಡೆದ ಯುದ್ಧದಲ್ಲಿ ಇವನು ನೊಳಂಬರನ್ನು ಸೋಲಿಸಿದನೆಂದು ತಿಳಿದುಬರುತ್ತದೆ. ಮುಳಬಾಗಿಲು ತಾಲೂಕಿನ ರಾಮಚಂದ್ರಾಪುರದಿಂದ ವರದಿಯಾಗಿರುವ ಸುಮಾರು ೮೯೦ರ ವೀರಗಲ್ಲು ಶಾಸನದಿಂದ ಕುಂದತ್ತೂರ ತುರುಗೋಳ್ ಕಾಳಗದಲ್ಲಿ ಮಡಿದ ವ್ಯಕ್ತಿಯೋರ್ವನಿಗೆ ಖಂಡುಗ ಕಳನಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅಲ್ಲಿಂದಲೇ ವರದಿಯಾಗಿರುವ ಸುಮಾರು ೯೦೦ರ ಇನ್ನೊಂದು ವೀರಗಲ್ಲು ಶಾಸನದಲ್ಲೂ ಕುಂದತ್ತೂರ ಕಾಳಗದ ಪ್ರಸ್ತಾಪವಿದ್ದು, ಅದರಲ್ಲಿ ಮಡಿದ ಪಂಪೆಯ ಪಿಂಗಳನಿಗೆ ಬಿಜಯಿತ್ತ ಬಾಣರಸನು, ತಾನು ದೋಸಿರಾಜನಿಂದ ಪುಲಿನಾಡು–೬೦ ಅನ್ನು ವಶಪಡಿಸಿಕೊಳ್ಳುತ್ತಿದ್ದಂತೆ, ಖಂಡುಗ ಕಳನಿಯನ್ನು ಕಲ್ನಾಟಾಗಿ ದಾನ ಬಿಟ್ಟ ಅಂಶವನ್ನೂ ದಾಖಲಿಸಿದೆ. ಈ ಎರಡು ಶಾಸನಗಳಲ್ಲೂ ಮಹಾಬಲಿ ಬಾಣರಸರು ರಾಜ್ಯಭಾರ ಮಾಡುತ್ತಿದ್ದ ಪ್ರಸ್ತಾಪವಿದೆ.

**ಇಮ್ಮಡಿ ವಿಜಯಾದಿತ್ಯ ಪ್ರಭುಮೇರು (ಸು.೮೯೫–೯೧೬):** ತನ್ನ ಅಧಿಕಾರಾವಧಿಯಲ್ಲಿ ಇವನು ರಾಷ್ಟ್ರಕೂಟರ ಸಾಮಂತನಾಗಿ, ಚೋಳರ ಮೇಲಿನ ಯುದ್ಧಗಳಲ್ಲಿ ಭಾಗವಹಿಸಿದ್ದನು. ಮುಳಬಾಗಿಲು ತಾಲೂಕಿನ ಮಣಿಘಟ್ಟ–ಗೊಲ್ಲರಹಳ್ಳಿಯಲ್ಲಿರುವ ೯೦೯ರ ವೀರಗಲ್ಲು ಶಾಸನವು ಬಿಜಯಿತ್ತ ಬಾಣರಸನ ಆಡಳಿತಾವಧಿಯಲ್ಲಿ ಕೇತಯ್ಯನು ಪಟ್ಟಣ (ಊರು)ವನ್ನು ಆಳುತ್ತಿದ್ದಾಗ, ಮಣಿಗಟ್ಟದ ಮಾಣಿಕ್ಯ, ಮ್ಯೆಂಡಿಮುದುಲಗೌಡನ ಮಗನಾದ ಕಸವಯ್ಯನು, ಆಳರಸನ ಆದೇಶದಂತೆ ಮುಲ್ಕಾಡಿನಲ್ಲಿ ಕಾದಾಡುತ್ತಾ ಇಬ್ಬರನ್ನು ಕೊಂದು ತಾನೂ ಇಹಲೋಕ ತ್ಯಜಿಸಿದನೆಂದೂ ಅದಕ್ಕಾಗಿ ಅವನ ವಂಶಸ್ಥರಿಗೆ ಖಂಡುಗ ಭೂಮಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಶ್ರೀನಿವಾಸಪುರ ತಾಲೂಕಿನ ಮುತಕಪಲ್ಲಿಯಲ್ಲಿರುವ ಸುಮಾರು ೯೦೦ಕ್ಕೆ ಸೇರಿದ ವೀರಗಲ್ಲು ಶಾಸನ ಮುದಕಲ್ ಕಾಳಗದಲ್ಲಿ ಬಿಜಯತ್ತನು, ಮಾದಮುತ್ತರಸನ ಮಗ ಪೊಳಲಮ್ಮನ ಮೇಲೇರಿ ಹೋಗಿ ಕಾದಾಡುತ್ತಿದ್ದಾಗ, ಚಾಟಗುಡ್ಡಿ ಹಾಗೂ ಫಲಕುರ್ಕಿ ದುಗ್ಗಮಾರರ ಸಾವನ್ನು ದಾಖಲಿಸಿದೆ.

**ಇಮ್ಮಡಿ ವಿಕ್ರಮಾದಿತ್ಯ ಬಾಣರಾಜ (ಸು.೯೧೦–೧೬):** ಈತನು ಅಧಿಕಾರದಲ್ಲಿದ್ದಾಗ ರಾಷ್ಟ್ರಕೂಟ ಇಮ್ಮಡಿ ಕೃಷ್ಣನಿಗೆ ಬಾಣರು ನಿಷ್ಠೆಯಿಂದಿದ್ದರು. ಚೋಳರ ಮೇಲಿನ ಧಾಳಿಯಲ್ಲಿ ರಾಷ್ಟ್ರಕೂಟರು ಅವರ ರಾಜ್ಯದ ಕೆಲವು ಭಾಗಗಳನ್ನು ವಶಪಡಿಸಿಕೊಂಡರು. ಆದರೆ ಚೋಳ ಪರಾಂತಕನು ತನ್ನ ಕೈಯಲ್ಲಿ ಸೋತ ಬಾಣರಿಂದ ಕೆಲವು ಪ್ರದೇಶವನ್ನು ವಶಪಡಿಸಿಕೊಂಡು ಅದನ್ನು ಗಂಗರ ಪರುವಿ ಶಾಖೆಗೆ ಸೇರಿದ ಇಮ್ಮಡಿ ಪೃಥ್ವಿಪತಿ ಹಸ್ತಿಮಲ್ಲನಿಗೆ ನೀಡುವುದರ ಜೊತೆಗೆ ಬಾಣಾಧಿರಾಜನೆಂಬ ಬಿರುದನ್ನೂ ಅವನಿಗೆ

ದಯಪಾಲಿಸಿದನು. ಇಮ್ಮಡಿ ಪೃಥ್ವಿಪತಿಯು ಬಾಣರ ಲಾಂಛನವಾದ ನಂದಿ ಹಾಗೂ ಹುಲ್ಲೆ ಧ್ವಜಗಳನ್ನು ವಶಪಡಿಸಿಕೊಂಡನೆಂದು ಚೋಳ ಒಂದನೆಯ ಪರಾಂತಕನ ಉದಯೇಂದ್ರಂ ತಾಮ್ರ ಶಾಸನದಿಂದ ಗೊತ್ತಾಗುತ್ತದೆ.

ಬಾಣ ರಾಜಮನೆತನಕ್ಕೆ ಸಂಬಂಧಿಸಿದಂತೆ ಈವರೆಗೆ ಸುಮಾರು ೩೦ ಶಾಸನಗಳು ಜಿಲ್ಲೆಯ ಕೋಲಾರ, ಮುಳಬಾಗಿಲು, ಚಿಂತಾಮಣಿ, ಬಂಗಾರಪೇಟೆ ಹಾಗೂ ಶ್ರೀನಿವಾಸಪುರ ತಾಲೂಕುಗಳಲ್ಲಿ ಪತ್ತೆಯಾಗಿವೆ. ಸುಮಾರು ೭೫೦ ರಿಂದ ೯೬೫ರ ಕಾಲಾವಧಿಗೆ ಸೇರಿದ ಈ ಶಾಸನಗಳಿಂದ ಜಿಲ್ಲೆಯ ಮೇಲಾದ ಬಾಣರಸರ ಆಡಳಿತದ ಪ್ರಭಾವವನ್ನು ಅರಿಯಬಹುದಾಗಿದೆ. ಮುಳಬಾಗಿಲು ತಾಲೂಕಿನ ಮುದಿಯನೂರು ತಾಮ್ರಶಾಸನದ ಕಾಲ ಶಕ ೨೬೧ ಎಂದು ಶಾಸನದಲ್ಲಿ ತಪ್ಪಾಗಿ ಉಲ್ಲೇಖಿಸಲ್ಪಟ್ಟಿದೆ. ಆದರೆ ಶಾಸನದಲ್ಲಿ ಬರುವ ವಧುವಲ್ಲಭ ಮಲ್ಲದೇವ ನಂದೀವರ್ಮನನ್ನು ಮಲ್ಲದೇವ (ಜಗದೇಕಮಲ್ಲ)ನೆಂದು ಗುರುತಿಸುವುದರೊಂದಿಗೆ ಶಾಸನದ ಕಾಲವನ್ನು ಸುಮಾರು ಒಂಭತ್ತನೆಯ ಶತಮಾನದ ಮಧ್ಯಭಾಗಕ್ಕೆ ನಿಗದಿಪಡಿಸಬಹುದಾಗಿದ್ದು, ಇದನ್ನು ಅವನ ಆಳ್ವಿಕೆಯ ೨೫ನೆಯ ವರ್ಷದಲ್ಲಿ ನೀಡಲ್ಪಟ್ಟಿರುವುದರಿಂದ ಅದರ ಕಾಲವನ್ನು ಸುಮಾರು ೮೫೮ ಎಂದೂ ನಿರ್ಧರಿಸಬಹುದಾಗಿದೆ. ಈ ಶಾಸನದಲ್ಲಿ ಬಾಣರ ವಂಶಾವಳಿಯನ್ನು ದಾನವ ಚಕ್ರವರ್ತಿ ಮಹಾಬಲಿಯೊಂದಿಗೆ ಆರಂಭಿಸಲಾಗಿದ್ದು, ಆ ವಂಶದವನಾದ ನಂದಿವರ್ಮನು ಆಳಿದ ನಂತರ, ಅವನ ಮಗನಾದ ವಿಜಯಾದಿತ್ಯನ ಶೌರ್ಯಯುಕ್ತ ಆಳ್ವಿಕೆಯ ಹಿಂದೆಯೇ ಬಾಣ ಸಿಂಹಾಸನವನ್ನು ಅಲಂಕರಿಸಿದ ವಧುವಲ್ಲಭ ಮಲ್ಲದೇವ ನಂದಿವರ್ಮನು ಆಂಧ್ರಮಂಡಲದೊಳಗಿದ್ದ ೧೨,೦೦೦ (ವಡುಗವಳಿ ೧೨,೦೦೦) ಗ್ರಾಮಗಳನ್ನೊಳಗೊಂಡ ಏಳೂವರೆ ಲಕ್ಷ ನಾಡನ್ನು (ಸಪ್ತಾರ್ಧ ಲಕ್ಷ ವಿಷಯ) ಆಳುತ್ತಿದ್ದ ಅವನು, ತನ್ನ ಆಳ್ವಿಕೆಯ ೨೫ನೆಯ ವರ್ಷದಲ್ಲಿ ಆವಣಿಪುರದಲ್ಲಿ ತಂಗಿದ್ದಾಗ, ವಿವಿಧ ಗೋತ್ರಕ್ಕೆ ಸೇರಿದ ೨೫ ವಿಪ್ರೋತ್ತಮರಿಗೆ ಹೊದಲಿ ವಿಷಯದಲ್ಲಿದ್ದ ಮುಡಿಯನೂರು (ಸಂಸ್ಕೃತ ರೂಪ ಚೂಡಗ್ರಾಮ) ಗ್ರಾಮವನ್ನು ಸರ್ವಮಾನ್ಯವಾಗಿ ದಾನಬಿಟ್ಟ ಅಂಶವನ್ನೂ ದಾಖಲಿಸಿದೆ. ಮಿಗಿಲಾಗಿ ಬಾಣರಾಜ ಮಲ್ಲದೇವ ನಂದಿವರ್ಮನನ್ನು ಈ ಶಾಸನವು ಸಕಲ ಜೀವಾತ್ಮಗಳಿಗೆ ಲೇಸ ಬಯಸುವಲ್ಲಿ ಬೋಧಿಸತ್ವನಿಗೂ, ಶೌರ್ಯದಲ್ಲಿ ವೀರಭದ್ರನಿಗೂ, ರಾಜ್ಯ ನಿರ್ವಹಣೆಯಲ್ಲಿ ಮಹೇಂದ್ರನಿಗೂ ಸಮಾನನಾಗಿದ್ದನೆಂದೂ ಉತ್ಪ್ರೇಕ್ಷೆಯಿಂದ ಹೊಗಳಿದೆ. ಬಾಣರ ಕಾಲಕ್ಕೆ ಸೇರಿದ ಬೂದಿಕೋಟೆ (೭೭೦) ಶಾಸನವು ಗಂಗಾರುಸಾಸಿರನಾಡನ್ನು ಮಹಾವಲಿ ಬಾಣರಸನು ಆಳುತ್ತಿದ್ದ ಅಂಶವನ್ನು ದಾಖಲಿಸುತ್ತಾ ರಾಚಮಲ್ಲ ಪೆರ್ಮನಡಿಗಳು ಕಂಚಿಯ ಮೇಲೆ ಸೈನ್ಯವನ್ನು ಕೊಂಡ್ಯೊಯ್ದು ಯುದ್ಧ ಮಾಡಿದ ಸಂದರ್ಭದಲ್ಲಿ ತೆಂಕಲನಾಡಲ್ಲಿ ಅಗ್ಗಲನ ಆದೇಶದಂತೆ ಹೋರಾಡುತ್ತಾ ಮಡಿದ ಯೋಧನಿಗೆ ಬಾಣರಸನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಹರಳಕುಂಟೆ (ಶ್ರೀನಿವಾಸಪುರ ತಾ.) ಯಲ್ಲಿರುವ ಸು. ೭೮೦ರ ಶಾಸನದಿಂದ, ಮನಸೂರ ಪ್ರಭುವಾದ ವಿಜ್ಯಾ(ದ್ಯಾ)ಧರನ್ ಹೋರಾಡುತ್ತ ಮಡಿದಾಗ, ಅವನಿಗೆ ಬಾಳ್ಗಚ್ಚು ಕೊಟ್ಟ ಅಂಶ ಗೊತ್ತಾಗುತ್ತದೆ. ಇದೇ ರೀತಿ ನೆಕ್ಕುಂದಿ, ಬಳ್ಳ, ತಾಡಿಕಲ್ಲು, ಹುಲಿಕುಂದ, ಬಂಗವಾಡಿ, ಉತ್ತನೂರು, ರಾಮಚಂದ್ರಪುರ, ತಲ್ಲಪಳ್ಳಿ, ನುಕ್ಕನಹಳ್ಳಿ, ಶೀಸಂದ್ರ, ಹೆಬ್ಬಣಿ, ಯಲ್ದೂರು ಮುಂತಾದೆಡೆಗಳಲ್ಲಿ ಇವರ ಕಾಲದ ವೀರಗಲ್ಲುಗಳು ಕಂಡುಬರುತ್ತವೆ.

## ತಲಕಾಡಿನ ಗಂಗರು

ಕರ್ನಾಟಕದ ಇತಿಹಾಸದಲ್ಲಿ 'ತಲಕಾಡಿನ ಗಂಗ' ರೆಂದೇ ಪ್ರಸಿದ್ಧವಾಗಿರುವ ಈ ರಾಜಮನೆತನದ ಆರಂಭದ ರಾಜಕೀಯ ಹೆಜ್ಜೆಗಳು ಕೋಲಾರ ಜಿಲ್ಲೆಯಿಂದಲೇ ಪ್ರಾರಂಭಗೊಂಡಿತೆಂಬುದನ್ನು, ಈ ಮನೆತನದ ಆಳರಸರು ಧರಿಸಿದ್ದ 'ನಂದಗಿರಿನಾಥ' ಹಾಗೂ "ಕುವಳಾ(ಲಾ)ಲಪುರವರಾಧೀಶ್ವರ" ಎಂಬ ಬಿರುದುಗಳು ಸ್ಪಷ್ಟಪಡಿಸಿದ್ದು, ಅವು ಕ್ರಮವಾಗಿ ಇಂದಿನ ನಂದಿಬೆಟ್ಟ ಹಾಗೂ ಜಿಲ್ಲಾ ಕೇಂದ್ರ ಕೋಲಾರಗಳಿಗೆ ಅವರು ನೀಡಿದ್ದ ರಾಜಕೀಯ ಪ್ರಾಮುಖ್ಯತೆಯ ಹಿನ್ನೆಲೆಯಲ್ಲಿ ರೂಪುಗೊಂಡು ಬಳಕೆಗೆ ಬಂದ ಪ್ರಮುಖ ಬಿರುದುಗಳಾಗಿವೆ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಇಂದು ಪ್ರವಾಸೀಧಾಮವಾಗಿರುವ ನಂದಿಬೆಟ್ಟವು ಹಿಂದೆ ಗಂಗರ ಸೇನಾನೆಲೆಯಾಗಿದ್ದು, ಆಯಕಟ್ಟಾದ ದುರ್ಗಮ ಗಿರಿಶ್ರೇಣಿಗಳಿಂದ ಕೂಡಿದ್ದು, ಅದರಿಂದಾಗಿ ಅವರು ತಮ್ಮನ್ನು ನಂದಗಿರಿಯನಾಥ ಅಥವಾ ನಂದಗಿರಿ ರಕ್ಷಕರೆಂದೇ ಕರೆದುಕೊಂಡಿದ್ದಾರೆ ಎಂಬ ಅಭಿಪ್ರಾಯವೂ ಇದೆ. ಜಿಲ್ಲಾ ಕೇಂದ್ರವಾದ ಕೋಲಾರವೇ ಗಂಗರಸರ ಆರಂಭಿಕ ರಾಜಧಾನಿ ಪಟ್ಟಣವಾದ ಶಾಸನೋಕ್ತ 'ಕುವಳಾ(ಲಾ)ಲ'ವಾಗಿದ್ದು, ಇದರಿಂದಾಗಿಯೇ 'ಕುವಳಾಲಪುರವರಾಧೀಶ್ವರ' ಎಂಬುದು ಅವರ ಪ್ರಧಾನ ಬಿರುದಾಗಿದ್ದು, ಅವರ ೯–೧೦ನೆಯ ಶತಮಾನದ ಶಾಸನಗಳಲ್ಲಿ ಇದು ಮೇಲಿಂದ ಮೇಲೆ ಬಳಸಲ್ಪಟ್ಟಿದೆ ಎಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಗಂಗರಾಜ್ಯ ಸ್ಥಾಪನೆಗೊಂಡು ನಲವತ್ತು

ವರ್ಷ ಪೂರ್ಣಗೊಳ್ಳುವ ಮೊದಲೇ ಗಂಗರು ಹರಿವರ್ಮನ ಕಾಲದಲ್ಲಿ ತಮ್ಮ ರಾಜಧಾನಿಯನ್ನು 'ಕುವಳಾಲ'ದಿಂದ ಕಾವೇರಿ ತೀರದ ತಲಕಾಡಿಗೆ ಸ್ಥಳಾಂತರಿಸಬೇಕಾಯಿತೆಂದೂ ಹೇಳಲಾಗುತ್ತದೆ. ತತ್ಪರಿಣಾಮವಾಗಿ ಗಂಗರ ರಾಜಧಾನಿ ಪಟ್ಟಣವಾಗಿ ಮೆರೆದಿದ್ದ ಕೋಲಾರ (ಕುವಲಾಲ)ದ ಪ್ರಾಮುಖ್ಯತೆ ಇಳಿಮುಖಗೊಂಡಿತಾದರೂ ಆನಂತರದಲ್ಲಿ ಗಂಗ ಆರುಸಾವಿರ (ಗಂಗ-೬೦೦೦) ಪ್ರಾಂತದ ಉಪಪ್ರಾಂತ್ಯಗಳಲ್ಲಿ ಒಂದಾಗಿದ್ದ ಕುವಲಾಲ-೩೦೦ ನಾಡಿನ ಆಡಳಿತ ಕೇಂದ್ರವಾಗಷ್ಟೇ ಮುಂದುವರೆದುದು ಅವರ ಶಾಸನಗಳಿಂದ ವೇದ್ಯವಾಗುತ್ತದೆ. ಆದರೆ ಡಾ.ಷೇಕ್ಅಲಿರವರು ಗಂಗರು ತಲಕಾಡಿನಿಂದಲೇ ರಾಜ್ಯಭಾರವನ್ನು ಆರಂಭಿಸದರೆಂಬ ಅಂಶವನ್ನು ಸೋದಾಹರಣವಾಗಿ ನಿರೂಪಿಸಿರುವುದು ಗಮನಾರ್ಹ. ಈ ಅಭಿಪ್ರಾಯವನ್ನು ಒಪ್ಪುವುದಾದರೆ, ಗಂಗರು ಕೋಲಾರ ಭಾಗದಲ್ಲಿ ತಮ್ಮ ರಾಜ್ಯಭಾರವನ್ನು ಆರಂಭಿಸಿದ್ದು, ಕೋಲಾರ ಅವರ ಆರಂಭದ ರಾಜಧಾನಿಯಾಗಿತ್ತೆಂಬ ಸ್ವೀಕೃತ ಅಭಿಪ್ರಾಯವನ್ನು ಪುನರ್ ಪರಿಶೀಲಿಸಬೇಕಾಗುತ್ತದೆ. ಜಿಲ್ಲೆಯ ಉತ್ತರಗಡಿಯ ಹಿಂದೂಪುರ (ಆಂಧ್ರರಾಜ್ಯ) ತಾಲೂಕಿನಲ್ಲಿರುವ ಪರುವಿಯು ಗಂಗರ ಉಪಶಾಖೆಯೊಂದಕ್ಕೆ ರಾಜಧಾನಿಯಾಗಿದ್ದ ಅಂಶವನ್ನು ಡ್ಯುಬ್ರಿಯಲ್ ಅವರು ಪೆನುಗೊಂಡ ತಾಮ್ರಶಾಸನ (ಸು.೪೭೫)ವನ್ನು ಆಧರಿಸಿ ಬೆಳಕಿಗೆ ತಂದಿದ್ದಾರೆ. ಇದೇ ರೀತಿ ಗಂಗರ ಇನ್ನೊಂದು ಉಪಶಾಖೆಯು ಕೈವಾರದಲ್ಲಿ ಅತ್ಯಲ್ಪಕಾಲ ಅಸ್ತಿತ್ವದಲ್ಲಿತ್ತೆಂಬ ಅಂಶವನ್ನು ಚುಕುಟೂರು ಹಾಗೂ ಬೆಂಡಿಗಾನಹಳ್ಳಿ ತಾಮ್ರಶಾಸನಗಳನ್ನಾಧರಿಸಿ ಮತ್ತೊಬ್ಬ ವಿದ್ವಾಂಸರಾದ ಶಾಮಶಾಸ್ತ್ರಿಗಳು ಬೆಳಕಿಗೆ ತಂದಿರುವುದು ಉಲ್ಲೇಖಾರ್ಹವಾಗಿದೆ.

ಸುಮಾರು ನಾಲ್ಕನೆಯ ಶತಮಾನದ ಪೂರ್ವಾರ್ಧ ಭಾಗದಲ್ಲಿ (ಸುಮಾರು ೩೫೫) ಕರ್ನಾಟಕದ ಉತ್ತರಭಾಗದಲ್ಲಿ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಕದಂಬ ರಾಜಮನೆತನವು ಪ್ರಭುತ್ವವನ್ನು ಸ್ಥಾಪಿಸಿದ ಸಂದರ್ಭದಲ್ಲೇ, ಕರ್ನಾಟಕದ ದಕ್ಷಿಣ ಭಾಗದಲ್ಲಿ ರಾಜಕೀಯ ಅಧಿಪತ್ಯವನ್ನು ಸ್ಥಾಪಿಸಿದ ಗಂಗ ರಾಜಮನೆತನವು ಮುಂದಿನ ಏಳು ಶತಮಾನಗಳ ಕಾಲ ರಾಜ್ಯಭಾರ ನಡೆಸಿ ೧೦೦೪ರಲ್ಲಿ ಚೋಳರ ಕೈಯಲ್ಲಿ ಸಂಪೂರ್ಣ ಸೋತು ರಾಜಧಾನಿ ತಲಕಾಡನ್ನು ಕಳೆದುಕೊಳ್ಳುವುದರೊಂದಿಗೆ ಅದರ ಅಧಿಪತ್ಯ ಅಂತ್ಯವಾಯಿತು. ಆದರೆ ಈ ಸುದೀರ್ಘ ಆಡಳಿತಾವಧಿಯಲ್ಲಿ ಅದು ಸರ್ವಸ್ವತಂತ್ರವಾಗಿ ಆಡಳಿತ ನಡೆಸಿದ್ದು ಅತ್ಯಲ್ಪಾವಧಿಯದ್ದಾಗಿದ್ದು, ಹೆಚ್ಚಿನ ಸಂದರ್ಭದಲ್ಲಿ ಆಯಾ ಕಾಲದ ಸಾರ್ವಭೌಮಾಧಿಪತ್ಯಗಳಡಿ (ಬಾದಾಮಿ ಚಾಳುಕ್ಯ (೫೦೦-೭೫೩) ಹಾಗೂ ರಾಷ್ಟ್ರಕೂಟ (೭೫೭-೯೭೩)) ಸೀಮಿತ ಸ್ವಾತಂತ್ರ್ಯದಿಂದ ಕೂಡಿದ ಸಾಮಂತಾಧಿಪತ್ಯಾಡಳಿತವನ್ನು ನಿರ್ವಹಿಸಿದ್ದೇ ಹೆಚ್ಚು. ಅದರಲ್ಲೂ ಪಲ್ಲವ ಮತ್ತು ಬಾದಾಮಿ ಚಾಲುಕ್ಯ ಸಾಮ್ರಾಜ್ಯಗಳು ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ, ಆ ಎರಡೂ ಸಾಮ್ರಾಜ್ಯಗಳ ನಡುವಿದ್ದ ಗಂಗರಾಜ್ಯವು ತಟಸ್ಥ ರಾಜ್ಯ (Buffer State)ವಾಗಿ ಮಹತ್ವದ ಸ್ಥಾನ ಪಡೆದಿತ್ತು. ಗಂಗರಸರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶವು, ಗಂಗವಾಡಿ-೯೬,೦೦೦ ಎಂದೇ ಖ್ಯಾತಿ ಪಡೆದಿದ್ದು, ಅದು ಕರ್ನಾಟಕದ ಇಂದಿನ ಕೋಲಾರ, ತುಮಕೂರು, ಬೆಂಗಳೂರು, ಬೆಂಗಳೂರು (ಗ್ರಾಮಾಂತರ), ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಕೊಡಗು ಜಿಲ್ಲೆಗಳೂ ಸೇರಿದಂತೆ ನೆರೆಯ ತಮಿಳುನಾಡಿನ ಕೆಲವು ಪ್ರದೇಶಗಳನ್ನೂ ಒಳಗೊಂಡಿದ್ದು, ಗಂಗ ಶ್ರೀಪುರುಷನ ಆಳ್ವಿಕೆಯಲ್ಲಿ ಗಂಗರ ರಾಜ್ಯಕ್ಕೆ "ಶ್ರೀರಾಜ್ಯ" ಎಂದೇ ಕರೆಯಲಾಗುತ್ತಿತ್ತು. ಈ ರಾಜಮನೆತನದ ಆಳ್ವಿಕೆಯಡಿ ದಕ್ಷಿಣ ಕರ್ನಾಟಕವು ಸರ್ವಾಂಗೀಣ ಪ್ರಗತಿಯನ್ನು ಸಾಧಿಸಿತು. ರಾಜ ಗಾಂಭೀರ್ಯದಿಂದ ಕೂಡಿದ "ಮದಗಜ' ಗಂಗರ ರಾಜಲಾಂಛನವಾಗಿತ್ತು. ನೂತನ ಕೆರೆ-ಕಟ್ಟೆ-ಕಾಲುವೆಗಳ ನಿರ್ಮಾಣ, ಸಾಗುವಳಿಯಲ್ಲಿ ಪ್ರಗತಿ, ಗುಡಿ-ಗುಂಡಾರಗಳ ನಿರ್ಮಾಣ, ಅಸ್ತಿತ್ವದಲ್ಲಿದ್ದ ಗ್ರಾಮಗಳ ಅಭಿವೃದ್ಧಿ ಹಾಗೂ ನೂತನ ಗ್ರಾಮಗಳ ಸ್ಥಾಪನೆಗೂ ಇವರ ಆಡಳಿತಾವಧಿಯು ಹಾದಿ ಮಾಡಿಕೊಟ್ಟವು. ಅಲ್ಲದೇ ಸಾಂಸ್ಕೃತಿಕ ಬೆಳವಣಿಗೆಗೆ ಅವಕಾಶ ಕಲ್ಪಿಸಿತು. ಈ ಅಂಶವನ್ನು ಕೋಲಾರ ಜಿಲ್ಲೆಯೂ ಸೇರಿದಂತೆ ದಕ್ಷಿಣ ಕರ್ನಾಟಕದಲ್ಲಿ ದೊರೆತಿರುವ ಅವರ ಕಾಲದ ಅಸಂಖ್ಯಾತ ಶಾಸನಗಳು ಸಮರ್ಥಿಸುತ್ತವೆ.

ಆದರೆ ಈ ರಾಜಮನೆತನದ ಮೂಲ ಹಾಗೂ ಕಾಲಾನುಕ್ರಮಣಿಕೆಗಳಿಗೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯವಿದೆ. ಗಂಗ ರಾಜ್ಯದ ಸ್ಥಾಪನೆಗೆ ಕಾರಣರಾದ ದಡಿಗ ಹಾಗೂ ಮಾಧವರೆಂಬ ಸಹೋದರರು ಉತ್ತರ ಭಾರತದಿಂದ ದಕ್ಷಿಣಕ್ಕೆ ನೆಲೆ ಅರಸುತ್ತಾ ಬಂದವರೆಂಬ ಅಭಿಪ್ರಾಯ ಒಂದು ವರ್ಗದ ವಿದ್ವಾಂಸರಲ್ಲಿದೆ. ಇವರು ಮಗಧ ರಾಜ್ಯದ ಕಣ್ವ ವಂಶಕ್ಕೆ ಸೇರಿದವರಾಗಿದ್ದು, ನಂತರದಲ್ಲಿ ದಕ್ಷಿಣಕ್ಕೆ ಆಗಮಿಸಿ ಗಂಗ ರಾಜ್ಯ ಸ್ಥಾಪಿಸಿದರೆಂದು ಬಿ.ಎಲ್.ರೈಸ್ ಅಭಿಪ್ರಾಯಪಡುತ್ತಾರೆ. ಗಂಗರು ಶಾಸನಗಳಲ್ಲಿ ತಮ್ಮನ್ನು ಕಣ್ವಾಗೋತ್ರದವರೆಂದೂ, ಜಾಹ್ನವಿ ಕುಲದವರೆಂದೂ ಕರೆದುಕೊಂಡಿದ್ದಾರೆಂಬ ಅಂಶವನ್ನು

ಇದಕ್ಕೆ ಪೂರಕವಾಗಿ ಮುಂದಿಡಲಾಗುತ್ತದೆ. ಇವರು ಕೊಂಗು(ತಮಿಳು)ನಾಡು ಮೂಲದವರಾಗಿದ್ದು, ಅಲ್ಲಿಂದ ಇಲ್ಲಿಗೆ ಬಂದು ರಾಜ್ಯ ಸ್ಥಾಪನೆಗೆ ಮುಂದಾದರೆಂಬ ಅಭಿಪ್ರಾಯ ಎಂ.ಆರೋಕಸ್ವಾಮಿ ಮುಂತಾದ ವಿದ್ವಾಂಸರಲ್ಲಿದೆ. ಮತ್ತೊಂದು ವರ್ಗದ ವಿದ್ವಾಸರ ಪ್ರಕಾರ ಜೈನಮುನಿ ಸಿಂಹನಂದಿಯ ಆಶೀರ್ವಾದದಿಂದಾಗಿ ಇವರು ರಾಜ್ಯ ಸ್ಥಾಪಿಸಿದರೆಂದು ಹೇಳಲಾಗುತ್ತದೆ. ಮಿಗಿಲಾಗಿ ಈ ಮನೆತನದ ಅರಸರು ಧರಿಸಿದ ಕೊಂಗುಣಿವರ್ಮ, ಕೊಂಗುಣಿ ಅರಸ ಮುಂತಾದ ಬಿರುದುಗಳೂ ಇದನ್ನು ಪುಷ್ಠೀಕರಿಸುತ್ತವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಡಾ.ಪಿ.ಬಿ.ದೇಸಾಯಿ ಮುಂತಾದ ವಿದ್ವಾಂಸರು, ಮೂಲತಃ ಅಯೋಧ್ಯೆಯವರಾದ ಗಂಗರು, ಗಂಗಪೆರೂರಿಗೆ ಬಂದು ಸಾಮ್ರಾಜ್ಯ ಸ್ಥಾಪಿಸಿದರೆಂಬ ಅಂಶವನ್ನು ಮುಂದಿಡುತ್ತಾರೆ. ನಾಗಾರ್ಜುನಕೊಂಡದ ಶಾಸನಗಳನ್ನು ಆಧರಿಸಿ, ಗಂಗರು ಆಂಧ್ರ ಮೂಲದ ಇಕ್ಷ್ವಾಕು ವಂಶದವರಾಗಿದ್ದು, ಸುಮಾರು ೩೪೦ರಲ್ಲಿ ಗಂಗಪೆರೂರಿನಲ್ಲಿ (ಕಡಪಾ ಜಿಲ್ಲೆ) ರಾಜ್ಯ ಸ್ಥಾಪಿಸಿದರೆಂದು ಎಂ.ವಿ.ಕೃಷ್ಣರಾವ್ ಅಭಿಪ್ರಾಯಪಡುತ್ತಾರೆ. ಆದರೆ ಕೊಯಮತ್ತೂರು ಬಳಿ ಇರುವ ಗಂಗಪೆರೂರೇ ಶಾಸನೋಕ್ತ ಪೆರೂರೆಂದು ಎಂ.ಆರೋಕ್ಯಸ್ವಾಮಿ ಅಭಿಪ್ರಾಯಪಡುತ್ತಾರೆ. ಏತನ್ಮಧ್ಯೆ ತಾಲೂಕಿನ ಯಲ್ಲೂರೇ ಗಂಗಪೆರೂರೆಂಬ ಅಭಿಪ್ರಾಯವನ್ನು ಎಂ.ಜಿ.ಮಂಜುನಾಥ ಇತ್ತೀಚೆಗೆ ಮುಂದಿಟ್ಟಿದ್ದಾರೆ. ಆದರೆ ಇದನ್ನು ಪುಷ್ಟೀಕರಿಸಲು ಮತ್ತಷ್ಟು ಪೂರಕ ಸಾಕ್ಷ್ಯಾಧಾರಗಳ ಅಗತ್ಯವಿದೆ. ಇತ್ತೀಚಿನ ಸಂಶೋಧನೆಗಳು, ಅವರು ಕರ್ನಾಟಕ ಮೂಲದ ಗಂಗಡಿಕಾರ ಒಕ್ಕಲಿಗ ಜನಾಂಗಕ್ಕೆ ಸೇರಿದ ಸ್ಥಳೀಯರೆಂಬ (ಮಣ್ಣಿನ ಮಕ್ಕಳು/Sons of the Soil) ಎನ್.ಲಕ್ಷ್ಮೀನಾರಾಯಣರಾವ್, ಆರ್.ಎಸ್. ಪಂಚಮುಖಿ ಹಾಗೂ ಡಾ. ಷೇಕ್ಅಲಿಯಂತಹವರ ಅಭಿಪ್ರಾಯವನ್ನು ಸ್ಥಿರಪಡಿಸಿವೆ. ಆದರೆ ಡಾ. ಷೇಕ್ಅಲಿಯವರು ಗಂಗರು ತಲಕಾಡಿನಿಂದ ರಾಜ್ಯಭಾರವನ್ನಾರಂಬಿಸಿದರೆಂದು ಅಭಿಪ್ರಾಯ ಪಡುವ ಮೂಲಕ ಗಂಗರ ಆರಂಭಿಕ ರಾಜಕೀಯ ಚಟುವಟಿಕೆಗಳು ಕೋಲಾರದಿಂದ ಪ್ರಾರಂಭವಾಗಿರಬೇಕೆಂಬ ಅಭಿಪ್ರಾಯವನ್ನು ತಿರಸ್ಕರಿಸುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಗಂಗರ ಮೂಲಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದಲ್ಲಿ, ಇನ್ನೂ ಜಿಜ್ಞಾಸೆ ಮುಂದುವರಿದಿದೆ. ಇದೇ ರೀತಿ ಈ ಅರಸರ ವಂಶಾವಳಿ ಹಾಗೂ ಕಾಲಾನುಕ್ರಮಣಿಕೆಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಅವರ ಹೆಚ್ಚಿನ ಶಾಸನಗಳಲ್ಲಿ ಉಕ್ತಾಗಿರುವ ಶಕವರ್ಷ ತಪ್ಪಾಗಿ ದಾಖಲಾಗಿರುವುದು ಇಲ್ಲವೇ ಕಾಲದ ನಿಖರ ಉಲ್ಲೇಖವಿಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಅಲ್ಲದೇ ಇವರ ತಾಮ್ರಶಾಸನಗಳಲ್ಲಿ ಕೆಲವು ಕೂಟ ಶಾಸನಗಳಾಗಿರುವುದೂ ಮತ್ತೊಂದು ಕಾರಣವಾಗಿದೆ. ಜಿಲ್ಲೆಯ ಹೆಬ್ಬಟ್ಟ, ಗುಮ್ಮರೆಡ್ಡಿಪುರ ಹಾಗೂ ನಂದಿ ತಾಮ್ರಶಾಸನಗಳು ಗಂಗರ ವಂಶಾವಳಿ ಹಾಗೂ ಕಾಲಾನುಕ್ರಮಣಿಕೆಯನ್ನು ಪುನಾರಚಿಸುವಲ್ಲಿ ಮಹತ್ವದ ಪಾತ್ರವಹಿಸಿರುವ ಅಂಶವನ್ನು ಡಾ.ಷೇಕ್ ಅಲಿ ಅವರು ಪ್ರಶಂಸಿಸಿದ್ದಾರೆ. ಅಲ್ಲದೆ ಗಂಗರ ವಂಶಾವಳಿ ಹಾಗೂ ಕಾಲಾನುಕ್ರಮಣಿಕೆಗಳನ್ನು ನಿರ್ಣಯಿಸುವಲ್ಲಿ ಎಸ್. ಶ್ರೀಕಂಠಶಾಸ್ತ್ರಿಯವರು ವಹಿಸಿರುವ ಪಾತ್ರ ಶ್ಲಾಘನೀಯವೆಂದೂ ಅಭಿಪ್ರಾಯಪಡುತ್ತಾರೆ. ಈ ಅರಸು ಮನೆತನಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಾಸನಗಳು (ಪ್ರಧಾನವಾಗಿ ಶಿಲಾಶಾಸನ) ಲಭಿಸಿರುವ ಹಿನ್ನೆಲೆಯಲ್ಲಿ ಇವರ ಆಳ್ವಿಕೆಯಡಿ ಜಿಲ್ಲೆಯ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲುಂಟಾದ ಶಾಸನೋಕ್ತ ಬೆಳವಣಿಗೆಯನ್ನಿಲ್ಲಿ ದಾಖಲಿಸಲು ಯತ್ನಿಸಲಾಗಿದೆ.

ಈ ಮನೆತನದ ಸಂಸ್ಥಾಪಕ ಸೋದರರಲ್ಲಿ ಒಬ್ಬನಾದ **ಒಂದನೆಯ ಮಾಧವ (ಸು.೩೫೦–೩೭೦)**ನನ್ನು ಕೊಂಗಣಿವರ್ಮ, ಕೊಂಕಣಿವರ್ಮ, ಕೊಂಗುಲಿವರ್ಮ ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಉತ್ತರ ಭಾರತದ ಗುಪ್ತ ಸಾಮ್ರಾಟ ಸಮುದ್ರಗುಪ್ತನ (೩೪೦) ದಕ್ಷಿಣ ದಿಗ್ವಿಜಯದ ಪರಿಣಾಮವಾಗಿ ದಕ್ಷಿಣ ಭಾರತದ ರಾಜಕೀಯದಲ್ಲುಂಟಾದ ಅಸ್ಥಿರತೆಯ ಲಾಭ ಪಡೆದು ತಲೆ ಎತ್ತಿದ ಪಲ್ಲವ, ಕದಂಬ, ಬಾಣ ರಾಜಮನೆತನಗಳ ಜೊತೆಗೆ ತಲಕಾಡಿನ ಗಂಗಮನೆತನವೂ ಕರ್ನಾಟಕದ ರಾಜಕೀಯ ದಿಗಂತದಲ್ಲಿ ಅಸ್ತಿತ್ವಕ್ಕೆ ಬಂದಿತು. ಸ್ಥಳೀಯ ಕೃಷಿಕರಾಗಿದ್ದು, ಗಂಗಡಿಕಾರ ಒಕ್ಕಲಿಗ ಜನಾಂಗಕ್ಕೆ ಸೇರಿದ ಈ ಮನೆತನದವರು ತಲಕಾಡು ಪರಿಸರದಲ್ಲಿ ರಾಜಕೀಯ ಶಕ್ತಿಯಾಗಿ ರೂಪುಗೊಂಡು ತಲಕಾಡನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೩೫೦ರಿಂದ ರಾಜ್ಯಭಾರ ಮಾಡಲಾರಂಭಿಸಿದರೆಂದು ಡಾ.ಷೇಕ್ಅಲಿ ಆಧಾರಪೂರಕವಾಗಿ ತೋರಿಸಿಕೊಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ಬನವಾಸಿಯಲ್ಲಿ ಕದಂಬರು, ಕೋಲಾರ ಪ್ರದೇಶದಲ್ಲಿ ಬೃಹದ್ಬಾಣರು ಹಾಗೂ ತಮಿಳುನಾಡಿನಲ್ಲಿ ಪಲ್ಲವರು ಸ್ವತಂತ್ರ ರಾಜಪ್ರಭುತ್ವವನ್ನು ಸ್ಥಾಪಿಸಿದ್ದರು. ಗಂಗ ಒಂದನೆಯ ಮಾಧವನು, ಸೋದರ ದಡಿಗನೊಡಗೂಡಿ ಕೋಲಾರ ಪ್ರದೇಶವನ್ನಾಳುತ್ತಿದ್ದ ಬಾಣರ ಮೇಲೇರಿ ಹೋಗಿ ಅವರ ಮೇಲೆ ಗೆಲುವು ಸಾಧಿಸುವ ಮೂಲಕ 'ಬಾಣಕುಲಾಂತಕ' ಎಂಬ ಬಿರುದನ್ನು ಧರಿಸದನೆಂದು ಟಿ.ವಿ.ಮಹಾಲಿಂಗಂ ಅವರು ಹೇಳುತ್ತಾ, ಇವನು ಬಾಣರ ಮೇಲೆ ಕಾಡ್ಕಿಚ್ಚಿನೋಪಾದಿಯಲ್ಲಿ ಏರಿ ಹೋಗಿ ಗೆಲುವು ಸಾಧಿಸಿದನೆಂದು ಹೇಳುತ್ತಾ, ನೆರೆಯ

ದೊಡ್ಡಬಳ್ಳಾಪುರ ತಾಲೂಕಿನ ಶಾಸನವೊಂದನ್ನು ಉಲ್ಲೇಖಿಸುತ್ತಾರೆ. ಅಲ್ಲದೆ, ಈ ನಿಟ್ಟಿನಲ್ಲಿ ಗಂಗರಿಗೆ ಕಂಚಿಯ ಪಲ್ಲವರ ಬೆಂಬಲವೂ ಲಭಿಸಿದ್ದ ಅಂಶ ಇಮ್ಮಡಿ ಪೃಥ್ವಿಪತಿಯ ಉದಯೇಂದ್ರು ತಾಮ್ರಪಟದಿಂದ ಗೊತ್ತಾಗುತ್ತದೆಂದು ಅಭಿಪ್ರಾಯಪಡುತ್ತಾರೆ. ಪಲ್ಲವ–ಕದಂಬರ ನಡುವಣ ರಾಜಕೀಯ ತಿಕ್ಕಾಟವು ಗಂಗರ ಅಭ್ಯುದಯಕ್ಕೆ ಪರೋಕ್ಷವಾಗಿ ಕಾರಣವಾಗಿರಬೇಕು. ಆದರೆ ಗಂಗ ಒಂದನೆಯ ಮಾಧವನು ಬಾಣರ ಮೇಲೆ ಗೆಲುವು ಸಾಧಿಸಿದ ಬಗ್ಗೆ ಬಾಣ, ಪಲ್ಲವರ ಶಾಸನಗಳಿರಲಿ, ಗಂಗರ ಶಾಸನಗಳೂ ಮೌನದಿಂದಿವೆ. ಗಂಗರಿಂದ ಸೋಲಿಸಲ್ಪಟ್ಟ ಬಾಣರು ಕೋಲಾರ ಪ್ರಾಂತದಿಂದ ಉತ್ತರದತ್ತ ಕಾಲ್ತೆಗೆದು ತಿರುಮಲ ವಿಷಯ (ಇಂದಿನ ಅನಂತಪುರ ಪ್ರದೇಶ)ದಲ್ಲಿ ಅಧಿಕಾರ ಮುಂದುವರಿಸಿದರೆಂದು ಟಿ.ವಿ. ಮಹಾಲಿಂಗಂ, ಎಂ.ಆರೋಕ್ಯಸ್ವಾಮಿ ಮುಂತಾದವರು ಅಭಿಪ್ರಾಯಪಡುತ್ತಾರೆ. ಒಂದನೆಯ ಮಾಧವನು ಮುಂದೆ ಸೇಲಂ ಪ್ರಾಂತದ ಮೇಲೂ ತನ್ನ ಅಧಿಕಾರವನ್ನು ವಿಸ್ತರಿಸುವ ಮೂಲಕ ಕೊಂಗು ದೇಶವನ್ನು ವಶಪಡಿಸಿಕೊಂಡು, ಕೊಂಕಣ ಪ್ರದೇಶದಲ್ಲೂ ದಿಗ್ವಿಜಯ ಕೈಗೊಂಡಿದ್ದನೆಂದು ತಿಳಿದು ಬರುತ್ತದೆ. ಕೊಯಮತ್ತೂರು ಸಮೀಪದ ಗಂಗಪೆರೂರಿನ ಬಳಿ ಇವನ ಕಾಲದಲ್ಲಿ ಕೆರೆ, ಜೈನಬಸದಿಗಳು ನಿರ್ಮಾಣಗೊಂಡಿದ್ದ ಬಗ್ಗೆ ಶಾಸನಾಧಾರವಿದೆ. ಆದರೆ ಇಂದಿನ ಯಲ್ಲೂರನ್ನು ಶಾಸನೋಕ್ತ ಗಂಗ ಪೆರೂರಿರೊಂದಿಗೆ ಸಮೀಕರಿಸಲಾಗುತ್ತಿದೆ. ಇವನು ಗಂಗರಾಜ್ಯವನ್ನು ತನ್ನ ಮೂವರು ಮಕ್ಕಳ ನಡುವೆ ಹಂಚಿಕೊಡಬೇಕಾಯಿತೆಂದು ಡ್ಯುಬ್ರಿಯಲ್ ಹಾಗೂ ಶಾಮಶಾಸ್ತ್ರಿಗಳು ತೋರಿಸಿಕೊಟ್ಟಿದ್ದಾರೆ. ಆದರೆ ಒಂದನೆಯ ಮಾಧವನ ಕಾಲಕ್ಕೆ ಸೇರಿದ ಶಾಸನಗಳಾವುದೂ ಈವರೆಗೆ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ.

**ಮಾಧವ II (ಕಿರಿಯ) (೩೭೦–೩೯೦)**: ಒಂದನೆಯ ಮಾಧವನಿಗೆ ಮಕ್ಕಳಿಲ್ಲದ ಕಾರಣ ಅವನ ಸೋದರ ದಡಿಗನ ಮಗನಾದ ಇಮ್ಮಡಿ ಮಾಧವನು ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯು ಶಾಂತಿಯುತವಾಗಿದ್ದು, ಪ್ರಜಾಕಲ್ಯಾಣಕ್ಕೆ ಇವನು ವಿಶೇಷ ಗಮನ ನೀಡಿದ್ದ ಅಂಶ, ನಂದಿ ತಾಮ್ರಶಾಸನದಿಂದ(ಕೂಟ)ಗೊತ್ತಾಗುತ್ತದೆ. ಸಾಹಿತ್ಯಾಭಿಮಾನಿಯಾದ ಇವನು ನೀತಿಶಾಸ್ತ್ರ ಪಾರಂಗತನಿದ್ದು, ದತ್ತಕಸೂತ್ರಕ್ಕೆ ಟೀಕೆ ಬರೆದಿದ್ದನೆಂದು ತಿಳಿದುಬರುತ್ತದೆ. ಗುರು–ಗೋಬ್ರಾಹ್ಮಣರ ಆರಾಧಕನಾಗಿದ್ದ ಇವನು, ಅನುಯಾಯಿಗಳಿಗೆ ಕಲ್ಪವೃಕ್ಷದಂತಿದ್ದನೆಂದು ತಿಳಿದುಬರುತ್ತದೆ. ಆದರೆ ಇವನ ಕಾಲಕ್ಕೆ ಸೇರಿದ ಶಾಸನಗಳಾವುದೂ ಜಿಲ್ಲೆಯಿಂದ ವರದಿಯಾಗಿಲ್ಲ. ಆದರೆ, ನೆರೆಯ ಮೆಳೆಕೋಟೆ (ತುಮಕೂರು ಜಿ.) ತಾಮ್ರ ಶಾಸನದಲ್ಲಿ ಕಂಡುಬರುವ 'ಆವನ್ಯ' ಉಲ್ಲೇಖವನ್ನು ಆಧರಿಸಿ, ಆ ಶಾಸನವನ್ನು ಕೋಲಾರ ಜಿಲ್ಲೆಯ ಆವನಿ ಪರಿಸರದ್ದಿರಬಹುದೆಂದು ಬಹಳ ಹಿಂದೆಯೇ ಎಂ. ಚಿದಾನಂದಮೂರ್ತಿ ಅನುಮಾನ ವ್ಯಕ್ತಪಡಿಸಿದ್ದರು. ಆ ಸುಳಿಯನ್ನು ಹಿಡಿದು ಮುಂದುವರಿದ ಎಂ.ಜಿ. ಮಂಜುನಾಥರವರು ಆ ಶಾಸನದಲ್ಲಿ ಉಲ್ಲೇಖಿತಗೊಂಡಿರುವ ಬೌದ್ಧವಿಹಾರಗಳನ್ನು ಶ್ರೀನಿವಾಸಪುರ ತಾಲೂಕಿನ ಹರಳಕುಂಟೆ ಬಳಿ ತಾವೇ ಪತ್ತೆಹಚ್ಚಿರುವುದಾಗಿ ಹೇಳುವ ಬೌದ್ಧ ಅವಶೇಷಗಳೊಂದಿಗೆ ಸಮೀಕರಿಸಲು ಯತ್ನಿಸಿದ್ದಾರೆ. ಆದರೆ ಹರಳಕುಂಟೆಯ ಊರಾಚೆ ನಾರಾಯಣಸ್ವಾಮಿಯವರ ಹೊಲದಲ್ಲಿ ಇದ್ದಿತ್ತೆಂದು ಹೇಳಲಾಗುವ ಅವಶೇಷಗಳು, ಬೌದ್ಧ ವಿಹಾರಗಳ ಅವಶೇಷವಾಗಿರುವ ಸಾಧ್ಯತೆಯು ಅನುಮಾನಾಸ್ಪದವೆಂಬ ಅಂಶವನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಕುರುಡುಮಲೆಯಿಂದ ಬೌದ್ಧಶಿಲ್ಪವೊಂದನ್ನು ಬಹು ಹಿಂದೆಯೇ ಆರ್. ನರಸಿಂಹಾಚಾರ್ ವರದಿಮಾಡಿದ್ದಾರೆ. ಇಮ್ಮಡಿ ಮಾಧವನ ಆಳ್ವಿಕೆಯ ೧೩ನೆಯ ವರ್ಷದಲ್ಲಿ ನೀಡಲ್ಪಟ್ಟಿದ್ದೆಂದು ಹೇಳಲಾಗುವ ನೊಣಮಂಗಲ ತಾಮ್ರಶಾಸನ(?) ಅರ್ಹತ್ ಆಲಯದ ನಿರ್ಮಾಣದ ಬಗ್ಗೆ ತಿಳಿಸುತ್ತದೆ.

**ಹರಿವರ್ಮ (೩೯೦–೪೧೦)**: ಇವನ ಪಟ್ಟಾಭಿಷೇಕ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕಂಚಿಯ ಅರಸ ಪಲ್ಲವ ಒಂದನೆಯ ಸಿಂಹವರ್ಮನು, ಹರಿವರ್ಮನನ್ನು ಗಂಗ ಸಿಂಹಾಸನದ ಮೇಲೆ ಕೂರಿಸಿದ್ದು ಅಪರೂಪದ ಸಂದರ್ಭವಾಗಿತ್ತು. ಗಂಗರು ಪಲ್ಲವರೊಂದಿಗೆ ಸುಮಧುರ ಬಾಂಧವ್ಯ ಹೊಂದಿದ್ದ ಅಂಶ ಇದರಿಂದ ವೇದ್ಯವಾಗುತ್ತದೆ. ಈ ವೇಳೆಗೆ ಗಂಗ ಸಾಮ್ರಾಜ್ಯವು ತಲಕಾಡು, ಪರುವಿ (ಹಿಂದೂಪುರ ತಾ.) ಹಾಗೂ ಕೈವಾರ (ಚಿಂತಾಮಣಿ ತಾ.) ಶಾಖೆಗಳಾಗಿ ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿದ್ದು, ಹರಿವರ್ಮನು ತಲಕಾಡಿನಿಂದಲೂ ಅವನ ಸೋದರರಾದ ಅಯ್ಯವರ್ಮ ಹಾಗೂ ಕೃಷ್ಣವರ್ಮರೂ ಕ್ರಮವಾಗಿ ಪರುವಿ ಹಾಗೂ ಕೈವಾರಗಳಿಂದಲೂ ರಾಜ್ಯಭಾರ ಮಾಡಲಾರಂಭಿಸಿದರೆಂದು ಡಾ.ಷೇಕ್ಅಲಿ ಅಭಿಪ್ರಾಯಪಡುತ್ತಾರೆ. ಗಂಗರ ಪರುವಿ ಹಾಗೂ ಕೈವಾರ ಶಾಖೆಗಳಲ್ಲಿ ಕೋಲಾರ ಜಿಲ್ಲೆಯ ಅನೇಕ ಪ್ರದೇಶಗಳು ಅಡಕವಾಗಿದ್ದವೆಂಬುದು ಉಲ್ಲೇಖಾರ್ಹವಾಗಿದೆ. ಆದರೆ ಈ ಶಾಖೆಗಳೆರಡೂ ಮುಂದೆ ತಡಂಗಾಲ ಮಾಧವನ ಕಾಲದಲ್ಲಿ ತಲಕಾಡಿನ ಮೂಲ ಶಾಖೆಗೆ ಪುನರ್ ಸೇರ್ಪಡೆಗೊಂಡವು. ಹರಿವರ್ಮನ ಸೈನ್ಯವು ಗಜದಳವನ್ನು ಹೊಂದಿದ್ದು, ಯುದ್ಧದಲ್ಲಿ ಅವನ್ನು ಬಳಸಲು ಮುಂದಾದನೆಂದೂ ತಿಳಿದುಬರುತ್ತದೆ. ಇವನ

ಆಡಳಿತದ ಉಲ್ಲೇಖವು ಜಿಲ್ಲೆಯ ನೊಣಮಂಗಲ, ನಂದಿ, ಉತ್ತನೂರು, ಗುಮ್ಮರೆಡ್ಡಿಪುರ, ಹೊಸೂರು ಹಾಗೂ ನರಸಾಪುರ ತಾಮ್ರಶಾಸನಗಳಲ್ಲೂ ಕಂಡುಬರುತ್ತದೆ.

**ವಿಷ್ಣುಗೋಪ (೪೧೦–೪೩೦):** ಹರಿವರ್ಮನ ಪುತ್ರನಾದ ಇವನು ಸುಮಾರು ೪೧೦ರಲ್ಲಿ ಸಿಂಹಾಸನವನ್ನು ಏರಿದನು. ಗುರು–ಗೋಬ್ರಾಹ್ಮಣರ ಆರಾಧನೆಗೆ ಪ್ರಖ್ಯಾತನಾಗಿದ್ದ ಇವನ ಉಲ್ಲೇಖ ಜಿಲ್ಲೆಯ ಗುಮ್ಮರೆಡ್ಡಿಪುರ ತಾಮ್ರಶಾಸನ; ಮುಳಬಾಗಿಲು ಹಾಗೂ ಆವನಿ ಶಿಲಾ ಶಾಸನಗಳೂ ಸೇರಿದಂತೆ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಇವನ ಆಳ್ವಿಕೆಯೂ ಶಾಂತಿಯುತವಾಗಿದ್ದು ಈ ಅವಧಿಯಲ್ಲಿ ಗಂಗರ ಪರುವಿ ಹಾಗೂ ಕೈವಾರ ಶಾಖೆಗಳು ಸ್ವತಂತ್ರವಾಗಿ ರಾಜ್ಯಭಾರ ನಡೆಸುತ್ತಿದ್ದವು.

**ತಡಂಗಾಲ ಮಾಧವ (III) (೪೩೦–೪೬೬):** ವಿಷ್ಣುಗೋಪನ ಕುವರನಾದ ಇವನು ಸು.೪೩೦ರಲ್ಲಿ ಅಧಿಕಾರಕ್ಕೆ ಬಂದು, ೪೬೬ರವರೆಗೆ ಅಂದರೆ ದುರ್ವಿನೀತನು ಸಿಂಹಾಸನವನ್ನು ಏರುವವರೆಗೆ ರಾಜ್ಯಭಾರ ನಡೆಸಿದನೆಂದು ವಿದ್ವಾಂಸರು ಅಭಿಪ್ರಾಯಪಡುತ್ತಿದ್ದು, ಇದಕ್ಕೆ ದುರ್ವಿನೀತನ ಕಾಲಕ್ಕೆ ಸೇರಿದ ನಲ್ಲಾಳ ಹಾಗೂ ಹೆಬ್ಬೆಟ್ಟ ತಾಮ್ರಶಾಸನಗಳು ಆಧಾರ ಒದಗಿಸುತ್ತವೆ. ಇವನನ್ನು ಪೃಥ್ವಿಗಂಗನ ಮಗನೆಂದೂ ವಿಷ್ಣುಗೋಪನ ಮೊಮ್ಮಗನೆಂದು ಶಿವಮೊಗ್ಗ ಶಾಸನವನ್ನಾಧರಿಸಿ ಹಯವದನರಾವ್ ಹಿಂದೆ ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಅಭಿಪ್ರಾಯವನ್ನು ಸಾರಾಸಗಟಾಗಿ ಡಾ. ಷೇಕ್‌ಆಲಿ ತಳ್ಳಿಹಾಕುತ್ತಾ ತಡಂಗಾಲ ಮಾಧವನು ವಿಷ್ಣುಗೋಪನ ಮಗನೆಂಬ ಅಂಶವನ್ನು ಚುಕುಟೂರು ಹಾಗೂ ಕೊಂಡುಜೆರುವು ತಾಮ್ರಶಾಸನಗಳ ನೆರವಿನೊಂದಿಗೆ ಸ್ಪಷ್ಟಪಡಿಸಿದ್ದಾರೆ. ಇವನ ಸಿಂಹಾಸನಾರೋಹಣ ಸಮಾರಂಭಕ್ಕೆ ಪಲ್ಲವ ಒಂದನೆಯ ಸ್ಕಂದವರ್ಮನು ಹಾಜರಿದ್ದ ಅಂಶ ಪೆನುಗೊಂಡ ಶಾಸನದಿಂದ ವ್ಯಕ್ತವಾಗುತ್ತದೆ. ಈ ಅಂಶವನ್ನು ಕೂಡ್ಲೂರು ತಾಮ್ರಶಾಸನವೂ ಸಮರ್ಥಿಸುತ್ತದೆ. ಕದಂಬ–ಪಲ್ಲವ ರಾಜ್ಯಗಳ ನಡುವಣ ಪ್ರದೇಶವು ಗಂಗರ ಅಧೀನದಲ್ಲಿದ್ದುದೇ ಇದಕ್ಕೆ ಕಾರಣವಾಗಿದ್ದು, ಕದಂಬರ ನಿಯಂತ್ರಣಕ್ಕೆ ಗಂಗರನ್ನು ಪಲ್ಲವರು ತಡೆಗೋಡೆಯಾಗಿ ಬಳಸಿಕೊಳ್ಳುತ್ತಿದ್ದ ಅಂಶ ಇದರಿಂದ ಮನವರಿಕೆಯಾಗುತ್ತದೆ. ಕದಂಬ ಕಾಕುಸ್ಥವರ್ಮನ ಮಗಳೂ, ಒಂದನೆಯ ಕೃಷ್ಣವರ್ಮನ ಸೋದರಿಯೂ ಆದ ಕದಂಬ ರಾಜಕುಮಾರಿಯನ್ನು ಮುಮ್ಮಡಿ ಮಾಧವನು ವಿವಾಹವಾಗಿದ್ದ ಅಂಶವು, ಕದಂಬರು ಗಂಗರೊಂದಿಗೆ ಸುಮಧುರ ಬಾಂಧವ್ಯ ಸಾಧಿಸಲು ಮುಂದಾದುದಕ್ಕೆ ಉತ್ತಮ ಉದಾಹರಣೆಯಾಗಿದೆ. ಅತ್ಯಂತ ಪ್ರಬಲ ಅರಸನಾಗಿದ್ದ ಇವನು ಆ ವೇಳೆಗೆ ಅಸ್ತಿತ್ವದಲ್ಲಿದ್ದ ಗಂಗರ ಪರುವಿ ಹಾಗೂ ಕೈವಾರ ಶಾಖೆಗಳನ್ನು ಪ್ರಧಾನ ಗಂಗ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವಲ್ಲಿ ಯಶಸ್ವಿಯಾದ ಬಗ್ಗೆ ಅವನ ಕಾಲಕ್ಕೆ ಸೇರಿದ ಬಳ್ಳಾರಿ ಜಿಲ್ಲೆಯ ಕೆರೆಗಲೂರು ತಾಮ್ರಶಾಸನ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಮುಮ್ಮಡಿ ಮಾಧವನ ಆಡಳಿತದ ೧೩ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ನೊಣಮಂಗಲ ತಾಮ್ರಶಾಸನವು ಮುದುಕೊಟ್ಟೂರು ವಿಷಯದಲ್ಲಿದ್ದ ಪೆರ್ಬೊಳಲು ಗ್ರಾಮದಲ್ಲಿ ವೀರದೇವನು ನಿರ್ಮಿಸಿದ ಅರ್ಹತ್ ದೇವಾಲಯದ ಪೂಜಾವಿಧಿಗಳಿಗೆಂದು ಕುಮಾರಪುರ ಗ್ರಾಮವನ್ನು ದಾನ ಕೊಡುವುದರ ಜೊತೆಗೆ ಪೆರ್ಬೊಳಲು ಗ್ರಾಮದ ಕೆರೆಯ ಕೆಳಗೆ ೧೨ ಖಂಡುಗ ಬೀಜವರಿ ಭೂಮಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಇಲ್ಲಿ ಉಕ್ತವಾಗಿರುವ ಮುದುಕೊಟ್ಟೂರು ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮುದುಕುತ್ತೂರು ಗ್ರಾಮ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಈ ಶಾಸನದಿಂದ ಅಲ್ಲಿ ದೊಡ್ಡ ಕೆರೆಯೊಂದಿದ್ದ ಅಂಶವೂ ವೇದ್ಯವಾಗುತ್ತದೆ. ಕೋಲಾರ ತಾಲೂಕಿನ ಅರಾಭಿಕೊತ್ತನೂರಿನಲ್ಲಿ ೧೯೮೭ರಲ್ಲಿ ಪತ್ತೆಯಾಗಿರುವ ಸುಮಾರು ೪೭೫–೫೦೦ ತಾಮ್ರ ಶಾಸನವನ್ನು ಆಧರಿಸಿ, ಒಂದನೆಯ ಕೃಷ್ಣವರ್ಮ (ಗಂಗರ ಕೈವಾರ ಶಾಖೆ)ನ ಮಗನಾದ ಸಿಂಹವರ್ಮನು, ತನ್ನ ಶ್ರೇಯೋಭಿವೃದ್ಧಿಗೆಂದು ಮಾತೃಶರ್ಮನಿಗೆ ಕುವಲಾಲ ವಿಷಯದಲ್ಲಿದ್ದ ಕುತ್ತೂರ ಕೆರೆ ಕೆಳಗಣ ಗದ್ದೆಬಯಲನ್ನು ಉಂಬಳಿ ನೀಡಿದ ಅಂಶವನ್ನು ದೇವರ ಕೊಂಡಾರೆಡ್ಡಿ ಬೆಳಕಿಗೆ ತಂದಿದ್ದಾರೆ.

**ಅವಿನೀತ (೪೬೬–೪೯೫)** : ಮುಮ್ಮಡಿ ಮಾಧವನ ನಿಧನಾನಂತರ ಗಂಗ ಸಿಂಹಾಸನನ್ನು ಸಣ್ಣ ವಯಸ್ಸಿನಲ್ಲೇ ಏರಿದ ಅವಿನೀತನು ಕದಂಬ ರಾಜಕುಮಾರಿಯ ಮಗನಾಗಿದ್ದು, ಇವನ ಅಧಿಕಾರಾವಧಿಯಲ್ಲಿ ಗಂಗ ರಾಜ್ಯವು ಪ್ರಗತಿಯನ್ನು ಸಾಧಿಸಿತು. ಜಿಲ್ಲೆಯಲ್ಲಿ ಲಭಿಸಿರುವ ದುರ್ವಿನೀತನ ಹೆಬ್ಬೆಟ್ಟ ತಾಮ್ರ ಶಾಸನವನ್ನು ಆಧರಿಸಿ, ಇವನು ಸಿಂಹಾಸನವನ್ನೇರಿದ (೪೬೬) ಕಾಲವನ್ನು ಗುರುತಿಸುವಲ್ಲಿ ವಿದ್ವಾಂಸರು ಯಶಸ್ವಿಯಾಗಿದ್ದಾರೆ. ಗಂಗರಸರ ಕಾಲಾನುಕ್ರಮಣಿಕೆಯನ್ನು ನಿರ್ಧರಿಸುವಲ್ಲಿ ಈ ಶಾಸನವು ನಿರ್ಣಾಯಕ ಪಾತ್ರ ವಹಿಸಿದೆ. ಇದೇ ಅರಸನಿಗೆ ಸೇರಿದ ನೆರೆಯ ದೊಡ್ಡಬಳ್ಳಾಪುರ ತಾಲೂಕಿನ ಮಲ್ಲೋಹಳ್ಳಿ ತಾಮ್ರ ಶಾಸನದಿಂದ ಪುನ್ನಾಟದ ರಾಜ ಸ್ಕಂಧವರ್ಮನ ಮಗಳನ್ನು ಇವನು ವಿವಾಹವಾಗಿದ್ದ ಅಂಶ ಗೊತ್ತಾಗುತ್ತಿದ್ದು, ಶಾಸನೋಕ್ತ ಪುನ್ನಾಟ ರಾಜ್ಯವು

ಕಬಿನಿ (ಕಪಿಲ) ನದಿಯ ಬಯಲು ಪ್ರದೇಶವಾಗಿದ್ದು, ಇಂದಿನ ಹೆಗ್ಗಡೆದೇವನಕೋಟೆ ತಾಲೂಕು ಪ್ರದೇಶವೆಂದು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಆದರೆ, ಇದು ಇಂದಿನ ಕೋಲಾರ–ತಮಿಳುನಾಡು ಗಡಿಪ್ರದೇಶವನ್ನು ಒಳಗೊಂಡಿದ್ದ ಪುದನಾಡು ಎಂಬ ಅಭಿಪ್ರಾಯವೂ ಇದೆ. ಇವನ ಕಾಲಕ್ಕೆ ಸೇರಿದ ಹೊಸಕೋಟೆ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ತಾಮ್ರಶಾಸನದಿಂದ ಪಲ್ಲವ ಸಿಂಹವಿಷ್ಣುವಿನ ತಾಯಿಯು ಗಂಗವಾಡಿ ಪ್ರಾಂತ್ಯದಲ್ಲಿ ಕಟ್ಟಿಸಿದ ಜೈನಬಸದಿಗೆ ದೊರೆ ಅವಿನೀತನು ದತ್ತಿ ಬಿಟ್ಟಿರುವ ಅಪರೂಪದ ಅಂಶ ಗೊತ್ತಾಗುತ್ತದೆ. ಕೊಂಗಣಾಧಿರಾಜನೆಂದೇ ಅವಿನೀತನನ್ನು ಕರೆದಿರುವ ಈ ಶಾಸನದಿಂದ ಪಲ್ಲವ ಹಾಗೂ ಗಂಗರ ನಡುವೆ ಇದ್ದ ಉತ್ತಮ ಬಾಂಧವ್ಯ ವ್ಯಕ್ತವಾಗುತ್ತಾದರೂ ಅದು ಯಾವ ಸ್ವರೂಪದ್ದು ಎಂಬುದರ ಬಗ್ಗೆ ನಿಖರ ಮಾಹಿತಿ ಲಭಿಸುವುದಿಲ್ಲ. ಆದರೆ ಆ ಬಸದಿಗೆಂದು ಕೋರಿಕುಂದ ಭೋಗ (ವಿಷಯ)ದಲ್ಲಿದ್ದ ಪುಲಿಯೂರು ಗ್ರಾಮದಲ್ಲಿ ಭೂದಾನ ಬಿಟ್ಟ ವಿಷಯವೂ ಈ ಶಾಸನದಲ್ಲಿ ದಾಖಲಾಗಿದೆ. ಈ ಶಾಸನದಿಂದ ಇಲ್ಲಿನ ಶಾಸನೋಕ್ತ ರಾಣಿಯು ಗಂಗವಾಡಿ ಪ್ರಾಂತಕ್ಕೆ ಸೇರಿದ ಕೋರಿಕುಂದ ವಿಷಯದಲ್ಲಿದ್ದ ಪುಲಿಯೂರು ಪರಿಸರದವಳಿರಬೇಕೆಂದು ವಿದ್ವಾಂಸರು ಈಗಾಗಲೇ ಊಹಿಸಿದ್ದಾರೆ. ಅಲ್ಲದೇ ಪಲ್ಲವ ಶಾಖಾಮನೆತನಕ್ಕೆ ಸೇರಿದ ಅರಸ ಇವನಾಗಿರಬೇಕೆಂದೂ ಅಭಿಪ್ರಾಯ ಪಡುತ್ತಾರೆ. ಇದೇ ಅರಸನ ಆಳ್ವಿಕೆಯ ಮೊದಲನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಮಾಲೂರು ತಾಲೂಕಿನ ನೊಣಮಂಗಲ ತಾಮ್ರಶಾಸನದಲ್ಲೂ ಈ ಆಡಳಿತ ವಿಭಾಗದ ಪ್ರಸ್ತಾಪವಿದ್ದು, ಜೈನಗುರು ವಿಜಯಕೀರ್ತಿಯ ಸಲಹೆಯಂತೆ ಪೆರೂರಿನ ಏವನಿ ಅಡಿಗಲ್ ಅರ್ಹತ್ ಬಸದಿಗೆ ವೆನ್ನಲ್ಕರಣಿ ಗ್ರಾಮದಲ್ಲಿ ಅರಸನು ಭೂದಾನ ನೀಡಿದ ಅಂಶ ದಾಖಲಾಗಿದೆ. ಧರ್ಮಸಹಿಷ್ಣುವಾಗಿದ್ದ ಅವಿನೀತನು ಎಲ್ಲಾ ಧರ್ಮಗಳಿಗೂ ಉದಾರ ದೇಣಿಗೆ ನೀಡಿದ್ದ ಅಂಶವನ್ನು ಅವನ ಅನೇಕ ಶಾಸನಗಳು ಪ್ರತಿಧ್ವನಿಸುತ್ತವೆ.

**ದುರ್ವಿನೀತ (೫೨೯–೫೭೯):** ಅವಿನೀತನ ಹಿರಿಯ ಮಗನಾದ ಇವನು ಪುನ್ನಾಟದ ಸ್ಕಂಧವರ್ಮನ ಮಗಳ ಉದರದಲ್ಲಿ ಜನಿಸಿದವನಾಗಿದ್ದು, ಅಧಿಕಾರ ಗದ್ದುಗೆ ಏರುವಲ್ಲಿ ಎದುರಾದ ಮಲಸೋದರನ ವಿರೋಧವನ್ನು ಸಮರ್ಥವಾಗಿ ನಿಗ್ರಹಿಸಿ ೫೨೯ರಲ್ಲಿ ಗಂಗ ಸಿಂಹಾಸನವನ್ನೇರಿದನು. ಈ ಘಟನೆಯ ಬಗ್ಗೆ ಇದೇ ಅರಸನ ಕಾಲಕ್ಕೆ ಸೇರಿದ ಕಡಗತ್ತೂರು ತಾಮ್ರ ಶಾಸನದಲ್ಲಿ ಸುಳಿವಿದ್ದು, ಬಂಡಾಯವೆದ್ದಿದ್ದ ಕಿರುಸೋದರನಿಗೆ ಪಲ್ಲವರ ಬೆಂಬಲವಿತ್ತೆಂಬ ಅಂಶವೂ ಆ ಶಾಸನದಿಂದ ಗೊತ್ತಾಗುತ್ತದೆ. ಗಂಗರ ಕಾಲಾನುಕ್ರಮಣಿಕೆಯನ್ನು ನಿಖರವಾಗಿ ರೂಪಿಸುವಲ್ಲಿ ದುರ್ವಿನೀತನ ಆಡಳಿತಾವಧಿಯು ಮಹತ್ವದ ಪಾತ್ರ ವಹಿಸುತ್ತಿದ್ದು, ಈ ನಿಟ್ಟಿನಲ್ಲಿ ಅವನ ಆಳ್ವಿಕೆಯ ೧೨ ವರ್ಷಕ್ಕೆ ಸೇರಿದ ನಲ್ಲಾಳ ಹಾಗೂ ೩೧ನೇ ವರ್ಷಕ್ಕೆ ಸೇರಿದ ಹೆಬ್ಬೆಟ್ಟ ತಾಮ್ರ ಶಾಸನಗಳು ಸಾಕಷ್ಟು ನೆರವು ನೀಡುತ್ತವೆ. ಇವನು ಅಧಿಕಾರಕ್ಕೆ ಬರುತ್ತಿದ್ದಂತೆ ತಾತ ಸ್ಕಂಧವರ್ಮನ ನಿಧನದಿಂದಾಗಿ ಅವನ ಅಧಿಕಾರ ವ್ಯಾಪ್ತಿಯಲ್ಲಿದ್ದ ಪುನ್ನಾಟ ರಾಜ್ಯವೂ ಇವನಿಗೆ ಸೇರಿತೆಂದು ಗುಮ್ಮರೆಡ್ಡಿಪುರ ತಾಮ್ರಶಾಸನ ದಾಖಲಿಸಿದೆ. ಕಂಚಿಯ ಪಲ್ಲವರು ಹಾಗೂ ಬನವಾಸಿಯ ಕದಂಬರು ಇವನೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರದ ಕಾರಣ, ಅವರಿಬ್ಬರ ವಿರೋಧವನ್ನು ತನ್ನ ಆಡಳಿತಾವಧಿಯ ಪೂರ್ವಾರ್ಧ ಭಾಗದಲ್ಲಿ ಇವನು ಎದುರಿಸಬೇಕಾಯಿತು. ಅವರಿಬ್ಬರನ್ನೂ ಸೋಲಿಸುವಲ್ಲಿ ಯಶಸ್ವಿಯಾದ ದುರ್ವಿನೀತನು ಅವರ ಕೆಲವು ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡ ಅಂಶವನ್ನು ನಂತರದಲ್ಲಿ ಜರುಗಿದ ಘಟನೆಗಳು ಪುಷ್ಟೀಕರಿಸುತ್ತವೆ. ಇದನ್ನು ಅವನ ನಲ್ಲಾಳ ತಾಮ್ರಶಾಸನ ವಿವರವಾಗಿ ವರ್ಣಿಸಿದೆ. ಅನೇಕ ಶಾಸನಗಳಲ್ಲಿ ಪಲ್ಲವರನ್ನು 'ಕಾಡುವೆಟ್ಟಿ'ಗಳೆಂದು ಕರೆಯಲಾಗಿದ್ದು, ಮಲಸೋದರನಿಗೆ ಅವರು ನೀಡಿದ ಬೆಂಬಲದಿಂದಾಗಿ ಪಲ್ಲವರ ವಿರುದ್ಧ ಅಸಮಾಧಾನಗೊಂಡಿದ್ದ ದುರ್ವಿನೀತನು ಅವರ ಮೇಲೆ ಸುದೀರ್ಘ ಕಾಲ ಕಾಳಗ ನಡೆಸಿ ಅಂತಿಮವಾಗಿ ಜಯ ಸಂಪಾದಿಸಿ, ಕೊಂಗುದೇಶವನ್ನು ವಶಪಡಿಸಿಕೊಂಡನು. ಇದೇ ಕಾರಣಕ್ಕಾಗಿ ಕದಂಬರ ಮೇಲೂ ಯುದ್ಧ ಸಾರಿದ ದುರ್ವಿನೀತನು ಕದಂಬ ಕೃಷ್ಣವರ್ಮನ ಮಗ ಅಜವರ್ಮ ಹಾಗೂ ಮೊಮ್ಮಗ ಭೋಗವರ್ಮರನ್ನು ಸೋಲಿಸಿದನೆಂದು, ದುರ್ವಿನೀತನ ನಲ್ಲಾಳ ತಾಮ್ರಶಾಸನ ದಾಖಲಿಸಿದೆ. ಈ ಅವಧಿಯಲ್ಲಿ ದುರ್ವಿನೀತನು ಅಂದೇರಿ. ಆಲತ್ತೂರು (ಕೊಯಮತ್ತೂರು ಜಿಲ್ಲೆ) ಪೊರಲೂರು (ಚೆಂಗಲಪೇಟೆ ಜಿ) ಹಾಗೂ ಪೆನ್ನಾಗರ/ಪೆನ್ನಗರಿ (ಸೇಲಂ ಜಿಲ್ಲೆ) ಮುಂತಾದೆಡೆಗಳಲ್ಲಿ ನಿರ್ಣಾಯಕ ಯುದ್ಧ ಕೈಗೊಳ್ಳಬೇಕಾಗಿ ಬಂತೆಂಬ ಅಂಶವನ್ನು ಅದೇ ಶಾಸನಗಳು ತಿಳಿಸುತ್ತವೆ.

ಬಾದಾಮಿ ಚಾಲುಕ್ಯ ಅರಸ ವಿಜಯಾದಿತ್ಯನಿಗೆ ತನ್ನ ಕುವರಿಯನ್ನು ವಿವಾಹ ಮಾಡಿದ್ದ ದುರ್ವಿನೀತನು, ಪಲ್ಲವರ ವಿರುದ್ಧದ ಹೋರಾಟದಲ್ಲಿ ಚಾಲುಕ್ಯರಿಗೆ ಬೆಂಬಲವಾಗಿ ನಿಂತನು. ಆದರೂ ವಿಜಯಾದಿತ್ಯನು ತ್ರಿಲೋಚನಾ ಪಲ್ಲವನ ಕೈಯಲ್ಲಿ

ಸೋತು ಹತನಾದಾಗ ಪಲ್ಲವರ ವಿರುದ್ಧ ಕೆಂಡಾಮಂಡಲಗೊಂಡ ದುರ್ವಿನೀತನು ತ್ರಿಲೋಚನ ಪಲ್ಲವನ ಮೇಲೇರಿ ಹೋಗಿ, ನಿಧನ ಹೊಂದಿದ್ದ ತನ್ನ ಅಳಿಯ ವಿಜಯಾದಿತ್ಯನಿಗಾದ ಅವಮಾನಕ್ಕೆ ಪ್ರತೀಕಾರವಾಗಿ ತ್ರಿಲೋಚನ ಪಲ್ಲವನನ್ನು ಸೋಲಿಸಿ, ತನ್ನ ಮೊಮ್ಮಗ, ಬಾಲಕ ಜಯಸಿಂಹವಲ್ಲಭ (ವಿಜಯಾದಿತ್ಯನ ಮರಣೋತ್ತರ ಪುತ್ರ)ನನ್ನು ಬಾದಾಮಿ ಚಾಲುಕ್ಯ ಸಿಂಹಾಸನದಲ್ಲಿ ಕೂರಿಸುವಲ್ಲಿ ಯಶಸ್ವಿಯಾದನು. ಇವನು ಮುಂದೆ ವಿಷ್ಣುವರ್ಧನ ಚಾಲುಕ್ಯನೆಂದೇ ಪ್ರಸಿದ್ಧನಾದನು. ಪಲ್ಲವರ ಮೇಲಿನ ಈ ಗೆಲುವಿನ ಪರಿಣಾಮವಾಗಿ ದುರ್ವಿನೀತನ ಪ್ರಭಾವ ದಕ್ಷಿಣದಲ್ಲಿ ತೊಂಡೈಮಂಡಲದವರೆಗೂ ವ್ಯಾಪಿಸಿತು. ಜೈನಯತಿ ಪೂಜ್ಯಪಾದರ ಅನುಯಾಯಿಯಾಗಿದ್ದರೂ ಸರ್ವಧರ್ಮ ಸಹಿಷ್ಣುವಾಗಿದ್ದ ದುರ್ವಿನೀತನು ವೈದಿಕ ಹಾಗೂ ಜೈನ ಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಿದ್ದನು. ದುರ್ವಿನೀತನು ಕೇವಲ ದಿಗ್ವಿಜಯಗಳಿಗಷ್ಟೇ ಸೀಮಿತನಾಗಿರದೆ ಸಾಹಿತ್ಯಾಭಿಮಾನಿಯು ಆಗಿದ್ದು, ಉದ್ಧಾಮ ಸಂಸ್ಕೃತ ಕವಿಯಾಗಿದ್ದ ಭಾರವಿಯು ಸ್ವಲ್ಪ ಕಾಲ ದುರ್ವಿನೀತನ ಆಸ್ಥಾನದಲ್ಲಿದ್ದನೆಂದು, ದಂಡಿಯ 'ಅವಂತಿ ಸುಂದರ ಕಥಾಸಾರ'ದಿಂದ ಗೊತ್ತಾಗುತ್ತದೆ. ಅಲ್ಲದೇ ಇವನು ಭಾರವಿಯ 'ಕಿರಾತಾರ್ಜುನೀಯ' ಕಾವ್ಯದ ೧೫ನೆಯ ಸರ್ಗಕ್ಕೆ ಟೀಕೆ ಬರೆದಿದ್ದು, ಪೈಶಾಚಿ ಭಾಷೆಯಲ್ಲಿದ್ದ ಗುಣಾಢ್ಯನ 'ಬೃಹತ್ಕಥಾ' ಗ್ರಂಥವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದು, ಪೂಜ್ಯಪಾದ ವಿರಚಿತ "ಶಬ್ದಾವತಾರ" ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿರುವಂತೆ ತೋರುತ್ತದೆ. ಇವನ ಈ ಎಲ್ಲಾ ಸಾಹಿತ್ಯ ಸಾಧನೆಯನ್ನು ಅವನ ಅನೇಕ ಶಾಸನಗಳು ದಾಖಲಿಸಿವೆ. ಕವಿರಾಜಮಾರ್ಗಕಾರ ಶ್ರೀವಿಜಯನು, ದುರ್ವಿನೀತನನ್ನು ಕನ್ನಡದ ಆದಿಕವಿಗಳಲ್ಲೊಬ್ಬನೆಂದೇ ದಾಖಲಿಸಿದ್ದಾನೆ. ಗುಮ್ಮರೆಡ್ಡಿಪುರ ತಾಮ್ರಶಾಸನವು ದುರ್ವಿನೀತನನ್ನು ಕೃಷ್ಣನೊಂದಿಗೆ ಹೋಲಿಸಿದ್ದು, ಹೆಬ್ಬೆಟ್ಟ ತಾಮ್ರಪಟವು ಅವನನ್ನು ವಿಷ್ಣುವಿನ ಅವತಾರವೆಂದೇ ಬಿಂಬಿಸಿದೆ. ಇವನ ಆಳ್ವಿಕೆಗೆ ಸೇರಿದ ಕಡಗತ್ತೂರು ತಾಮ್ರಶಾಸನವು ಅರಸನ ಆಳ್ವಿಕೆಯ ನಾಲ್ಕನೆಯ ವರ್ಷದಲ್ಲಿ ನೀಡಲ್ಪಟ್ಟಿದ್ದು ಮಧುಗಿರಿ ತಾಲೂಕಿನ ತಿಪ್ಪೂರು ಗ್ರಾಮವನ್ನು ಸ್ಕಂದಶರ್ಮನಿಗೆ ಧರ್ಮಕಾರ್ಯ ನಡೆಸಲು ದತ್ತಿಯಾಗಿ ಬಿಟ್ಟ ಅಂಶವನ್ನು ದಾಖಲಿಸಿದೆ. ಇದೇ ಅರಸನಿಂದ ನೀಡಲ್ಪಟ್ಟಿರುವ ಗುಮ್ಮರೆಡ್ಡಿಪುರ ತಾಮ್ರ ಶಾಸನವು, ಇಂದಿನ ಶ್ರೀನಿವಾಸಪುರ ತಾಲೂಕಿನ ಕೊಂಡುಂಜೆರುವ ಗ್ರಾಮವನ್ನು ಬ್ರಾಹ್ಮಣ ಪಂಡಿತರಾದ ಭವಶರ್ಮ ಹಾಗೂ ಅಗ್ನಿಶರ್ಮರಿಗೆ ಸರ್ವಮಾನ್ಯವಾಗಿ ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ.

**ಮುಷ್ಕರ (೫೩೫–೫೮೫):** ದುರ್ವಿನೀತನ ನಿಧನಾನಂತರ ಸಿಂಹಾಸನವನ್ನೇರಿದ ಅವನ ಮಗನಾದ ಮುಷ್ಕರನು ಸುಮಾರು ಐವತ್ತು ವರ್ಷ ಕಾಲ ರಾಜ್ಯಭಾರ ಮಾಡಿದುದರಿಂದ, ಅವನನ್ನು ಶಾಸನವೊಂದು 'ವೃದ್ಧರಾಜ'ನೆಂದು ಕರೆದಿದೆ. ಇವನ ಅಧಿಕಾರಾವಧಿಯಲ್ಲಿ ಯಾವುದೇ ಮಹತ್ವದ ರಾಜಕೀಯ ಘಟನೆಗಳು ಜರುಗಲಿಲ್ಲ. ಇವನಿಗೆ ಪೊಲವೀರನೆಂಬ ಸೋದನನೊಬ್ಬನಿದ್ದ ಅಂಶ ಅವನಿಂದಲೇ ನೀಡಲ್ಪಟ್ಟಿರುವ ತಗರೆ ತಾಮ್ರ ಶಾಸನದಿಂದ ಗೊತ್ತಾಗುತ್ತದೆ. ಮುಷ್ಕರನು ಸಿಂಧ (ಶಿವಮೊಗ್ಗ ಪ್ರದೇಶದ) ಮನೆತನದ ರಾಜಕುಮಾರಿಯೋರ್ವಳನ್ನು ವರಿಸಿದ್ದು, ಅವಳ ಉದರದಲ್ಲಿ ಜನಿಸಿದವನೇ ಶ್ರೀವಿಕ್ರಮನಾಗಿದ್ದು, ಇವನು ಸುಮಾರು ೫೮೫ರಲ್ಲಿ ಗಂಗ ಸಿಂಹಾಸನವನ್ನೇರಿದನು.

**ಶ್ರೀವಿಕ್ರಮ (೫೮೫–೬೩೫):** ಸುಮಾರು ಐವತ್ತು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಇವನ ಆಡಳಿತಾವಧಿಯಲ್ಲಿ ಗಂಗ ರಾಜ್ಯವು ಶಾಂತಿಯಿಂದ ಕೂಡಿದ್ದು, ಇವನು ತನ್ನ ಹಿರಿಯ ಮಗ ಭೂವಿಕ್ರಮನನ್ನು ನೊಳಂಬವಾಡಿಗೆ ಪ್ರಾಂತಾಧಿಕಾರಿಯಾಗಿ ೬೦೮ರಲ್ಲಿ ನೇಮಿಸಿದನೆಂದು ಎಸ್.ಶ್ರೀಕಂಠಶಾಸ್ತ್ರಿ ಅಭಿಪ್ರಾಯ ಪಡುತ್ತಾರೆ. ಇವನು ಕರಿಕಾಲಚೋಳನ ಕುಟುಂಬಕ್ಕೆ ಸೇರಿದ ರಾಜಕುಮಾರಿಯನ್ನು ವಿವಾಹವಾಗಿದ್ದು, **ಭೂವಿಕ್ರಮ** ಅವಳ ಗರ್ಭಸಂಜಾತನಾಗಿದ್ದು, ತಂದೆ ಶ್ರೀವಿಕ್ರಮನ ಮರಣಾನಂತರ ೬೩೫ರಲ್ಲಿ ಗಂಗ ಸಿಂಹಾಸನವನ್ನೇರಿ ೬೭೯ರವರೆಗೆ ಅಧಿಕಾರದಲ್ಲಿ ಮುಂದುವರಿದನು. ಶ್ರೀವಿಕ್ರಮನಿಗೆ ಒಂದನೆಯ ಶಿವಮಾರ ಎಂಬ ಇನ್ನೊಬ್ಬ ಮಗನಿದ್ದು, ಅವನು ಅಣ್ಣ ಭೂವಿಕ್ರಮನ ನಂತರ ಗಂಗ ಸಿಂಹಾಸನವನ್ನು ಏರಿದನು. ಭೂವಿಕ್ರಮನು ಬಾದಾಮಿ ಚಾಲುಕ್ಯರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದು, ಅಧಿಕಾರ ವೃದ್ಧಿಸಿಕೊಳ್ಳಲು ಅವರಿಗೆ ಇವನು ಸಹಕಾರ ನೀಡಿದನು. ಅಲ್ಲದೇ ಪಲ್ಲವರ ಮುನ್ನಡೆಯನ್ನೂ ನಿಯಂತ್ರಿಸಿದನು. ಬಲಿಷ್ಟ ಪಲ್ಲವರ ಧಾಳಿಗೆ ಹೆದರಿದ ಇವನು ಬಾದಾಮಿ ಚಾಲುಕ್ಯರ ಸಖ್ಯ ಬೆಳೆಸಿದನು. ಇಮ್ಮಡಿ ಪುಲಿಕೇಶೀಯು ಪಲ್ಲವರ ಮೇಲೆ ಕೈಗೊಂಡ ಆರಂಭದ ಧಾಳಿಗಳಲ್ಲಿ ಭೂವಿಕ್ರಮನು ಚಾಲುಕ್ಯರಿಗೆ ಸಾಕಷ್ಟು ನೆರವು ನೀಡಿದನು. ಒಂದನೆಯ ಶಿವಮಾರನ ಹಲ್ಲೇಗೆರೆ (೭೧೩) ತಾಮ್ರಶಾಸನ, ಭೂವಿಕ್ರಮನು 'ವಿಲಂದೆ' ಯುದ್ಧದಲ್ಲಿ ಪಲ್ಲವೇಂದ್ರ ನರಪತಿಯನ್ನು ಸೋಲಿಸಿದ ಅಂಶವನ್ನು ದಾಖಲಿಸಿದೆ. ಆದರೆ ಸು.೭೪೨ರಲ್ಲಿ ಜರುಗಿದ ಕಾಳಗದಲ್ಲಿ

ಇಮ್ಮಡಿ ಪುಲಿಕೇಶಿಯು ನರಸಿಂಹವರ್ಮನ ಕೈಯಲ್ಲಿ ಸೋತು ಚಾಲುಕ್ಯರ ರಾಜಧಾನಿ ವಾತಾಪಿಯು (ಬಾದಾಮಿಯು) ಪಲ್ಲವರ ವಶವಾಗಿ "ವಾತಾಪಿಗೊಂಡ" ಎಂಬ ಬಿರುದನ್ನು ಪಲ್ಲವ ನರಸಿಂಹವರ್ಮನು ಧರಿಸಿದನು. ಇಮ್ಮಡಿ ಪುಲಿಕೇಶಿಯ ಸೋಲು, ಸಾವುಗಳಿಂದ ಕ್ಷುದ್ರನಾದ ಭೂವಿಕ್ರಮನು ಪಲ್ಲವರ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾದನು. ಪಲ್ಲವ–ಚಾಲುಕ್ಯರ ನಡುವಣ ಈ ಘರ್ಷಣೆಯಿಂದಾಗಿ ಗಂಗವಾಡಿ ಪ್ರದೇಶವೂ ಆರ್ಥಿಕವಾಗಿ ಸಾಕಷ್ಟು ಹಾನಿಗೆ ಒಳಗಾಗಿದ್ದುದು ಇದಕ್ಕೆ ಕಾರಣವಾಗಿರಬೇಕು. ಇಮ್ಮಡಿ ಪುಲಿಕೇಶೀಯ ಮಗನಾದ ಒಂದನೆಯ ವಿಕ್ರಮಾದಿತ್ಯನ ರಾಣಿಯಾದ ಗಂಗಮಹಾದೇವಿಯು ಗಂಗ ವಂಶದ ರಾಜಕುಮಾರಿಯಾಗಿದುದ್ದರಿಂದ ಗಂಗ–ಚಾಲುಕ್ಯ ಬಾಂಧವ್ಯವು ಗಾಢವಾಗಿದ್ದು, ಪಲ್ಲವರ ವಿರುದ್ಧ ಚಾಲುಕ್ಯರಿಗೆ ಬೆಂಬಲ ನೀಡಲು ಅದು ಇನ್ನೊಂದು ಮಹತ್ವದ ಕಾರಣವಾಗಿತ್ತು. ತತ್ಪರಿಣಾಮವಾಗಿ ೬೫೫ರ ವೇಳೆಗೆ ಚಾಲುಕ್ಯ ಒಂದನೆಯ ವಿಕ್ರಮಾದಿತ್ಯನು ಪಲ್ಲವರನ್ನು ರಾಜಧಾನಿ ಬಾದಾಮಿಯಿಂದ ಹೊರದಬ್ಬುವುದರೊಂದಿಗೆ ಚಾಲುಕ್ಯ ಸಾಮ್ರಾಜ್ಯದ ಪುನರ್‌ಸ್ಥಾಪನೆಗೆ ಕಾರಣ ಪುರುಷನಾದನು. ಅಲ್ಲದೆ ಭೂವಿಕ್ರಮನು, ಸೋತ ಪಲ್ಲವರಿಂದ ಉಗ್ರೋದಯ ಎಂಬ ಅಪೂರ್ವ ರತ್ನಾಹಾರವನ್ನು ಕಸಿದುಕೊಂಡಿದ್ದ ಅಂಶವನ್ನು ಬೆಡಿರೂರು ತಾಮ್ರಪಟ ದಾಖಲಿಸುತ್ತದೆ. ಇವನು ಚನ್ನಪಟ್ಟಣ ತಾಲೂಕಿನಲ್ಲಿರುವ ಮನ್ನುಂದ (ಇಂದಿನ ಮಂಕುಂದ) ವನ್ನು ತನ್ನ ವಸತಿನೆಲೆಯನ್ನಾಗಿ ಮಾಡಿಕೊಂಡಿದ್ದನೆಂದು ಹೇಳಲಾಗುತ್ತದೆ. ಆದರೆ ಇದನ್ನು ಪುಷ್ಠೀಕರಿಸಲು ಪೂರಕ ದಾಖಲೆಗಳ ಅಗತ್ಯವಿದೆ. ಇವನ ಮರಣಾನಂತರ ಅವನ ಕಿರಿಯ ಸೋದರ, ಒಂದನೆಯ ಶಿವಮಾರನು ೬೭೯ರಲ್ಲಿ ಸಿಂಹಾಸನವನ್ನೇರಿದನು.

**ಒಂದನೆಯ ಶಿವಮಾರ (೬೭೯–೭೨೫):** ಮುಮ್ಮಡಿ ಕೊಂಗಣಿವರ್ಮ, ಆವಣಿ ಮಹೇಂದ್ರ ಮುಂತಾದ ಬಿರುದುಗಳನ್ನು ಧರಿಸಿದ್ದ ಇವನು ೬೫೫ರಲ್ಲಿ ಜನಿಸಿದನಾದರೂ ಅಧಿಕಾರ ಗದ್ದುಗೆ ಏರಿದ್ದು ತನ್ನ ೫೪ನೆಯ ವಯಸ್ಸಿನಲ್ಲಿ. ಚಾಲುಕ್ಯರೊಂದಿಗೆ ಮಧುರ ಬಾಂಧವ್ಯವನ್ನು ಹೊಂದಿದ್ದ ಇವನು ಪಲ್ಲವರ ಕಡುವಿರೋಧಿಯಾಗಿದ್ದನು. ಇವನ ಆಳ್ವಿಕೆಯಲ್ಲಿ ಪಲ್ಲವರು ಗಂಗವಾಡಿಯ ಮೇಲೆ ಧಾಳಿ ಮಾಡಿದರಾದರೂ ಸೋತು ತಮ್ಮ ಇಬ್ಬರು ರಾಜಪುತ್ರರನ್ನು ಯುದ್ಧ ಖೈದಿಗಳಾಗಿ ಶಿವಮಾರನಿಗೆ ಒಪ್ಪಿಸಬೇಕಾಯಿತು. ಆದರೆ ಇದೇ ಸಂದರ್ಭದಲ್ಲಿ ಚಾಲುಕ್ಯ ವಿನಯಾದಿತ್ಯನು ಗಂಗವಾಡಿಯ ಮೇಲೆ ಆಕ್ರಮಣ ಮಾಡಿ ಗಂಗರನ್ನು ಸೋಲಿಸಿದನು. ಈ ನಡುವೆ ಶಿವಮಾರನು ನೊಳಂಬರ ದಂಗೆಯನ್ನು ನಿಗ್ರಹಿಸಬೇಕಾಯಿತು. ಗಂಗರಾಜ್ಯದ ಉತ್ತರ–ದಕ್ಷಿಣಗಳಲ್ಲಿದ್ದ ಬಾದಾಮಿ ಚಾಳುಕ್ಯ ಹಾಗೂ ಕಂಚಿ ಪಲ್ಲವ ಅರಸರು ಪರಸ್ಪರ ಕದನದಲ್ಲಿ ತೊಡಗಿದ್ದು ಅವರ ಸೈನಿಕ ಕಾರ್ಯಾಚರಣೆಯಿಂದಾಗಿ ಈ ಅವಧಿಯಲ್ಲಿ ಗಂಗವಾಡಿ ಪ್ರಾಂತ್ಯವು ಅಶಾಂತಿಯನ್ನು ವೀಕ್ಷಿಸಬೇಕಾಯಿತು. ಇವನು ತನ್ನ ಮಗ ಎರೆಗಂಗ ಹಾಗೂ ಮೊಮ್ಮಗ ಶ್ರೀಪುರುಷರನ್ನು ಪ್ರಾಂತಾಧಿಕಾರಿಗಳನ್ನಾಗಿ ನೇಮಿಸುವ ಮೂಲಕ ಅವರಿಗೂ ಆಡಳಿತಾನುಭವವನ್ನು ಒದಗಿಸಲು ಮುಂದಾದನು. ಶ್ರೀಪುರುಷನು ಕೆರೆಹುಂದ–೩೦೦, ಎಳೆನಗರನಾಡು–೭೦, ಆವನಿನಾಡು–೩೦೦ ಹಾಗೂ ಪೆನುಗೊಂಡ–೧೨ ನಾಡುಗಳನ್ನೊಳಗೊಂಡ ಗಂಗವಾಡಿಯ ಪೂರ್ವ ಪ್ರಾಂತದ ರಾಜ್ಯಪಾಲನಾಗಿದ್ದುದರಿಂದ ಬಾಣರೊಂದಿಗೆ ಕದನಕ್ಕಿಳಿಯಬೇಕಾಯಿತು. ಆವರೆಗೆ ಗಂಗರಿಗೆ ವಿಧೇಯರಾಗಿದ್ದ, ಪಾಲಾರ ನದಿ ಬಯಲಿನ ಬಾಣ ರಾಜ್ಯದ ಮಹಾವಲಿ ಬಾಣರಸನು ಗಂಗವಾಡಿ ಪ್ರದೇಶವನ್ನು ವಶಪಡಿಸಿಕೊಳ್ಳಲೆಂದು ಆಕ್ರಮಣ ಮಾಡಿದನು. ಇದರಿಂದ ಕುಪಿತನಾದ ಶ್ರೀಪುರುಷನು ಬಾಣರ ಮೇಲೇರಿ ಹೋಗಿ ಕೊಯಮತ್ತೂರು, ತೊಂಡಕಲ್, ಮಾನಾಯತೂರು ಯುದ್ಧಗಳಲ್ಲಿ ಬಾಣರ ಮೇಲೆ ನಿರ್ಣಾಯಕ ಗೆಲುವು ಪಡೆದನು. ಈ ಯುದ್ಧಗಳಲ್ಲಿ ಪರಮಗೂಳ ಪೃಥ್ವಿನಿರ್ಗುಂದರಾಜನ ತಂದೆಯಾದ "ದುಂಡು" ಎಂಬ ಗಂಗಸಾಮಂತನು ಮಹತ್ವದ ಪಾತ್ರವಹಿಸುವ ಮೂಲಕ "ಬಾಣಕುಲ ಕಳಾಕಲಹ' ಎಂಬ ಹೆಗ್ಗಳಿಕೆಗೆ ಪಾತ್ರನಾದನು. ಬಾಣರು ಗಂಗರಿಗೆ ವಿಧೇಯರಾಗಿರಬೇಕೆಂಬ ಷರತ್ತಿನೊಂದಿಗೆ, ಬಾಣವಿಜಯಾದಿತ್ಯನ ಮಗನಾದ ಜಗದೇಕಮಲ್ಲನನ್ನು ಮತ್ತೆ ಅಧಿಕಾರಕ್ಕೇರಿಸಲಾಯಿನು. ಈ ಯುದ್ಧವು ಪಲ್ಲವ, ರಾಷ್ಟ್ರಕೂಟ ಹಾಗೂ ಪಾಂಡ್ಯರ ವಿರುದ್ಧದ ಶ್ರೀಪುರುಷನ ಮುಂದಿನ ಯುದ್ಧಗಳಿಗೆ ಉತ್ತಮ ಅನುಭವವಾಗಿ ಪರಿಣಮಿಸಿತು. ಆದರೆ ಶಿವಮಾರನ ಕಣ್ಮುಂದೆಯೇ ಅವನ ಮಗ ಎರೆಗಂಗನು ಮರಣಿಸಿದ್ದರಿಂದ, ಅನಿವಾರ್ಯವಾಗಿ ಮೊಮ್ಮಗ ಶ್ರೀಪುರುಷನು ಗಂಗ ಸಿಂಹಾಸನವನ್ನು ೭೨೫ರಲ್ಲಿ ಅಲಂಕರಿಸಬೇಕಾಯಿತು.

**ಶ್ರೀಪುರುಷ(೭೨೫–೭೮೮):** ಗಂಗರಸರಲ್ಲಿ ಅತ್ಯಂತ ಬಲಿಷ್ಠನೂ, ಸಮರ್ಥನೂ, ಚತುರನೂ ಆಗಿದ್ದ ಶ್ರೀಪುರುಷನ ಆಡಳಿತಾವಧಿಯು ಮಹತ್ವಪೂರ್ಣದ್ದಾಗಿದ್ದು, ಅದನ್ನು ಇವನ ಆಳ್ವಿಕೆಯಲ್ಲಿ ನೀಡಲ್ಪಟ್ಟಿರುವ ಹಲವಾರು ತಾಮ್ರಶಾಸನಗಳು

ಪುಷ್ಟೀಕರಿಸುತ್ತವೆ. ಮುತ್ತರಸ, ಪೃಥ್ವಿಕೊಂಗಣಿ ಮುತ್ತರಸ, ಪೆರ್ಮಾನಡಿ, ಶ್ರೀವಲ್ಲಭ, ಕೊಂಗಣಿರಾಜಾಧಿರಾಜ, ಪರಮೇಶ್ವರ ಮುಂತಾದ ಬಿರುದುಗಳನ್ನು ಧರಿಸಿದ್ದ ಇವನ ಸುಧೀರ್ಘ ಆಡಳಿತಾವಧಿಯು ಬಾದಾಮಿ ಚಾಲುಕ್ಯರ ಪತನ, ಬಾಣರ ಹಿನ್ನಡೆ, ಪಲ್ಲವರ ತೀವ್ರ ಸ್ಪರ್ಧೆ, ರಾಷ್ಟ್ರಕೂಟರ ಆಗಮನಗಳಂತಹ ಮಹತ್ವದ ರಾಜಕೀಯ ಬೆಳವಣಿಗೆಗಳನ್ನು ವೀಕ್ಷಿಸಿತು. ಇಂತಹ ರಾಜಕೀಯ ಅನಿಶ್ಚಯತೆಯ ನಡುವೆ ಗಂಗ ಸಾಮ್ರಾಜ್ಯವು ಶ್ರೀಪುರುಷನ ಪ್ರಭುತ್ವದಡಿ ಘನತೆಯನ್ನು ಮೆರೆಯಿತು. ಈ ವೇಳೆಗೆ ಬಾದಾಮಿ ಚಾಲುಕ್ಯರ ನೆಚ್ಚಿನ ಮಿತ್ರರಾಗಿದ್ದ ಗಂಗರು, ಸಹಜವಾಗಿ ಚಾಲುಕ್ಯರ ಶತ್ರುಗಳಾದ ಪಲ್ಲವರ ವಿರುದ್ಧ ಹೋರಾಡಬೇಕಾಯಿತು. ಈ ಅವಧಿಯಲ್ಲಿದ್ದ ಪಲ್ಲವರ ರಾಜ ನಂದಿವರ್ಮನು, ತನ್ನ ಸಾಮ್ರಾಜ್ಯದ ಗಡಿಗೆ ಹತ್ತಿಕೊಂಡಂತಿದ್ದ ಗಂಗರ ಗಂಗವಾಡಿ ಹಾಗೂ ಕೊಂಗುದೇಶ; ಹಾಗೂ ವಾಯವ್ಯಕ್ಕಾದಂತೆ ಇದ್ದ, ಚಾಲುಕ್ಯರ ವೆಂಗಿ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಗಂಗ–ಚಾಲುಕ್ಯ ಸಾಮ್ರಾಜ್ಯಗಳ ಮೇಲೆ ಆಕ್ರಮಣ ಮಾಡಲು ಕಾತರನಾಗಿದ್ದನು. ಪಲ್ಲವರ ರಾಜ್ಯ ವಿಸ್ತರಣೆಯನ್ನು ಮುಂಜಾಗ್ರತಾ ಕ್ರಮವಾಗಿ ನಿಯಂತ್ರಿಸುವುದು ಚಾಲುಕ್ಯ ಗಂಗರಿಬ್ಬರ ಹಿತದೃಷ್ಟಿಯಿಂದ ಅತ್ಯಗತ್ಯವಾಗಿತ್ತು. ಈ ನಡುವೆ ಪಲ್ಲವ ನಂದಿವರ್ಮನು ಬಾಣರ ನೆರವಿನೊಂದಿಗೆ ಗಂಗರ ಮೇಲೇರಿ ಹೋಗಿ, ಅವರನ್ನು ಸೋಲಿಸಿ, ತಮ್ಮ ಪೂರ್ವಿಕರಿಗೆ ಸೇರಿದ್ದ ಉಗ್ರೋದಯ ಎಂಬ ರತ್ನಾಹಾರವನ್ನು ಅವರಿಂದ ಕಸಿದುಕೊಂಡನು. ಆದರೆ ಇದರಿಂದ ವಿಚಲಿತನಾಗದ ಶ್ರೀಪುರುಷನು ಪಲ್ಲವರನ್ನು ಹಿಮ್ಮೆಟ್ಟಿಸುವುದರ ಜೊತೆಗೆ ವಿಳಂದೆಯಲ್ಲಿ ಜರುಗಿದ ಘೋರಯುದ್ಧದಲ್ಲಿ ಪಲ್ಲವರನ್ನು ಸೋಲಿಸಿ, ಅವರ ಸಾರ್ವಭೌಮ ಛತ್ರಿಯನ್ನು ವಶಪಡಿಸಿಕೊಂಡು, ನಂದಿವರ್ಮನಿಗಿದ್ದ 'ಪೆರ್ಮಾನಡಿ' ಬಿರುದನ್ನೂ ತನ್ನದಾಗಿಸಿಕೊಂಡನು. ಈ ಯುದ್ಧದಲ್ಲಿ ಕಾಡುವೆಟ್ಟಿ ಪಲ್ಲವ ರಾಜನು ಶ್ರೀಪುರುಷನಿಂದ ವಧಿಸಲ್ಪಟ್ಟ ಅಂಶವನ್ನು ೧೦೭೭ರ ಶಾಸನವೊಂದು ದಾಖಲಿಸಿರುವುದಾಗಿ ಡಾ.ಷೇಕ್ಆಲಿ ಅಭಿಪ್ರಾಯಪಡುತ್ತಾರೆ. ಈ ಯುದ್ಧದಲ್ಲಿ ಶ್ರೀಪುರುಷನಿಗೆ ಅವನ ಮಗನಾದ ಸಿಯಗಲ್ಲನು ನೆರವು ನೀಡಿದನಾದರೂ ಅಂತಿಮವಾಗಿ ಪಲ್ಲವರಿಗೆ ಗೆಲುವಾಯಿತೆಂದು ಅಭಿಪ್ರಾಯಪಡುತ್ತಾರೆ. ಇವನು ಪಾಂಡ್ಯರ ಮೇಲೂ ಗೆಲುವು ಸಾಧಿಸಿದನೆಂದು ಹೇಳಲಾಗುತ್ತಾದರೂ ಅದಕ್ಕೆ ಪೂರಕ ಶಾಸನಾಧಾರಗಳಿಲ್ಲ.

ಈ ನಡುವೆ ವಿಜಯಾದಿತ್ಯನ (೬೯೬–೭೩೩) ಅಧಿಕಾರದಡಿ ಶಾಂತಿ ಸಮೃದ್ಧಿಗಳ ಸವಿಯನ್ನುಂಡಿದ್ದ ಬಾದಾಮಿ ಚಾಲುಕ್ಯ ಸಾಮ್ರಾಜ್ಯದ ಸಿಂಹಾಸನವನ್ನೇರಿದ ಇಮ್ಮಡಿ ವಿಕ್ರಮಾದಿತ್ಯ (೭೩೩–೭೪೫)ನು ಪಲ್ಲವರ ಹಿರಿಮೆಯನ್ನು ನಿಯಂತ್ರಿಸಲು ಮುಂದಾದನು. ತತ್ಪರಿಣಾಮವಾಗಿ ಮೂರು ಬಾರಿ ಪಲ್ಲವರ ಮೇಲೇರಿ ಹೋಗಿ ನಂದಿವರ್ಮನ ಮೇಲೆ ಗೆಲುವು ಪಡೆದನು. ಅದರಲ್ಲೂ ತನ್ನ ಮೂರನೆಯ ಧಾಳಿಯಲ್ಲಿ, ಪಲ್ಲವ ರಾಜಧಾನಿ ಕಂಚಿಗೆ ಮುತ್ತಿಗೆ ಹಾಕಿ, ವಶಪಡಿಸಿಕೊಂಡು, ಅಲ್ಲಿಯ ರಾಜಸಿಂಹೇಶ್ವರ (ಇಂದಿನ ಕೈಲಾಸೇಶ್ವರ) ದೇವಾಲಯಕ್ಕೆ ಭೇಟಿ ನೀಡಿ, ದೇವಾಲಯದ ಭಂಡಾರವನ್ನು ಸಮೀಕ್ಷಿಸಿದನಾದರೂ, ಸ್ವಾಧೀನಪಡಿಸಿಕೊಳ್ಳದೇ, ಅವೆಲ್ಲವನ್ನೂ ಅದೇ ದೇವರಿಗೆ ಪುನರ್ದಾನ ಮಾಡುವ ಮೂಲಕ ಔದಾರ್ಯ ಮೆರೆದನು. ಈ ಗೆಲುವಿನ ನೆನಪಾಗಿ 'ಕಂಚಿಗೊಂಡ'ಎಂಬ ಬಿರುದನ್ನು ಧರಿಸಿದ ಇವನು ತನ್ನ ಗೆಲುವಿನ ನೆನಪಾಗಿ ಕಂಚಿಯ ರಾಜಸಿಂಹೇಶ್ವರ ದೇವಾಲಯದ ಕಂಬವೊಂದರ ಮೇಲೆ ತನ್ನ ದಿಗ್ವಿಜಯವನ್ನು ಸಾರುವ ಕನ್ನಡ ಶಾಸನವನ್ನು ಹಾಕಿಸಿರುವುದು ಉಲ್ಲೇಖಾರ್ಹವಾಗಿದೆ. ಆದರೆ ಇಮ್ಮಡಿ ಕೀರ್ತಿವರ್ಮ (೭೪೫–೭೫೭)ನ ಆಡಳಿತಾವಧಿಯಲ್ಲಿ ಪಲ್ಲವರಸನು ತನ್ನೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು, ಚಾಲುಕ್ಯರ ಮೇಲೆ ಆಕ್ರಮಣ ಮಾಡಿದನು. ಆಗ ನಡೆದ ಘನಘೋರ ಯುದ್ಧದಲ್ಲಿ ಶ್ರೀಪುರುಷನು ಚಾಲುಕ್ಯರ ಪರವಾಗಿ ಸೆಣಸಿದನಾದರೂ, ಅಂತಿಮವಾಗಿ ಪಲ್ಲವರು ಜಯಶಾಲಿಗಳಾಗಿ ಹೊರಹೊಮ್ಮುವುದರೊಂದಿಗೆ ಚಾಲುಕ್ಯ ಸಾಮ್ರಾಜ್ಯವು ಪತನಗೊಂಡಿತು. ಇದರಿಂದುಂಟಾದ ರಾಜಕೀಯ ಅಸ್ಥಿರತೆಯ ಲಾಭ ಪಡೆದು ತಲೆ ಎತ್ತಿದ ಚಾಲುಕ್ಯ ಸಾಮಂತ ದಂತಿದುರ್ಗನ ಮುಂದಾಳತ್ವದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು (೭೫೭) ಜನ್ಮ ತಾಳಿತು. ಆದರೆ ಚಾಲುಕ್ಯರ ನಿಷ್ಠಾವಂತ ಮಿತ್ರರಾಗಿದ್ದ ಗಂಗರಿಗೆ ಈ ಬೆಳವಣಿಗೆಯನ್ನು ಅರಗಿಸಿಕೊಳ್ಳಲಾಗಲಿಲ್ಲ. ಶ್ರೀಪುರುಷನು ರಾಷ್ಟ್ರಕೂಟರನ್ನು ವಿರೋಧಿಸಿದನು. ಆದರೆ ೭೫೮ರಲ್ಲಿ ರಾಷ್ಟ್ರಕೂಟ ಸಿಂಹಾಸನವನ್ನೇರಿದ ಒಂದನೆಯ ಕೃಷ್ಣನು ಗಂಗ ರಾಜ್ಯದ ಮೇಲೆ ಯುದ್ಧ ಘೋಷಿಸಿ ೭೬೮ರಲ್ಲಿ ಗಂಗವಾಡಿಯ ಮೇಲೆ ಆಕ್ರಮಣ ಮಾಡಿದನು. ಈ ಸಂದರ್ಭದಲ್ಲಿ ರಾಜಧಾನಿಯನ್ನು ತಲಕಾಡಿನಿಂದ ಮಾನ್ಯಪುರ (ಇಂದಿನ ಮಣ್ಣೆ ನೆಲಮಂಗಲ ತಾ.)ಕ್ಕೆ ಶ್ರೀಪುರುಷನು ವರ್ಗಾಯಿಸಿದನಾದರೂ, ರಾಷ್ಟ್ರಕೂಟರ ಉಗ್ರ ಧಾಳಿಯನ್ನು ಎದುರಿಸಲಾಗದೆ ಅಂತಿಮವಾಗಿ ರಾಷ್ಟ್ರಕೂಟರಿಗೆ ತಲೆಬಾಗಬೇಕಾಯಿತು. ರಾಷ್ಟ್ರಕೂಟ ಕೃಷ್ಣನ ತೆಲಗಾಂವ್ ತಾಮ್ರಶಾಸನದಿಂದ ಈ ಅಂಶವು ಗೊತ್ತಾಗುತ್ತದೆಯಾದರೂ ಗಂಗ ಶಾಸನಗಳಿಂದ ರಾಷ್ಟ್ರಕೂಟರೊಂದಿಗೆ ಶ್ರೀಪುರುಷ ಮತ್ತವನ ಮಗ ಸಿಯಗಲ್ಲರು ನಿರಂತರವಾಗಿ ಹೋರಾಟದಲ್ಲಿ ತೊಡಗಿದ್ದ ಅಂಶ ಗೊತ್ತಾಗುತ್ತದೆ. ಅಲ್ಲದೆ

ಪಿಂಚನೂರು, ಕಾಗೆಮಗೆಯೂರು ಹಾಗೂ ಬಾಗೇಯೂರುಗಳಲ್ಲಿ ಪ್ರಮುಖ ಯುದ್ಧಗಳು ಜರುಗಿದ ಅಂಶವೂ ವೇದ್ಯವಾಗುತ್ತದೆ. ಒಂದನೆಯ ಕೃಷ್ಣನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಗೋವಿಂದನು (೭೭೮) ಐಷಾರಾಮಿನ ಬದುಕಿಗೆ ಹೆಸರಾಗಿದ್ದ ಕಾರಣ ಗಂಗವಾಡಿ ಮೇಲಿನ ರಾಷ್ಟ್ರಕೂಟ ಒತ್ತಡದ ಪ್ರಮಾಣ ಕಡಿಮೆಯಾಯಿತು. ಇಮ್ಮಡಿ ಗೋವಿಂದನ ಬೇಜವಾಬ್ದಾರಿಯುತ ಆಡಳಿತದಿಂದ ಬೇಸತ್ತಿದ್ದ ಅವನ ಸೋದರ ಧ್ರುವನು, ಅಣ್ಣನನ್ನು ಕೊಂದು ತಾನೇ ಸಿಂಹಾಸನವನ್ನೇರಿದನು. ಈ ಅಂತಃಕಲಹದ ಲಾಭ ಪಡೆದು ತಾನು ಕಳೆದುಕೊಂಡಿದ್ದ ಪ್ರದೇಶಗಳನ್ನು ಪುನರ್‌ವಶಪಡಿಸಿಕೊಳ್ಳಲು ಪ್ರಯತ್ನಿಸಿದ ಶ್ರೀಪುರುಷನು, ಧ್ರುವನ ವಿರುದ್ಧ ಇಮ್ಮಡಿ ಗೋವಿಂದನಿಗೆ ಬೆಂಬಲಿಸಿದನು. ಆದರೆ ಮೇಲುಗೈ ಸಾಧಿಸಿದ ಧ್ರುವ ಅಧಿಕಾರಕ್ಕೆ ಬರುತ್ತಿದ್ದಂತೆ ತನ್ನ ವಿರುದ್ಧ ಇಮ್ಮಡಿ ಗೋವಿಂದನಿಗೆ ಬೆಂಬಲ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾದಾಗ ಶ್ರೀಪುರುಷನೂ ಅದಕ್ಕೆ ಬಲಿಯಾಗಬೇಕಾಯಿತು. ಇವರಿಬ್ಬರ ನಡುವೆ ಜರುಗಿದ ಅನೇಕ ಯುದ್ಧಗಳಲ್ಲಿ ಶ್ರೀಪುರುಷನಿಗೆ ಸೋಲುಂಟಾಯಿತು. ಆದರೂ ಧೃತಿಗೆಡದ ಶ್ರೀಪುರುಷನು, ತನ್ನ ಕೊನೆಯ ದಿನಗಳನ್ನು ಈ ಕಷ್ಟನಷ್ಟಗಳೊಂದಿಗೆ ಕಳೆಯಬೇಕಾಯಿತು.

ಆಡಳಿತದಲ್ಲಿ ಉತ್ತಮ ನೈಪುಣ್ಯತೆಯನ್ನು ಹೊಂದಿದ್ದ ಇವನು ಬಾದಾಮಿ ಚಾಲುಕ್ಯ ರಾಜಕುಮಾರಿ ವಿಜಯಮಹಾದೇವಿಯನ್ನು ವಿವಾಹವಾಗಿದ್ದನು. ಇವನ ಅಧಿಕಾರಾವಧಿಯಲ್ಲಿ ಗಂಗರಾಜ್ಯಕ್ಕೆ 'ಶ್ರೀರಾಜ್ಯ' ಎಂಬ ವಿಶೇಷಣವೂ ಲಭಿಸಿತ್ತು. ಇವನು ತನ್ನ ಐವರು ಮಕ್ಕಳನ್ನೂ ಪ್ರಾಂತಾಧಿಕಾರಿಗಳನ್ನಾಗಿ ನೇಮಿಸಿದ್ದನು. ಅವರಲ್ಲಿ ಕಿರಿಯವನಾದ ದುಗ್ಗಮಾರನು ಶ್ರೀಪುರುಷನ ಆಳ್ವಿಕೆಯ ೪೨ನೆಯ ವರ್ಷದಲ್ಲಿ ಕುವಲಾಲ-೩೦೦ ಪ್ರಾಂತದ ರಾಜ್ಯಪಾಲನಾಗಿದ್ದು, ಅನಂತರದಲ್ಲಿ ಕೊಂಗುನಾಡು, ಗಂಗ-೬೦೦೦, ಪುಮ್ಮೆನಾಡು, ಬೆಳತೂರುನಾಡು, ಪುಲ್ವರಿನಾಡು-೧೦೦೦ ಹಾಗೂ ಪುನ್ನಾಡು-೬೦೦ ಗಳಿಗೆ ರಾಜ್ಯಪಾಲನಾಗಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಅಲ್ಲದೆ ಇವನು ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಅರಸನ ಮೇಲಿನ ಯುದ್ಧದ ಮುಂದಾಳತ್ವ ವಹಿಸಿದ್ದ ಅಂಶವೂ ಶಾಸನದಿಂದ ವೇದ್ಯವಾಗುತ್ತದೆ. ಸರ್ವಧರ್ಮಸಹಿಷ್ಣುವಾಗಿದ್ದ ಶ್ರೀಪುರುಷನು ವೈದಿಕ ಹಾಗೂ ಜೈನಧರ್ಮಗಳೆರಡಕ್ಕೂ ಸಮಾನ ಪ್ರೋತ್ಸಾಹ ನೀಡಿದ್ದು, ತನ್ನ ಆಳ್ವಿಕೆಯ ಮೂರನೆಯ (೭೨೮) ವರ್ಷದಲ್ಲಿ ಪೆರೂರಿನ ಕೊಂಗೇಶ್ವರ ದೇವಾಲಯಕ್ಕೆ ಭೇಟಿ ನೀಡಿದ್ದ ಅಂಶ ಶಾಸನವೊಂದರಿಂದ ಗೊತ್ತಾಗುತ್ತದೆ. ಚಿಂತಾಮಣಿ ತಾಲೂಕಿನ ಸಂತೇಕಲ್ಲಹಳ್ಳಿಯ ಬೂದಿತಿಟ್ಟು ಪ್ರದೇಶದಲ್ಲಿ ೧೯೭೦ರಷ್ಟು ಹಿಂದೆಯೇ ಪತ್ತೆಹಚ್ಚಲ್ಪಟ್ಟು ಈಗಾಗಲೇ ವರದಿಯಾಗಿರುವ ಗಂಗ ಶ್ರೀಪುರುಷನ ಕಾಲಕ್ಕೆ ಸೇರಿದ ಐದು ಫಲಕಗಳನ್ನುಳ್ಳ ತಾಮ್ರ ಶಾಸನದಿಂದ ಅರಸನು ವಿಪ್ರ ಕುಳೇಶರ್ಮನಿಗೆ ಬ್ರಹ್ಮದೇಯವಾಗಿ ಭೂದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ಇವನ ಆಳ್ವಿಕೆಗೆ ಸೇರಿದ ಶಾಸನಗಳು ಜಿಲ್ಲೆಯ ಬಿಸ್ಸನಹಳ್ಳಿ, ಹೆಬ್ಬೆಟ್ಟ, ನಂದಿ, ಪುತ್ತೂರು, ಮೆದುತಂಬಿಹಳ್ಳಿ (ತಂಬಿಹಳ್ಳಿಯ ಉಪಗ್ರಾಮ), ಕಲ್ಲೂರು, ಶಿವಾರಪಟ್ಟಣ, ಮುತ್ತುಕದಹಳ್ಳಿ, ಕೆಂದಟ್ಟಿ, ರಾಮೇನಹಳ್ಳಿ, ರೋಣೂರು, ಬೂದಿಕೋಟೆ, ಮೇಲಗಾಣಿ, ಮಡಿವಾಳ, ಸುಗುಟೂರು, ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿದ್ದು, ಮಹತ್ವದ ಮಾಹಿತಿಯನ್ನು ಒದಗಿಸುತ್ತವೆ. ಕಾವ್ಯ ಪೋಷಕನಾಗಿದ್ದ ಇವನು 'ಗಜಶಾಸ್ತ್ರ' ಎಂಬ ಕೃತಿಯನ್ನೂ ರಚಿಸಿದ್ದಾನೆ.

**ಇಮ್ಮಡಿ ಶಿವಮಾರ (೭೮೮-೮೧೨)**: ಸೈಗೊಟ್ಟ ಶಿವಮಾರನೆಂದೂ ಪ್ರಸಿದ್ಧನಾಗಿದ್ದ ಇವನು ಶ್ರೀಪುರುಷನ ಐವರು ಮಕ್ಕಳಲ್ಲಿ ಒಬ್ಬನಾಗಿದ್ದು, ಸಿಂಹಾಸನಕ್ಕಾಗಿ ಎದುರಾದ ಅಂತಃಕಲಹದಲ್ಲಿ ಸೋದರರನ್ನು ಹತ್ತಿಕ್ಕಿ ೭೮೮ರಲ್ಲಿ ಗಂಗ ಸಿಂಹಾಸನವನ್ನೇರಿದನು. ಅದರಲ್ಲೂ ಕುವಲಾಲ ನಾಡಿನ ಪ್ರಾಂತಾಧಿಕಾರಿಯಾಗಿದ್ದ ದುಗ್ಗಮಾರನು, ಅಣ್ಣ ಶಿವಮಾರನನ್ನು ಬದಿಗೊತ್ತಿ ತಾನೇ ಸಿಂಹಾಸನವನ್ನೇರುವ ಸಿದ್ಧತೆಯಲ್ಲಿದ್ದನು. ಈ ಸ್ಪರ್ಧೆಯಲ್ಲಿ ಗಂಗ ಸಾಮಂತರು ಇವರಿಬ್ಬರ ನಡುವೆ ಹಂಚಿಹೋದರು. ಆದರೆ ನೊಳಂಬ ಸಿಂಗಪೋತನ ಬೆಂಬಲದಿಂದಾಗಿ ಇಮ್ಮಡಿ ಶಿವಮಾರನು ದುಗ್ಗಮಾರನನ್ನು ಬಗ್ಗು ಬಡಿದು ಸಿಂಹಾಸನವನ್ನು ಏರಲು ಸಾಧ್ಯವಾಯಿತು. ರಾಷ್ಟ್ರಕೂಟರ ಪರಮಾಧಿಕಾರವನ್ನು ಪ್ರಶ್ನಿಸಿದ ಇವನು ರಾಷ್ಟ್ರಕೂಟರ ಆಂತರಿಕ ವಿಷಯಗಳಲ್ಲಿ ಮೂಗು ತೂರಿಸುವ ಮೂಲಕ ರಾಷ್ಟ್ರಕೂಟ ಧ್ರುವ ಹಾಗೂ ಇಮ್ಮಡಿ ಗೋವಿಂದನ ಕೋಪಕ್ಕೆ ತುತ್ತಾಗಿ ಸೋತು ಸೆರೆಮನೆ ಸೇರಬೇಕಾಯಿತು. ಈ ಅವಧಿಯಲ್ಲಿ ಗಂಗವಾಡಿಯ ಆಡಳಿತವನ್ನು ತನ್ನ ಮಗ ಕಂಬನಿಗೆ ಧ್ರುವನು ವಹಿಸಿಕೊಟ್ಟನು. ರಾಷ್ಟ್ರಕೂಟರ ವಿಕೋಪಕ್ಕೆ ತುತ್ತಾಗಿ ತುರಂಗವಾಸವನ್ನು ಶಿವಮಾರನು ಅನುಭವಿಸುತ್ತಿದ್ದಾಗ ಅವನ ಮಗನಾದ ಒಂದನೆಯ ಮಾರಸಿಂಹನನ್ನು ಸಾಂಕೇತಿಕವಾಗಿ ಸಿಂಹಾಸನದಲ್ಲಿ ಕೂರಿಸಿ ರಾಷ್ಟ್ರಕೂಟ ಕಂಬನು ಸರ್ವಾಧಿಕಾರ ನಡೆಸುತ್ತಿದ್ದನೆಂದು ತಿಳಿದುಬರುತ್ತದೆ. ಏತನ್ಮಧ್ಯೆ ಮುಂದೆ ರಾಷ್ಟ್ರಕೂಟ ಸಿಂಹಾಸನಕ್ಕಾಗಿ ೭೯೪ ರಲ್ಲಿ ಗೋವಿಂದ III ಹಾಗೂ ಕಂಬನ ನಡುವೆ ಸ್ಪರ್ಧೆ ಏರ್ಪಟ್ಟಿತು. ಮುಮ್ಮಡಿ ಗೋವಿಂದನ

ಕೃಪೆಯಿಂದಾಗಿ ಸೆರೆಮನೆಯಿಂದ ಬಿಡುಗಡೆ ಹೊಂದಿದ ಶಿವಮಾರನು ಮುಮ್ಮಡಿ ಗೋವಿಂದನಿಗೆ ಬೆಂಬಲಿಸುವ ಬದಲು ಅವನ ವಿರುದ್ಧ ಬಂಡೆದಿದ್ದ ಕಂಬನಿಗೆ ಬೆಂಬಲಿಸಿದನು. ಆದರೆ ಅಂತಿಮವಾಗಿ ಈ ಸ್ಪರ್ಧೆಯಲ್ಲಿ ಮುಮ್ಮಡಿ ಗೋವಿಂದನು ಯಶಸ್ವಿಯಾಗಿ ಕಂಬನನ್ನು ಮುದುಗುಂಡೂರ ಯುದ್ಧದಲ್ಲಿ ಸೋಲಿಸಿದರೂ ಅವನನ್ನು ಬಂಧಿಸದೇ ಗಂಗವಾಡಿ ಪ್ರಾಂತದ ರಾಜ್ಯಪಾಲನನ್ನಾಗಿ ಮುಂದುವರಿಸಿದನು. ಆದರೆ ಗಂಗ ಶಿವಮಾರನನ್ನು ಮತ್ತೊಮ್ಮೆ ಸೆರೆಮನೆಗೆ ದೂಡಲಾಯಿತು. ಆದರೆ ಮುಂದೆ ಸೋದರ ಕಂಬನ ನಿಧನಾನಂತರ, ರಾಜಕೀಯ ಕಾರಣಗಳಿಗಾಗಿ ಶಿವಮಾರನನ್ನು ಸೆರೆಮುಕ್ತಗೊಳಿಸಿ ಗಂಗರಾಜ್ಯದಲ್ಲಿ ಅವನ ಅಧಿಕಾರವನ್ನು (೭೯೫) ಮುಮ್ಮಡಿ ಗೋವಿಂದನು ಪುನರ್ ಸ್ಥಾಪಿಸಿದನು. ಆ ಸಂದರ್ಭದಲ್ಲಿ ರಾಷ್ಟ್ರಕೂಟ ಗೋವಿಂದ III ಹಾಗೂ ಪಲ್ಲವ ನಂದಿವರ್ಮ IIIರು ಹಾಜರಿದ್ದನು. ಅಲ್ಲಿಂದಾಚೆಗೆ ಗಂಗರು ರಾಷ್ಟ್ರಕೂಟರ ನಿಷ್ಠಾವಂತ ಅನುಯಾಯಿಗಳಾಗಿ ಅವರ ಅನೇಕ ದಿಗ್ವಿಜಯಗಳಲ್ಲಿ ಮಹತ್ವದ ಪಾತ್ರ ವಹಿಸಿದರು. ಮುಮ್ಮಡಿ ಗೋವಿಂದನು ಪೂರ್ವ(ವೆಂಗಿ)ಚಾಳುಕ್ಯ ಅರಸ, ಇಮ್ಮಡಿ ವಿಕ್ರಮಾದಿತ್ಯನ ಮೇಲೆ ಕೈಗೊಂಡ ಯುದ್ಧಗಳಲ್ಲಿ ಇವನೂ ಭಾಗವಹಿಸಿದ್ದನು. ಮುಂದೆ ರಾಷ್ಟ್ರಕೂಟರ ವಿರುದ್ಧ ರೂಪುಗೊಂಡ ಕೇರಳ, ಚೋಳ, ಪಾಂಡ್ಯ ಹಾಗೂ ಪಲ್ಲವ ಒಕ್ಕೂಟವನ್ನು ಎದುರಿಸುವಲ್ಲಿ, ಮುಮ್ಮಡಿ ಗೋವಿಂದನಿಗೆ ಇವನು ನೆರವಾದನೆಂಬ ಅಭಿಪ್ರಾಯವಿದೆಯಾದರೂ ಪೂರಕ ದಾಖಲೆಗಳಿಲ್ಲ.

ಅರಸನಾಗಿ ಸರ್ವಧರ್ಮಸಹಿಷ್ಣುವಾಗಿದ್ದ ಇವನು ರಾಷ್ಟ್ರಕೂಟರ ಪ್ರಭಾವದಿಂದಾಗಿ ವೈಯಕ್ತಿಕವಾಗಿ ಜೈನಮತಾವಲಂಬಿಯಾದದ್ದು ಮಹತ್ವದ ಬೆಳವಣಿಗೆಯಾಗಿದ್ದು, ಅನಂತರದಲ್ಲಿ ಬಂದ ಎಲ್ಲಾ ಗಂಗರಸರು ಜೈನಮತಾವಲಂಬಿಗಳಾದರು. ಜಿಲ್ಲೆಯ ಮೆದುತಂಬಿಹಳ್ಳಿ ಹಾಗೂ ಕಲ್ಲಹಳ್ಳಿಗಳಲ್ಲಿ ಇವನ ಕಾಲದ ಶಾಸನಗಳು ಲಭಿಸಿವೆ. ಸ್ವತಃ ಪಂಡಿತನಾಗಿದ್ದ ಇವನು ಕನ್ನಡದಲ್ಲಿ 'ಗಜಾಷ್ಟಕಂ' ಎಂಬ ಗಜಶಾಸ್ತ್ರ ಗ್ರಂಥವನ್ನು ರಚಿಸಿದ್ದಾನೆ. ಅಲ್ಲದೇ 'ಸೇತುಬಂಧ' ಗ್ರಂಥದ ಕರ್ತೃವೂ ಹೌದು. ಇಮ್ಮಡಿ ಶಿವಮಾರನ ಇನ್ನೊಬ್ಬ ಮಗ ಒಂದನೆಯ ಪೃಥ್ವಿಪತಿಯು ಅಪ್ರಾಪ್ತನಿದ್ದ ಕಾರಣ, ಶಿವಮಾರನ ಕಿರಿಯ ಸೋದರ ವಿಜಯಾದಿತ್ಯನ ಕಿರಿಯ ಮಗನಾದ ಒಂದನೆಯ ಸತ್ಯವಾಕ್ಯ ರಾಚಮಲ್ಲನು ೮೧೬ರಲ್ಲಿ ಗಂಗ ಸಿಂಹಾಸನವನ್ನು ಏರಿದನು.

**ಒಂದನೆಯ ಸತ್ಯವಾಕ್ಯ ರಾಚಮಲ್ಲ (೮೧೭–೮೫೩)** ಇವನು ಅಧಿಕಾರಕ್ಕೆ ಬರುತ್ತಿದ್ದಂತೆ ರಾಷ್ಟ್ರಕೂಟರ ಮೇಲೆ ಯುದ್ಧಕ್ಕೆ ಮುಂದಾದನು. ಆ ವೇಳೆಯಲ್ಲಿ ಅಪ್ರಾಪ್ತ ವಯಸ್ಸಿನ ಅಮೋಘವರ್ಷ ನೃಪತುಂಗನು ರಾಷ್ಟ್ರಕೂಟ ಸಿಂಹಾಸನದಲ್ಲಿದ್ದು, ವೆಂಗಿಯ ಇಮ್ಮಡಿ ವಿಜಯಾದಿತ್ಯನು ರಾಷ್ಟ್ರಕೂಟರ ಮೇಲೆ ಧಾಳಿ ಮಾಡಿದನು. ಆ ಸಂದರ್ಭವನ್ನು ಉಪಯೋಗಿಸಿಕೊಂಡು ಗಂಗ ರಾಚಮಲ್ಲನು ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ೮೧೯ರಲ್ಲಿ ಧಾಳಿ ಮಾಡಿದನು. ರಾಷ್ಟ್ರಕೂಟ ದಂಡನಾಯಕ ಬಂಕೇಯನು ಗಂಗ ಧಾಳಿಯನ್ನು ಹಿಮ್ಮೆಟ್ಟಿಸಿ ಕಾವೇರಿಯನ್ನು ದಾಟಿದನಾದರೂ, ಅಂತಿಮ ಕ್ಷಣದಲ್ಲಿ ಚಕ್ರವರ್ತಿಯಿಂದ ಹಿಂದಕ್ಕೆ ಕರೆಸಲ್ಪಟ್ಟ ಕಾರಣ, ರಾಚಮಲ್ಲನಿಗೆ ಸೋಲಾಗಬೇಕಿದ್ದ ಈ ಯುದ್ಧ,  ಗೆಲುವಾಗಿ ಪರಿಣಮಿಸಿತು. ಇವನು ಸಾಮಂತ ಮನೆತನವಾದ ನೊಳಂಬರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿಕೊಳ್ಳಲು ಮುಂದಾದನು. ನೊಳಂಬ ರಾಜನ ಸೋದರಿಯನ್ನು ತಾನೇ ವಿವಾಹವಾದ ಇವನು ಅನಂತರದಲ್ಲಿ ತನ್ನ ಮಗಳಾದ ಜಯಬ್ಬೆಯನ್ನು ನೊಳಂಬ ರಾಜಕುಮಾರ ನೊಳಂಬಾಧಿರಾಜ ಪೋಳಲ್ಚೋರನಿಗೆ ವಿವಾಹ ಮಾಡಿಕೊಟ್ಟನು. ಇವನ ಆಳ್ವಿಕೆಯ ಅವಧಿಯಲ್ಲಿ ಪ್ರಾಪ್ತವಯಸ್ಸಿಗೆ ಬಂದ ಅಣ್ಣ ಇಮ್ಮಡಿ ಶಿವಮಾರನ ಕಿರಿಯ ಮಗ ಒಂದನೆಯ ಪೃಥ್ವಿಪತಿಯು ಅಧಿಕಾರಕ್ಕಾಗಿ ಹಾತೊರೆದಾಗ ಗಂಗ ಸಾಮ್ರಾಜ್ಯವು ವಿಭಜಿಸಲ್ಪಟ್ಟು ಪೃಥ್ವಿಪತಿಯ ಆಳ್ವಿಕೆಯಡಿ ಕೊಂಗು ಪ್ರಾಂತದಲ್ಲಿ ಗಂಗ ಶಾಖೆಯೊಂದು ೮೨೮ರಲ್ಲಿ ಅಸ್ತಿತ್ವಕ್ಕೆ ಬಂತು. ಮೊದಲಿನಿಂದಲೂ ಗಂಗರ ಕಡುವಿರೋಧಿಗಳಾಗಿದ್ದ ಬಾಣರು, ಪರುವಿ ಶಾಖೆಯ ಒಂದನೆಯ ಪೃಥ್ವಿಪತಿಯು, ತನ್ನ ಹಕ್ಕಿಗಾಗಿ ಹೋರಾಟಕ್ಕಿಳಿದಾಗ ಅವನ ಬೆಂಬಲಕ್ಕೆ ಧಾವಿಸಿದರು. ಆ ವೇಳೆಗಾಗಲೇ ಪೃಥ್ವಿಪತಿಯ ಮಗಳಾದ ಕುಂದವ್ವೆಯನ್ನು ಬಾಣವಿದ್ಯಾಧರನು ವಿವಾಹವಾಗಿದ್ದುದೂ ಇದಕ್ಕೆ ಮತ್ತೊಂದು ಕಾರಣವಾಗಿತ್ತು. ಉಳಿದಂತೆ ರಾಚಮಲ್ಲನ ಅಧಿಕಾರ ಶಾಂತಿಯುತವಾಗಿದ್ದು, ಗಂಗರಾಜ್ಯವು ಮತ್ತೆ ಪ್ರಾಬಲ್ಯ ಮೆರೆಯಿತು. ಸರ್ವಧರ್ಮಸಹಿಷ್ಣುವಾಗಿದ್ದ ಇವನು ಜೈನಮತಾವಲಂಬಿಯಾಗಿದ್ದು, ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದನು.

### ಗಂಗ ಪರುವಿ ಶಾಖೆಯ ಆಳ್ವಿಕೆ (೮೨೮–೯೨೧)

ಈ ಅವಧಿಯಲ್ಲಿ **ಒಂದನೆಯ ಪೃಥ್ವಿಪತಿಯು** (೮೨೮–೮೭೮) ಮೂಲ ಗಂಗ ಶಾಖೆಯೊಂದಿಗೆ ನಿರಂತರವಾಗಿ ಘರ್ಷಣೆಯಲ್ಲಿ ತೊಡಗಿದ್ದು, ಇವನು ಬಾಣ ಹಾಗೂ ವೈದುಂಬರ ನೆರವಿನೊಂದಿಗೆ ಒಂದನೆಯ ರಾಚಮಲ್ಲನ ಮೇಲೆ ಯುದ್ಧ

ಸಾರಿದನು. ಇದಕ್ಕೆ ಪ್ರತಿಯಾಗಿ ರಾಚಮಲ್ಲನಿಗೆ ನೊಳಂಬ ಹಾಗೂ ತೆಲಗು ಚೋಡರ ಬೆಂಬಲ ಲಭಿಸಿತು. ಮುಂದೆ ನಡೆದ ಸೋರೆಮಡಿ (ಪೆನುಗೊಂಡ ಬಳಿ) ಯುದ್ಧದಲ್ಲಿ ಗಂಗ–ನೊಳಂಬರು ಹಾಗೂ ಬಾಣ–ವೈದುಂಬರು ಎರಡು ಗುಂಪಾಗಿ ಯುದ್ಧ ಹೂಡಿದರು. ಆರಂಭದಲ್ಲಿ ಮೂಲ ಗಂಗ ಪಕ್ಷವು ಹಿನ್ನಡೆ ಸಾಧಿಸಿದರೂ, ನೊಳಂಬ ಮಹೇಂದ್ರನ (ರಾಚಮಲ್ಲನ ಮೊಮ್ಮಗ) ಶೌರ್ಯದಿಂದಾಗಿ ಮೇಲುಗೈ ಸಾಧಿಸಿತು. ಅಜ್ಜ ಇಮ್ಮಡಿ ರಾಚಮಲ್ಲನ ಆದೇಶದಂತೆ ನೊಳಂಬ ಮಹೇಂದ್ರನು ಒಂದನೆಯ ಪೃಥ್ವಿಪತಿಯ ರಾಜ್ಯದತ್ತಲೂ ಮುನ್ನುಗಿದ್ದನು. ಅಲ್ಲದೇ ಬಾಣರನ್ನು ಬಗ್ಗುಬಡಿಯಲು ತನ್ನ ದಂಡನಾಯಕರನ್ನು ನಿಯೋಜಿಸಿದನು. ಪೃಥ್ವಿಪತಿ ಕೂಡ ರಾಷ್ಟ್ರಕೂಟರೊಂದಿಗೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದನು. ಅಲ್ಲದೇ ಪಲ್ಲವರ ಪರವಾಗಿ ಪಾಂಡ್ಯರೊಂದಿಗೆ ಯುದ್ಧಕ್ಕೆ ಮುಂದಾಗಿದ್ದನೆಂದು ತಿಳಿದು ಬರುತ್ತದೆ. ಇಮ್ಮಡಿ ವರಗುಣ ಪಾಂಡ್ಯನ ವಿರುದ್ಧ ನಡೆದ ಈ ಯುದ್ಧದಲ್ಲಿ (೮೭೭–೭೮) ಪಲ್ಲವ ನೃಪತುಂಗವರ್ಮನಿಗೆ, 'ಅಪರಾಜಿತಾ'ನೆಂಬ ಬಿರುದನ್ನು ಹೊಂದಿದ್ದ ಒಂದನೆಯ ಪೃಥ್ವಿಪತಿಯು ಬೆಂಬಲವಿತ್ತನು. ಆದರೆ ಅದೇ ಯುದ್ಧದಲ್ಲಿ ಅವನು ನಿಧನ ಹೊಂದಿದನು. ಇವನ ಮಗನಾದ **ಇಮ್ಮಡಿ ಮಾರಸಿಂಹ**ನೆಂಬವನಿದ್ದರೂ ಅವನ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ತತ್ಪರಿಣಾಮವಾಗಿ ಅಧಿಕಾರಕ್ಕೆ ಬಂದ ಒಂದನೆಯ ಪೃಥ್ವಿಪತಿಯ ಮೊಮ್ಮಗನಾದ **ಇಮ್ಮಡಿ ಪೃಥ್ವಿಪತಿ (೯೦೦–೯೨೧)**ಯು ಈ ಶಾಖೆಯ ಇನ್ನೊಬ್ಬ ಅರಸನಾಗಿದ್ದನು.

ಒಂದನೆಯ ರಾಚಮಲ್ಲನ ನಂತರ ಅವನ ಹಿರಿಯ ಮಗನಾದ **ಎರೆಯಂಗ ನೀತಿಮಾರ್ಗ (೮೫೩–೮೬೯)**ನು ಮೂಲ ಗಂಗರ ಸಿಂಹಾಸನವನ್ನು ಏರಿದನು. ರಣವಿಕ್ರಮರಾಯ, ಪೆರ್ಮಾನಡಿ ಮುಂತಾದ ಬಿರುದುಗಳನ್ನು ಧರಿಸಿದ್ದ ಇವನು ತನ್ನ ಆಳ್ವಿಕೆಯುದ್ದಕ್ಕೂ ರಾಷ್ಟ್ರಕೂಟರೊಂದಿಗೆ ಯುದ್ಧದಲ್ಲಿ ತೊಡಗಬೇಕಾಯಿತು. ಅಧಿಕಾರಕ್ಕೆ ಬರುತ್ತಿದ್ದಂತೆ ಇವನು ಬಾಣರೊಂದಿಗೆ ಯುದ್ಧ ಮಾಡಬೇಕಾಯಿತು. ಪಲ್ಲವ ನಂದಿವರ್ಮನು ಹಿಂದೆ ಗಂಗರಿಂದ ತಾನು ವಶಪಡಿಸಿಕೊಂಡಿದ್ದ ಗಂಗ–ಆರುಸಾವಿರ ಪ್ರದೇಶವನ್ನು ಬಾಣರಿಗೆ ನೀಡಿದ್ದನು. ಆದರೆ ಆ ಪ್ರದೇಶವನ್ನು ಒಂದನೆಯ ರಾಚಮಲ್ಲನು ಪುನರ್ ವಶಪಡಿಸಿಕೊಂಡು ನೊಳಂಬರ ಅಧೀನಕ್ಕೆ ಒಳಪಡಿಸಿದನು. ಇದರಿಂದ ಅಸಮಾಧಾನಗೊಂಡಿದ್ದ ಬಾಣರು ಪಲ್ಲವರೊಂದಿಗೆ ಸಂಧಾನ ಮಾಡಿಕೊಂಡರು. ಅಲ್ಲದೇ, ಪಲ್ಲವರು ಗಂಗಶಾಖೆಯ ಪೃಥ್ವಿಪತಿಗೂ ನೆರವು ನೀಡಿದ್ದರು. ಪಲ್ಲವ, ಬಾಣ ಹಾಗೂ ಗಂಗ ಶಾಖೆಯ ಪೃಥ್ವಿಪತಿಯರನ್ನೊಳಗೊಂಡ ಒಕ್ಕೂಟವನ್ನು ಎದುರಿಸುವುದು ಅಸಾಧ್ಯವೆಂಬುದನ್ನು ಮನಗಂಡ ನೀತಿಮಾರ್ಗನು, ಬಾಣರ ಮೇಲೇರಿ ಹೋಗಿ ಬಾಣರಾಜ್ಯಕ್ಕೆ ಮುತ್ತಿಗೆ ಹಾಕಿದನು. ಮುಳಬಾಗಿಲು ಶಾಸನದ ಪ್ರಕಾರ ಈ ಯುದ್ಧದಲ್ಲಿ ಗೆಲುವನ್ನು ಸಾಧಿಸಿದ ಗಂಗ ನೀತಿಮಾರ್ಗನು, ಬಾಣ ರಾಜ್ಯದ ಸ್ವಲ್ಪ ಭಾಗವನ್ನು ಸ್ವಾಧಿನಪಡಿಸಿಕೊಂಡನೆಂದು ತಿಳಿದುಬರುತ್ತದೆ. ಈ ಯುದ್ಧದಲ್ಲಿ ನೀತಿಮಾರ್ಗನಿಗೆ ನೊಳಂಬರಾಜ ಪೊಲ್ರುವಿನಿಂದ ಪೂರ್ಣ ಬೆಂಬಲ ಲಭಿಸಿತು. ಆದರೆ ಈ ಸಂಘರ್ಷದಲ್ಲಿ ನೊಳಂಬ ದಂಡನಾಯಕ ಪೊಂಪೆಲ್ಲನು ಮುರುಗೈಪಾಡಿ ಯುದ್ಧದಲ್ಲಿ ನೀತಿಮಾರ್ಗನ ಪರವಾಗಿ ಹೋರಾಡುತ್ತ ವೀರಮರಣವನ್ನಪ್ಪಿದನು. ಇದರಿಂದಾಗಿ ಬಾಣರ ನೆರವಿಗೆ ಪಲ್ಲವರಾಗಲಿ ಇಲ್ಲವೇ ಒಂದನೆಯ ಪೃಥ್ವಿಪತಿಯಾಗಲಿ, ಧಾವಿಸಿ ಬಾರದಂತಾಯಿತು. ಆನಂತರ ಇಮ್ಮಡಿ ಶಿವಮಾರನ ಕಾಲದಿಂದ ರಾಷ್ಟ್ರಕೂಟರ ಸ್ವಾಧೀನದಲ್ಲೇ ಉಳಿದಿದ್ದ ಗಂಗ ಪ್ರದೇಶವನ್ನು ಪಡೆಯಲು ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಮೇಲೆ ನೀತಿಮಾರ್ಗನು ಯುದ್ಧಕ್ಕೆ ಮುಂದಾದನು. ಕೋಲಾರ ಜಿಲ್ಲೆಯ ಉತ್ತರ ಭಾಗದಲ್ಲಿದ್ದ 'ರಾಜರಮಡು'ವಿನ ಬಳಿ ಜರುಗಿದ ಈ ಯುದ್ಧದಲ್ಲಿ (೮೬೮) ಗಂಗರಿಗೆ ಯಶ ಲಭಿಸಿತು. ಅಲ್ಲದೇ ನೃಪತುಂಗನ ಮಗಳಾದ ಜಯಬ್ಬೆಯನ್ನು ನೀತಿಮಾರ್ಗನ ಮಗನಾದ ಒಂದನೆಯ ಬೂತುಗನಿಗೆ ವಿವಾಹ ಮಾಡಿಕೊಳ್ಳುವ ಮೂಲಕ ರಾಷ್ಟ್ರಕೂಟ–ಗಂಗ ಬಾಂಧವ್ಯವು ಸುಧಾರಿಸಿತು. ಅಲ್ಲದೇ ಮೂಲ ಗಂಗ ಶಾಖೆಯ ಪರಮಾಧಿಕಾರ ಸ್ಥಿರಗೊಂಡಿತು. ಸರ್ವಧರ್ಮಸಹಿಷ್ಣುವಾಗಿದ್ದ ಇವನು ಸಲ್ಲೇಖನ ವ್ರತವನ್ನು ಆಚರಿಸಿ ದೇಹ ತ್ಯಜಿಸಿದ ದೃಶ್ಯ ನೆರೆಯ ಬೆಂಗಳೂರು ಜಿಲ್ಲೆಯ ದೊಡ್ಡಹುಂಡಿ ಶಿಲಾಶಾಸನದಲ್ಲಿ ಬಹಳ ಮನೋಜ್ಞವಾಗಿ ಮೂಡಿಬಂದಿದೆ. ಇವನ ಕಾಲದಲ್ಲಿ ನೀಡಲ್ಪಟ್ಟಿರುವ ಮಡಿವಾಳದ ಶಾಸನವು ಉಲ್ಲೇಖಾರ್ಹವಾಗಿದೆ.

**ಇಮ್ಮಡಿ ಸತ್ಯವಾಕ್ಯ ರಾಚಮಲ್ಲ (೮೭೦–೯೦೭):** ಇವನ ಆಳ್ವಿಕೆಯು ಗಂಗರ ರಾಜ್ಯಭಾರವನ್ನು ಸಾಕಷ್ಟು ಬಲಿಷ್ಠಗೊಳಿಸಿತು. ಇವನಿಗೆ ಬಲಭುಜದಂತಿದ್ದ ಯುವರಾಜ ಒಂದನೆಯ ಬೂತುಗನ ಶಕ್ತಿ ಸಾಮರ್ಥ್ಯದಿಂದಾಗಿ ಗಂಗ ರಾಜ್ಯದ ಕೀರ್ತಿ ಪ್ರತಿಷ್ಠೆಗಳು ವೃದ್ಧಿಸಿದವು. ಇವನ ಆಳ್ವಿಕೆಯಲ್ಲಿ ನೊಳಂಬ ಮಹೇಂದ್ರನ ಮುಂದಾಳತ್ವದಲ್ಲಿ ದಂಗೆ ಎದ್ದಿದ್ದ ನೊಳಂಬರನ್ನು ಸದೆಬಡಿಯುವಲ್ಲಿ ಯುವರಾಜ ಒಂದನೆಯ ಬೂತುಗನು ಯಶಸ್ವಿಯಾದನು. ಅಲ್ಲದೇ ಈ ವೇಳೆಗೆ ರಾಷ್ಟ್ರಕೂಟ ನೃಪತುಂಗನ ಅಳಿಯನಾಗಿದ್ದ

ಗಂಗ ಒಂದನೆಯ ಬೂತುಗನು, ಪಲ್ಲವ ನಂದಿವರ್ಮನ ಪರವಾಗಿ ಪಾಂಡ್ಯರ ಮೇಲಿನ ಯುದ್ಧದಲ್ಲಿ ಭಾಗವಹಿಸಿದನು. ಕೊಂಗಲ್‌ನಾಡು–೮೦೦೦ ಪ್ರಾಂತದ ರಾಜ್ಯಪಾಲನಾಗಿದ್ದ ಒಂದನೆಯ ಬೂತುಗನು ಕೊಂಗುದೇಶದ ಮೇಲೂ ಗೆಲುವು ಸಾಧಿಸಿದನು. ಇವನು ಚೋಳ ರಾಜರಾಜನ ಮೇಲೂ ಯುದ್ಧ ಹೂಡಿ ಗೆಲುವು ಸಾಧಿಸಿದನು. ಈ ನಡುವೆ ರಾಷ್ಟ್ರಕೂಟ ಒಂದನೆಯ ನೃಪತುಂಗನು ಗತಿಸಿದ್ದು ಅಧಿಕಾರದಲ್ಲಿದ್ದ ಇಮ್ಮಡಿ ಕೃಷ್ಣನ ಪರವಾಗಿ ಒಂದನೆಯ ಬೂತುಗನು ವೆಂಗಿಯ ಇಮ್ಮಡಿ ವಿಜಯಾದಿತ್ಯನ ವಿರುದ್ಧ ಯುದ್ಧ ಮಾಡಬೇಕಾಯಿತು. ಆದರೆ ಈ ಯುದ್ಧ ಸಂದರ್ಭದಲ್ಲಿ ಒಂದನೆಯ ಬೂತುಗನು (೮೮೭) ಗತಿಸಿದನು. ಇದರಿಂದ ವಿಮನಸ್ಕನಾದ ಗಂಗರಸ ಇಮ್ಮಡಿ ರಾಚಮಲ್ಲನು, ಸೋದರ ಬೂತುಗನ ಮಗನಾದ ಇಮ್ಮಡಿ ನೀತಿಮಾರ್ಗನಿಗೆ ಯುವರಾಜ ಪಟ್ಟವನ್ನು ಕಟ್ಟಿದನು. ಅಲ್ಲದೇ ೯೧೫ರವರೆಗೆ ಜೀವಿಸಿದ್ದ ಇವನು ತನ್ನ ಕೊನೆಯ ವರ್ಷಗಳನ್ನು ಧಾರ್ಮಿಕ ಬದುಕಿನಲ್ಲಿ ತೊಡಗಿಸಿಕೊಂಡನು. ಇವನ ಆಡಳಿತಾವಧಿಗೆ ಸೇರಿದ ೯೦೩ರ ನರಸಾಪುರ ತಾಮ್ರ ಶಾಸನವು, ಕನ್ನಮಂಗಲದಲ್ಲಿ ಬಸದಿಯನ್ನು ನಿರ್ಮಿಸಿ, ಭೂದಾನ ನೀಡಿದ ಅಂಶವನ್ನು ದಾಖಲಿಸಿದೆ.

**ಇಮ್ಮಡಿ ನೀತಿಮಾರ್ಗ (೯೦೭–೧೯):** ಯುವರಾಜನಾಗಿ ೮೮೭ರಿಂದಲೂ ಸಾಕಷ್ಟು ಆಡಳಿತಾನುಭವವನ್ನು ಪಡೆದಿದ್ದ ಇವನು ರಾಷ್ಟ್ರಕೂಟ ಇಮ್ಮಡಿ ಕೃಷ್ಣನೊಂದಿಗೆ, ಮಣ್ಣೆ ಮತ್ತಿತರ ಪ್ರದೇಶಗಳ ಸಲುವಾಗಿ ಯುದ್ಧಕ್ಕೆ ಇಳಿಯಬೇಕಾಯಿತಾದರೂ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಗಂಗ ಸಾಮಂತನೂ, ಸಂಬಂಧಿಯೂ ಆದ ನೊಳಂಬ ಮಹೇಂದ್ರನು ಬಾಣರನ್ನು ಸೋಲಿಸಿ ತ್ರಿಭುವನಾಧಿರಾಜ ಹಾಗೂ 'ಮಹಾವಲಿಕುಲ ವಿಧ್ವಾಂಸಕ' ಎಂಬ ಬಿರುದುಗಳನ್ನು ಧರಿಸಿದ್ದು, ಉತ್ಕಟ ಆಕಾಂಕ್ಷಿಯಾಗಿದ್ದ ಇವನು ಕಂಚಿ, ಧರ್ಮಪುರಿ ಹಾಗೂ ಗಂಗವಾಡಿಗಳನ್ನು ತನ್ನ ವ್ಯಾಪ್ತಿಗೊಳಪಡಿಸಿಕೊಂಡಿದ್ದನು. ಅವನನ್ನು ತಹಬದಿಗೆ ತರುವ ಸಲುವಾಗಿ ಇಮ್ಮಡಿ ನೀತಿಮಾರ್ಗನಿಂದ ನಿಯೋಜಿಸಲ್ಪಟ್ಟ ದಂಡನಾಯಕ ಅಯ್ಯಪ್ಪದೇವನು ಯುದ್ಧರಂಗದಲ್ಲಿ ಮಡಿದಾಗ, ಅವನ ಮಗನಾದ ಎರೆಗಂಗನು ಯುದ್ಧವನ್ನು ಮುಂದುವರಿಸಿ ರಣರಂಗದಲ್ಲಿ ನೊಳಂಬ ಮಹೇಂದ್ರನನ್ನು ವಧಿಸಿ, ಹೆಂಜೇರನ್ನು ವಶಪಡಿಸಿಕೊಂಡನು. ಇದರಿಂದಾಗಿ ಇಮ್ಮಡಿ ನೀತಿಮಾರ್ಗನು 'ಮಹೇಂದ್ರಾಂತಕ' ಎಂಬ ಬಿರುದನ್ನು ಧರಿಸಿದನು. ಇದರೊಂದಿಗೆ ನೊಳಂಬರ ಪ್ರಾಬಲ್ಯವೂ ಕುಗ್ಗಿತು.

ಇಮ್ಮಡಿ ನೀತಿಮಾರ್ಗನ ಅಧಿಕಾರಾವಧಿಯಲ್ಲಿ **ಗಂಗರ ಪರುವಿ ಶಾಖೆಯ** ಸಿಂಹಾಸನವನ್ನೇರಿದ **ಇಮ್ಮಡಿ ಪೃಥ್ವಿಪತಿ (೯೦೦–೯೨೧)** ಆ ಶಾಖೆಯ ಇನ್ನೊಬ್ಬ ಅರಸನಾಗಿದ್ದು, ಇವನು ಒಂದನೆಯ ಪೃಥ್ವಿಪತಿಯ ಮೊಮ್ಮಗನಾಗಿದ್ದನು. ಇವನ ಆಳ್ವಿಕೆಗೆ ಸೇರಿದ ಉದಯೇಂದ್ರಂನ ತಾಮ್ರಶಾಸನದಿಂದ ಅವನಿಗೆ 'ಹಸ್ತಿಮಲ್ಲ' ಎಂಬ ಅಡ್ಡ ಹೆಸರಿದ್ದ ಅಂಶ ಗೊತ್ತಾಗುತ್ತದೆ. ಇಮ್ಮಡಿ ಪೃಥ್ವಿಪತಿಯು ರಾಷ್ಟ್ರಕೂಟರಿಗೆ ಬದಲು ಚೋಳರಿಗೆ ವಿಧೇಯನಾಗಿದ್ದು, ಚೋಳ ಒಂದನೆಯ ಪರಾಂತಕನ ನೆರವಿನೊಂದಿಗೆ ಬಾಣರನ್ನು ಸೋಲಿಸಿದನು. ತತ್ಪರಿಣಾಮವಾಗಿ ಇವನಿಗೆ 'ಬಾಣ ಕುಲಾಂತಕ', 'ಶೆಂಬಿಯನ್ ಮಾವಲಿ ವಾನರಾಯನ್' ಎಂಬ ಬಿರುದುಗಳಿದ್ದವು. ಮುಂದೆ ಇವನ್ನು ತನ್ನ ವಿಧೇಯತೆಯನ್ನು ರಾಷ್ಟ್ರಕೂಟರಿಗೆ ವ್ಯಕ್ತಪಡಿಸುವ ಮೂಲಕ 'ಕನ್ನಾರದೇವ', ಹಾಗೂ 'ಗಂಗರಾಯರ್' ಎಂಬ ಬಿರುದುಗಳನ್ನು ಧರಿಸಿದನು. ಅಲ್ಲದೇ, ಇವನಿಗೆ 'ಪರುವಿ ಪುರವರೇಶ್ವರ' ಎಂಬ ಬಿರುದೂ ಇದ್ದು, ನಂದಿಬೆಟ್ಟದ ಮಾಂಡಲೀಕರನ್ನು ಸೋಲಿಸಿದ ಪರಿಣಾಮವಾಗಿ 'ನಂದಿಗಿರಿನಾಥ' ಎಂಬ ಬಿರುದನ್ನೂ ಧರಿಸಿದ್ದನು. ಆನೆಗೆ ಬದಲು ಗೂಳಿಯನ್ನು ಇವನು ತನ್ನ ರಾಜಲಾಂಛನವನ್ನಾಗಿಸಿಕೊಂಡಿದ್ದನು. ಇವನ ನಂತರ ಅಧಿಕಾರಕ್ಕೆ ಬಂದ ನನ್ನಿಗಂಗನು ಸಬಲನಾಗಿದ್ದರೂ, ಮೂಲ ಗಂಗಶಾಖೆಯ ಸಾಮಂತರಾದ ನೊಳಂಬರೊಂದಿಗೆ ಹೋರಾಡುತ್ತಾ ಇಹಲೋಕ ತ್ಯಜಿಸಿದನು. ಇದರೊಂದಿಗೆ ಪರುವಿ ಶಾಖೆಯು ಸುಮಾರು ೯೨೯ರಲ್ಲಿ ಮುಮ್ಮಡಿ ರಾಚಮಲ್ಲ (೯೨೫–೯೩೫)ನ ಕಾಲದಲ್ಲಿ ಮೂಲ ಗಂಗರಾಜ್ಯದಲ್ಲಿ ವಿಲೀನವಾಯಿತು.

**ಇಮ್ಮಡಿ ಬೂತುಗ (೯೩೫–೬೦):** ಆರಂಭದಿಂದಲೂ ರಾಷ್ಟ್ರಕೂಟರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದ ಇಮ್ಮಡಿ ಬೂತುಗನಿಗೆ ರಾಷ್ಟ್ರಕೂಟ ಯುವರಾಜ ಮುಮ್ಮಡಿ ಕೃಷ್ಣನ ಸಂಪೂರ್ಣ ಬೆಂಬಲದಿಂದಾಗಿ ಗಂಗ ಸಿಂಹಾಸನ ಲಭಿಸಿತ್ತು. ಇದರಿಂದಾಗಿ ಬೂತುಗನು ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನಿಗೆ ಆಪತ್ಬಾಂಧವನಂತೆ ಹಲವಾರು ನಿರ್ಣಾಯಕ ಸಂದರ್ಭಗಳಲ್ಲಿ ಬೆಂಬಲಿಸುವ ಮೂಲಕ ಕೃಷ್ಣನ ಪ್ರಮುಖ ಹಿತೈಷಿಯಾದನು. ಯುವರಾಜ ಮುಮ್ಮಡಿ ಕೃಷ್ಣನು ಉತ್ತರದ ದಿಗ್ವಿಜಯದಲ್ಲಿ ತೊಡಗಿದ್ದಾಗ, ದಂಗೆ ಎದ್ದಿದ್ದ ವಾಲಯ್ಯನನ್ನು ಸೋಲಿಸಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ರಕ್ಷಿಸಿದ ಕೀರ್ತಿ ಇಮ್ಮಡಿ

ಬೂತುಗನದಾಗಿದ್ದು, ಅದರಿಂದಾಗಿ ಮುಮ್ಮಡಿ ಕೃಷ್ಣನ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಅಲ್ಲದೇ ಇದೇ ವೇಳೆಯಲ್ಲಿ ದಂಗೆ ಎದ್ದಿದ್ದ ಇತರ ರಾಷ್ಟ್ರಕೂಟ ಸಾಮಂತರನ್ನೂ ಇಮ್ಮಡಿ ಬೂತುಗನು ಬಗ್ಗು ಬಡಿದನು. ಮಿಗಿಲಾಗಿ ಮುಮ್ಮಡಿ ಕೃಷ್ಣನೊಂದಿಗೆ ಚೋಳರ ವಿರುದ್ಧ ಯುದ್ಧ ಮಾಡುವಲ್ಲಿ ಕೈಜೋಡಿಸಿದ ಬೂತುಗನು, ಸುಮಾರು ೯೪೯ರಲ್ಲಿ ತಕ್ಕೋಲಂ (ಅರಕೋಣಂ ಬಳಿ)ನಲ್ಲಿ ಜರುಗಿದ ಘನಘೋರ ಯುದ್ಧದಲ್ಲಿ ದಂಡನಾಯಕ, ಮಾವುತ ಮಣಲಾರನ ನೆರವಿನೊಂದಿಗೆ ಚೋಳ ರಾಜ ಒಂದನೆಯ ಪರಾಂತಕನ ಮಗನಾದ ರಾಜಾದಿತ್ಯನನ್ನು ಯುದ್ಧರಂಗದಲ್ಲಿ ಸಂಹರಿಸುವಲ್ಲಿ ಯಶಸ್ವಿಯಾದನು. ಬೂತುಗ ಮತ್ತವನ ಸೇನಾನಿ ಮಣಲಾರರ ಈ ಸಾಹಸವನ್ನು ಮೆಚ್ಚಿದ ಸಾರ್ವಭೌಮ ಮುಮ್ಮಡಿ ಕೃಷ್ಣನು, ಅವರಿಬ್ಬರನ್ನು ನಾನಾರೀತಿಯಲ್ಲಿ ಸನ್ಮಾನಿಸಿದ ಅಂಶ ಆತಕೂರು (ಮಂಡ್ಯ ಜಿಲ್ಲೆ) ಶಿಲಾಶಾಸನದಲ್ಲಿ ಬಹಳ ಚೆನ್ನಾಗಿ ಮೂಡಿಬಂದಿದೆ. ಈ ಅಪೂರ್ವ ಶಾಸನವನ್ನಿಂದು ಬೆಂಗಳೂರಿನ ವಿಶ್ವೇಶ್ವರಯ್ಯ ವಸ್ತುಸಂಗ್ರಹಾಲಯದಲ್ಲಿ ಸಾರ್ವಜನಿಕ ಪ್ರದರ್ಶನಕ್ಕಿರಿಸಲಾಗಿದೆ. ಈ ಯುದ್ಧದ ಆಘಾತದಿಂದ ಚೇತರಿಸಿಕೊಳ್ಳಲು ಚೋಳರಿಗೆ ಸುಮಾರು ವರ್ಷಗಳೇ ಬೇಕಾಯಿತು. ಅಲ್ಲದೆ ಮುಂದೆ ಗಂಗರ ಅವಸಾನಕ್ಕೂ ಇದು ಹಾದಿ ಮಾಡಿಕೊಟ್ಟಿತು. ಕಟ್ಟಾ ಜೈನಾಭಿಮಾನಿಯಾಗಿದ್ದ ಇವನು ಜೈನರಿಗೆ ವಿಶೇಷ ಪ್ರೋತ್ಸಾಹ ನೀಡಿದನು. ಉತ್ತಮ ಆಡಳಿತಗಾರನೂ ಆಗಿದ್ದ ಇವನು ಮುಮ್ಮಡಿ ಅಮೋಘವರ್ಷನ ಕುವರಿ ಹಾಗೂ ಮುಮ್ಮಡಿ ಕೃಷ್ಣನ ಸೋದರಿಯೂ ಆದ ರೇವಕಮ್ಮಡಿಯನ್ನು ತಾನೇ ವಿವಾಹವಾಗಿದ್ದು, ತನ್ನೊಬ್ಬ ಮಗಳಾದ ರೇವತಿಯನ್ನು ಮುಮ್ಮಡಿ ಕೃಷ್ಣನ ಮಗನಿಗೆ ವಿವಾಹ ಮಾಡಿದ್ದನು. ಅಲ್ಲದೇ ಮುಮ್ಮಡಿ ಕೃಷ್ಣನ ಮಗಳಾದ ಬಿಜ್ಜಬ್ಬೆಯನ್ನು ತನ್ನ ಮಗನಾದ ಮರುಳದೇವನಿಗೆ ತಂದುಕೊಳ್ಳುವ ಮೂಲಕ ರಾಷ್ಟ್ರಕೂಟರೊಂದಿಗೆ ನಿಕಟ ಸಂಬಂಧವನ್ನು ರೂಢಿಸಿಕೊಂಡನು. ಇವನು ಸುಮಾರು ೯೬೦ರಲ್ಲಿ ನಿಧನ ಹೊಂದಿದಾಗ ಅವನ ಮಗನಾದ **ಮರುಳದೇವನು** ಸಿಂಹಾಸನವನ್ನೇರಿದನು. ಕೇವಲ ಮೂರು ವರ್ಷ ರಾಜ್ಯಭಾರ ಮಾಡಿದ ಇವನ ಮರಣಾನಂತರ ಅವನ ಮಗ **ರಾಚಗಂಗನು** ಅಲ್ಪಕಾಲ ಆಳಿದನೆಂದು ತಿಳಿದು ಬರುತ್ತದೆ. ಆನಂತರ ಮರುಳದೇವನ ಸೋದರನಾದ ಮುಮ್ಮಡಿ ಮಾರಸಿಂಹನು ಗಂಗ ಸಿಂಹಾಸನವನ್ನೇರಿದನು.

**ಮಾರಸಿಂಹ III (೯೬೩–೯೭೪):** ಗಂಗರಸರಲ್ಲಿ ಕೊನೆಯ ಪ್ರಮುಖ ಅರಸನಾದ ಇವನ ಸಿಂಹಾಸನಾರೋಹಣ ಸಮಾರಂಭಕ್ಕೆಂದು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ತಲಕಾಡಿಗೆ ಆಗಮಿಸಿದ್ದು ಮಹತ್ವದ ಬೆಳವಣಿಗೆಯಾಗಿತ್ತು. ಇವನು ಅಧಿಕಾರಕ್ಕೆ ಬರುತ್ತಿದ್ದಂತೆ ಮುಮ್ಮಡಿ ಕೃಷ್ಣನ ಉತ್ತರ ದಂಡಯಾತ್ರೆಯ ಮುಂದಾಳತ್ವವನ್ನು ವಹಿಸಬೇಕಾಯಿತು. ಆ ಯುದ್ಧದಲ್ಲಿ ಮಾರಸಿಂಹನು ರಾಷ್ಟ್ರಕೂಟ ಸಾಮಂತ ಪರಮಾರ ಸಿಯಾಕನನ್ನು ಸಂಪೂರ್ಣ ಸೋಲಿಸಿ, "ಗೂರ್ಜರಾಧಿರಾಜ" ಎಂಬ ಬಿರುದನ್ನು ಧರಿಸಿದನು. ಅಲ್ಲದೇ ತನಗೆ ಈ ದಿಗ್ವಿಜಯಗಳಲ್ಲಿ ನೆರವು ನೀಡಿದ ಶೂದ್ರಕಯ್ಯ ಹಾಗೂ ಗೊಗ್ಗಿಮಯ್ಯರಿಗೆ 'ಉಜ್ಜಯಿನಿಭುಜಂಗ"ಎಂಬ ಬಿರುದು ನೀಡಿದನು. ಈ ಅವಧಿಯಲ್ಲಿ ಮುಮ್ಮಡಿ ಕೃಷ್ಣನು ದಕ್ಷಿಣದ ವೆಂಗಿ ಚಾಲುಕ್ಯರನ್ನು ನಿಗ್ರಹಿಸುವುದರಲ್ಲಿ ನಿರತನಾಗಿದ್ದನು. ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತುಂಗದಲ್ಲಿದ್ದಂತಹ ಸಂದರ್ಭದಲ್ಲಿ ಮುಮ್ಮಡಿ ಕೃಷ್ಣನು ೯೬೭ರಲ್ಲಿ ನಿಧನ ಹೊಂದಿದನು. ಇದೇ ಅವಧಿಯಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ಪರಮಾರ ಸಿಯಾಕನು ೯೭೨ರಲ್ಲಿ ಆಕ್ರಮಣ ಮಾಡಿದನು. ಮುಮ್ಮಡಿ ಕೃಷ್ಣನ ಮಗ ಖೊಟ್ಟಿಗ (೯೬೭–೭೨) ಅಶಕ್ತನಿದ್ದುದೂ ಇದಕ್ಕೆ ಇನ್ನೊಂದು ಕಾರಣವಾಗಿತ್ತು. ರಾಜಧಾನಿ ಮಳಖೇಡವು ಶತ್ರುಗಳ ವಶಕ್ಕೆ ಒಳಪಟ್ಟು ಲೂಟಿಗೆ ಸಿಕ್ಕಿ ನಲುಗಿತು. ಖೊಟ್ಟಿಗನು ಯುದ್ಧರಂಗದಲ್ಲಿ ಮಡಿದನು. ಅವನ ಮಗ ಕರ್ಕನು ಸಿಂಹಾಸನವನ್ನೇರಿದನು. ಏತನ್ಮಧ್ಯೆ ಗಂಗ ಇಮ್ಮಡಿ ಮಾರಸಿಂಹನು ಪರಮಾರ ಸಿಯಾಕನ ಧಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದನು. ಇದರಿಂದಾಗಿ ರಾಷ್ಟ್ರಕೂಟ ಸಾಮ್ರಾಜ್ಯದ ಅವಸಾನವು ತಾತ್ಕಾಲಿಕವಾಗಿ ಮುಂದೂಡಲ್ಪಟ್ಟಿತು. ಆದರೆ ಪರಮಾರರ ಧಾಳಿಯಿಂದ ಉಂಟಾದ ರಾಜಕೀಯ ಕ್ಷೋಭೆಯ ಲಾಭ ಪಡೆಯಲು ಅನೇಕ ಸಾಮಂತರು ಮುಂದಾದರು. ಅಂತಹವರಲ್ಲಿ ಬಾದಾಮಿ ಚಾಲುಕ್ಯರ ವಶಕ್ಕೆ ಸೇರಿದ ಇಮ್ಮಡಿ ತೈಲಪ್ಪನು ಪ್ರಮುಖನಾಗಿದ್ದನು. ಗಂಗ ಮುಮ್ಮಡಿ ಮಾರಸಿಂಹನು ಕರ್ಕನನ್ನು ಬದಿಗೆ ಸರಿಸಿ, ಮುಮ್ಮಡಿ ಕೃಷ್ಣನ ಮೊಮ್ಮಗನೂ, ತನ್ನ ಅಳಿಯನೂ ಆದ ನಾಲ್ಕನೆಯ ಇಂದ್ರನನ್ನು ಸಿಂಹಾಸನದ ಮೇಲೆ ಕೂರಿಸಿ ರಾಷ್ಟ್ರಕೂಟ ಸಾಮ್ರಾಜ್ಯದ ರಕ್ಷಣೆಗೆ ತಾನೇ ನಿಂತನು. ನೊಳಂಬರನ್ನು ಸಂಪೂರ್ಣ ಸೋಲಿಸಿದ ಸಾಧನೆ ಇವನದಾಗಿದ್ದು, ನನ್ನಿಯ ನೊಳಂಬ ಹಾಗೂ ಇಮ್ಮಡಿ ಪೊಳಲ್ಚೋರರು ಇವನ ಸಮಕಾಲೀನ ನೊಳಂಬ ಅರಸರಾಗಿದ್ದರು. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸಮಸ್ಯೆಯ ಸುಳಿಯಿಂದ ಮೇಲೆತ್ತಲು ಮುಮ್ಮಡಿ ಮಾರಸಿಂಹನು ಯತ್ನಿಸುತ್ತಿದ್ದಾಗ, ಅರಾಜಕತೆಯ

ಲಾಭ ಪಡೆಯಲು ಉತ್ಸುಕರಾದ ನೊಳಂಬರು, ಗಂಗವಾಡಿ ಪ್ರಾಂತದ ಮೇಲೆ ಧಾಳಿ ಮಾಡಿದರು (೯೭೨). ಆ ಸಂದರ್ಭದಲ್ಲಿ ಗಂಗ ದಂಡನಾಯಕ ಚಾವುಂಡರಾಯನು ನೊಳಂಬರನ್ನು ಸಂಪೂರ್ಣ ಸದೆಬಡಿದನು. ತತ್ಪರಿಣಾಮವಾಗಿ ನೊಳಂಬಕುಲಾಂತಕ ಎಂಬ ಬಿರುದನ್ನು ಮುಮ್ಮಡಿ ಮಾರಸಿಂಹನು ಧರಿಸಲು ಸಾಧ್ಯವಾಯಿತು. ಅಲ್ಲದೆ ವೆಂಗಿ ಚಾಲುಕ್ಯ ರಾಜ್ಯಾದಿತ್ಯನೊಂದಿಗೂ ಯುದ್ಧ ಮಾಡಬೇಕಾಯಿತು. ಆ ಯುದ್ಧದಲ್ಲಿ ರಾಜಾದಿತ್ಯನು ಕೊಲ್ಲಲ್ಪಟ್ಟನು. ಮುಮ್ಮಡಿ ಮಾರಸಿಂಹನು ಚೋಳ, ಪಾಂಡ್ಯ ಹಾಗೂ ಪಲ್ಲವರಿಗೂ ಸಿಂಹಸ್ವಪ್ನನಾಗಿದ್ದನೆಂದು ಅವನ ಕೂಡ್ಲೂರು ತಾಮ್ರಶಾಸನ ಉತ್ಪ್ರೇಕ್ಷೆಯಿಂದ ವರ್ಣಿಸಿದೆ. ಕೊಂಕಣ, ಗುಜರಾತ್, ಮಾಳ್ವಗಳ ಮೇಲೆ ಗೆಲುವು ಸಾಧಿಸಿ ಗತವೈಭವವನ್ನು ಪುನರ್‌ಸ್ಥಾಪಿಸಲು ಯತ್ನಿಸಿದನು. ಇವನ ಆಳ್ವಿಕೆಗೆ ಸೇರಿದ ಹೆಬ್ಬೆಟ್ಟ ಶಿಲಾಶಾಸನವು ಯಂತ್ರ (ಗೋವು)ಕಲ್ಲಾಗಿದ್ದು, ಗೋವುಗಳ ಸಂರಕ್ಷಣೆಗಾಗಿ ನಿಲ್ಲಿಸಿದ್ದಾಗಿದ್ದು, ಸ್ಥಳೀಯವಾಗಿ ಇಂದಿಗೂ ಅದನ್ನು ಗೋಕಲ್ಲೆಂದೇ ಕರೆಯಲಾಗುತ್ತಿದೆ. ಕೆರೆಯ ನಿರ್ಮಾಣ, ನಿರ್ವಹಣೆಗಳಿಗೆ ಇವನು ವಿಶೇಷ ಗಮನವನ್ನು ನೀಡಿದ್ದು, ಆವನಿಯ ಕೆರೆಯ ನಿರ್ವಹಣೆಗೆಂದು ಬಿತ್ತುವಟ್ಟ ಉಂಬಳಿಯನ್ನು ಬಿಟ್ಟ ಅಂಶವನ್ನು ಅವನ ಇನ್ನೊಂದು ಶಾಸನ ದಾಖಲಿಸಿದೆ. ಆದರೆ ಇವನು ಬಂಕಾಪುರದಲ್ಲಿ ಸಲ್ಲೇಖನ ವ್ರತ ಕೈಗೊಂಡು ಅಸುನೀಗುವುದರೊಂದಿಗೆ ಸಮರ್ಥ ರಕ್ಷಕರಿಲ್ಲದೆ ಅನಾಥಗೊಂಡ ರಾಷ್ಟ್ರಕೂಟ ಸಾಮ್ರಾಜ್ಯವೂ ಕೊನೆಯುಸಿರೆಳೆಯಿತು. ಇದರೊಂದಿಗೆ ರಾಷ್ಟ್ರಕೂಟರ ನಾಲ್ಕನೆಯ ಇಂದ್ರನನ್ನು ಸೋಲಿಸುವ ಮೂಲಕ ಇಮ್ಮಡಿ ತೈಲಪನು ಕಲ್ಯಾಣದ ಚಾಳುಕ್ಯ ಮನೆತನದ ಆಳ್ವಿಕೆಗೆ ಅಸ್ತಿಭಾರವನ್ನು ಹಾಕಿದನು. ಇವನ ಆಳ್ವಿಕೆಗೆ ಸೇರಿದ ಶಾಸನವೊಂದು ಹುಲಿಗುಂದದಲ್ಲಿ ಪತ್ತೆಯಾಗಿದೆ. ಮೇಲಗಾಣಿಯಿಂದ ವರದಿಯಾಗಿರುವ ೯೭೪ರ ಶಾಸನವು ಮಾರಸಿಂಗ ಪೆರ್ಮಾಡಿಯ ಸಾವಿನ ಸುದ್ದಿಯನ್ನು ದಾಖಲಿಸಿದೆ. ಅಲ್ಲೇ ಇರುವ ಇನ್ನೊಂದು ಶಾಸನ ವೀರನೊಬ್ಬನ ಸತಿಯ ಮರಣವನ್ನು ದಾಖಲಿಸುವ ಮಾಸ್ತಿಕಲ್ಲಾಗಿದೆ.

ಮುಮ್ಮಡಿ ಮಾರಸಿಂಹನ ಮರಣಾನಂತರ ಸುಮಾರು ಮೂರು ವರ್ಷಕಾಲ ಗಂಗರಾಜ್ಯದಲ್ಲಿ ಅರಾಜಕತೆ ತಲೆದೋರಿತು. ಮಾರಸಿಂಹನ ಮೂವರು ಮಕ್ಕಳಲ್ಲಿ ಒಬ್ಬರೂ ಅಧಿಕಾರ ಗದ್ದುಗೆ ಏರಲಾಗಲಿಲ್ಲ. ಮುಮ್ಮಡಿ ಮಾರಸಿಂಹನ ನಂತರ ಅವನ ಸೋದರ ಗೋವಿಂದರಸ ಹಾಗೂ ಮಾರಸಿಂಹನ ಮಕ್ಕಳುಗಳ ನಡುವೆ ಸಿಂಹಾಸನಕ್ಕಾಗಿ ಅಂತಃಕಲಹ ಏರ್ಪಟ್ಟ ಸಂದರ್ಭದಲ್ಲಿ ಸೋದರ ಗೋವಿಂದರಸನು ಅಧಿಕಾರಕ್ಕೆ ಬಂದನು. ಆದರೆ ಇದು ಮಂತ್ರಿ ಚಾವುಂಡರಾಯನಿಗೆ ಸರಿಬೀಳದೆ, ಗೋವಿಂದರಸನು ಚಾವುಂಡರಾಯನ ಕೈಯಲ್ಲಿ ಹತನಾದನು. ಪಾಂಚಾಲದೇವ (೯೭೪–೭೭) ನೆಂಬ ಸಾಮಂತನು ಅದರ ಲಾಭ ಪಡೆದು ಪ್ರಾಬಲ್ಯ ಮೆರೆದನು. ಆದರೆ ಇದೇ ಅವಧಿಯಲ್ಲಿ ತಲೆಎತ್ತಿದ ಕಲ್ಯಾಣದ ಚಾಳುಕ್ಯರ ಇಮ್ಮಡಿ ತೈಲಪನು ಪಾಂಚಾಲದೇವನೊಂದಿಗೆ ಕದನಕ್ಕಿಳಿದು, ಆ ಯುದ್ಧದಲ್ಲಿ ಪಾಂಚಾಲದೇವನು ಮರಣ ಹೊಂದಿದನು. ಇದೂ ಸಾಲದೆಂಬಂತೆ ಗಂಗ ಸಿಂಹಾಸನದ ಮೇಲೆ ಕಣ್ಣಿಟ್ಟಿದ್ದ ಮುದ್ದುರಾಚಯ್ಯನೆಂಬುವ ದಂಡನಾಯಕನನ್ನು ಗಂಗ ಮಂತ್ರಿ ಚಾವುಂಡರಾಯನು ಹತ್ಯೆಗೆಯ್ಯಬೇಕಾಯಿತು. ಈ ಎಲ್ಲಾ ಗಂಡಾಂತರಗಳು ಅಂತ್ಯಗೊಂಡ ಮೇಲೆ ಮುಮ್ಮಡಿ ಮಾರಸಿಂಹನ ಹಿರಿಯ ಮಗ ನಾಲ್ಕನೆಯ ಸತ್ಯಾಶ್ರಯ ರಾಚಮಲ್ಲನು ೯೭೪ರಲ್ಲಿ ಅಧಿಕಾರಕ್ಕೆ ಬಂದನು.

**ನಾಲ್ಕನೆಯ ರಾಚಮಲ್ಲ (೯೭೭–೯೮೫):** ಇವನು, ಸಮರ್ಥನಾದ ಮಂತ್ರಿ ಚಾವುಂಡರಾಯ ಹಾಗೂ ಬಲಿಷ್ಟ ಸೋದರನಾದ ರಕ್ಕಸಗಂಗರನ್ನು ವಿಶೇಷವಾಗಿ ಅವಲಂಬಿಸಿದ್ದು, ನಿಜವಾದ ಅರ್ಥದಲ್ಲಿ ಆಡಳಿತ ನಡೆಸಿದವರೂ ಅವರೇ. ಅದರಲ್ಲೂ ಶ್ರೇಷ್ಠ ಆಡಳಿತಗಾರನಾಗಿ, ಉತ್ತಮ ಸೇನಾನಿಯಾಗಿ ಹಾಗೂ ಉತ್ಕೃಷ್ಟ ಕಲಾಭಿಮಾನಿಯಾಗಿ, ಗಂಗ ರಾಜ್ಯದ ಕೀರ್ತಿಯನ್ನು ಉತ್ತುಂಗಕ್ಕೇರಿಸಿದ ಕೀರ್ತಿ ಮಂತ್ರಿ ಚಾವುಂಡರಾಯನಿಗೇ ಸಲ್ಲಬೇಕು. ನೊಳಂಬರನ್ನು ಸೋಲಿಸುವಲ್ಲಿ ಇವನು ಮಹತ್ವದ ಪಾತ್ರವಹಿಸಿದನು. ಅಲ್ಲದೇ ಸಣ್ಣಪುಟ್ಟ ಸಾಮಂತರನ್ನು ಬಗ್ಗು ಬಡಿದನು. ಸುಮಾರು ೫೭'ಅಡಿ ಎತ್ತರದ ಶ್ರವಣಬೆಳಗೊಳದ ಗೊಮ್ಮಟಮೂರ್ತಿ ಇವನ ಕಲ್ಪನೆಯ ಕೂಸಾಗಿದ್ದು (ಸು.೯೮೩) ವಿಶ್ವಖ್ಯಾತಿ ಪಡೆದಿದೆ. ಸ್ವತಃ ಕವಿಯಾಗಿದ್ದ ಚಾವುಂಡರಾಯನು "ಚಾವುಂಡರಾಯ ಪುರಾಣಂ"ಎಂಬ ಗದ್ಯ ಗ್ರಂಥವನ್ನು ೯೭೮ರಲ್ಲಿ ಕನ್ನಡದಲ್ಲಿ ರಚಿಸಿದ್ದಾನೆ. ಅಲ್ಲದೇ 'ಅಜಿತನಾಥ ಪುರಾಣ' ಹಾಗೂ 'ಸಾಹಸಭೀಮ ವಿಜಯ' ಗ್ರಂಥಗಳ ಕರ್ತೃವಾದ ಕವಿ ರನ್ನನೂ ಸೇರಿದಂತೆ ಹಲವಾರು ಕವಿಗಳಿಗೆ ಇವನು ಆಶ್ರಯ ನೀಡಿದ್ದನು. ಚಾವುಂಡರಾಯನಂತಹ ಸಮರ್ಥ ಮಂತ್ರಿಯಿಂದಾಗಿ ನಾಲ್ಕನೆಯ ರಾಚಮಲ್ಲನು ಧಾರ್ಮಿಕ ಚಟುವಟಿಕೆಗಳಲ್ಲಿ ಮಗ್ನನಾಗಿದ್ದು, ಇವನ ನಂತರ ಸೋದರನಾದ ರಕ್ಕಸಗಂಗ ಸಿಂಹಾಸನವನ್ನು ೯೮೫ರಲ್ಲಿ ಏರಿದನು.

**ರಕ್ಕಸಗಂಗ (೯೮೫–೧೦೨೪):** ಅಣ್ಣ ರಾಚಮಲ್ಲನಿಗೆ ಬಲಭುಜವಾಗಿ ನಿಂತು ಗಂಗ ಸಾಮ್ರಾಜ್ಯದ ರಕ್ಷಣೆಯಲ್ಲಿ ಪಾಲ್ಗೊಂಡಿದ್ದ ಇವನು"ಅಣ್ಣನಬಂಟ"ಮುಂತಾದ ಬಿರುದುಗಳನ್ನು ಹೊಂದಿದ್ದನು. ಆದರೆ ಇವನು ಅಧಿಕಾರಕ್ಕೆ ಬಂದ ಸಮಯದಲ್ಲಿ ದಕ್ಷಿಣದಲ್ಲಿ ಬಲಿಷ್ಠವಾಗಿದ್ದ ಚೋಳರನ್ನು ಎದುರಿಸಬೇಕಾಯಿತು. ಮಿಗಿಲಾಗಿ ಗಂಗರಸರ ಬೆನ್ನೆಲುಬಾಗಿದ್ದ ಮಂತ್ರಿ ಚಾವುಂಡರಾಯನು ೯೯೦ರಲ್ಲಿ ಅಸುನೀಗಿದ್ದೂ ಗಂಗ ಸಾಮ್ರಾಜ್ಯಕ್ಕೆ ಶಾಪವಾಗಿ ಪರಿಣಮಿಸಿತು. ಇವನ ಆಳ್ವಿಕೆ ಚೋಳರ ಧಾಳಿಯನ್ನು ಮೇಲಿಂದ ಮೇಲೆ ವೀಕ್ಷಿಸಿತು. ಮಿಗಿಲಾಗಿ ಚೋಳ ಒಂದನೆ ರಾಜರಾಜನು ಪ್ರಬಲ ಅರಸನಾಗಿದ್ದು, ಕೋಲಾರ ತಾಲೂಕಿನಿಂದ ವರದಿಯಾಗಿರುವ ೯೯೨ರ ಶಿಲಾಶಾಸನದಿಂದ ಒಂದನೆ ರಾಜರಾಜನು ತನ್ನ ಆಳ್ವಿಕೆಯ ಏಳನೆಯ ವರ್ಷಕ್ಕಾಗಲೇ ಗಂಗವಾಡಿ ಪ್ರಾಂತದ ಉತ್ತರ ಭಾಗವನ್ನು ವಶಪಡಿಸಿಕೊಂಡಿದ್ದ ಅಂಶ ವ್ಯಕ್ತವಾಗುತ್ತದೆ. ಆ ವೇಳೆಗಾಗಲೇ ಕುವಲಾಲನಾಡಿಗೆ, ನಿಗಿರಿಲಿ (ನೀಲಗಿರಿ) ಚೋಳಮಂಡಲ' ಎಂದು ಕರೆಯಲಾಗುತ್ತಿದ್ದ ಅಂಶವೂ ಇದರಿಂದ ಗೊತ್ತಾಗುತ್ತದೆ. ಅಲ್ಲದೆ, ನೊಳಂಬರನ್ನು ತಮ್ಮೆಡೆಗೆ ಸೆಳೆದುಕೊಳ್ಳುವಲ್ಲಿ ಚೋಳರು ಯಶಸ್ವಿಯಾಗಿದ್ದೂ ಗಂಗರ ಈ ಸೋಲಿಗೆ ಪ್ರಮುಖ ಕಾರಣವಾಗಿತ್ತು. ಒಂದನೆಯ ರಾಜರಾಜನು ಎರಡನೆ ಬಾರಿ, ೯೯೭ರಲ್ಲಿ ಗಂಗರಾಜ್ಯದ ಮೇಲೆ ಧಾಳಿ ಮಾಡಿದ ಅಂಶ ಹೊಸಕೋಟೆ ಶಿಲಾಶಾಸನದಿಂದ ಗೊತ್ತಾಗುತ್ತದೆ. ಮುಂದೆ ೧೦೦೪ರಲ್ಲಿ ಗಂಗ–ಚೋಳರ ನಡುವೆ ನಡೆದ ನಿರ್ಣಾಯಕ ಯುದ್ಧದಲ್ಲಿ (ತಲಕಾಡು) ಚೋಳ ಸೇನೆಯ ಮುಂದಾಳತ್ವವನ್ನು ಬಲಿಷ್ಠವಾದ ಯುವರಾಜ ರಾಜೇಂದ್ರ ಚೋಳನು ವಹಿಸಿದ್ದು, ಗಂಗರ ಪಾಲಿಗೆ ಮುಳ್ಳಾಗಿ ಪರಿಣಮಿಸಿತು. ಈ ಯುದ್ಧದ ಬಗ್ಗೆ ಹೆಚ್ಚಿನ ವಿವರ ಲಭ್ಯವಿಲ್ಲದಿದ್ದರೂ ರಕ್ಕಸಗಂಗನನ್ನು ಸೋಲಿಸಿದ ರಾಜೇಂದ್ರ ಚೋಳನು ಗಂಗರ ರಾಜಧಾನಿ ತಲಕಾಡನ್ನು ವಶಪಡಿಸಿಕೊಂಡಾಗ ಅದಕ್ಕೆ 'ರಾಜರಾಜಪುರ' ಎಂದು ಪುನರ್‌ನಾಮಕರಣ ಮಾಡುವ ಮೂಲಕ ಗಂಗರ ಆಡಳಿತಕ್ಕೆ ಬಲವಾದ ಕೊಡಲಿ ಪೆಟ್ಟು ನೀಡಿದನು. ಇದಾದ ಎರಡು ವರ್ಷಗಳಲ್ಲೇ (೧೦೦೬) ತಲಕಾಡಿನ ಸಮೀಪದ ಕಲಿಯೂರಿನಲ್ಲಿ ಜರುಗಿದ ಇನ್ನೊಂದು ಕಾಳಗದಲ್ಲಿ ಚೋಳ ದಂಡನಾಯಕ ಅಪ್ರಮೇಯನು ಕರ್ನಾಟಕದ ಮಾಂಡಲೀಕರ ಒಕ್ಕೂಟವನ್ನು ಸಂಪೂರ್ಣ ಸೋಲಿಸಿದನು. ಅವರಲ್ಲಿ ಪೊಯ್ಸಳನೂ ಒಬ್ಬನಾಗಿದ್ದುದು ಉಲ್ಲೇಖಾರ್ಹ. ಈ ಯುದ್ಧಗಳಿಂದಾಗಿ ಗಂಗರಾಜ್ಯದ ಬಹುಭಾಗ ಚೋಳರ ವಶಕ್ಕೆ ಒಳಪಟ್ಟಿತು. ಅನಂತರ ೧೦೨೬ರವರೆಗೆ ರಕ್ಕಸಗಂಗನು ಜೀವಿಸಿದ್ದರೂ ಚೋಳರ ಸಾಮಂತನಾಗಿ ಕೇವಲ ಧಾರ್ಮಿಕ ಸಾಹಿತ್ಯಕ ಚಟುವಟಿಕೆಗಳಿಗಷ್ಟೇ ಇವನ ಆಡಳಿತ ಸೀಮಿತವಾಗಿತ್ತು. ಎಲ್ಲಾ ದೃಷ್ಟಿಯಿಂದಲೂ ಇವನೇ ಗಂಗರ ಕೊನೆಯ ಅರಸನಾಗಿದ್ದು, ರಕ್ಕಸಗಂಗನಿಗೆ ಮಕ್ಕಳಿರದಿದ್ದರಿಂದ ಸೋದರ ಅರುಮುಳಿದೇವನ ಮಕ್ಕಳಾದ ಲೋಕವಿದ್ಯಾಧರ ಹಾಗೂ ಚಟ್ಟಲಾದೇವಿಯರನ್ನು ದತ್ತು ಪಡೆದು ಸಲಹಿದ್ದನು. ಆದರೆ ಲೋಕವಿದ್ಯಾಧರನು ಮೊದಲೇ ಗತಿಸಿದ್ದರಿಂದ ಅವನ ಮಗನಾದ ಇಮ್ಮಡಿ ಅರುಮುಳಿದೇವನು ಪಟ್ಟಕ್ಕೆ ಬಂದನು. ಇವನು ಚೋಳರ ಸಾಮಂತನಾಗಿದ್ದು, ಮುಂದೆ ಚೋಳ–ಹೊಯ್ಸಳರ ನಡುವೆ ಸ್ಪರ್ಧೆ ಏರ್ಪಟ್ಟಾಗ ಗಂಗರಸರು ಅನಿವಾರ್ಯವಾಗಿ ತಲಕಾಡಿನಿಂದ ಉತ್ತರಕ್ಕಿದ್ದ ಕೋಲಾರ ಪ್ರಾಂತಕ್ಕೆ ಹೊಯ್ಸಳರ ನಿಷ್ಠಾವಂತ ಅನುಯಾಯಿಗಳಾಗಿ ವಲಸೆ ಬಂದರೆಂದು ತೋರುತ್ತದೆ. ಇದರೊಂದಿಗೆ ತಲಕಾಡಿನ ಗಂಗರ ಆಡಳಿತವೂ ಅಂತ್ಯಗೊಂಡಿತು. ಮುಂದೆ ೧೦೦೬ ರಿಂದ ೧೧೧೪ ರವರೆಗೆ ಚೋಳರ ವಶದಲ್ಲಿದ್ದ ಗಂಗವಾಡಿ ಪ್ರಾಂತವನ್ನು, ಚೋಳರನ್ನು (೧೧೧೭) ಹೊರದಬ್ಬುವ ಮೂಲಕ ಪುನರ್‌ವಶಪಡಿಸಿಕೊಂಡ ಹೊಯ್ಸಳ ವಿಷ್ಣುವರ್ಧನನು, 'ತಲಕಾಡುಗೊಂಡ' ಎಂಬ ಬಿರುದನ್ನೂ ಧರಿಸಿದನು.

**ಬಾದಾಮಿ ಚಾಲುಕ್ಯರು (ಸು.೫೦೦–೭೫೩)**

ಕರ್ನಾಟಕವನ್ನಾಳಿದ ರಾಜಮನೆತನಗಳಲ್ಲಿ ಬಾದಾಮಿ ಚಾಳುಕ್ಯರ ಮನೆತನ ಪ್ರಮುಖವಾದುದು. ವರಾಹ ಲಾಂಛನದೊಂದಿಗೆ ಬಾದಾಮಿಯನ್ನು ರಾಜಧಾನಿಯನ್ನಾಗಿ ಹೊಂದಿದ್ದ ಇವರು, ಕ್ರಿ.ಶ.೫೦೦ ರಿಂದ ೭೫೩ರವರೆಗೆ ಸುಮಾರು ಎರಡೂವರೆ ಶತಮಾನಗಳ ಕಾಲ ರಾಜ್ಯಭಾರ ನಡೆಸಿದರು. ಆದರೆ ಈ ಸಾರ್ವಭೌಮ ರಾಜಮನೆತನವು ತನ್ನ ಆಳ್ವಿಕೆಯ ಮಧ್ಯಂತರ ಅವಧಿಯಲ್ಲಿ, ಅದರಲ್ಲೂ ಮನೆತನದ ಪ್ರಖ್ಯಾತ ದೊರೆಯಾದ ಇಮ್ಮಡಿ ಪುಲಿಕೇಶಿಯ (೬೦೮–೪೨) ಆಡಳಿತಾವಧಿಯ ಅಂತ್ಯಭಾಗದಲ್ಲಿ ಪಲ್ಲವರ ದುರಾಕ್ರಮಣದಿಂದಾಗಿ ಸುಮಾರು ಹದಿಮೂರು (೬೪೨–೬೫೫) ವರ್ಷಗಳ ರಾಜಕೀಯ ಅಜ್ಞಾತವಾಸವನ್ನೂ ಅನುಭವಿಸಬೇಕಾಯಿತು. ಒಂದನೆಯ ವಿಕ್ರಮಾದಿತ್ಯ (೬೫೫–೮೦)–ವಿಜಯಾದಿತ್ಯ(೬೯೬–೭೩೩)ರು ಒಂದೊಂದು ಬಾರಿ ಹಾಗೂ ಇಮ್ಮಡಿ ವಿಕ್ರಮಾದಿತ್ಯ (೭೩೩–೭೪೫) ಮೂರು ಬಾರಿ ಪಲ್ಲವರ ಮೇಲೇರಿ ಹೋಗಿ ಅವರ ರಾಜಧಾನಿ ಕಂಚಿಗೆ ಮುತ್ತಿಗೆ ಹಾಕಿದ್ದು ಮಹತ್ವದ ಘಟನೆಗಳಾಗಿವೆ. ಈ ಮನೆತನದ ವ್ಯಾಪ್ತಿಗೆ ಕರ್ನಾಟಕದ (ತುಂಗಭದ್ರೆಯ) ಉತ್ತರ ಭಾಗ ಒಳಪಟ್ಟಿದ್ದು, ಕೋಲಾರವನ್ನೊಳಗೊಂಡಿದ್ದ ದಕ್ಷಿಣ ಕರ್ನಾಟಕ ಭಾಗವು ಅವರೊಂದಿಗೆ ನಿಕಟ ಸಂಬಂಧ ಹೊಂದಿದ್ದ ತಲಕಾಡಿನ ಗಂಗರ

ಅಧೀನದಲ್ಲಿತ್ತು. ತಲಕಾಡಿನ ಗಂಗರು ಬಾದಾಮಿ ಚಾಲುಕ್ಯರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿದ್ದು, ಈ ಎರಡು ಮನೆತನಗಳ ನಡುವಣ ಸಂಬಂಧ ಸೌಹಾರ್ದಯುತವಾಗಿತ್ತು. ತತ್ಪರಿಣಾಮವಾಗಿ ಬಾದಾಮಿ ಚಾಲುಕ್ಯರ ನೇರ ಆಡಳಿತಕ್ಕೆ ಕೋಲಾರ ಜಿಲ್ಲೆಯು ಒಳಪಡಲಿಲ್ಲವೆಂಬುದು ಗಮನಾರ್ಹ. ಆದರೂ ಈ ರಾಜಮನೆತನಕ್ಕೆ ಸಂಬಂಧಿಸಿದ ಎರಡು ತಾಮ್ರಶಾಸನಗಳು ಜಿಲ್ಲೆಯಲ್ಲಿ ಪತ್ತೆಯಾಗಿದ್ದು, ಆ ಶಾಸನಗಳ ಹಿನ್ನೆಲೆಯಲ್ಲಿ ಈ ರಾಜಮನೆತನದ ಇತಿಹಾಸವನ್ನಿಲ್ಲಿ ಸಾಂದರ್ಭಿಕವಾಗಿ ಪ್ರಸ್ತಾಪಿಸಲಾಗಿದೆ.

ಗೌರಿಬಿದನೂರು ತಾಲೂಕಿನ ಹೊಸೂರಿನಲ್ಲಿ ಪತ್ತೆಯಾಗಿರುವ ೬೪೦ರ ತಾಮ್ರಶಾಸನವು (೭೦೮–೬೪೨), ಪ್ರಿಯಪುತ್ರಿ ಅಂಬೇರಾಳ ಕೋರಿಕೆಯಂತೆ ಸಂಗಮತೀರ್ಥದಲ್ಲಿ ವಿವಿಧ ಗೋತ್ರದ ೩೧ ಬ್ರಾಹ್ಮಣರಿಗೆ ಸುಮಾರು ವಿಷಯದೊಳಗಣ ಪೆರಿಯಾಳ ಗ್ರಾಮವನ್ನು ಇಮ್ಮಡಿ ಪುಲಿಕೇಶಿಯು ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ. ಈ ಶಾಸನದಲ್ಲಿ ಚಾಲುಕ್ಯರ ವಂಶಾವಳಿಯನ್ನು ನೀಡಲಾಗಿದ್ದು, ಅಶ್ವಮೇಧ ಯಾಗವನ್ನು ಮಾಡಿದ ಒಂದನೆಯ ಪುಲಿಕೇಶಿಯನ್ನು ಪ್ರಸ್ತಾಪಿಸುತ್ತಾ ಹರ್ಷವರ್ಧನನ ಮೇಲೆ ಗೆಲುವು ಸಾಧಿಸಿದ ಸತ್ಯಾಶ್ರಯ ಇಮ್ಮಡಿ ಪುಲಿಕೇಶಿಯನ್ನು ಪ್ರಶಂಸಿಸುತ್ತದೆ. ಆದರೆ ಈ ದಾನವನ್ನು ಸಂಗಮತೀರ್ಥದಲ್ಲಿ ನೀಡಿದ್ದು, ದಾನ ನೀಡಲ್ಪಟ್ಟ ಗ್ರಾಮವು ಕಣಿಗಲ್ ಪ್ರದೇಶದ ಪೆರಿಯಾಳವಾಗಿದ್ದು, ಅನಂತರದಲ್ಲಿ ಕಾರಣಾಂತರದಿಂದ ಈ ಶಾಸನವು ಮೂಲ ನೆಲೆಯಿಂದ ಹೊಸೂರಿಗೆ ಬಂದು ಸೇರಿದೆ. ಅಷ್ಟೇ ಹೊರತು ಈ ಶಾಸನಕ್ಕೂ ಕೋಲಾರ ಜಿಲ್ಲೆಗೂ ಯಾವುದೇ ನೇರ ಸಂಬಂಧವಿಲ್ಲ

ಇದೇ ರೀತಿ ಕೋಲಾರ ತಾಲೂಕಿನ ವಕ್ಕಲೇರಿಯಲ್ಲಿ ಬಹಳ ಹಿಂದೆಯೇ ಪತ್ತೆಯಾಗಿದ್ದು, ಈಗಾಗಲೇ ವರದಿಯಾಗಿರುವ ಇನ್ನೊಂದು ತಾಮ್ರಶಾಸನವು, ಬಾದಾಮಿ ಚಾಳುಕ್ಯ ರಾಜಮನೆತನದ ಕೊನೆಯ ಅರಸನಾದ ಇಮ್ಮಡಿ ಕೀರ್ತಿವರ್ಮನ ಆಳ್ವಿಕೆಯ ೧೧ನೆಯ ವರ್ಷದಲ್ಲಿ ಚಕ್ರವರ್ತಿ ಇಮ್ಮಡಿ ಕೀರ್ತಿವರ್ಮನಿಂದ ನೀಡಲ್ಪಟ್ಟಿರುವ ಬ್ರಹ್ಮದೇಯ ದಾನ ಶಾಸನವಾಗಿದೆ. ಬಾದಾಮಿ ಚಾಳುಕ್ಯ ರಾಜಮನೆತನದ ಇತಿಹಾಸವನ್ನು ಅರಿಯಲು ಪೂರಕ ಮಾಹಿತಿಯನ್ನು ಒದಗಿಸುವ ಮೂಲಕ ಈ ಶಾಸನ ಹೆಚ್ಚು ಉಪಯುಕ್ತವಾಗಿದ್ದು, ಅದರಿಂದಾಗಿ ಇದು ಮಹತ್ವ ಪಡೆದಿದೆ. ಬಾದಾಮಿ ಚಾಲುಕ್ಯರ ಇತರ ಶಾಸನಗಳಲ್ಲಿ ಲಭ್ಯವಿರುವ ಅನೇಕ ವಿಷಯಗಳು ಇದರಲ್ಲೂ ಉಲ್ಲೇಖಿಸಲ್ಪಟ್ಟಿದ್ದು, ಅವರನ್ನು ಮಾನವ್ಯಗೋತ್ರರು, ಹಾರೀತಿ ಪುತ್ರರು, ಸಪ್ತಮಾತೃಕಾರಾಧಕರು, ಕಾರ್ತಿಕೇಯ ಪರಿರಕ್ಷಕರು, ನಾರಾಯಣ ಪ್ರಸಾದಿಗಳು ಹಾಗೂ ವರಾಹ ಲಾಂಛಿತರೆಂದು ಹೇಳುತ್ತಾ ಒಂದನೆಯ ಪುಲಿಕೇಶಿಯು ಕೈಗೊಂಡಿದ್ದ ಅಶ್ವಮೇಧಯಾಗ; ಬನವಾಸಿಯನ್ನು ಗೆದ್ದ ಒಂದನೆಯ ಕೀರ್ತಿವರ್ಮ; ಸಕಲೋತ್ತರಪಥೇಶ್ವರನಾದ ಹರ್ಷವರ್ಧನನನ್ನು ಪರಾಜಯಗೊಳಿಸಿ, "ಪರಮೇಶ್ವರ" ಎಂಬ ಬಿರುದು ಧರಿಸಿದ ಸತ್ಯಾಶ್ರಯ ಇಮ್ಮಡಿ ಪುಲಿಕೇಶಿ; ಪಾಂಡ್ಯ, ಚೋಳ, ಕೇರಳ ಹಾಗೂ ಕಳಭ್ರ ಅರಸರನ್ನು ಸೋಲಿಸಿದ ಒಂದನೆಯ ವಿಕ್ರಮಾದಿತ್ಯ; ವತ್ಸರಾಜನನ್ನು ಸೋಲಿಸಿದ ವಿನಯಾದಿತ್ಯ; ಪಲ್ಲವರನ್ನು ಸೋಲಿಸಿದ ವಿಜಯಾದಿತ್ಯ ಹಾಗೂ ಇಮ್ಮಡಿ ವಿಕ್ರಮಾದಿತ್ಯರ ಸಾಧನೆಗಳನ್ನು ದಾಖಲಿಸುವ ಮೂಲಕ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ. ಆದರೆ ಸಿಂಹಾಸನಕ್ಕಾಗಿ ಇಮ್ಮಡಿ ಪುಲಿಕೇಶಿಯು ಚಿಕ್ಕಪ್ಪ ಮಂಗಳೇಶನ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದು, ಅದಕ್ಕೆ ಬಾಣರು ಸಹಕಾರ ನೀಡಿದ್ದು, ಮುಂತಾದ ಮಹತ್ವದ ಅಂಶಗಳು ಇದರಲ್ಲಿ ದಾಖಲಿಸಲ್ಪಟ್ಟಿಲ್ಲ. ಆದರೆ ಈ ಶಾಸನದಿಂದ ಅರಸನು ಭೀಮಾರಥಿ ನದಿಯ ಉತ್ತರ ದಂಡೆಯ ಮೇಲಿನ ಭಂಡಾರ ಗಾವಿಟ್ಟಗೆ (ಸೋಲ್ಲಾಪುರ ಜಿಲ್ಲೆ) ನೆಲೆವೀಡಿನಲ್ಲಿದ್ದಾಗ ದೇಸಿರಾಜನ ಕೋರಿಕೆಯಂತೆ ಬ್ರಾಹ್ಮಣ ಮಾಧವವರ್ಮನಿಗೆ ಪಾನುಂಗಲ್ ವಿಷಯದೊಳಗಣ ಅರದೊರೆ (ಅರೆತೊರೆ) ನದಿಯ ದಕ್ಷಿಣ ತಟದಲ್ಲಿದ್ದ ತಾಮ್ರಮುಗೆ, ಪಾನುಂಗಲ್, ಕಿರುವಳ್ಳಿ ಹಾಗೂ ಬಾಳವೂರುಗಳ ನಡುವಣ ನೆಂಗಿಯೂರು, ನುದಿಹಳ್ಳಿಗಳನ್ನೊಳಗೊಂಡ ಸುಳ್ಳಿಯೂರನ್ನು ಸರ್ವಮಾನ್ಯವಾಗಿ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅಂದರೆ ಇದು ಮೂಲತಃ ಇಂದಿನ ಹಾನಗಲ್ (ಧಾರವಾಡ ಜಿಲ್ಲೆ) ಪ್ರದೇಶಕ್ಕೆ ಸಂಬಂಧಿಸಿದ್ದು, ಅನಂತರದಲ್ಲಿ ವಕ್ಕಲೇರಿ ಗ್ರಾಮಕ್ಕೆ ಕಾರಣಾಂತರವಾಗಿ ವಲಸೆ ಬಂದವರೊಂದಿಗೆ ಇದೂ ಬಂದಿರುವಂತೆ ತೋರುತ್ತದೆ. ಆದುದರಿಂದ ಈ ಎರಡು ಶಾಸನಗಳನ್ನು ಆಧರಿಸಿ, ಕೋಲಾರ ಪ್ರದೇಶದಲ್ಲಿ ಚಾಲುಕ್ಯರ ಪ್ರಾಬಲ್ಯವಿದ್ದುದು ಸ್ಪಷ್ಟವಾಗುತ್ತದೆಂದು ತೀರ್ಮಾನಕ್ಕೆ ಬರುವುದು ಅಸಮಂಜಸವಾಗುತ್ತದೆ. ಆದರೂ ಬಾದಾಮಿ ಚಾಲುಕ್ಯ ಹಾಗೂ ಕಂಚಿ ಪಲ್ಲವರ ನಡುವೆ ಜರುಗಿದ ನಿರಂತರ ಯುದ್ಧಗಳ ಕಾವು ಎಷ್ಟರಮಟ್ಟಿಗೆ ಚಾಲುಕ್ಯರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದ ಗಂಗರ ಗಂಗವಾಡಿ ಪ್ರಾಂತದಲ್ಲಿದ್ದ ಕೋಲಾರ ಜಿಲ್ಲೆಯ ಮೇಲಾಯಿತೆಂಬುದು ಗಮನಿಸಬೇಕಾದ ವಿಷಯ. ಆಲಂಪೂರು (ಕರ್ನೂಲ್ ಜಿಲ್ಲೆ) ಹಾಗೂ ವೆಂಗಿಗಳು ಚಾಲುಕ್ಯರಿಗೆ ಪಲ್ಲವರ ಮೇಲಿನ

ಆಕ್ರಮಣಗಳಲ್ಲಿ ಪ್ರಮುಖ ತಂಗುದಾಣಗಳಾಗಿದ್ದಂತೆ ತೋರುತ್ತಿದ್ದು, ಪಲ್ಲವರ ಮೇಲೆ ಧಾಳಿ ಮಾಡುವಾಗ ಚಾಲುಕ್ಯ ಸೇನೆ ಅದೇ ಮಾರ್ಗದಲ್ಲಿ ಮುನ್ನಡೆದಿರಬೇಕು. ಅಲ್ಲದೆ ಕಂಚಿಯಿಂದ ಬಾದಾಮಿಗೆ ಇದ್ದ ಪ್ರಾಚೀನ ದಂಡಿನ ದಾರಿಯು ಪೆನುಗೊಂಡೆ, ತಿರುಪತಿ, ಗೂಟಿ, ಬಳ್ಳಾರಿ, ಕೊಪ್ಪಳ, ರೋಣ ಮಾರ್ಗವಾಗಿ ಸಾಗಿತ್ತೆಂದು ತೋರುತ್ತದೆ. ಮಿಗಿಲಾಗಿ ಗಂಗ ರಾಜ್ಯವು ಈ ಎರಡು ಸಾಮ್ರಾಜ್ಯಗಳ ನಡುವಣ ತಟಸ್ಥ ರಾಜ್ಯ (Buffer State) ವಾಗಿದ್ದರೂ, ಕೊಂಗುನಾಡಿನ ಗಡಿಯಲ್ಲಿದ್ದ ಗಂಗವಾಡಿಯೊಳಗೆ ಅಂತರ್ಗತವಾಗಿದ್ದ ಕೋಲಾರ ಪ್ರದೇಶಕ್ಕೆ ಪರೋಕ್ಷವಾಗಿ ಅಲ್ಪಸ್ವಲ್ಪ ಯುದ್ಧದ ಬಿಸಿ ತಟ್ಟಿರುವಂತೆ ತೋರುತ್ತದೆ. ಆದರೆ ಇದನ್ನು ಪುಷ್ಟೀಕರಿಸುವ ಚಾಲುಕ್ಯರ ಶಿಲಾಶಾಸನಗಳು ಕೋಲಾರ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ.

**ಮಳಖೇಡದ ರಾಷ್ಟ್ರಕೂಟರು (೭೫೭–೯೭೩)**

ಕರ್ನಾಟಕವನ್ನು ಆಳಿದ ಚಕ್ರಾಧಿಪತ್ಯಗಳಲ್ಲಿ ರಾಷ್ಟ್ರಕೂಟರ ಸಾರ್ವಭೌಮಾಡಳಿತ ಒಂದು ಮೈಲಿಗಲ್ಲು. ಮಳಖೇಡವು ಇವರ ರಾಜಧಾನಿ ಪಟ್ಟಣವಾಗಿದ್ದು ನೇಗಿಲು ಅವರ ರಾಜಲಾಂಛನವಾಗಿತ್ತು. ಈ ಮನೆತನಕ್ಕೆ ಸೇರಿದ ಒಂದನೆಯ ಕೃಷ್ಣ ಅಮೋಘವರ್ಷ ನೃಪತುಂಗ, ಮುಮ್ಮಡಿ ಕೃಷ್ಣರಂತಹ ಆಳರಸರು ಉತ್ತರಭಾರತಕ್ಕೂ ದಿಗ್ವಿಜಯ ಕೊಂಡೊಯ್ದ ಪರಿಣಾಮವಾಗಿ ಉತ್ತರ ಭಾರತದ ಪ್ರಮುಖ ರಾಜಧಾನಿ ಕನೂಜಿನ ಮೇಲೂ ಇವರು ಸ್ವಲ್ಪ ಕಾಲ ಅಧಿಪತ್ಯ ಸ್ಥಾಪಿಸಿದ್ದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಭಾರತದ ಇತಿಹಾಸದಲ್ಲಿ 'ಕನೂಜ್‌ನ ಸಾಮ್ರಾಜ್ಯಯುಗ' (Age of the Imperial Kanuj) ಎಂದು ಕರೆಯಲ್ಪಟ್ಟಿರುವ ಈ ಅವಧಿಯು ವಾಸ್ತವಿಕವಾಗಿ ರಾಷ್ಟ್ರಕೂಟರು ಕನೂಜಿನ ಮೇಲೆ ಪರಮಾಧಿಕಾರವನ್ನು ಹೊಂದಿದ್ದ ಅವಧಿಯಾಗಿರುವುದರಿಂದ, ಅದನ್ನು 'ರಾಷ್ಟ್ರಕೂಟರ ಸಾಮ್ರಾಜ್ಯಯುಗ' (Age of the Imperial Rashtrakutas) ಎಂದು ಕರೆಯುವುದು ಹೆಚ್ಚು ಸೂಕ್ತವೆಂದು ಡಾ.ಸೂರ್ಯನಾಥಕಾಮತ್‌ರಂತಹ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಬಾದಾಮಿ ಚಾಲುಕ್ಯರನ್ನು ಬದಿಗೊತ್ತಿ ಅಧಿಕಾರ ಗದ್ದುಗೆಯನ್ನೇರಿದ ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಬಾದಾಮಿ ಚಾಲುಕ್ಯರ ನಿಕಟವರ್ತಿಗಳಾಗಿದ್ದ ಗಂಗರು ಸುಲಭವಾಗಿ ಅಂಗೀಕರಿಸಲಿಲ್ಲ. ಅಲ್ಲದೆ ರಾಷ್ಟ್ರಕೂಟ ಸಾಮ್ರಾಜ್ಯದ ಅಂತಃಕಲಹದಲ್ಲಿ ಮೇಲಿಂದ ಮೇಲೆ ಹಸ್ತಕ್ಷೇಪ ಮಾಡಿದ ಗಂಗರು, ರಾಷ್ಟ್ರಕೂಟರನ್ನು ಎದುರು ಹಾಕಿಕೊಳ್ಳುವ ಮೂಲಕ ರಾಷ್ಟ್ರಕೂಟರ ಉಗ್ರ ಧಾಳಿಗೂ ತುತ್ತಾಗಬೇಕಾಯಿತು. (ವಿವರಗಳಿಗೆ ಇದೇ ಅಧ್ಯಾಯದ 'ತಲಕಾಡಿನ ಗಂಗರು' ಭಾಗವನ್ನು ನೋಡಿ) ತತ್ಪರಿಣಾಮವಾಗಿ ಗಂಗವಾಡಿ ಪ್ರಾಂತ ಸ್ವಲ್ಪ ಕಾಲ ರಾಷ್ಟ್ರಕೂಟರ ವಶದಲ್ಲಿತ್ತು. ಈ ಧಾಳಿಗಳು ಗಂಗವಾಡಿ ಪ್ರದೇಶದಲ್ಲಿದ್ದ ಕೋಲಾರ ಪ್ರದೇಶದ ಮೇಲೆ ದುಷ್ಪರಿಣಾಮ ಬೀರಿರಬಹುದಾದರೂ ಅದನ್ನು ಪುಷ್ಟೀಕರಿಸುವ ಪೂರಕ ದಾಖಲೆಗಳು ಅಧಿಕ ಸಂಖ್ಯೆಯಲ್ಲಿ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ. ಜಿಲ್ಲೆಯಿಂದ ಈವರೆಗೆ ವರದಿಯಾಗಿರುವ ರಾಷ್ಟ್ರಕೂಟರ ಕಾಲದ ಏಕೈಕ ಶಾಸನವು ಮಾಲೂರು ತಾಲೂಕಿನ ಶಿವಾರ (ಕಸಬಾ ಹೋಬಳಿ)ದಲ್ಲಿ ಪತ್ತೆಯಾಗಿವೆ. ಸುಮಾರು ೯೫೦ಕ್ಕೆ ಸೇರಿದ ಈ ಶಾಸನ ಕನ್ನರನ (ಮುಮ್ಮಡಿ ಕೃಷ್ಣ) ಸೇನಾನಿ ಪೊಳಣ್ಣನು ಚಿಕ್ಕೂರ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಶಿವಪೂರ (ಇಂದಿನ ಶಿವಾರ ಪಟ್ಟಣ) ಗೌಡನಾದ ಪುಲಿನಲ್ಲೂರಿನ ನಿಜರಾವಯ್ಯನ ಮಗ ಮುದ್ದಯ್ಯನು ಹೋರಾಡುತ್ತಾ ಮಡಿದ ಅಂಶವನ್ನು ದಾಖಲಿಸಿದೆ. ಇದೊಂದು ವೀರಗಲ್ಲು ಶಾಸನವಾಗಿರುವುದರಿಂದ ಹೆಚ್ಚಿನ ಮಾಹಿತಿ ಲಭಿಸುವುದಿಲ್ಲ. ಆದರೂ ಈ ಶಾಸನದ ಕಾಲಕ್ಕಾಗಲೇ ಗಂಗ ಇಮ್ಮಡಿ ಬೂತುಗನು ಮುಮ್ಮಡಿ ಕೃಷ್ಣನ ನಿಕಟವರ್ತಿಯಾಗಿದ್ದ ಅಂಶ ಅವನ ಆತಕೂರು ಶಾಸನದಿಂದ ವೇದ್ಯವಾಗುತ್ತದೆ. ಆ ಶಾಸನದ ಹಿನ್ನೆಲೆಯಲ್ಲಿ ಶಿವಾರದ ಈ ವೀರಗಲ್ಲು ಶಾಸನವನ್ನು ಪರಿಶೀಲಿಸುವ ಅಗತ್ಯವಿದೆ.

**ಹೆಂಜೇರಿನ ನೊಳಂಬರು**

ಸುಮಾರು ಎಂಟನೆಯ ಶತಮಾನದ ಮಧ್ಯಭಾಗದಿಂದ ೧೧ನೆಯ ಶತಮಾನದವರೆಗೆ ಕೋಲಾರ ಜಿಲ್ಲಾ ಪ್ರದೇಶವೂ ಸೇರಿದಂತೆ ಕರ್ನಾಟಕ–ಆಂಧ್ರ ರಾಜ್ಯಗಳ ಕೆಲವು ಪ್ರದೇಶಗಳನ್ನೊಳಗೊಂಡ ನೊಳಂಬವಾಡಿ–೩೨,೦೦೦ದ ಮೇಲೆ ಅಧಿಪತ್ಯವನ್ನು ಹೊಂದಿದ್ದ ನೊಳಂಬರು, ರಾಜಧಾನಿ ಹೆಂಜೇರು (ಹೇಮಾವತಿ) ಪಟ್ಟಣದಿಂದ ರಾಜ್ಯಭಾರ ಮಾಡುತ್ತಿದ್ದರು. ಪಲ್ಲವರ ಸಾಮಂತರಾಗಿದ್ದ ಇವರು ಸಹಜವಾಗಿಯೇ ಪಲ್ಲವರ ನಿಷ್ಠಾವಂತ ಅನುಯಾಯಿಗಳಾಗಿ ಗಂಗ, ಬಾಣ ಮುಂತಾದ ನೆರೆಹೊರೆಯ ಪಲ್ಲವ ವಿರೋಧಿ ಬಣಗಳೊಂದಿಗೆ ಯುದ್ಧಗಳಲ್ಲಿ ಪಾಲ್ಗೊಳ್ಳಬೇಕಾಯಿತು. ಇವರ ಪ್ರಭುತ್ವಕ್ಕೊಳಪಟ್ಟಿದ್ದ ನೊಳಂಬವಾಡಿ–೩೨,೦೦೦ದ ವ್ಯಾಪ್ತಿಗೆ ಕೋಲಾರ ಜಿಲ್ಲೆಯೂ ಒಳಪಟ್ಟಿದ್ದ ಅಂಶವನ್ನು ಜಿಲ್ಲೆಯಲ್ಲಿ ಈವರೆಗೆ ಪತ್ತೆಯಾಗಿರುವ ನೊಳಂಬರಸರ

ಶಾಸನಗಳು ಮಾರ್ದನಿಸುತ್ತವೆ. ಅಲ್ಲದೇ ಗಂಗಾರುಸಾವಿರ ನಾಡಿನ ಅಧಿಪತ್ಯವೂ ಇವರದಾಗಿದ್ದು, ಅದು ಮೇಲಿಂದ ಮೇಲೆ ಕೈಬದಲಾಗುತ್ತಿದ್ದು, ಅದಕ್ಕಾಗಿ ಬಾಣರೊಂದಿಗೆ ಇವರು ಕಾದಾಡಬೇಕಾಗಿತ್ತು. ಈ ಮನೆತನದ ಮೂಲಪುರುಷನೂ, ಈಶ್ವರ ವಂಶಜನೂ, ಕಾಂಚಿಪತಿಯೂ ಆದ ತ್ರಿನಯನಪಲ್ಲವನ ಕುಲದಲ್ಲಿ ಹುಟ್ಟಿದ ಮಂಗಳನಾಗಿದ್ದು, ಇವರ ವಂಶಾವಳಿಯನ್ನು ಹೇಮಾವತಿ ಹಾಗೂ ನೆಲಪಲ್ಲಿ ಶಾಸನಗಳ ನೆರವಿನಿಂದ ಪುನಾರಚಿಸಬಹುದಾಗಿದೆ. ಈ ಮನೆತನದ ಮೊದಲ ದೊರೆ **ಮಂಗಲ(ಸು. ೭೩೫–೭೮೫)**ನಿಗೆ 'ನೊಳಂಬಾಧಿರಾಜ' ಎಂಬ ಬಿರುದಿದ್ದು, ಇವನು ಚಂಡಿಯ ಆರಾಧಕನಾಗಿದ್ದು, ಬಾದಾಮಿ ಚಾಲುಕ್ಯರ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಇವನ ಶಾಸನಗಳು ಚಿತ್ರದುರ್ಗ ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರದೇಶಕ್ಕೆ ಸೀಮಿತವಾಗಿದೆ. ಇವನ ಮಗನಾದ **ಸಿಂಹಪೋತ (ಸು.೯೮೫–೮೦೫)**ನಿಗೆ 'ಕಲಿನೊಳಂಬಾಧಿರಾಜ', 'ಕಲಿಯರಸ' ಎಂಬ ಬಿರುದುಗಳಿದ್ದು, ತಲಕಾಡಿನ ಗಂಗರ ಸಾಮಂತನಾಗಿದ್ದ ಇವನು, ಗಂಗರ ಅಂತಃಕಲಹದಲ್ಲಿ ಶಿವಮಾರನ ಪಕ್ಷ ವಹಿಸಿದ ಅಂಶ ಚಿತ್ರದುರ್ಗದ ದೊಡ್ಡ ಉಳ್ಳರ್ತಿಯ ಶಾಸನದಿಂದ ವೇದ್ಯವಾಗುತ್ತದೆ. ರಾಷ್ಟ್ರಕೂಟ ಮುಮ್ಮಡಿ ಗೋವಿಂದನ ವಿರುದ್ಧ ದಂಗೆ ಎದ್ದಿದ್ದ ಆಳುಪ ಇಮ್ಮಡಿ ಚಿತ್ರವಾಹನನನ್ನು ನಿಗ್ರಹಿಸುವಲ್ಲಿ ಇವನು ಮಹತ್ವದ ಪಾತ್ರ ವಹಿಸಿದ್ದನು. ಇವನಿಗೆ 'ಪೃಥ್ವಿವಲ್ಲಭ' ಎಂಬ ಬಿರುದಿತ್ತು. ಇವನ ಒಬ್ಬ ಮಗಳನ್ನು ಗಂಗ ಮನೆತನಕ್ಕೆ ವಿವಾಹ ಮಾಡಿಕೊಡಲಾಗಿತ್ತು. ಮುಂದೆ ಈತನ ಮಗನಾದ **ಚಾರುಪೊನ್ನೇರ (ಸು.೮೦೦–೮೩೦)**ನು ಅಧಿಕಾರಕ್ಕೆ ಬಂದನು. ಪರಮೇಶ್ವರ, ಪಲ್ಲವಾಧಿರಾಜ ಮುಂತಾದ ಬಿರುದುಗಳನ್ನು ಧರಿಸಿದ್ದ ಇವನು ರಾಷ್ಟ್ರಕೂಟ ಮುಮ್ಮಡಿ ಗೋವಿಂದನ ಅಧೀನದಲ್ಲಿ, ನೊಳಂಬಳಿಗೆ–೧೦೦೦, ನಿರ್ಗುಂದ–೩೦೦, ಇರಿಗಲವಾಡಿ–೩೦೦ ನಾಡುಗಳನ್ನು ಆಳುತ್ತಿದ್ದು, ಅವನ ಮಡದಿ ಗವಗಣಬ್ಬೆಯು ಮದರಿಕಲ್ಲನ್ನೂ, ಮಗ ಪಲ್ಲವಮಲ್ಲನು ತೊಂಡೂರು–೧೨, ಕೋಲೂರು–೧೨, ಗಂಗವೂರು–೩೦(?) ಪ್ರಾಂತಗಳನ್ನು ಆಳುತ್ತಿದ್ದನು. ಏತನ್ಮಧ್ಯೆ ಮುಮ್ಮಡಿ ಗೋವಿಂದನ ನಂತರ ರಾಷ್ಟ್ರಕೂಟ ಮನೆತನದಲ್ಲಿ ಆಂತರಿಕ ಬಿಕ್ಕಟ್ಟು ಉದ್ಭವಿಸಿದಾಗ, ಈತ ತನ್ನ ನಿಷ್ಠೆಯನ್ನು ಗಂಗರಿಗೆ ವರ್ಗಾಯಿಸಿಕೊಂಡನು. ಅಲ್ಲದೇ ಗಂಗದೊರೆ ಒಂದನೆಯ ರಾಚಮಲ್ಲನ ಮಗಳಾದ ಜಯಬ್ಬೆಯನ್ನು ತನ್ನ ಮಗ ಪೊಳಲ್ಚೋರನಿಗೆ ತಂದುಕೊಳ್ಳುವ ಮೂಲಕ ಗಂಗರಿಗೆ ಮತ್ತಷ್ಟು ನಿಕಟವರ್ತಿಯಾಗಿದ್ದನು.

**ಒಂದನೆಯ ಪೊಳಲ್ಚೋರ (ಸು.೮೩೦–೮೭೦):** ಶಾಸನಗಳಲ್ಲಿ ನೊಳಂಬಾಧಿರಾಜನೆಂದೇ ಉಲ್ಲೇಖಿಸಲ್ಪಟ್ಟಿರುವ ಇವನು ತನ್ನ ಮಡದಿಯಿಂದಾಗಿ ಗಂಗರಿಗೆ ನಿಕಟವರ್ತಿಯಾಗಿದ್ದನು. ಈತನ ಅಧಿಕಾರಾವಧಿಯಲ್ಲಿ ಒಂದನೆಯ ಅಮೋಘವರ್ಷ ನೃಪತುಂಗನು ರಾಷ್ಟ್ರಕೂಟ ದೊರೆಯಾಗಿದ್ದು ಅವನಿನ್ನೂ ಅಪ್ರಾಪ್ತನಿದ್ದುದರಿಂದ, ಅದರ ಲಾಭ ಪಡೆದು ಒಂದನೆಯ ರಾಚಮಲ್ಲನ ಆಡಳಿತಾವಧಿಯಲ್ಲಿ ಸ್ವತಂತ್ರರಾದ ಗಂಗರು, ರಾಜ್ಯ ವಿಸ್ತರಣೆಯಡಿ ಪಲ್ಲವರನ್ನು ಸೋಲಿಸಿ ಅವರ ಸಾಮಂತರಾಗಿದ್ದ ಬಾಣರ ವಶದಲ್ಲಿದ್ದ ಗಂಗಾರುಸಾವಿರವನ್ನು ಅವರಿಂದ ಕಸಿದುಕೊಂಡು ತಮ್ಮನ್ನು ಬೆಂಬಲಿಸಿದ, ತಮ್ಮ ಅಳಿಯನೂ ಆದ ನೊಳಂಬ ಪೊಳಲ್ಚೋರನಿಗೆ ಅದರ ಆಡಳಿತವನ್ನು ವಹಿಸಿದರು. ಇದರೊಂದಿಗೆ ನೊಳಂಬರ ಆಡಳಿತ ವ್ಯಾಪ್ತಿ ಹೆಚ್ಚಿತ್ತಾದರೂ, ಬಾಣರೊಂದಿಗಿನ ನಿರಂತರ ವೈಷಮ್ಯಕ್ಕೆ ಕಾರಣವಾಯಿತು. ಈ ಕಾದಾಟದಲ್ಲಿ ಬಾಣ ಪಡೆಯ ಮುಖ್ಯಸ್ಥನಾದ ಅಗ್ಗಲರಸನನ್ನು ಕೊಂದ ಅಂಶ ಶಾಸನದಿಂದ ವೇದ್ಯವಾಗುತ್ತದೆ. ಅಲ್ಲದೇ ನೊಳಂಬ ರಾಷ್ಟ್ರದ ವೆಂಗಿರಾಜನೆಂಬುವನು ಮರಣವನ್ನೂ ತಿಳಿಸುತ್ತದೆ. ಅದನ್ನು ಪುನರ್ ವಶಪಡಿಸಿಕೊಳ್ಳಲು ಮುಂದೆ ಬಾಣರು ಯತ್ನಿಸಿದರಾದರೂ ಗಂಗ ಒಂದನೆಯ ನೀತಿಮಾರ್ಗನು ಅವರನ್ನು ಹಿಮ್ಮೆಟ್ಟಿಸಿದನು. ಈ ನಿಟ್ಟಿನಲ್ಲಿ ಗಂಗರಿಗೆ ನೆರವಾದ ನೊಳಂಬ ಒಂದನೆಯ ಪೊಳಲ್ಚೋರನು ಬಾಣ ಮಾಂಡಲಿಕ (ವೇಮಗಲ್ ಪ್ರದೇಶವನ್ನು ಆಳುತ್ತಿದ್ದ) ಪೊಂಪಲನನ್ನು ಕದನದಲ್ಲಿ ಕೊಂದು ಗಂಗಾರುಸಾಸಿರ ಪ್ರಾಂತದಲ್ಲಿ ನೊಳಂಬರ ಆಡಳಿತವನ್ನು ಸ್ಥಿರಗೊಳಿಸಿದನು. ಈತನು ತನ್ನ ಮಗ ಒಂದನೆಯ ಮಹೇಂದ್ರನಿಗೆ ಗಂಗ ರಾಜಕುಮಾರಿ ಗಾಮಬ್ಬೆಯೊಂದಿಗೆ ವಿವಾಹ ಮಾಡಿಸಿದ್ದನು. ಈತನು ತನ್ನ ಆಳ್ವಿಕೆಯ ಕೊನೆಯ ಭಾಗದಲ್ಲಿ ವೆಂಗಿ ಚಾಲುಕ್ಯರೊಂದಿಗೆ ಕದನಕ್ಕೆ ಇಳಿಯಬೇಕಾಯಿತು. ಇವನ ಆಳ್ವಿಕೆಯಲ್ಲಿ ನೊಳಂಬ ರಾಜ್ಯವು ಸಾಕಷ್ಟು ವಿಸ್ತಾರಗೊಂಡು ಕರ್ನಾಟಕದ ಕೋಲಾರ ಹಾಗೂ ಅದಕ್ಕೆ ಹೊಂದಿಕೊಂಡಂತ್ತಿದ್ದ ತುಮಕೂರು, ಬೆಂಗಳೂರು, ಚಿತ್ರದುರ್ಗ ಹಾಗೂ ನೆರೆಯ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗಳ ಜೊತೆಗೆ ಚಿತ್ತೂರು ಜಿಲ್ಲೆಯ ಕೆಲವು ಪ್ರದೇಶಗಳು ನೊಳಂಬರ ಆಡಳಿತಕ್ಕೆ ಒಳಪಟ್ಟಿದ್ದವು. ಒಂದನೆಯ ರಾಚಮಲ್ಲ, ಒಂದನೆಯ ನೀತಿಮಾರ್ಗ ಹಾಗೂ ಇಮ್ಮಡಿ ರಾಚಮಲ್ಲರು ಇವನ ಸಮಕಾಲೀನ ಗಂಗರಸರಾಗಿದ್ದರು. ಇವನನ್ನು ಶಾಸನಗಳಲ್ಲಿ ಮಹಾಸಾಮಂತನೆಂದು ಕರೆಯಲಾಗಿದ್ದು, ಅವನ ಶೌರ್ಯ–ಸಾಹಸಗಳನ್ನು ವರ್ಣರಂಜಿತವಾಗಿ ವಿವರಿಸಲಾಗಿದೆ. ಈತನ ಅಧಿಕಾರಾವಧಿಯಲ್ಲಿ ನಂದಿಯ ದೇವಾಲಯ ಒಂದಕ್ಕೆ

ಧರ್ಮಶಕ್ತಿಪಂಡಿತ ಹಾಗೂ ಕಿರುವಯ್ಯಗಾವುಂಡರು ಶಿಖರವೊಂದನ್ನು ಕಟ್ಟಿಸಿದ ಅಂಶ ಅಲ್ಲಿಯ ಶಾಸನವೊಂದರಿಂದ ವ್ಯಕ್ತವಾಗುತ್ತದೆ. ಇವನ ಆಳ್ವಿಕೆಗೆ ಸೇರಿದ ಅಗಳಿ ಶಾಸನದಲ್ಲಿ ವಿಷ್ಣು ದೇವಾಲಯಕ್ಕೆ ಭೂದಾನ ನೀಡಿದ ಅಂಶ ದಾಖಲಾಗಿದೆ.

**ನೊಳಂಬಾಧಿರಾಜ ಮಹೇಂದ್ರ (ಸು.೮೭೦–೮೯೭):** ಒಂದನೆಯ ಪೊಳಲ್ಚೋರ ಹಾಗೂ ಗಂಗ ಜಯಬ್ಬೆಯರ ಮಗನಾದ ಇವನು ಗಂಗ ಅರಸ ಒಂದನೆಯ ಎರೆಯಂಗ ನೀತಿಮಾರ್ಗನ ಸೋದರಳಿಯನೂ ಆಗಿದ್ದು, ಬರಗೂರು (ತುಮಕೂರು ಜಿ.) ಹಾಗೂ ಹೇಮಾವತಿ (ಅನಂತಪುರ ಜಿ.)ಯ ೮೭೮ರ ಶಾಸನಗಳೇ ಈತನ ಕಾಲದ ಪ್ರಾಚೀನ ಶಾಸನಗಳಾಗಿವೆ. ಬರಗೂರು ಶಾಸನದಿಂದ ಇವನು ಅಧಿಕಾರಕ್ಕೆ ಬರುವ ಮುನ್ನ ಬಲಿಷ್ಟ ಪ್ರತಿರೋಧವನ್ನು ಎದುರಿಸಬೇಕಾಯಿತೆಂಬ ಅಂಶ ಮನವರಿಕೆಯಾಗುತ್ತದೆಯಾದರೂ, ಅದೇನೆಂದು ಸ್ಪಷ್ಟವಾಗುವುದಿಲ್ಲ. ಗೌರಿಬಿದನೂರು ತಾಲೂಕಿನ ನಗರಕೆರೆಯ ತೇದಿರಹಿತ ತ್ರುಟಿತ ವೀರಗಲ್ಲು ಶಾಸನದಲ್ಲಿ ಚೋಳ ಮಹಾರಾಜನ ಆಡಳಿತದ ಉಲ್ಲೇಖದೊಂದಿಗೆ ದಡಿಗ, ಮಹೇಂದ್ರರು ಪ್ರಸ್ತಾಪವಿದೆಯಾದರೂ, ಹೆಚ್ಚಿನ ವಿವರ ಲಭಿಸುವುದಿಲ್ಲ. ಬಂಗಾರಪೇಟೆ ತಾಲೂಕಿನ ಕಾರುಬೆಲೆಯ ಸುಮಾರು ೮೭೦ರ ವೀರಗಲ್ಲು ಶಾಸನ ಹಾಗೂ ನೆರೆಯ ಬೆಂಗಳೂರು ಜಿಲ್ಲೆಯ ಶಾಸನವೂ ಸೇರಿದಂತೆ ಅನೇಕ ಶಾಸನಗಳು, ಇವನು ಗಂಗಾರುಸಾಸಿರ ನಾಡನ್ನು ಆಳುತ್ತಿದ್ದ ಅಂಶವನ್ನು ದಾಖಲಿಸಿವೆ. ಇವನು ನೆರೆಯ ತೆಲುಗು ಚೋಡರನ್ನು ಸೋಲಿಸಿ, ರೇನಾಡು–೭೦೦೦ ಪ್ರಾಂತದ ನೈಋತ್ಯ ಭಾಗಗಳನ್ನು ವಶಪಡಿಸಿಕೊಂಡನು. ಅಲ್ಲದೆ ತೆಲುಗು ಚೋಡ ಮಹೇಂದ್ರ ವಿಕ್ರಮನನ್ನು ವಿಶ್ವಾಸಕ್ಕೆ ತೆಗೆದುಕೊಂಡನು. ಇದರಿಂದಾಗಿ ನೊಳಂಬರು ಬಾಣರನ್ನು ನಿಯಂತ್ರಿಸಲು ಅನುಕೂಲವಾಯಿತು. ಏತನ್ಮಧ್ಯೆ ಪಲ್ಲವರು ಹಾಗೂ ಪಾಂಡ್ಯರ ನಡುವೆ ಕಾಳಗವುಂಟಾಯಿತು. ಪಲ್ಲವರ ಬಣದಲ್ಲಿದ್ದ ವೈದುಂಬರು ಹಾಗೂ ಬಾಣರು, ಪಾಂಡ್ಯರನ್ನು ಬೆಂಬಲಿಸಿದ ನೊಳಂಬರ ಮೇಲೇರಿ ಬಂದರು. ಆದರೆ ಅವರ ಮುನ್ನಡೆಯನ್ನು ಸೋರೆಮಡುವು, ಮುದಿಮಡುವು (ಸು.೮೮೩) ಮುಂತಾದ ಸ್ಥಳಗಳಲ್ಲಿ ನಿಯಂತ್ರಿಸಿ, ಬಾಣರನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದ ನೊಳಂಬ ಮಹೇಂದ್ರನು 'ಬಾಣ ಕುಲಾಂತಕ' ಎಂಬ ಬಿರುದನ್ನು ಧರಿಸಿದನು. ಅಲ್ಲದೇ ಬಾಣರ ವಶದಲ್ಲಿದ್ದ ಚಿತ್ತೂರು ಪ್ರಾಂತವನ್ನು ವಶಪಡಿಸಿಕೊಂಡ ಅಂಶವನ್ನೂ ೮೮೩ರ ಶಾಸನ ದಾಖಲಿಸಿದೆ.

ನೊಳಂಬರ ಪರಂಪರಾನುಗತ ಶತ್ರುಗಳಾಗಿದ್ದ ಬಾಣರು, ನೊಳಂಬ ರಾಜ್ಯದ ಪೂರ್ವಗಡಿಯಲ್ಲಿದ್ದರು. ಗಂಗ ಶಾಖೆಗೆ ಸೇರಿದ ಒಂದನೆಯ ಪೃಥ್ವಿಪತಿಯ ಮಗಳಾದ ಕುಂದವ್ವೆಯನ್ನು, ಬಾಣ ಒಂದನೆಯ ವಿಕ್ರಮಾದಿತ್ಯ ಬಾಣ ವಿದ್ಯಾಧರ ಜಯಮೇರುಭೂಪನು ವಿವಾಹವಾಗಿದ್ದನು. ಈ ಸಂಬಂಧಗಳಿಂದಾಗಿ ಬಾಣರು ಮೂಲ ಗಂಗ ಮನೆತನದ ಪ್ರಮುಖ ವಿರೋಧಿಗಳಾಗಿದ್ದುದರಿಂದ, ಗಂಗರ ಸಾಮಂತರಾದ ನೊಳಂಬರು ಸಹಜವಾಗಿ ಬಾಣರ ವಿರೋಧಿಗಳಾಗಿದ್ದರು.

ಪಲ್ಲವ ರಾಜಕುಮಾರರಾದ ನೃಪತುಂಗ ಹಾಗೂ ಅಪರಾಜಿತರ ನಡುವೆ ಪಲ್ಲವ ಸಿಂಹಾಸನಕ್ಕಾಗಿ ಘರ್ಷಣೆ ನಡೆದಾಗ, ಗಂಗ ಪರುವಿಶಾಖೆಯ ಒಂದನೆಯ ಪೃಥ್ವಿಪತಿ, ಬಾಣ ಹಾಗೂ ವೈದುಂಬರು ಅಪರಾಜಿತನನ್ನು ಬೆಂಬಲಿಸಿದರು. ಆಗ ನಡೆದ ಘರ್ಷಣೆಯ ಬಿಸಿ ಗಂಗವಾಡಿ, ನೊಳಂಬವಾಡಿ ಹಾಗೂ ತೆಲುಗು ಚೋಳ ರಾಜ್ಯಗಳಿಗೂ ತಟ್ಟಿತು. ಪಾಂಡ್ಯರು, ತಲಕಾಡಿನ ಗಂಗರು, ನೊಳಂಬರು ಹಾಗೂ ತೆಲುಗು ಚೋಡರು ನೃಪತುಂಗನನ್ನು ಬೆಂಬಲಿಸಿದರು. ಈ ಯುದ್ಧದಲ್ಲಿ ಒಂದನೆಯ ಪೃಥ್ವಿಪತಿ ಗತಿಸಿದನಾದರೂ ಅಪರಾಜಿತನಿಗೆ ಗೆಲುವಾಯಿತು. ತತ್ಪರಿಣಾಮವಾಗಿ ಅವನ ಬೆಂಬಲಿಗರಾಗಿದ್ದ ಬಾಣ–ವೈದುಂಬರರು ನೊಳಂಬವಾಡಿಯ ಕೆಲವು ಭಾಗಗಳನ್ನು ವಶಪಡಿಸಿಕೊಂಡರು. ಬಾಗೇಪಲ್ಲಿ ತಾಲೂಕಿನ ಯೆರ್ರಗುಡಿ(ಬೇಚಿರಾಕ್)ಯ ಸುಮಾರು ಒಂಭತ್ತನೆಯ ಶತಮಾನದ ಶಾಸನ, ಗಂಗ ತ್ರಿನೇತ್ರ ವೈದುಂಬ ಮಹಾರಾಜನ ಆಡಳಿತವನ್ನು ಉಲ್ಲೇಖಿಸುತ್ತಾ, ನೊಳಂಬಾಧಿರಾಜನೊಂದಿಗೆ ಹೋರಾಡುತ್ತಾ ಮಡಿದ ವೀರನೊಬ್ಬನಿಗೆ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಇದೇ ಕಾಲಕ್ಕೆ ಸೇರಿದ ಶ್ರೀನಿವಾಸಪುರ ತಾಲೂಕಿನ ಇನ್ನೊಂದು ಶಾಸನವೂ ವೈದುಂಬ ಮಹಾರಾಜರ ಆಡಳಿತವನ್ನು ಉಲ್ಲೇಖಿಸುತ್ತದೆ. ವೈದುಂಬ ರಾಜ್ಯದ ಗಡಿ ಕಿರುತೊರೆ (ಉತ್ತರ ಪೆನ್ನಾರ್) ಆಗಿದ್ದು, ನೊಳಂಬ ಹಾಗೂ ತೆಲುಗು ಚೋಡ ರಾಜ್ಯಗಳ ಗಡಿಗೆ ಹೊಂದಿಕೊಂಡಂತೆ ಇದ್ದ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲದೇ ವೈದುಂಬರು ತೆಲುಗು ಚೋಡರ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದ ಅಂಶವೂ ವೇದ್ಯವಾಗುತ್ತದೆ. ಶ್ರೀನಿವಾಸಪುರ ತಾಲೂಕಿನ ಬೈಯಪಳ್ಳಿಯ ಶಾಸನ ನೊಳಂಬಾಧಿರಾಜ, ಚೋಳಪೆರ್ಮನಡಿ ಹಾಗೂ ಮಹೇಂದ್ರರು ಕಿರುತೊರೆಯನ್ನಾಳುತ್ತಿದ್ದಾಗ, ಆನೆಯೂರ (೮೮೫) ಕಾಳಗದಲ್ಲಿ ಕಾಡುವೆಟ್ಟಿಗಳ ವಿರುದ್ಧ ಕಾದಾಡುತ್ತ ಮಡಿದ ಪಲ್ಲವರ ದೇವಯ್ಯನ ಮರಣವನ್ನು ದಾಖಲಿಸಿದೆ.

ಮುಳಬಾಗಿಲು ತಾಲೂಕಿನ ಬಂಗವಾಡಿಯ ಸುಮಾರು ೮೮೦ರ ಶಾಸನ, ಮಹಾವಲಿ ಬಾಣರಸನ ಆಡಳಿತವನ್ನು ದಾಖಲಿಸುತ್ತಾ ಪಲ್ಲವ, ಬಾಣ ಹಾಗೂ ವೈದುಂಬರ ಸಂಯುಕ್ತ ಸೈನ್ಯವು ಗಂಗ ರಾಚಮಲ್ಲ, ನೊಳಂಬ, ಮೈಯಿಂದಡಿ ಹಾಗೂ ದಡಿಗರೊಂದಿಗೆ 'ಮಂಡವು' ಬಳಿ ಕದನಕ್ಕಿಳಿದಾಗ, ಪಗೆ ಕಲಿಯರಸನ ಮಗನಾದ ವಿಜಯಿತ್ತನು ಕುದುರೆ ಮೇಲೆ ಕುಳಿತು ಕಾದಾಡುತ್ತಾ ಅಸುನೀಗಿದ ಅಂಶವನ್ನು ದಾಖಲಿಸಿದೆ. ಇದೇ ಊರಿನ ಇನ್ನೊಂದು ಶಾಸನ, ಗಂಗಮೂಲದ ವಿಜಯನರಸಿಂಹ ವಿಕ್ರಮವರ್ಮನ ಆಳ್ವಿಕೆಯ ೨೪ನೆಯ ವರ್ಷದಲ್ಲಿ ನೀಡಲ್ಪಟ್ಟಿದ್ದು, ಬಾಣ, ದಡಿಗ ಹಾಗೂ ಮಹೇಂದ್ರ ವಿಕ್ರಮರ ವಿರುದ್ಧ ಕಾದಾಡುತ್ತ ಮಡಿದ ವೀರನೊಬ್ಬನಿಗೆ ದಾನ ನೀಡಿದ್ದನ್ನು ದಾಖಲಿಸಿದೆ. ಚಿಂತಾಮಣಿ ತಾಲೂಕಿನ ನೆಕ್ಕುಂದಿ ಶಾಸನವು ಮಹಾವಲಿ ವಾಣರಸನು ರಾಜ್ಯವನ್ನೂ, ರಾಮಯರಸನು ನೆಕ್ಕುನ್ದಿಯನ್ನೂ ಆಳುತ್ತಿದ್ದಾಗ, ಊರಳಿವಿನಲ್ಲಿ ಸಾವುಗ(?) ಗ್ರಾಮದ ನೊಳಂಬ ಗಾಮುಂಡರ ಮಗನನ್ನು ಇರಿದು ಕೊಂದ ಅಯ್ಯಪ ಎಂಬುವನೂ ಸತ್ತನೆಂದು ದಾಖಲಿಸಿದೆ. ಕೋಲಾರ ಜಿಲ್ಲೆಯ ಬಾಗೇಪಲ್ಲಿ, ಚಿಂತಾಮಣಿ ಹಾಗೂ ಮುಳಬಾಗಿಲು ತಾಲೂಕುಗಳಲ್ಲಿ ನೊಳಂಬರ ಶತ್ರುಗಳಾದ ಬಾಣ, ಗಂಗ (ಉಪಶಾಖೆ) ಹಾಗೂ ವೈದುಂಬರ ಸುಮಾರು ೯ನೇ ಶತಮಾನದ ಅಂತ್ಯಭಾಗದ ಶಾಸನಗಳು ಲಭಿಸುವುದು ಉಲ್ಲೇಖಾರ್ಹವಾಗಿದ್ದು, ಆ ವೇಳೆಗಾಗಲೇ ನೊಳಂಬರ ಈ ಪ್ರದೇಶಗಳು ಅವರಿಂದ ಕೈಬಿಟ್ಟು ಹೋಗಿದ್ದ ಅಂಶ ಇದರಿಂದ ವ್ಯಕ್ತವಾಗುತ್ತದೆ.

ಇವನ ಕಾಲಕ್ಕೆ ಸೇರಿದ ಮುಳಬಾಗಿಲು ತಾಲೂಕಿನ ಮೋತಕಪಲ್ಲಿಯ ಸುಮಾರು ೮೮೫ರ ಶಾಸನದಿಂದ ಪಲ್ಲವರು ಹಾಗೂ ಪರುವಿ ಗಂಗ ಒಂದನೆಯ ಪೃಥ್ವಿಪತಿ, ಸಂಯುಕ್ತವಾಗಿ ಪಾಂಡ್ಯರೊಂದಿಗೆ ಯುದ್ಧದಲ್ಲಿ ತೊಡಗಿದ್ದಾಗ ತೆಲುಗು ಚೋಡರ ಮೈದಡಿಯರಸರ ಆಳಾದ ಆರುಂಬರಗಂಡನು ಹೋರಾಡುತ್ತಾ ಮಡಿದ ಅಂಶವನ್ನು ದಾಖಲಿಸುತ್ತಾ, ತಾಯಲೂರು ಕೆರೆ ಕೆಳಗಿನ ಗದ್ದೆಯನ್ನು ಕಲ್ನಾಟಾಗಿ ದಾನ ಬಿಟ್ಟ ಅಂಶವನ್ನೂ ದಾಖಲಿಸಿದೆ. ನೊಳಂಬ ಮಹೇಂದ್ರನು, ಬಾಣರಸರ ಅಧೀನ ಪ್ರದೇಶವಾದ ಪುಲಿನಾಡಿಗೂ ಮುತ್ತಿಗೆ ಹಾಕಿ, ಅದನ್ನು ವಶಪಡಿಸಿಕೊಂಡ ಅಂಶ ಬೇರೆ ಶಾಸನದಿಂದ ಗೊತ್ತಾಗುತ್ತದೆ. ಬಾಣ–ವೈದುಂಬರ ಮೇಲಿನ ಗೆಲುವು ಹಾಗೂ ತೆಲುಗು ಚೋಡರ ವಿಶ್ವಾಸಗಳಿಂದ ಉಬ್ಬಿದ ಒಂದನೆಯ ಮಹೇಂದ್ರನು, ಗಂಗ ಇಮ್ಮಡಿ ರಾಚಮಲ್ಲನ ವಿರುದ್ಧ ಯುದ್ಧಕ್ಕೆ ಸಜ್ಜಾದನು. ಹಲವಾರು ವೈವಾಹಿಕ ಸಂಬಂಧಗಳಿಂದ ಬೆಸೆಯಲ್ಪಟ್ಟಿದ್ದ ಗಂಗ–ನೊಳಂಬರ ನಡುವೆ ಯುದ್ಧಕ್ಕೆ ಕಾರಣವಾದರೂ ಏನೆಂಬುದಕ್ಕೆ ನಿಖರ ಉತ್ತರವಿಲ್ಲ. ಪರಸ್ಪರ ಸಹಕಾರದಿಂದ ಯಶಸ್ಸಿನ ತುದಿಯಲ್ಲಿದ್ದ ಈ ಎರಡು ಮನೆತನಗಳ ನಡುವೆ ಉಲ್ಬಣಗೊಂಡ ಸಂಬಂಧ ಅನೇಕ ಯುದ್ಧಗಳಿಗೆ ದಾರಿ ಮಾಡಿಕೊಟ್ಟಿತು. ಇವನು ಗಂಗವಾಡಿ–೯೬೦೦೦ವನ್ನು ವಶಪಡಿಸಿಕೊಂಡನೆಂದು ನೊಳಂಬ ಶಾಸನಗಳು ಹೇಳುತ್ತವಾದರೂ, ಇಮ್ಮಡಿ ಮಾರಸಿಂಹನ ಕೂಡಲೂರು ತಾಮ್ರಶಾಸನದಿಂದ, ಗಂಗ ಎರೆಯಪ್ಪ ಹಾಗೂ ಇಮ್ಮಡಿ ಬೂತುಗರ ಶೌರ್ಯದಿಂದಾಗಿ, ಇಮ್ಮಡಿ ರಾಚಮಲ್ಲನು ಒಂದನೆಯ ಮಹೇಂದ್ರನನ್ನು ಹಿಮ್ಮೆಟ್ಟಿಸಿದ ಅಂಶ ವೇದ್ಯವಾಗುತ್ತದೆ. ಹುಂಚ ಶಾಸನ ಗಂಗ ಎರೆಯಪ್ಪನು ಒಂದನೆಯ ಮಹೇಂದ್ರನನ್ನು ಯುದ್ಧರಂಗದಲ್ಲಿ ಕೊಂದು 'ಮಹೇಂದ್ರಾಂತಕ' ಎಂಬ ಬಿರುದನ್ನು ಧರಿಸಿದನೆಂದು ಹೇಳುತ್ತದೆ. ಮಂಡ್ಯ ಜಿಲ್ಲೆಯ ತಾಯಲೂರಿನ ೮೯೫ರ ಶಾಸನವೇ ಒಂದನೆಯ ಮಹೇಂದ್ರನ ಕೊನೆಯ ಶಾಸನವಾಗಿದೆ. ಅಂದರೆ ಸು. ೮೯೭ರಲ್ಲಿ ಇವನು ನಿಧನ ಹೊಂದಿರಬೇಕು.

ಅತ್ಯಂತ ಮಹತ್ವಾಕಾಂಕ್ಷಿ ದೊರೆಯಾಗಿದ್ದ ಇವನ ಆಳ್ವಿಕೆಯಡಿ ನೊಳಂಬ ರಾಜ್ಯದ ಗಡಿ ನಾಲ್ಕು ದಿಕ್ಕಲ್ಲೂ ವಿಸ್ತರಿಸಿದ್ದು, ಅದು ನೊಳಂಬವಾಡಿ–೩೨೦೦೦ ಎಂದೇ ಪ್ರಸಿದ್ಧವಾಯಿತು. ಬಾಣರ ಮೇಲಿನ ವಿಜಯದ ನೆನಪಾಗಿ ಈತನು ಬರಗೂರಿನಲ್ಲಿ ಮಹೇಂದ್ರೇಶ್ವರ ದೇವಾಲಯವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಇವನಿಗೆ ಗಾಮಬ್ಬೆ ಬಿಜ್ಜಮಹಾದೇವಿ, ಪರಮಮಹಾದೇವಿ, ಅಕ್ಕಬ್ಬೆ ಹಾಗೂ ದೊಂಬಬ್ಬೆ ಎಂಬ ರಾಣಿಯರಿದ್ದರು.

**ಒಂದನೆಯ ಅಯ್ಯಪದೇವ (ಸು.೮೯೭–೯೩೪):** ಮಹೇಂದ್ರನ ಪಟ್ಟದರಸಿ ಗಂಗ ಗಾಮಬ್ಬೆಯ ಉದರ ಸಂಜಾತನಾದ ಇವನು ಅಧಿಕಾರಕ್ಕೆ ಬರುತ್ತಿದ್ದಂತೆ ಹಿಂದೆ ನೊಳಂಬರಿಗೆ ಸೇರಿದ್ದು, ಹಾಲಿ ಗಂಗ ಎರೆಯಪ್ಪನ ವಶದಲ್ಲಿದ್ದ ನಂದಗಿರಿ ಮುಂತಾದ ಆಯಕಟ್ಟಿನ ದುರ್ಗಗಳನ್ನು ಪುನರ್‌ವಶಪಡಿಸಿಕೊಳ್ಳಲು ಮುಂದಾಗಬೇಕಾಯಿತು. ಅದಕ್ಕಾಗಿ ಇವನು ಗಂಗ ಎರೆಯಪ್ಪ ನೀತಿಮಾರ್ಗನ ವಿರುದ್ಧ ಹಲವಾರು ಯುದ್ಧಗಳನ್ನು ಮಾಡಬೇಕಾಯಿತು. ಆದರೆ ಕ್ರಮೇಣ ಒಮ್ಮತ ಏರ್ಪಟ್ಟ ನಂತರ ಗಂಗ–ನೊಳಂಬರ ಸಂಬಂಧ ಸುಧಾರಿಸಿತು. ಕಾರೆಕಟ್ಟೆ(೯೦೦) ಯುದ್ಧದಲ್ಲಿ ಸೋತ ನೊಳಂಬರಿಗೆ, ಅವರ ಮೊದಲ ಸ್ಥಾನಮಾನವನ್ನು ನೀಡುವ ಮೂಲಕ ನೊಳಂಬರ ವಿಶ್ವಾಸವನ್ನು ಪುನರ್‌ಗಳಿಸುವಲ್ಲಿ ಗಂಗ ಇಮ್ಮಡಿ ರಾಚಮಲ್ಲನು ಯಶಸ್ವಿಯಾದನು.

ಗಂಗರಾಜಕುಮಾರಿ ಪೊಲ್ಲಬ್ಬರಸಿಯನ್ನು ವಿವಾಹವಾಗುವುದರೊಂದಿಗೆ ಈ ಮನೆತನಗಳ ಸಂಬಂಧ ಮತ್ತಷ್ಟು ಗಟ್ಟಿಯಾಯಿತು. ಇದರಿಂದಾಗಿ ಬಲುಬೇಗ ಇವನು ಗಂಗರಿಗೆ ನಿಕಟನಾದನು. ಆದರೆ ರಾಷ್ಟ್ರಕೂಟರ ಪ್ರಾಬಲ್ಯಕ್ಕೆ ಗಂಗರು ಅನಿವಾರ್ಯವಾಗಿ ತಲೆಬಾಗಬೇಕಾಗಿ ಬಂದಾಗ, ಅವರ ಸಾಮಂತರಾಗಿದ್ದ ನೊಳಂಬರೂ ರಾಷ್ಟ್ರಕೂಟರ ಪರಮಾಧಿಕಾರವನ್ನು ಅಂಗೀಕರಿಸಿದರು. ಆದರೆ ರಾಷ್ಟ್ರಕೂಟ ಇಮ್ಮಡಿ ಕೃಷ್ಣನು ತನ್ನ ಸೇನೆಯನ್ನು ಗಂಗವಾಡಿ–ನೊಳಂಬವಾಡಿ ಪ್ರದೇಶಗಳಿಂದ ಹಿಂತೆಗೆದುಕೊಳ್ಳುತ್ತಿದ್ದಂತೆ ಇವರೂ ಸ್ವತಂತ್ರ ಆಡಳಿತಕ್ಕೆ ಮುಂದಾದಂತೆ ತೋರುತ್ತದೆ. ಆದರೂ ನಾಲ್ಕನೆಯ ಗೋವಿಂದನ ಸಾಮಂತರಾಗಿ ಇವರು ಮುಂದುವರಿದರೆಂಬುದಕ್ಕೆ ಪುರಾವೆಗಳಿವೆ.

ಆದರೆ ತನ್ನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಇವನು ರಾಷ್ಟ್ರಕೂಟರಿಗೆ ನಿಷ್ಠನಾಗಿ ಅವರ ವೆಂಗಿ ಧಾಳಿಗಳಿಗೆ ಬೆಂಬಲ ನೀಡುವ ಮೂಲಕ ಮಾಸವಾಡಿ–೧೪೦, ಕೋಗಳಿ–೫೦೦ ಪ್ರಾಂತಗಳನ್ನು ಆಳುತ್ತಿದ್ದ ಅಂಶ ಬಳ್ಳಾರಿ ಜಿಲ್ಲೆಯ ಶಿರಸ್ಥಹಳ್ಳಿಯ ಶಾಸನದಿಂದ ವೇದ್ಯವಾಗುತ್ತದೆ. ತತ್ಪರಿಣಾಮವಾಗಿ ಚಾಲುಕ್ಯ ಭೀಮನ ಧಾಳಿಗೆ ನೊಳಂಬವಾಡಿಯು ತುತ್ತಾಗಿ, ಆ ಯುದ್ಧದಲ್ಲಿ ಅಯ್ಯಪದೇವನು ೯೩೪ರಲ್ಲಿ ಹತನಾದಂತೆ ತೋರುತ್ತದೆ. ಗೌರಿಬಿದನೂರು ತಾಲೂಕಿನ ನಗರಕೆರೆಯ ತ್ರುಟಿತ ವೀರಗಲ್ಲು ಶಾಸನವೊಂದರಲ್ಲಿ ಚೋಡಮಹಾರಾಜ ಹಾಗೂ ಅಯ್ಯಣ್ಣರ ಉಲ್ಲೇಖವಿದ್ದು ವಿವರ ಹಾಳಾಗಿದೆ. ಸುಮಾರು ೯೩೦ರಲ್ಲಿ ನೀಡಲ್ಪಟ್ಟಿರುವ ಕಾರುಬೆಳೆ (ನಿರ್ವಸತಿ ಗ್ರಾಮ) ಶಾಸನ ಸರ್ವಶಾಸ್ತ್ರಪಾರಂಗತೆಯಾಗಿದ್ದ ಶ್ರೀ ಸಾವಿ ನಿರ್ಮಡಿಯನ್ನು ಪ್ರಶಂಸಿಸುತ್ತದೆ.

**ಬೀರನೊಳಂಬ ಅಣ್ಣಿಗ (ಸು.೯೩೪–೯೪೦):** ಒಂದನೆಯ ಅಯ್ಯಪ್ಪದೇವ ಹಾಗೂ ಗಂಗ ಪೊಲ್ಲಬ್ಬರಸಿಯರ ಮಗನಾದ ಇವನು ಸುಮಾರು ೯೨೨ರಿಂದಲೇ ತನ್ನ ತಂದೆಗೆ ಆಡಳಿತದಲ್ಲಿ ನೆರವಾಗುತ್ತಿದ್ದು, ಚಾಲುಕ್ಯ ರಾಜಕುಮಾರಿ ಅತ್ತಿಯಬ್ಬರಸಿಯನ್ನು ವಿವಾಹವಾಗಿದ್ದನು. ಕೂಡಲೂರು ತಾಮ್ರಶಾಸನದ ಪ್ರಕಾರ ಗಂಗ ಮುಮ್ಮಡಿ ರಾಚಮಲ್ಲನ ಕೈಯಲ್ಲಿ ಕೊತ್ತಮಂಗಲ, (ಹೆಗ್ಗಡದೇವನ ಕೋಟೆ ತಾ.) ಕಾಳಗದಲ್ಲಿ ಹೀನಾಯ ಸೋಲನ್ನುಂಡ ಇವನಿಗೆ ಗಂಗರಸನು ಕರುಣೆ ತೋರಿ ಕ್ಷಮಿಸಿದನೆಂದು ಗೊತ್ತಾಗುತ್ತದೆ. ಇಮ್ಮಡಿ ನೀತಿಮಾರ್ಗನ ಮರಣಾನಂತರ ಏರ್ಪಟ್ಟ ಅಂತಃಕಲಹದ ಲಾಭ ಪಡೆದು ಗಂಗರ ಪರುವಿ ಶಾಖೆಯ ನನ್ನಿಯ ಗಂಗನ ನೆರವಿನೊಂದಿಗೆ ತಲಕಾಡಿನ ಗಂಗರ ವಿರುದ್ಧ ಇವನು ಕದನಕ್ಕಿಳಿದನು. ಅಲ್ಲದೇ ಮುಮ್ಮಡಿ ರಾಚಮಲ್ಲನನ್ನು ಸೋಲಿಸಿ ಗಂಗ ಇಮ್ಮಡಿ ಬೂತುಗನನ್ನು ಗಂಗ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸುವಲ್ಲಿ ಯಶಸ್ವಿಯಾದನು. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಸುಮಾರು ೯೩೮ರ ವೇಳೆಗೆ ನೊಳಂಬ ಅಣ್ಣಿಗನನ್ನು ಸೋಲಿಸಿದ ಅಂಶ ೯೪೦ ರ ದೇವೂಲಿ ಶಾಸನದಿಂದ ಗೊತ್ತಾಗುತ್ತದೆ. ವರುಣಶಿವ ಭಟಾರ ಹಾಗೂ ತ್ರಿಭುವನ ಕರ್ತಾರ ಭಟಾರರು ಕ್ರಮವಾಗಿ ನೊಳಂಬೇಶ್ವರದ ಸ್ಥಾನ ಹಾಗೂ ಅವನಿ ಸ್ಥಾನದ ಆಡಳಿತವನ್ನು ನಿರ್ವಹಿಸಿದ ಶೈವಯತಿಗಳಾಗಿದ್ದರು. ಅದರಲ್ಲೂ ವರುಣ ಶಿವಭಟಾರರು ಬೀರನೊಳಂಬ ಅಣ್ಣಿಗನಿಗೆ ಸಮೀಪವರ್ತಿಗಳೂ ಆಗಿದ್ದರೆಂದು ತಿಳಿದುಬರುತ್ತದೆ. ಅಣ್ಣಿಗನ ಮಗ ಇರುಳಚೋರನ ಬಗ್ಗೆ ಹೆಚ್ಚಿನ ಮಾಹಿತಿ ಲಭಿಸುವುದಿಲ್ಲ.

**ಇರಿವ ನೊಳಂಬ ದಿಲೀಪ (ಸು.೯೪೧–೯೬೮):** ಬೀರ ನೊಳಂಬ ಅಣ್ಣಿಗನ ಮಗನಾದ ಇರುಳ ಚೋರನ ಬದಲು ಅವನ ಸೋದರನಾದ ದಿಲೀಪನು ಅಧಿಕಾರಕ್ಕೆ ಬಂದನು. ಇವನಿಂದ ನೀಡಲ್ಪಟ್ಟಿರುವ ೯೪೨ರ ಹೇಮಾವತಿ ಸ್ಥಂಭ ಶಾಸನದಲ್ಲಿ ನೊಳಂಬರ ಮೂಲ ಹಾಗೂ ವಂಶಾವಳಿಗಳ ಬಗ್ಗೆ ವಿವರವಾದ ಮಾಹಿತಿ ಇದೆ. ಅಲ್ಲದೇ ಆವನಿಯಲ್ಲಿ ಧರ್ಮಾಧಿಕಾರಿಯಾಗಿದ್ದ ಚಿಲ್ಲೂಕ ಭಟಾರನಿಗೆ ದಾನ ಕೊಟ್ಟ ವಿವರವೂ ಇದರಲ್ಲಿದೆ. ಮಿಗಿಲಾಗಿ ೫೦ ದೇವಾಲಯ ಹಾಗೂ ಎರಡು ಕೆರೆಗಳನ್ನು ನಿರ್ಮಿಸಿದ ತ್ರಿಭುವನ ಕರ್ತಾರ ಭಟರ ಎಂಬುವ ಶೈವ ಯತಿಯು ೯೬೧ರಲ್ಲಿ ಗತಿಸಿದ ವಿವರವಿದೆ. ಕೋಲಾರದ ಶಾಸನದ ಪ್ರಕಾರ, ಈತ ೨೭ ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದು ಗೊತ್ತಾಗುತ್ತದೆ. ಇವನು ರಾಷ್ಟ್ರಕೂಟರ ಸಾಮಂತನಾಗಿದ್ದನು. ಈ ನಡುವೆ ಚೋಳರಿಂದ ಪರಾಜಿತಗೊಂಡು ನಿರಾಶ್ರಿತರಾಗಿದ್ದ ಬಾಣರು ರಾಷ್ಟ್ರಕೂಟರ ಆಶ್ರಯವನ್ನು ಬಯಸಿದ್ದರು. ಚೋಳರ ಮೇಲಿನ ಯುದ್ಧದಲ್ಲಿ ಗಂಗ ಬೂತುಗನಂತೆ ಇವನೂ ರಾಷ್ಟ್ರಕೂಟರಿಗೆ ನೆರವಾಗಿದ್ದನು. ಇವನ ಆಳ್ವಿಕೆಗೆ ಸೇರಿದ ಹಲವಾರು ಶಾಸನಗಳು ಜಿಲ್ಲೆಯಲ್ಲಿ ಪತ್ತೆಯಾಗಿವೆ. ಇವನ ಅಧೀನದಲ್ಲಿ ವೈದುಂಬ ಮನೆತನದ ವಿಕ್ರಮಾದಿತ್ಯ ತಿರುವಯ್ಯನು ೯೫೧ರಲ್ಲಿ ಗಂಗಾರುಸಾವಿರ ನಾಡನ್ನು ಆಳುತ್ತಿದ್ದ ಅಂಶ ಬಂಗಾರಪೇಟೆ ತಾಲೂಕಿನ ಬೇತಮಂಗಲ ಶಾಸನದಿಂದ ವೈದ್ಯವಾಗುತ್ತದೆ. ಅಲ್ಲದೇ ಅದೇ ತಿರುವಯ್ಯನು ವಿಜಯಾದಿತ್ಯಮಂಗಲ (ಬೇತಮಂಗಲ)ದಲ್ಲಿ ಶಿಥಿಲಗೊಂಡಿದ್ದ ಹಿರಿಯ ಕೆರೆಯನ್ನು ದುರಸ್ತಿ ಮಾಡಿ ಸ್ಥಿರೀಕರಿಸಿದ ಅಂಶವನ್ನು ದಾಖಲಿಸುತ್ತಾ ಕೈವಾರದ ೫೦೦ ಮಹಾಜನರ ಸಮ್ಮುಖದಲ್ಲಿ ಬಿತ್ತುಕಟ್ಟು ಕೊಡುಗೆ ನೀಡಿದ್ದನ್ನು ನಿವೇದಿಸುತ್ತದೆ. ಅದೇ

ವರ್ಷಕ್ಕೆ ಸೇರಿದ ಕುರುಬರಹಳ್ಳಿ (ಮುಳಬಾಗಿಲು ತಾ.)ಯ ಶಾಸನ, ತಿರುವಯ್ಯನ ಮಗ ಚಂದ್ರಶೇಖರನು ಮಂಡಿಗಲ್ಲ ಕೆರೆಗೆ ಬಿತ್ತುಕಟ್ಟು ಕೊಡುಗೆ ನೀಡಿದ್ದನ್ನು ದಾಖಲಿಸಿದೆ. ಇದೇ ಅರಸನ ಕಾಲಕ್ಕೆ ಸೇರಿದ, ಅದೇ ತೇದಿಯ ಕಾಚೇನಹಳ್ಳಿ (ಮಾಲೂರು ತಾ.)ಯ ತ್ರುಟಿತ ಶಾಸನ ಇಮ್ಮಡಿ ಅಯ್ಯಪ್ಪದೇವನನ್ನೂ ಉಲ್ಲೇಖಿಸುತ್ತದೆ. ಮುಳಬಾಗಿಲು ತಾಲ್ಲೂಕಿನ ಬಳ್ಳ ಶಾಸನ (ಸು.೯೬೦), ತ್ರಿಭುವನ ಕರ್ತಾರ ಭಟಾರರು ಸ್ಥಾನ (ಆವನಿ)ವನ್ನು ಆಳುತ್ತಿದ್ದಾಗ, ಊರ ಗೋವುಗಳು ಅಪಹರಣಗೊಂಡ ಸಂದರ್ಭದಲ್ಲಿ ಹೋರಾಡುತ್ತ ಮಡಿದ ಬಸವಯ್ಯನ ಮಗನ ಹೆಸರಲ್ಲಿ ೧೦೦ ಕೊಳಗ ಕಳನಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅದೇ ಸಂದರ್ಭದಲ್ಲಿ ಮಡಿದ ಪಲ್ಲ ಹಾಗೂ ಇನ್ನೊಬ್ಬ ವೀರನ ವೀರಮರಣವನ್ನು ಮತ್ತೆರಡು ಶಾಸನಗಳು ದಾಖಲಿಸಿವೆ. ಅದೇ ತಾಲೂಕಿನ ಯಡಹೂರಿನ ಸುಮಾರು ೯೭೧ರ ಶಾಸನ, ಇರಿವನೊಳಂಬನ ಆಳ್ವಿಕೆಯಲ್ಲಿ ಬಿದಿರೂರನ್ನು ಆಳುತ್ತಿದ್ದ ಮಹಾಬಲಿವಂಶದ ಸಂಬಯ್ಯನು ಊರ ಕೆರೆಗೆ ಬಿತ್ತುಕಟ್ಟು ಕೊಡುಗೆಯಾಗಿ ಭೂದಾನ ನೀಡಿದ ಅಂಶವನ್ನು ದಾಖಲಿಸಿದೆ.

**ನನ್ನಿನೊಳಂಬ (ಸು.೯೬೯–೯೭೫):** ದಿಲೀಪನ ಮಗನಾದ ಇವನಿಗೆ 'ಛಲದಂಕಕಾರ' ಎಂಬ ಬಿರುದಿದ್ದು ಇವನು ಯುವರಾಜನಾಗಿ ಕೋಲಾರ ಪ್ರಾಂತವನ್ನು ಆಳುತ್ತಿದ್ದ ಅಂಶ ಉತ್ತನೂರಿನ ೯೬೯ರ ಶಾಸನದಿಂದ ವೇದ್ಯವಾಗುತ್ತದೆ. ತಂದೆಯ ಮರಣಾನಂತರ ಇವನು ಅಧಿಕಾರಕ್ಕೆ ಬಂದನು. ಇವನ ಮಂತ್ರಿಯಾಗಿದ್ದ ಬಸವಯ್ಯನು ಮುಳಬಾಗಿಲು ತಾಲೂಕಿನ ಆವನಿಯಲ್ಲಿ ಮಾನಸ್ತಂಭವನ್ನು ನಿಲ್ಲಿಸಿದ ಅಂಶ ಅದರ ಮೇಲಿರುವ ಶಾಸನದಿಂದ ವೇದ್ಯವಾಗುತ್ತದೆ. 'ಕಟ್ಟಾನೆಮಲ್ಲ' 'ಗಜರಾಜಮಲ್ಲ' ಮುಂತಾದ ಬಿರುದುಗಳನ್ನು ಹೊಂದಿದ್ದ ಇವನು ಗಂಗಾರುಸಾಸಿರ ನಾಡನ್ನು ಆಳುತ್ತಿದ್ದ ಅಂಶ, ಚಳ್ಳಕೆರೆ ತಾಲೂಕಿನ ಚಿಕ್ಕಮಧುರೆ ಶಾಸನದಿಂದ ಗೊತ್ತಾಗುತ್ತದೆ. ಈತನು ಗಂಗ ಮಾರಸಿಂಹನ ಧಾಳಿಯನ್ನು ಎದುರಿಸಬೇಕಾಯಿತು. ಅಲ್ಲದೇ ಆ ಯುದ್ಧದಲ್ಲಿ ನೊಳಂಬರನ್ನು ಸಂಪೂರ್ಣ ಸೋಲಿಸುವ ಮೂಲಕ ಗಂಗ ಮಾರಸಿಂಹನು 'ನೊಳಂಬ ಕುಲಾಂತಕ' ಎಂಬ ಬಿರುದನ್ನು ಧರಿಸಿದನು. ತತ್ಪರಿಣಾಮವಾಗಿ ನೊಳಂಬರು ಸ್ವಲ್ಪಕಾಲ ನೊಳಂಬವಾಡಿ ಪ್ರದೇಶದಿಂದ ಹೊರಗುಳಿಯಬೇಕಾಯಿತು. ಇದನ್ನು ಮುಮ್ಮಡಿ ಮಾರಸಿಂಹನ ಶ್ರವಣಬೆಳಗೊಳ (೯೭೪) ಶಾಸನದಿಂದ ಗ್ರಹಿಸಬಹುದಾಗಿದೆ. ಆದರೆ ಮಾರಸಿಂಹನ ಮರಣಾನಂತರ ನೊಳಂಬವಾಡಿಗೆ ಇವರು ಮರುಪ್ರವೇಶ ಮಾಡಿದರು. ಇದನ್ನು ಮೇಲಗಾಣಿ (ಮುಳಬಾಗಿಲು)ಯ ೯೭೪ರ ಶಾಸನದಿಂದ ಗ್ರಹಿಸಬಹುದಾಗಿದೆ.

**ಇಮ್ಮಡಿ ಪೊಳಲ್ಚೋರ (೯೭೫–೭೭):** ನನ್ನಿನೊಳಂಬನ ಮಗನಾದ ಇವನು, ತಾತ ಇರಿವ ನೊಳಂಬ ದಿಲೀಪನ ಕಾಲದಿಂದಲೂ ಆಡಳಿತದಲ್ಲಿ ಭಾಗವಹಿಸುತ್ತಿದ್ದನೆಂದು ತಿಳಿದು ಬರುತ್ತದೆ. ಆದರೆ ಅಧಿಕಾರಕ್ಕೆ ಬಂದ ಅಲ್ಪಾವಧಿಯಲ್ಲೇ ಮುಮ್ಮಡಿ ಮಾರಸಿಂಹನ ಕೈಗೆ ಸಿಲುಕಿ ಅಕಾಲ ಮರಣಕ್ಕೆ ಈಡಾದಂತೆ ತೋರುತ್ತದೆ. ಅವನ ಮಗ ಇಮ್ಮಡಿ ಮಹೇಂದ್ರನ ಆವನಿ ಶಾಸನದಲ್ಲಿ ಇದರ ಬಗ್ಗೆ ಸುಳಿವು ಲಭಿಸುತ್ತದೆ. ಇಮ್ಮಡಿ ಪೊಳಲ್ಚೋರನ ಮಡದಿಯಾದ ದೇವಾಂಬಿಕೆಯು ಕದಂಬ ವಂಶಜಳಾಗಿದ್ದು, ಆವನಿಯಲ್ಲಿ ದೇವಾಲಯ ಹಾಗೂ ಕೆರೆಗಳ ನಿರ್ಮಾಣದಂತಹ ಲೋಕಕಲ್ಯಾಣ ಕಾರ್ಯಗಳನ್ನು ಕೈಗೊಂಡ ಇವಳನ್ನು ಲಕ್ಕುಂಡಿಯ ಅತ್ತಿಮಬ್ಬೆಗೆ ಹೋಲಿಸಬಹುದೆಂದು ಎಂ.ಎಂ.ಕಲ್ಬುರ್ಗಿ ಅಭಿಪ್ರಾಯಪಡುತ್ತಾರೆ. ನೊಳಂಬರ ಭೀಮ, ರಾಜಾರಾಜಾಶ್ರಯ, ತಿರ್ದ್ದಾನೆಮಲ್ಲ ಮುಂತಾದ ಬಿರುದುಗಳನ್ನು ಹೊಂದಿದ್ದ ಇವನ ಮರಣಾನಂತರ ಅವನ ಮಗನಾದ ಇಮ್ಮಡಿ ಮಹೇಂದ್ರನು ಅಧಿಕಾರಕ್ಕೆ ಬಂದನು.

**ಇಮ್ಮಡಿ ನೊಳಂಬ ಮಹೇಂದ್ರ (ಸು.೯೭೭–೯೮೧):** ಕೇವಲ ಐದು ವರ್ಷದಷ್ಟು ಅಲ್ಪಾವಧಿ ಅಧಿಕಾರದಲ್ಲಿದ್ದ ಇವನ ಮುಂದಾಳತ್ವದಲ್ಲಿ, ಗಂಗ ಮಾರಸಿಂಹನ ಧಾಳಿಯ ಬಿಸಿಯಿಂದ ಬಳ್ಳಾರಿಯತ್ತ ಸರಿದಿದ್ದ ನೊಳಂಬರು ಮತ್ತೆ ಹೇಮಾವತಿಯನ್ನು ವಶಪಡಿಸಿಕೊಂಡು, ನೊಳಂಬರ ಅಧಿಪತ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. ಈ ನಿಟ್ಟಿನಲ್ಲಿ ಅವನು ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ತೈಲಪನ ನೆರವನ್ನು ಪಡೆಯಬೇಕಾಯಿತು. ಆದರೆ ನೊಳಂಬವಾಡಿಯು ರಕ್ಕಸಗಂಗನ ಮಾಂಡಲೀಕ ಪುಲಿಗನ ಅಧೀನದಲ್ಲಿತ್ತು. ಇದನ್ನು ಚಿಕ್ಕಬಳ್ಳಾಪುರ ತಾಲೂಕಿನ ಕಂದವಾರದ ೯೭೭ರ ಶಾಸನವೂ ಖಚಿತಪಡಿಸುತ್ತದೆ. ಚಾಳುಕ್ಯರ ಪರವಾಗಿ ಈತ ಚೋಳರೊಂದಿಗೆ ಘರ್ಷಣೆಗಿಳಿದು ಸೋಲಿಸಿದ ಅಂಶ ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ಆದರೆ ಇವನು ಸುಮಾರು ೯೮೧ರಲ್ಲಿ ಮರಣ ಹೊಂದಿದ ನಂತರ ನೀಡಲ್ಪಟ್ಟಿರುವ ಆವನಿಯ ೯೮೧ರ ಶಾಸನದಲ್ಲಿ ಅವನ ತಾಯಿ ದಿವಾಂಬಿಕೆಯು ಕೈಗೊಂಡ ಧರ್ಮಕಾರ್ಯಗಳ ಬಗ್ಗೆ ವಿವರವಾದ ಮಾಹಿತಿ ಇದೆ. ಅದರಂತೆ ಇಮ್ಮಡಿ ಪೊಳಲ್ಚೋರನ ಹಿರಿಯ ರಾಣಿಯಾದ ಇವಳು, ಗತಿಸಿದ್ದ ತನ್ನ ಗಂಡನ ಹೆಸರಲ್ಲಿ ಪೊಳಲ್ಚೋರಮಂಗಲವೆಂಬ ಅಗ್ರಹಾರ (ಇಂದಿನ ಹೊಳಲಿ), ತನ್ನ ಹೆಸರಲ್ಲಿ

ದಿವಲಬ್ಬರಸಿ ಸಮುದ್ರ, ಮಗನ ಹೆಸರಲ್ಲಿ ಮಹೇಂದ್ರ ಕೊಳ ಹಾಗೂ ಮುಕುಂದ ಭವನ; ಹಾಗೂ ಆವನಿಯಲ್ಲಿ ನೊಳಂಬ ನಾರಾಯಣೇಶ್ವರ ದೇವಾಲಯವನ್ನು ನಿರ್ಮಿಸಿ, ಆ ದೇವರಿಗೆ 'ಎಳನಗರ' ಗ್ರಾಮವನ್ನು ಸರ್ವಬಾಧಾಪರಿಹಾರವಾಗಿ ದಾನ ಬಿಟ್ಟ ಅಂಶ ಈ ಶಾಸನದಿಂದ ವೇದ್ಯವಾಗುತ್ತದೆ.

ಇಮ್ಮಡಿ ಮಹೇಂದ್ರನ ನಿಧನದೊಂದಿಗೆ ಅವನತಿಯ ಹಾದಿಯನ್ನು ಹಿಡಿದ ನೊಳಂಬ ರಾಜ್ಯದ ರಕ್ಷಣೆಗೆ ಮುಂದಾದ ದಿವಬ್ಬರಸಿಯು ಅಪ್ರಾಪ್ತ ವಯಸ್ಕನಾಗಿದ್ದ ತನ್ನ ಕಿರಿಯ ಮಗ ಇಮ್ಮಡಿ ಇರಿವ ನೊಳಂಬನ ರಾಜಪ್ರತಿನಿಧಿಯಾಗಿ ಆಡಳಿತ ನಡೆಸಿದಳು. ಈ ಅವಧಿಯಲ್ಲಿ ಚೋಳರು ನೊಳಂಬವಾಡಿ ಪ್ರದೇಶವನ್ನು ಸುಮಾರು ೯೯೦ರಲ್ಲಿ ಆಕ್ರಮಣ ಮಾಡಿ ವಶಪಡಿಸಿಕೊಂಡರು. ತತ್ಪರಿಣಾಮವಾಗಿ ನೊಳಂಬರು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಉತ್ತರ ಕರ್ನಾಟಕದತ್ತ ಸರಿಯಬೇಕಾಯಿತು. ಏತನ್ಮಧ್ಯೆ ಚಾಳುಕ್ಯ ಇರಿವಬೆಡಂಗ ಸತ್ಯಾಶ್ರಯನ ಮಗಳನ್ನು ವಿವಾಹವಾಗುವ ಮೂಲಕ ಇಮ್ಮಡಿ ಇರಿವ ನೊಳಂಬನು ಪ್ರಬಲನಾದನು.

**ಇಮ್ಮಡಿ ಇರಿವ ನೊಳಂಬ (ಸು.೧೦೧೦–೨೪)** ಕಲ್ಯಾಣದ ಚಾಳುಕ್ಯರ ಸಾಮಂತನಾಗಿದ್ದ ಇವನು ಚಾಳುಕ್ಯರ ಪರವಾಗಿ ಚೋಳರ ವಿರುದ್ಧ ಯುದ್ಧದಲ್ಲಿ ತೊಡಗಿದ್ದನ್ನು ಸೂಚಿಸುವ ಎರಡು ಶಾಸನಗಳು ಚಿತ್ತೂರು ಜಿಲ್ಲೆಯ ಪುಂಗನೂರಿನಲ್ಲಿ ಲಭಿಸಿವೆ. ಆಲೂರು ಶಾಸನ (೧೦೧೦), ಇವನು ನೊಳಂಬವಾಡಿಯನ್ನು ಆಳುತ್ತಿದ್ದನೆಂದು ದಾಖಲಿಸಿದೆ. ಇವನ ಮರಣಾನಂತರ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ (೧೦೨೪–೩೬), ಉದಯಾದಿತ್ಯದೇವ ಜಗದೇಕಮಲ್ಲ ಇಮ್ಮಡಿ ನೊಳಂಬಪಲ್ಲವ (೧೦೩೭–೪೪) ಹಾಗೂ ತ್ರೈಲೋಕ್ಯಮಲ್ಲ ನನ್ನಿ ನೊಳಂಬ ಇಮ್ಮಡಿ ಪಲ್ಲವ (೧೦೪೪–೫೪) ರಾಜರು ಈ ಮನೆತನದ ಇತರ ಅರಸರಾಗಿದ್ದು, ಅವರ ರಾಜಧಾನಿ ಕಂಪ್ಲಿ ಆಗಿತ್ತು. ಆನಂತರದಲ್ಲಿ ಇವರ ಆಡಳಿತ ಕ್ಷೀಣಿಸಲಾರಂಭಿಸಿತು.

### ವೈದುಂಬರರು

ಸುಮಾರು ೧೦–೧೧ನೆಯ ಶತಮಾನದಲ್ಲಿ ಜಿಲ್ಲೆಯು ಭಾಗಶಃ ವೈದುಂಬ ರಾಜಮನೆತನದ ಆಳ್ವಿಕೆಗೆ ಒಳಪಟ್ಟಿದ್ದ ಅಂಶ, ಜಿಲ್ಲೆಯ ಬಂಗಾರಪೇಟೆ, ಮುಳಬಾಗಿಲು, ಚಿಂತಾಮಣಿ ಹಾಗೂ ಬಾಗೇಪಲ್ಲಿ ತಾಲೂಕುಗಳಲ್ಲಿ ಲಭಿಸಿರುವ ಅವರ ಶಾಸನಗಳಿಂದ ವೇದ್ಯವಾಗುತ್ತದೆ. ಬಾಗೇಪಲ್ಲಿ ತಾಲೂಕಿನ ಯರ್ರಗುಡಿ (ಬೇಚಿರಾಕ್)ಯಲ್ಲಿರುವ ಸುಮಾರು ೯೦೦ರ ತ್ರುಟಿತ ವೀರಗಲ್ಲು ಶಾಸನವು, ವೈದುಂಬರ ಮಹಾರಾಜನೋರ್ವನನ್ನು ಉಲ್ಲೇಖಿಸುತ್ತಾ, ಯುದ್ದದಲ್ಲಿ ಮಡಿದ ವೀರನಿಗೆ ದಾನಬಿಟ್ಟ ಅಂಶವನ್ನು ದಾಖಲಿಸಿದೆ. ಈ ಅರಸರು ಉತ್ತರ ಆರ್ಕಾಟಿನ ತುಂಬ ವಂಶಸ್ಥರಾಗಿದ್ದು, ಶಾಸನವೊಂದರಲ್ಲಿ ವೈದುಂಬರ ರಾಜ ವಿಕ್ರಮಾದಿತ್ಯ ತಿರುವಯ್ಯನ ಉಲ್ಲೇಖವಿದ್ದು, ನೊಳಂಬರಾಜ ದಿಲೀಪಯ್ಯನ ಕೈಯಲ್ಲಿ ಸೋಲಿಸಲ್ಪಟ್ಟಿದ್ದು ವೇದ್ಯವಾಗುತ್ತದೆ., ಮುಳಬಾಗಿಲು ತಾಲೂಕಿನ ಶಾಸನವೊಂದರಲ್ಲಿ ತಿರುವಯ್ಯನ ಮಗ ಚಂದ್ರಶೇಖರನ ಪ್ರಸ್ತಾಪವಿದೆ. ಶ್ರೀನಿವಾಸಪುರ ತಾಲೂಕಿನ ಬೈರಗಾನಪಲ್ಲಿಯ ಸುಮಾರು ೯೦೦ರ ಇನ್ನೊಂದು ಶಾಸನದಲ್ಲಿ ವೈದುಂಬ ಮಹಾರಾಜನ ಆಳ್ವಿಕೆಯ ಉಲ್ಲೇಖವಿದ್ದು, ಯುದ್ಧದಲ್ಲಿ ಮಡಿದ ಪುರಿನಾಡ ದಾಸಮಯ್ಯನ ಮಗ ಹುಲಿಯಮರಸನಿಗೆ ಕಲ್ನಾಟಾಗಿ ೪೦೦ ಕೊಳಗ ಭೂಮಿಯನ್ನು ಪಲ್ಲವ ಮಹಾರಾಜನು ದಾನ ಬಿಟ್ಟ ಅಂಶವೂ ದಾಖಲಾಗಿದೆ. ಕರ್ನಾಟಕ, ತಮಿಳುನಾಡು, ಆಂಧ್ರಗಡಿಯಲ್ಲಿ ಸಾಮಂತರಾಗಿ ಆಳುತ್ತಿದ್ದ ವೈದುಂಬ ಅರಸರನ್ನು ಸುಮಾರು ೧೧ನೆಯ ಶತಮಾನದ ಪೂರ್ವಾರ್ಧ ಭಾಗದಲ್ಲಿ ಚೋಳರು ಸದೆಬಡಿದರಾದರೂ ಈ ಮನೆತನಕ್ಕೆ ಸೇರಿದ ವೈದುಂಬರಗೌಂಡರ ಉಲ್ಲೇಖ ಶ್ರೀನಿವಾಸಪುರ ತಾಲೂಕಿನ ಶಾಸನವೊಂದರಲ್ಲಿ ಕಂಡು ಬರುತ್ತದೆ.

### ತಂಜಾವೂರಿನ ಚೋಳರು

ನೆರೆಯ ತಮಿಳುನಾಡು ಮೂಲದ ಈ ರಾಜಮನೆತನ ದಕ್ಷಿಣ ಭಾರತದ ಕೆಲವೇ ಪ್ರಮುಖ ಸಾರ್ವಭೌಮ ಮನೆತನಗಳಲ್ಲಿ ಒಂದಾಗಿದ್ದು, ಈ ರಾಜಮನೆತನದ ಆಡಳಿತ ವ್ಯಾಪ್ತಿಗೆ ಚನ್ನಪಟ್ಟಣ ತಾಲೂಕಿನ ಹೊಂಗನೂರು (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಪಟ್ಟಣವನ್ನೊಳಗೊಂಡ ಚಿಕ್ಕಗಂಗವಾಡಿ ಪ್ರಾಂತ್ಯವೂ ಒಳಪಟ್ಟಿದ್ದ ಅಂಶವನ್ನು ಕೂಡಲೂರಿನಿಂದ ವರದಿಯಾಗಿರುವ ಸುಮಾರು ೮೭೦ರ ಶಾಸನ ದಾಖಲಿಸುತ್ತದೆ. ಮಿಗಿಲಾಗಿ ಒಂದನೆಯ ಪರಾಂತಕ (೯೦೭–೪೭)ನ ಆಳ್ವಿಕೆಗೆ ಸೇರಿದ ಸುಮಾರು ೯೧೫ರ ಶಾಸನವೊಂದರಿಂದ ಇವನು ಬಾಣ ಹಾಗು ವೈದುಂಬರನ್ನು ಸೋಲಿಸಿದ ಅಂಶ ಗೊತ್ತಾಗುತ್ತದೆ. ಇದೇ ಅರಸನ ಆಳ್ವಿಕೆಯ

೨೯ನೇ ವರ್ಷಕ್ಕೆ ಸೇರಿದ ೯೩೬ರ ಶಾಸನವೊಂದು ಮುಳಬಾಗಿಲು ತಾಲೂಕಿನ ಬೈರಕೂರಿನಿಂದ ವರದಿಯಾಗಿದ್ದು, ಚೋಳರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಪತ್ತೆಯಾಗಿರುವ ಅತ್ಯಂತ ಪ್ರಾಚೀನ ಶಾಸನವಾಗಿದೆ. ಕನ್ನಡ ಭಾಷೆಯಲ್ಲಿರುವ ಇದೊಂದು ವೀರಗಲ್ಲು ಶಾಸನವಾಗಿದ್ದು, ಬೈರಕೂರು ಮಾರಮ್ಮನ ಮೊಮ್ಮಗನಾದ ಗಣಿಪರಾಮನು ಊರ ಗೋವುಗಳ ರಕ್ಷಣೆಗಾಗಿ ಹೋರಾಡುತ್ತಾ ಮಡಿದಾಗ, ಅವನ ಕುಟುಂಬದವರಿಗೆ ಕಲ್ನಾಟಾಗಿ ಖಂಡುಗ ಕಳನಿಯನ್ನು ಪೆರ್ಮಾಡಿಯ ಸಾಮಂತಪ್ಪನು ದಾನಬಿಟ್ಟ ಅಂಶವನ್ನು ದಾಖಲಿಸಿದೆ. ಅಂದರೆ ಚೋಳರು, ಗಂಗವಾಡಿ ಪ್ರಾಂತದ ರಾಜಧಾನಿ ಪಟ್ಟಣ ತಲಕಾಡನ್ನು ೧೦೦೪ರ ಕಲಿಯೂರು ಯುದ್ಧದ ಮೂಲಕ ವಶಪಡಿಸಿಕೊಳ್ಳುವುದಕ್ಕೆ ಸುಮಾರು ಹದಿನಾಲ್ಕು ದಶಕಗಳಿಗೆ ಮೊದಲೇ ಕರ್ನಾಟಕವನ್ನು ಕೋಲಾರ ಭಾಗದಿಂದ ಪ್ರವೇಶಿಸಿ, ಕೋಲಾರ ಜಿಲ್ಲಾ ಪ್ರದೇಶವೂ ಸೇರಿದಂತೆ ಕರ್ನಾಟಕದ ಮೇಲೆ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಲು ಆರಂಭಿಸಿದ ಅಂಶವನ್ನು ಜಿಲ್ಲೆಯಲ್ಲಿ ಈವರೆಗೆ ಪತ್ತೆಯಾಗಿರುವ ಚೋಳರಸರ ಅಸಂಖ್ಯಾತ ಶಿಲಾಶಾಸನಗಳು ಸಮರ್ಥಿಸುತ್ತವೆ.

ಸುಮಾರು ೮೭೦ ರಿಂದ ೧೧೧೮ರವರೆಗೆ ಕೋಲಾರ ಜಿಲ್ಲೆಯನ್ನೊಳಗೊಂಡಂತೆ ಕರ್ನಾಟಕದ, ತುಮಕೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿದ್ದ ಚೋಳರ ಆಡಳಿತಾವಧಿಯಲ್ಲಿ ಜಿಲ್ಲೆಯ ಕೃಷಿ, ನೀರಾವರಿ ಹಾಗೂ ವಾಣಿಜ್ಯ ರಂಗಗಳಲ್ಲಿ ಗಣನೀಯ ಪ್ರಗತಿಯಾಯಿತು. ಅಲ್ಲದೇ ದೇವಾಲಯ, ಕೆರೆ–ಕಟ್ಟೆಗಳ ನಿರ್ಮಾಣದಂತಹ ಧಾರ್ಮಿಕ ಚಟುವಟಿಕೆಗಳೂ ಕಂಡು ಬರುತ್ತಿದ್ದು, ಇದನ್ನು ಜಿಲ್ಲೆಯಲ್ಲಿ ಈವರೆಗೆ ಪತ್ತೆಯಾಗಿರುವ ಚೋಳರಸರ ಸುಮಾರು ೧೬೦ಕ್ಕೂ ಹೆಚ್ಚು ಶಿಲಾಶಾಸನಗಳು ಖಚಿತಪಡಿಸುತ್ತವೆ.

ಚೋಳಸಾರ್ವಭೌಮರಲ್ಲಿ ಮೊದಲಿಗನಾದ **ವಿಜಯಾಲಯ ಚೋಳ (೮೫೦–೮೭೧)**ನ ಅಧಿಕಾರದ ಅಂತ್ಯಭಾಗಕ್ಕಾಗಲೇ ಚೋಳರು ಕರ್ನಾಟಕವನ್ನು ಪ್ರವೇಶಿಸಿದ್ದರೆಂಬುದಕ್ಕೆ, ಈಗಾಗಲೇ ಚರ್ಚಿಸಿರುವಂತೆ, ಚನ್ನಪಟ್ಟಣ ತಾಲೂಕಿನ ಕೂಡಲೂರು ಗ್ರಾಮದಲ್ಲಿ ಲಭಿಸಿರುವ ಸುಮಾರು ೮೭೦ರ ಶಾಸನವನ್ನು ವಿದ್ವಾಂಸರು ಮುಂದಿಡುತ್ತಾರೆ. ಈ ಶಾಸನವನ್ನು ಆಧರಿಸಿ, ಚೋಳರ ಆಡಳಿತದ ಪ್ರಭಾವಕ್ಕೆ ಕೋಲಾರವೂ ಒಳಪಟ್ಟಿತ್ತೆಂದು ತರ್ಕಿಸಬಹುದಾಗಿದೆ. ಇವನ ನಂತರ ಅಧಿಕಾರಕ್ಕೆ ಬಂದ ಅವನ ಮಗ **ಒಂದನೆಯ ಆದಿತ್ಯ ರಾಜಕೇಸರಿವರ್ಮ (೮೭೧–೯೦೭)**ನ ಆಳ್ವಿಕೆಯಲ್ಲಿ ಚೋಳರ ಆಡಳಿತ ವ್ಯಾಪ್ತಿಗೆ ಪಲ್ಲವರಾಜ್ಯದ ಕೊಂಗು ಹಾಗೂ ತೊಂಡೈಮಂಡಲಗಳು ಸೇರಿದ್ದವು. ಆದರೆ ಇವನ ಕಾಲಕ್ಕೆ ಸೇರಿದ ಶಾಸನಗಳಾವುದೂ ಈವರೆಗೆ ಜಿಲ್ಲೆಯಲ್ಲಿ ವರದಿಯಾಗಿಲ್ಲ. ಇವನ ನಂತರ ಅಧಿಕಾರಕ್ಕೆ ಬಂದ ಒಂದನೆಯ ಪರಾಂತಕನು ಒಂದನೆಯ ಆದಿತ್ಯನ ಕಿರಿಯ ಮಗನಾಗಿದ್ದು, ಚೋಳರ ಪ್ರಬಲ ಅರಸರಲ್ಲಿ ಇವನೂ ಒಬ್ಬ.

**ಒಂದನೆಯ ಪರಾಂತಕ ಚೋಳ (೯೦೭–೯೪೭):** 'ಮಧುರೈಕೊಂಡ' 'ಇಳೈಂಕೊಂಡ' ಮುಂತಾದ ಬಿರುದುಗಳನ್ನು ಹೊಂದಿದ್ದ ಇವನು, ಪಾಂಡ್ಯರು ಹಾಗೂ ಸಿಲೋನ್ ರಾಜರ ಮೇಲೂ ಗೆಲುವು ಸಾಧಿಸಿದ್ದನು. ಇವನು ಸುಮಾರು ೯೧೫ರ ವೇಳೆಗೆ ಬಾಣ ಹಾಗೂ ವೈದುಂಬರನ್ನು ಸೋಲಿಸಿದ್ದನೆಂದು ಕೋಲಾರ ಗ್ಯಾಸೆಟಿಯರ್ (೧೯೬೮) ದಾಖಲಿಸಿದೆ. ಈ ಘಟನೆ ೯೨೧ರ ಸುಮಾರಿನಲ್ಲಿ ಜರುಗಿರಬೇಕೆಂದು ಅಭಿಪ್ರಾಯ ಪಡುವ ಹಯವದನರಾಯರು, ಬಾಣರ ವಶದಲ್ಲಿದ್ದ ಪ್ರದೇಶವನ್ನು ಗಂಗರ ಪರುವಿ ಶಾಖೆಯ ಇಮ್ಮಡಿ ಪೃಥ್ವಿಪತಿ (ಹಸ್ತಿಮಲ್ಲ)ಗೆ ನೀಡುವ ಮೂಲಕ ಪರಾಂತಕನು ಬಾಣರನ್ನು ಅವರ ನಿಯಂತ್ರಣಕ್ಕೊಳಪಡಿಸಿದನೆಂದೂ ದಾಖಲಿಸಿದ್ದಾರೆ. ಈಗಾಗಲೇ ಗಮನಿಸಿರುವಂತೆ ಇವನ ಆಳ್ವಿಕೆಯ ೨೯ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಮುಳಬಾಗಿಲು ತಾಲೂಕಿನ ಬೈರಕೂರಿನ ೯೩೬ರ ವೀರಗಲ್ಲು ಶಾಸನದಿಂದ, ಆ ವೇಳೆಗಾಗಲೇ, ಕೋಲಾರ ಜಿಲ್ಲೆಯ ಪೂರ್ವಭಾಗವು ಇವನ ಆಳ್ವಿಕೆಗೆ ಒಳಪಟ್ಟಿತ್ತೆಂದು ಭಾವಿಸಬಹುದಾಗಿದೆ.

ಇವನ ಮಗನಾದ **ಯುವರಾಜ ರಾಜಾದಿತ್ಯ (೯೪೭–೪೯)**ನನ್ನು ತಕ್ಕೋಲಂ ಯುದ್ಧದಲ್ಲಿ, ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಸಾಮಂತರಾಗಿದ್ದ ತಲಕಾಡು ಗಂಗರ ಇಮ್ಮಡಿ ಬೂತುಗನು, ಸಗರ ವಂಶದ ಮಾವುತ ಮಣಲಾರನ ನೆರವಿನೊಂದಿಗೆ ಯುದ್ಧರಂಗದಲ್ಲಿ ಕೊಂದ ವಿಷಯವು ಚೋಳಪುರಂ (ತಮಿಳುನಾಡು) ಹಾಗೂ ಅತಕೂರು (ಮಂಡ್ಯ ಜಿ.) ಸೇರಿದಂತೆ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ.

ಇವನ ನಂತರ ಅವನ ಸೋದರರಾದ ಗಂಡರಾದಿತ್ಯ ರಾಜಕೇಸರಿವರ್ಮ ಹಾಗೂ ಅರಿಂಜಯ ರಾಜಕೇಸರಿವರ್ಮರ ಅಲ್ಪಾವಧಿಯ ಆಳ್ವಿಕೆಯ ನಂತರ ಅರಿಂಜಯನ ಮಗನಾದ **ಸುಂದರ ಚೋಳ ಇಮ್ಮಡಿ ಪರಾಂತಕ (೯೫೦–೯೬೬)**ನು ಅಧಿಕಾರಕ್ಕೆ ಬಂದನು. ಇವನ ತಾಯಿಯಾದ ಕುಂದವ್ವೆಯು ವೆಂಗಿ ಚಾಳುಕ್ಯ ಇಮ್ಮಡಿ ಭೀಮನ ಮಗಳಾಗಿದ್ದು, ಅದರಿಂದಾಗಿ ವೆಂಗಿ ಚಾಳುಕ್ಯರೊಂದಿಗೆ ಮಧುರ ಬಾಂಧವ್ಯ ಏರ್ಪಟ್ಟಿತ್ತು. ಪಾಂಡ್ಯರೊಂದಿಗೆ ಹೋರಾಡುತ್ತಿದ್ದಾಗ ವೀರಪಾಂಡ್ಯನ ಕೈಲಿ ರುಂಡವನ್ನು ಕಳೆದುಕೊಂಡ ಚೋಳ ದೊರೆಯೇ ಇವನಾಗಿದ್ದು, ಅವನ ಮಡದಿಯಾದ ವಾನವನ್ ಮಹಾದೇವಿಯು ಸತಿ ಸಹಗಮನ ಮಾಡಿಕೊಂಡಿದ್ದಾಗಿ ತಿಳಿದುಬರುತ್ತದೆ. ಆದರೆ ಇವನ ಆಳ್ವಿಕೆಗೆ ಸೇರಿದ ಶಾಸನಗಳಾವುದೂ ಈವರೆಗೆ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ.

ಇವನ ನಂತರ ಹಿರಿಯ ಮಗನಾದ **ಇಮ್ಮಡಿ ಆದಿತ್ಯ(೯೬೬–೯೬೯)ಚೋಳನು** ಅಧಿಕಾರಕ್ಕೆ ಬಂದನು. 'ಕರಿಕಾಲ ಪರಾಕೇಸರಿವರ್ಮ', 'ವೀರಪಾಂಡ್ಯ ತಲೈಗೊಂಡ' ಮುಂತಾದ ಬಿರುದುಗಳನ್ನು ಹೊಂದಿದ್ದ ಇವನು ಪಾಂಡ್ಯ ದೊರೆ ವೀರಪಾಂಡ್ಯನನ್ನು ಸೋಲಿಸಿ ಅವನ ರುಂಡವನ್ನು ಚೆಂಡಾಡಿದನಾದರೂ, ಅಂತಿಮವಾಗಿ ಸಾಮಂತರ ಒಳಸಂಚಿಗೆ ತಾನೇ ಬಲಿಯಾಗಬೇಕಾಯಿತು. ಇವನ ಆಳ್ವಿಕೆಗೆ ಸೇರಿದ ಶಾಸನಗಳಾವುದೂ ಜಿಲ್ಲೆಯಲ್ಲಿ ಲಭಿಸಿಲ್ಲ. ಇಮ್ಮಡಿ ಆದಿತ್ಯನ ಅಕಾಲ ಮರಣ ಹಾಗೂ ಅವನ ಸೋದರನಾದ ಒಂದನೆಯ ರಾಜರಾಜನು ಇನ್ನೂ ಅಪ್ರಾಪ್ತನಾಗಿದ್ದುದರಿಂದ ಉಂಟಾದ ಅಧಿಕಾರ ಸ್ಪರ್ಧೆಯಲ್ಲಿ ಅವನ ಚಿಕ್ಕಪ್ಪನಾದ **ಉತ್ತಮಚೋಳ(೯೬೯–೯೮೫)**(ಗಂಡರಾದಿತ್ಯ ಹಾಗೂ ಸೆಂಬಿಯನ್ ಮಹಾದೇವಿಯರ ಮಗ)ನು ಸಿಂಹಾಸನವನ್ನು ಏರಿದನು. ಒಂದನೆಯ ರಾಜರಾಜನನ್ನು ಯುವರಾಜನನ್ನಾಗಿ ನೇಮಿಸಲಾಯಿತು. ಮಧುರಾಂತಕ, ಪರಕೇಸರಿವರ್ಮ ಮುಂತಾದ ಬಿರುದುಗಳನ್ನು ಹೊಂದಿದ್ದ ಉತ್ತಮ ಚೋಳನು ಧಾರ್ಮಿಕ ಮನೋಭಾವದಿಂದ ಕೂಡಿದ್ದ ತಾಯಿ ಸೆಂಬಿಯನ್ ಮಹಾದೇವಿಯ ಪೋಷಣೆಯಲ್ಲಿ ಗುಣಸಂಪನ್ನನಾಗಿ ಬೆಳೆದು, ಚೋಳಸಿಂಹಾಸನವನ್ನು ಅಲಂಕರಿಸುವಲ್ಲಿ ಸಾಧ್ಯವಾಯಿತು. ಇವನು ಸಿಲೋನಿನ ಮೇಲೆ ಎರಡು ಬಾರಿ ದಿಗ್ವಿಜಯ ಕೈಗೊಂಡಿದ್ದನೆಂದು ಹೇಳಲಾಗುತ್ತದೆ. ಕೋಲಾರದ ಕೋಲಾರಮ್ಮ ಗುಡಿಯನ್ನು ಇವನ ಆಳ್ವಿಕೆಯಲ್ಲಿ ಕೋಲನೆಂಬುವನು ನಿರ್ಮಿಸಿದನೆಂಬ ಐತಿಹ್ಯವಿದೆ. ಆದರೆ ಇವನ ಕಾಲಕ್ಕೆ ಸೇರಿದ ಶಾಸನಗಳೂ ಜಿಲ್ಲೆಯಲ್ಲಿ ದೊರೆತಿಲ್ಲ. ಇವನ ನಂತರ ಇಮ್ಮಡಿ ಆದಿತ್ಯನ ಸೋದರನಾದ ಒಂದನೆಯ ರಾಜರಾಜನು ಚೋಳ ಸಿಂಹಾಸನವನ್ನು ೯೮೫ರಲ್ಲಿ ಏರಿದನು.

**ಒಂದನೆಯ ರಾಜರಾಜ (೯೮೫–೧೦೧೪):** ಚೋಳ ಅರಸರಲ್ಲಿ ಅತ್ಯಂತ ಪ್ರಬಲನಾದ ಇವನು ಅರುಂಮೊಳಿವರ್ಮ, ಅರುಮೊಳಿದೇವ, ರಾಜಕೇಸರಿವರ್ಮ ಮುಮ್ಮಡಿಚೋಳ ಎಂದೂ ಇತಿಹಾಸದಲ್ಲಿ ಚಿರಪರಿಚಿತನಿದ್ದು, ಇವನ ಅಕ್ಕ ಕುಂದವ್ವೆಯನ್ನು ವಲ್ಲವರಾಯರ್ ಪಾಂಡ್ಯದೇವರಿಗೆ ವಿವಾಹ ಮಾಡಿಕೊಡಲಾಗಿತ್ತು. ಈಕೆ ತನ್ನ ಜೀವಿತದ ಕೊನೆಯ ವರ್ಷಗಳನ್ನು ಸೋದರ ರಾಜರಾಜನೊಂದಿಗೆ ತಂಜಾವೂರಿನಲ್ಲೇ ಕಳೆದಿದ್ದು, ರೋಗಿಗಳ ಸುಶ್ರೂಷೆಗಾಗಿ ತಂದೆ ಸುಂದರ ಚೋಳನ ಹೆಸರಲ್ಲಿ 'ಸುಂದರ ಚೋಳವಿನ್ನಾಗಾರ ಆತುಲಸಾಲೈ"ಎಂಬ ಉಚಿತ ಚಿಕಿತ್ಸಾಲಯವನ್ನು ತಂಜಾವೂರಿನಲ್ಲಿ ಆರಂಭಿಸಿದ ಅಂಶ ತಂಜಾವೂರಿನ ಅನೇಕ ಶಾಸನಗಳಿಂದ ಗೊತ್ತಾಗುತ್ತದೆ. ಒಂದನೆಯ ರಾಜರಾಜನು ತನ್ನ ಆಳ್ವಿಕೆಯ ಎಂಟನೆಯ ವರ್ಷದಿಂದ ಚೋಳ ರಾಜ್ಯದ ವಿಸ್ತರಣೆಗೆ ಮುಂದಾದನೆಂದೂ ಮತ್ತು ಅದನ್ನು ತನ್ನ ಆಳ್ವಿಕೆಯ ೧೭ನೆಯ ವರ್ಷದವರೆಗೂ ಮುಂದುವರಿಸಿದನೆಂದೂ ವಿ.ವೆಂಕಯ್ಯನವರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಪೂರಕವಾಗಿ ಅವನು ೧೦೦೨ರ ಸುಮಾರಿಗೆ ಸಿಲೋನನ್ನು ವಶಪಡಿಸಿಕೊಳ್ಳುವ ಮೂಲಕ 'ರಾಜಾಶ್ರಯ' ಎಂಬ ಬಿರುದನ್ನು ಧರಿಸುವುದರ ಜೊತೆಗೆ 'ಪೃಥ್ವಿವಲ್ಲಭ'ನೆಂದೂ ತನ್ನನ್ನು ಕರೆದುಕೊಂಡಿದ್ದ ಅಂಶವನ್ನು ಎಚ್.ಕೃಷ್ಣಶಾಸ್ತ್ರಿ ಮುಂದಿಡುತ್ತಾರೆ. ಚೇರ, ಪಾಂಡ್ಯರನ್ನು ಸೋಲಿಸುವ ಮೂಲಕ 'ಮುಮ್ಮಡಿ ಚೋಳ' ಎಂಬ ಬಿರುದನ್ನೂ ಧರಿಸಿದ್ದು, ಕಂದಲೂರು ಸಾಲೈ ಇವನದಾಯಿತು. ಈ ದಿಗ್ವಿಜಯಗಳನ್ನು ಅವನು ೯೯೪ರ ವೇಳೆಗೆ ಪೂರೈಸಿರುವಂತೆ ತೋರುತ್ತದೆ. ಅಲ್ಲದೇ ಇವನು ತನ್ನ ಆಳ್ವಿಕೆಯ ೧೪ನೆಯ ವರ್ಷದೊಳಗೆ ವೆಂಗಿಮಂಡಲ, ಗಂಗವಾಡಿ, ನೊಳಂಬವಾಡಿ ಹಾಗೂ ದಡಿಗವಾಡಿಗಳನ್ನು ವಶಪಡಿಸಿಕೊಂಡಿರುವ ಅಂಶ ಅವನ ಅನೇಕ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಮಿಗಿಲಾಗಿ ಕೊಡಗು, ಮಲಬಾರ್, ಕಳಿಂಗ ಹಾಗೂ ಸಿಲೋನ್ ರಾಜ್ಯಗಳೂ ಇವನಿಗೆ ಕೈವಶವಾದವು. ಇವನ ದಿಗ್ವಿಜಯಗಳಲ್ಲಿ ಮಹತ್ವದ ಪಾತ್ರ ವಹಿಸಿದ ಅವನ ಮಗ ಒಂದನೆಯ ರಾಜೇಂದ್ರ ಚೋಳನಿಗೆ 'ಪಂಚವನ್ ಮಾರಾಯ' ಎಂಬ ಬಿರುದಿದ್ದ ಅಂಶ ಹಲವಾರು

ಶಾಸನಗಳಿಂದ ವೇದ್ಯವಾಗುತ್ತದೆ. ಅಪ್ರಮೇಯ ದಂಡನಾಯಕನ ಮುಂದಾಳತ್ವದಲ್ಲಿ ಇವನು ೧೦೦೬ರಲ್ಲಿ ತಲಕಾಡು ಬಳಿಯ ಕಲಿಯೂರು ಯುದ್ಧದಲ್ಲಿ ಗಂಗರು ಮತ್ತವರ ಸಾಮಂತರ ಒಕ್ಕೂಟದ ವಿರುದ್ಧ ಗೆಲುವನ್ನು ಪಡೆದ ಅಂಶ ಕಲಿಯೂರು ಶಾಸನದಿಂದ ವೇದ್ಯವಾಗುತ್ತದೆ. ಏತನ್ಮಧ್ಯೆ ರಾಜರಾಜನು ಸುಮಾರು ೧೦೦೫–೧೦೦೭ರಲ್ಲಿ ಕಲ್ಯಾಣದ ಚಾಳುಕ್ಯರ ಮೇಲೆ ಯುದ್ಧಕ್ಕೆ ಮುಂದಾದನು. ಆ ವೇಳೆಗಾಗಲೇ ನೊಳಂಬವಾಡಿಯನ್ನು ವಶಪಡಿಸಿಕೊಂಡಿದ್ದರ ಪರಿಣಾಮವಾಗಿ ಏಕಾಂಗಿಯಾದ ಚಾಳುಕ್ಯ ಇರಿವಬೆಡಂಗ ಸತ್ಯಾಶ್ರಯನು, ಚೋಳ ರಾಜರಾಜನಿಂದ ಸೋಲಿಸಲ್ಪಟ್ಟ ಅಂಶವನ್ನು ರಾಜರಾಜನ ಕಾಲದ ಲೇಡನ್ ತಾಮ್ರಶಾಸನ ಹಾಗೂ ತಂಜಾವೂರಿನ ಶಾಸನಗಳು ತಿಳಿಸುತ್ತಿದ್ದು, ಅವುಗಳಲ್ಲಿ ಬರುವ ರಟ್ಟವಾಡಿ ಏಳೂವರೆ ಲಕ್ಷ ಮಂಡಲದ ಉಲ್ಲೇಖವನ್ನು ಚಾಳುಕ್ಯರ ಮೇಲಿನ ಚೋಳರ ಗೆಲುವೆಂದೇ ಪರಿಗಣಿಸಲಾಗುತ್ತದೆ. ಈತನ ಆಳ್ವಿಕೆಯಲ್ಲಿ ಇಂದಿನ ಕೋಲಾರ ಜಿಲ್ಲಾ ಪ್ರದೇಶಕ್ಕೆ ನಿಕಿ(ಕ)ರಿಲಿ ಚೋಳ ಮಂಡಲವೆಂದು ಕರೆಯಲಾಗಿತ್ತು. ಈತನು ತನ್ನ ಅಧಿಕಾರಾವಧಿಯ ೧೭ ಹಾಗೂ ೧೯ನೆಯ ವರ್ಷಗಳಲ್ಲಿ, ಸಾಮ್ರಾಜ್ಯದಲ್ಲಿ ಭೂಸರ್ವೇಕ್ಷಣ ಕೈಗೊಂಡಿದ್ದು ಮಹತ್ವದ ಕ್ರಮವಾಗಿತ್ತು. ಇವನ ಆಳ್ವಿಕೆಗೆ ಸೇರಿದ ಎಂಟು ಶಾಸನಗಳು ಈವರೆಗೆ ಕೋಲಾರ ಜಿಲ್ಲೆಯಲ್ಲಿ ಪತ್ತೆಯಾಗಿವೆ. ಈತನ ಆಳ್ವಿಕೆಯ ಏಳನೆಯ ವರ್ಷದಲ್ಲಿ (೯೯೨) ನೀಡಲ್ಪಟ್ಟಿರುವ, ಕೋಲಾರ ತಾಲೂಕಿನ ಕೆಂದಟ್ಟಿ ಬೆಟ್ಟದ ಮೇಲಿರುವ ಈ ಶಾಸನದಿಂದ ಕಾಂಚಿಪುರದ ಒಡೆಯನಾದ ರಾಜೇಂದ್ರಚೋಳ ಪಲ್ಲವರಾದಿತ್ಯ ಉರುಫ್ ಮುಕ್ಕರಸ ಕಾಡುವೆಟ್ಟಿಯು ಕುವಲಾಲನಾಡೊಳಗಣ ಸೂರೂರಿನ ವೀರಶ್ರೀ ತಿರುಮಲೈ ಬೆಟ್ಟದ ಮೇಲೆ ಸೋಮೇಶ್ವರ ಮಹಾದೇವರ ದೇವಾಲಯವನ್ನು ನಿರ್ಮಿಸಿ, ಪುರಕಟ್ಟೆ ಗ್ರಾಮವನ್ನು ದೇವದಾನವಾಗಿ ನೀಡಿದ ಅಂಶವು ಗೊತ್ತಾಗುತ್ತದೆ.

ಇದೇ ಅರಸನ ಕಾಲಕ್ಕೆ ಸೇರಿದ, ಸುಮಾರು ೧೦೦೦ದಲ್ಲಿ ನೀಡಲ್ಪಟ್ಟಿರುವ ಮೂರು ಶಾಸನಗಳು ಮುಳಬಾಗಿಲು ತಾಲೂಕಿನ ಹೆಬ್ಬಣಿಯಲ್ಲಿ ಪತ್ತೆಯಾಗಿವೆ. ಅವುಗಳಲ್ಲೊಂದರಲ್ಲಿ ನೊಳಂಬಾಧಿರಾಜನ ಪ್ರಸ್ತಾಪವಿರುವುದರಿಂದ, ನೊಳಂಬರು ಚೋಳರ ಪರಮಾಧಿಕಾರವನ್ನು ಒಪ್ಪಿದ್ದ ಅಂಶ ಸ್ಪಷ್ಟವಾಗುತ್ತದೆ. ಕಾಡಿಯಣ್ಣನ ಧಾಳಿಗೆ ಪೆಬ್ಬಣ (ಹೆಬ್ಬಣಿ)ಗ್ರಾಮವು ಸಿಲುಕಿದ ಅಂಶವನ್ನು ದಾಖಲಿಸುತ್ತಾ ಹಾಳಾಗಿದ್ದ ಊರ ಕೆರೆಯನ್ನು ೧೦ ಗದ್ಯಾಣ ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಿದ ಮಂಡೆಯಗೌಡನ ಮಗನಾದ ಶ್ರೀ ಪೃಥ್ವಿರಾಮಸೆಟ್ಟಿಯ ಸಮಾಜ ಕಲ್ಯಾಣ ಕಾರ್ಯವನ್ನು ಈ ಶಾಸನ ಪ್ರಶಂಸಿಸುತ್ತದೆ. ಈ ಸಂಬಂಧ ದೋಸಿಯರಸನು ರಾಮಬೋವಿಗೆ ದತ್ತಿಬಿಟ್ಟ ಅಂಶವನ್ನು ಅಲ್ಲಿಯ ಇನ್ನೊಂದು ಶಾಸನ ದಾಖಲಿಸಿದೆ. ಮುಳಬಾಗಿಲು ತಾಲೂಕಿನ ಉತ್ತನೂರಿನಲ್ಲಿ ಪತ್ತೆಯಾಗಿರುವ ೧೦೦೩ರ ಇನ್ನೊಂದು ಶಾಸನ, ರಾಜರಾಜನ ಎಲ್ಲಾ ದಿಗ್ವಿಜಯಗಳನ್ನು ಉಲ್ಲೇಖಿಸುತ್ತಿದ್ದು, ಗಂಗಾರುಸಾಸಿರದ ಪುದಲ್ನಾಡಿನೊಳಗಿದ್ದ ಉತ್ತನೂರ ಗುಡಿಗೆ ದಾನ ಬಿಟ್ಟಿದ್ದನ್ನು ದಾಖಲಿಸುತ್ತಿದ್ದು, ಗ್ರಾಮಕ್ಕೆ 'ಅರುಮೊಳಿದೇವ ಚತುರ್ವೇದ ಮಂಗಲ' ಎಂಬ ಹೆಸರಿದ್ದ ಉಲ್ಲೇಖವೂ ಇದೆ. ಕೋಲಾರದ ಪಿಡಾರಿ (ಕೋಲಾರಮ್ಮ) ದೇವಾಲಯಕ್ಕೆ ಇವನು ದಾನ ಬಿಟ್ಟ ಅಂಶವನ್ನು ಅವನ ಆಳ್ವಿಕೆಯ ೧೨ (೯೯೬) ಹಾಗೂ ೨೨ ನೆಯ (೧೦೦೬) ವರ್ಷದಲ್ಲಿ ನೀಡಲ್ಪಟ್ಟಿರುವ ಎರಡು ಶಾಸನಗಳು ದಾಖಲಿಸಿವೆ. ಗಂಗ–ಸಾಸಿರದಲ್ಲಿದ್ದ ಕುವಲಾಲನಾಡಿನ ಕುವಲಾಲದ ಪಿಡಾರಿಯಾರ್ ದೇವಿಯ ಸೇವೆಗೆಂದು ಅರಸನು ಅರೆಯೂರು ಗ್ರಾಮವನ್ನು ೧೦೦೬ರಲ್ಲಿ ದೇವದಾನವಾಗಿ ನೀಡಿದ ಅಂಶವನ್ನು ತಿಳಿಸುತ್ತದೆ. ಮಿಗಿಲಾಗಿ ಈ ಶಾಸನಗಳಿಂದ ಆ ಗುಡಿಯ ಅರ್ಚಕರು ಶೈವ ಬ್ರಾಹ್ಮಣರಾಗಿದ್ದ ಅಂಶ ವೇದ್ಯವಾಗುತ್ತದೆ. ಇವನ ಆಳ್ವಿಕೆಯ ೨೭ನೆ ವರ್ಷದಲ್ಲಿ ನೀಡಲ್ಪಟ್ಟಿರುವ ಚಿಂತಾಮಣಿ ತಾಲೂಕಿನ ಕಲ್ಲಹಳ್ಳಿ ಶಾಸನದಿಂದ ಇವನ ಸಾಮಂತನಾಗಿದ್ದ ನೊಳಂಬಾಧಿರಾಜ ಚೋರಯ್ಯನು, ಕೈವಾರ ನಾಡನ್ನು ಆಳುತ್ತಿದ್ದ ಅಂಶ ವೇದ್ಯವಾಗುತ್ತದೆ. ಇದೊಂದು ವೀರಗಲ್ಲು ಶಾಸನವಾಗಿದ್ದು, ತಮ್ಮಣ್ಣನ ವೀರಗಲ್ಲನ್ನು ನೆಲ್ಲಿಗೆರೆಯಲ್ಲಿ ನಿರ್ಗುಂದಸೆಟ್ಟಿಯು ನಿಲ್ಲಿಸಿದ ಅಂಶವನ್ನು ದಾಖಲಿಸಿದೆ.

**ಒಂದನೆಯ ರಾಜೇಂದ್ರ ಚೋಳ (೧೦೧೩–೧೦೪೫):** ಒಂದನೆಯ ರಾಜರಾಜನ ಏಕೈಕ ಪುತ್ರನಾಗಿದ್ದು ಸುಮಾರು ೧೦೧೩ರಲ್ಲಿ ಚೋಳಸಿಂಹಾಸನವನ್ನೇರಿದ್ದ ಒಂದನೆಯ ರಾಜೇಂದ್ರನು, ತನ್ನ ತಂದೆಯ ಆಳ್ವಿಕೆಯ ಕೊನೆಯ ಮೂರು ವರ್ಷ, ತಂದೆಯೊಂದಿಗೆ ಜಂಟಿಯಾಗಿ ರಾಜ್ಯಭಾರ ಮಾಡಿದಂತೆ ತೋರುತ್ತದೆ. ಯುವರಾಜನಾಗಿ ತನ್ನ ತಂದೆ ಒಂದನೆಯ ರಾಜರಾಜನ ಅನೇಕ ದಿಗ್ವಿಜಯಗಳಲ್ಲಿ ಹಿರಿದಾದ ಪಾತ್ರವನ್ನು ವಹಿಸಿದ್ದ ಇವನು 'ಪಂಚವನ್ ಮಹಾರಾಯ'ನೆಂಬ ಬಿರುದನ್ನೂ ಧರಿಸಿದ್ದನು. ಅಲ್ಲದೇ 'ಗಂಗೈಕೊಂಡಚೋಳ' ಎಂಬುದು ಇವನ ವಿಶೇಷ ಬಿರುದುಗಳಲ್ಲಿ ಒಂದಾಗಿತ್ತು. ಸುಮಾರು ೧೦೦೭–೮ರಲ್ಲಿ ಕಲ್ಯಾಣದ

ಚಾಳುಕ್ಯ ಅರಸ ಇರಿವ ಬೆಡಂಗ ಸತ್ಯಾಶ್ರಯನ ಸೈನ್ಯವು ತಿರುಚಿ ಜಿಲ್ಲೆಯ ಉತ್ತನೂರಿನವರೆಗೂ ಮೇಲೇರಿ ಬಂದಿದ್ದು, ಉತ್ತನೂರು ಬಳಿ ನಡೆದ ಕಾಳಗದಲ್ಲಿ, ಉತ್ತನೂರ ಚೋಳ ವೀರನೊಬ್ಬ ಚಾಳುಕ್ಯ ಗಜಸೇನೆಯೊಂದಿಗೆ ತೀವ್ರವಾಗಿ ಸೆಣಸುತ್ತಾ, ಚಾಳುಕ್ಯ ಚಕ್ರಿ ಸತ್ಯಾಶ್ರಯನ ಆನೆಯ ಮರ್ಮಾಂಗಕ್ಕೆ ತಿವಿದು ಅದನ್ನು ಘಾಸಿಗೊಳಿಸಿ ತಾನೂ ಮಡಿದ ಅಂಶವನ್ನು ಉತ್ತನೂರಿನ ವೀರಗಲ್ಲು ಶಾಸನವೊಂದು ದಾಖಲಿಸಿದೆ. ಒಂದನೆಯ ರಾಜರಾಜನ ಆಳ್ವಿಕೆಯ ಅವಧಿಯಲ್ಲಿ ಜರುಗಿದ ಈ ಯುದ್ಧದಲ್ಲಿ ಮಡಿದ ಯೋಧನ ಕುಟುಂಬಕ್ಕೆ ಉಂಬಳಿ ನೀಡಿದ್ದನ್ನು ಆ ಶಾಸನ ದಾಖಲಿಸಿದೆ. ಒಂದನೆಯ ರಾಜೇಂದ್ರ ಚೋಳನ ೧೦೦೮ರ ಹೊಟ್ಟೂರು (ಧಾರವಾಡ ಜಿ.) ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಯುದ್ಧವು ಇದರ ಮುಂದುವರಿಕೆಯಾಗಿರುವಂತೆ ತೋರುತ್ತದೆ.

ಈತನ ಆಳ್ವಿಕೆಗೆ ಸಂಬಂಧಿಸಿದ ಅನೇಕ ಶಾಸನಗಳು ಕೋಲಾರ ಜಿಲ್ಲೆಯೂ ಸೇರಿದಂತೆ ದಕ್ಷಿಣ ಕರ್ನಾಟಕದ ವಿವಿಧ ಭಾಗಗಳಲ್ಲಿ ಲಭಿಸಿವೆ. ಅವುಗಳ ನೆರವಿನಿಂದ ಈತನು ಎಡೆತೊರೆ, ಬನವಾಸಿ, ಕೊಳ್ಳಿಪಾಕ ಹಾಗೂ ಮಣ್ಣೆ ನಾಡು; ಪಾಂಡ್ಯ, ಚೇರ, ಚಾಳುಕ್ಯ (ಇಮ್ಮಡಿ ಜಯಸಿಂಹ) ಹಾಗೂ ಸಿಲೋನ್ ರಾಜ್ಯಗಳ ಮೇಲೆ ಯುದ್ಧ ಕೈಗೊಂಡು, ಗೆಲುವು ಸಾಧಿಸಿದ್ದ ಅಂಶ ವೇದ್ಯವಾಗುತ್ತದೆ. ಈತನು ಸುಮಾರು ೧೦೦೮ರಲ್ಲಿ ಚಾಳುಕ್ಯ ಇಮ್ಮಡಿ ಜಯಸಿಂಹನನ್ನು ಮುಸಂಗಿ (ಇಂದಿನ ಮಸ್ಕಿ)ಯಲ್ಲಿ ಸಂಪೂರ್ಣವಾಗಿ ಸೋಲಿಸಿದ ಅಂಶ, ಅವನ ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆಯಾದರೂ ಇದು ಕೇವಲ ತಾತ್ಪೂರ್ತಿಕ ಗೆಲುವಾಗಿದ್ದು, ರಾಜೇಂದ್ರಚೋಳನು ಕಾಲ್ತೆಗೆಯುತ್ತಿದ್ದಂತೆ, ಚಾಳುಕ್ಯರು ತಮ್ಮ ಅಧಿಪತ್ಯವನ್ನು ಪುನರ್‌ಪ್ರತಿಷ್ಠಾಪಿಸಿದ ಅಂಶ ಅವರ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ರಾಜೇಂದ್ರ ಚೋಳನ ಆಳ್ವಿಕೆಯ ಒಂಭತ್ತನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಶಾಸನವು ಶ್ರೀನಿವಾಸಪುರ ತಾಲೂಕಿನ ನೀಲತ್ತೂರಿನಿಂದ ವರದಿಯಾಗಿದೆ. ಈತನ ಆಳ್ವಿಕೆಯ ೧೨ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಕೋಲಾರ ತಾಲೂಕಿನ ಸೀತಿಬೆಟ್ಟದಲ್ಲಿರುವ ೧೦೨೩ರ ಶಾಸನದಿಂದ ಒಂದನೆಯ ರಾಜೇಂದ್ರಚೋಳನು ರಟ್ಟಪಾಡಿ ಏಳೂವರೆ ಲಕ್ಷ ನಾಡು, ಚಕ್ರಕೂಟ, ಮದುರಮಂಡಲ, ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡಿದ್ದನೆಂದು ಗೊತ್ತಾಗುತ್ತದೆ. ಅಲ್ಲದೇ ಈತನು ಮಸೂನಿ ದೇಶ, ಒರಿಸ್ಸಾ, ಕೋಸಲ, ದಂಡಬುತ್ತಿ, ದಕ್ಷಿಣವಾಟ, ವೆಂಗಲ, ಹಾಗೂ ಉತ್ತರ ವಾಟರನ್ನೂ ಸೋಲಿಸಿ, ಗಂಗಾನದಿಯವರೆಗೂ ದಿಗ್ವಿಜಯ ಕೈಗೊಂಡಿದ್ದ ಅಂಶ ಚನ್ನಪಟ್ಟಣ (೧೦೩೪), ನೆಲಮಂಗಲ(೧೦೩೮) ತಾಲೂಕಿನ ಶಾಸನಗಳಿಂದ ವೇದ್ಯವಾಗುತ್ತದೆ. ಈ ಎಲ್ಲಾ ದಿಗ್ವಿಜಯಗಳಿಂದಾಗಿ ಅವನ ಸಾಮ್ರಾಜ್ಯವು ಉತ್ತರ–ದಕ್ಷಿಣವಾಗಿ ಗಂಗೆಯಿಂದ ಸಿಲೋನ್‌ವರೆಗೂ, ಪೂರ್ವ–ಪಶ್ಚಿಮವಾಗಿ ಬರ್ಮಾದಿಂದ ಕೊಚ್ಚೀನ್‌ವರೆಗೂ ಹಬ್ಬಿತ್ತು. ಗಂಗಾತೀರದ ಅರಸರ ಮೇಲೆ ಸಾಧಿಸಿದ ದಿಗ್ವಿಜಯದ ನೆನಪಾಗಿ 'ಗಂಗೈಕೊಂಡ ಚೋಳ' ಎಂಬ ಬಿರುದನ್ನು ಧರಿಸಿದ ಇವನು 'ಗಂಗೈಕೊಂಡ ಚೋಳಪುರ' ಎಂಬ ನೂತನ ಪಟ್ಟಣವನ್ನೂ ನಿರ್ಮಿಸಿದನು. ಅಲ್ಲದೆ, ಗಂಗೆಯಿಂದ ತಂದ ಪವಿತ್ರ ಜಲವನ್ನು ಸ್ಥಳೀಯವಾಗಿ ನಿರ್ಮಿಸಲ್ಪಟ್ಟ 'ಚೋಳಗಂಗಾ' ಎಂಬ ನೂತನ ಕೆರೆಗೆ ಸೇರಿಸುವ ಮೂಲಕ ಅದನ್ನೂ ಪವಿತ್ರಗೊಳಿಸಲಾಯಿತೆಂದು ಅವನ ಶಾಸನಗಳಿಂದ ತಿಳಿದುಬರುತ್ತದೆ.

ಈತನ ಆಳ್ವಿಕೆಗೆ ಸಂಬಂಧಿಸಿದ ೧೦೧೫ರ ಕರವಾರ (ಶ್ರೀನಿವಾಸಪುರ ತಾ.) ಶಾಸನದಲ್ಲಿ ಅರಸನನ್ನು ಗಂಗೈಕೊಂಡ ರಾಜೇಂದ್ರಚೋಳದೇವನೆಂದೇ ಕರೆಯಲಾಗಿದೆ. ಈತನು ಉತ್ತರ ದಿಗ್ವಿಜಯದಿಂದ ಹಿಂತಿರುಗುವಾಗ ಅಲ್ಲಿಂದ ಅಸಂಖ್ಯಾತ ಶೈವಾಚಾರ್ಯನನ್ನು ಜೊತೆಯಲ್ಲಿ ಕರೆತಂದು, ಚೋಳ ನಾಡಿನಲ್ಲಿ ನೆಲೆಗೊಳಿಸಿದನೆಂದು ಹೇಳಲಾಗುತ್ತಿದ್ದು, ಅಂತಹವರಲ್ಲಿ ರಾಜೇಂದ್ರಚೋಳನ ಗುರುಗಳೂ ತಂಜಾವೂರಿನ ದೇವಾಲಯದ ಸ್ಥಾನಾಚಾರ್ಯರೂ ಆದ ಈಶಾನಶಿವಪಂಡಿತರು ಒಬ್ಬರಾಗಿರಬೇಕೆಂದು ಹೇಳಲಾಗುತ್ತದೆ. ಈತನ ಪ್ರಾಂತೀಯ ರಾಜಧಾನಿಗಳಲ್ಲಿ ಒಂದಾಗಿದ್ದ ವಿಕ್ರಮಚೋಳಪುರವು ಕೈವಾರ ನಾಡಿನಲ್ಲಿದ್ದ ಅಂಶ ಈ ಅರಸನ ಆಳ್ವಿಕೆಯ ೧೬ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಕೋಲಾರ ತಾಲೂಕಿನ ಶಾಸನದಿಂದ ವೇದ್ಯವಾಗುತ್ತದೆ. ಕೋಲಾರದ ಪಿಡಾರಿಯಾರ್ ದೇವಿಗೆ ರಾಜೇದ್ರಚೋಳನು ನೀಡಿದ ಹಲವಾರು ದಾನಗಳಲ್ಲಿ ಒಂದು, ಈತನು ತನ್ನ ಆಳ್ವಿಕೆಯ ಹದಿನಾರನೆಯ ವರ್ಷದಲ್ಲಿ ರಾಜಧಾನಿ ಕಾಂಚಿಪುರದ ದೇವಾಲಯವೊಂದರಲ್ಲಿ ತಂಗಿದ್ದ ಸಂದರ್ಭದಲ್ಲಿ ನೀಡಿದ್ದಾಗಿದ್ದು, ಪಿರಂಗಪಲ್ಲಿಯನ್ನು ದಾನ ನೀಡಿದ ಅಂಶವನ್ನು ಕೋಲಾರದ ೧೦೨೭ರ ಶಾಸನವು ದಾಖಲಿಸಿದೆ. ಇದೇ ಗುಡಿಗೆ ಇವನು ತನ್ನ ಆಳ್ವಿಕೆಯ ೧೧ ಹಾಗೂ ೨೨ನೆಯ ವರ್ಷಗಳಲ್ಲೂ ದಾನ ನೀಡಿದ್ದಾನೆ. ಇವನ ದಂಡನಾಯಕನಾಗಿದ್ದ ಉತ್ತಮಚೋಳ ಬ್ರಹ್ಮಮಾರಾಯನು ಮೂಲತಃ ಇಟ್ಟಿಗೆ ರಚನೆಯಿಂದ ಕೂಡಿದ್ದ ಕೋಲಾರದ ಪಿಡಾರಮ್ಮನ ಗುಡಿಯನ್ನು ಶಿಲಾರಚನೆಯನ್ನಾಗಿ ಪರಿವರ್ತಿಸಿದ ಅಂಶ ದೇವಾಲಯದ ಭಿತ್ತಿಯ ಮೇಲಿರುವ ರಾಜೇಂದ್ರ ಚೋಳನ ಕಾಲಕ್ಕೆ ಸೇರಿದ ೧೦೩೩ರ ಶಾಸನದಿಂದ ಗೊತ್ತಾಗುತ್ತದೆ. ಅಲ್ಲೇ ಇರುವ ಇನ್ನೊಂದು ಶಾಸನದಿಂದ ಕದುಂಬಳಿಕೆ ನಾಡಿನಲ್ಲಿದ್ದ ಕನಕಪರ್ವತ (ಸುಲ್ಕಲ್‌ಮಲೆ) ಬುಡದಲ್ಲಿದ್ದ ಇತ್ತಿಕೆರೈ ಗ್ರಾಮದ ತ್ರಿಭುವನಯ್ಯನ ಮಗಳಾದ

ಜಕ್ಕಿಯಬ್ಬೆಯು, ಚಕ್ರವರ್ತಿ ರಾಜೇಂದ್ರಚೋಳನ ಹೆಸರಲ್ಲಿ ದೇವಾಲಯದ ಹೊರಮಂಟಪವನ್ನು ನಿರ್ಮಿಸಿ, ಅದಕ್ಕೆ ಶ್ರೀರಾಜೇಂದ್ರ ಚೋಳದೇವ ಮಂಟಪವೆಂದು ಹೆಸರಿಟ್ಟಿದ್ದ ಅಂಶ ಅದರಿಂದ ವೇದ್ಯವಾಗುತ್ತದೆ. ಅಲ್ಲೇ ಇರುವ ಇನ್ನೊಂದು ಶಾಸನದಿಂದ, ಇದೇ ತ್ರಿಭುವನಯ್ಯನ ಮಗನಾದ ಜಕ್ಕಯ್ಯನು ದೇವಿಗೆ ಕಮಲಾಭರಣವನ್ನು ಮಾಡಿಸಿ ಕೊಟ್ಟ ಅಂಶ ಗೊತ್ತಾಗುತ್ತದೆ. ಈತನ ಕಾಲಕ್ಕೆ ಸೇರಿದ ಕೋಲಾರದ ಶಾಸನವೊಂದರಲ್ಲಿ ರಾಜೇಂದ್ರ ಚೋಳನ ಹೆಸರಿನಲ್ಲಿ ಚಲಾವಣೆಯಲ್ಲಿದ್ದ ಚಿನ್ನದ ಕಾಸಿನ ಉಲ್ಲೇಖವಿದೆ.

ರಾಜೇಂದ್ರ ಚೋಳನ ನಂತರ ಅಧಿಕಾರಕ್ಕೆ ಬಂದ ಅವನ ಎರಡನೆಯ ಮಗನಾದ **ಒಂದನೆಯ ರಾಜಾಧಿರಾಜ (೧೦೧೮–೧೦೫೪)**ನು ತಂದೆ ಜೀವಿಸಿದ್ದಂತೆ ೧೦೧೮ರಿಂದಲೇ ಜಂಟಿಯಾಗಿ ಅಧಿಕಾರ ನಡೆಸಿದ್ದಕ್ಕೆ ಸಾಕಷ್ಟು ಸುಳಿವುಗಳಿವೆ. ಈತ ೧೦೫೪ರವರೆಗೂ ಅಧಿಕಾರದಲ್ಲಿದ್ದು, ಅದೇ ವರ್ಷ ಜರುಗಿದ ಕುಪ್ಪಂ ಯುದ್ಧದಲ್ಲಿ ಚಾಳುಕ್ಯರೊಂದಿಗೆ ಹೋರಾಡುತ್ತಾ ಮಡಿದ ಅಂಶ ಇತರೆಡೆ ಲಭಿಸಿರುವ ಶಾಸನಗಳಿಂದ ವೇದ್ಯವಾಗುತ್ತದೆ. ವಿಜಯ ರಾಜೇಂದ್ರ ಚೋಳನೆಂದೂ ಪ್ರಸಿದ್ಧನಾಗಿದ್ದ ಇವನು, ಜಯಂಗೊಂಡ ಚೋಳ ಹಾಗೂ ರಾಜಕೇಸರಿವರ್ಮ ಎಂದೂ ಖ್ಯಾತನಾಗಿದ್ದನು. ಚಾಳುಕ್ಯರ ಮೇಲೆ ನಿರ್ಣಾಯಕ ಗೆಲುವು ಪಡೆದುದರ ಪರಿಣಾಮವಾಗಿ ಧರಿಸಿದ ಬಿರುದುಗಳು ಇವಾಗಿದ್ದು, ಇವನ ಆಳ್ವಿಕೆಯ ೩೬ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಶಾಸನವೊಂದರಿಂದ ಚಾಳುಕ್ಯರ ರಾಜಧಾನಿ ಪಟ್ಟಣ ಕಲ್ಯಾಣವೂ ಇವನಿಗೆ ವಶವಾಗಿದ್ದ ಅಂಶ ವೇದ್ಯವಾಗುತ್ತದೆ. ಕಂಪಿಲಿಯಲ್ಲಿದ್ದ ಚಾಳುಕ್ಯರ ಅರಮನೆಯನ್ನು ಧ್ವಂಸ ಮಾಡಿ ಜಯಸ್ತಂಭವನ್ನು ನೆಟ್ಟನೆಂಬ ಹೆಗ್ಗಳಿಕೆ ಇವನಿಗಿದ್ದ ಅಂಶವನ್ನು ಅವನ ಅನೇಕ ಶಾಸನಗಳು ವ್ಯಕ್ತಪಡಿಸುತ್ತವೆ. ಅಲ್ಲದೇ ಚಾಳುಕ್ಯ ಆಹವಮಲ್ಲ ಒಂದನೆಯ ಸೋಮೇಶ್ವರ, ಮತ್ತವನ ಮಕ್ಕಳಾದ ಆರನೆಯ ವಿಕ್ರಮಾದಿತ್ಯ ಹಾಗೂ ವಿಷ್ಣುವರ್ಧನರಿಗೆ ಕೊಲ್ಲಿಪಾಕ್ಕೈ ಯುದ್ಧದಲ್ಲಿ ಸೋಲುಂಟಾದ ಅಂಶವನ್ನು ಚೋಳ ಹಾಗೂ ಚಾಳುಕ್ಯ ಶಾಸನಗಳೆರಡೂ ದಾಖಲಿಸಿದೆ. ಆದರೆ ಚಾಳುಕ್ಯರೊಂದಿಗೆ ಎರಡನೇ ಬಾರಿ ಜರುಗಿದ ಯುದ್ಧದಲ್ಲಿ ಒಂದನೆಯ ರಾಜಾಧಿರಾಜನು ಯುದ್ಧ ರಂಗದಲ್ಲಿ ಮರಣವನ್ನಪ್ಪಿದಾಗ ಅವನ ಸೋದರನಾದ ಇಮ್ಮಡಿ ರಾಜೇಂದ್ರಚೋಳದೇವನು ಚೋಳ ಸಿಂಹಾಸನವನ್ನು ೧೦೫೪–೫೫ರಲ್ಲಿ ಏರಿದನು. ಕುಪ್ಪಂನಲ್ಲಿ ಜರುಗಿದ ಈ ಯುದ್ಧದ ಬಗ್ಗೆ ಇಮ್ಮಡಿ ರಾಜೇಂದ್ರಚೋಳನ ಕಾಲದಲ್ಲಿ ನೀಡಲ್ಪಟ್ಟಿರುವ ಕೋಲಾರ (೧೦೫೪) ಹಾಗೂ ಯಲ್ಲೂರಿ(೧೦೫೭)ನ ತಮಿಳು ಶಾಸನಗಳು ವಿವರವಾದ ಮಾಹಿತಿಯನ್ನು ಒಳಗೊಂಡಿವೆ. ಚಾಳುಕ್ಯ ಆಹವಮಲ್ಲನನ್ನು ಪೆರ್ೊದ್ದೊರೆಯ ದಡದ ಮೇಲಿದ್ದ ಕುಪ್ಪಂ ಬಳಿ ಯುದ್ಧದಲ್ಲಿ ಸೋಲಿಸಿ, ಚಾಳುಕ್ಯರ ಗಜಾಶ್ವದಳಗಳೂ ಸೇರಿದಂತೆ ಅಪಾರ ಸಂಪತ್ತನ್ನು ವಶಪಡಿಸಿಕೊಂಡ ಚೋಳರು ಕೊಲ್ಲಾಪುರದಲ್ಲಿ ವಿಜಯಸ್ಥಂಭವನ್ನು ಸ್ಥಾಪಿಸಿದ ಅಂಶವನ್ನು ಈ ಎರಡೂ ಶಾಸನಗಳು ವರ್ಣರಂಜಿತವಾಗಿ ವರ್ಣಿಸುತ್ತವೆ. ಆ ಸಂದರ್ಭದಲ್ಲಿ ಕುವಲಾಲ ನಾಡಿನ ಕುವಲಾಲದ ಪಿಡಾರಿಯಾರ್ ದೇವಿಗೆ ಎರಡು ನಂದಾದೀಪಗಳ ಸೇವೆಗೆಂದು ಅರಸನ ಸೇನಾನಿಯಾದ ಮದುರಾಂತಕ ತಮಿಳು ಪೆರಿಯರಾಯನು, ಗುಡಿಯ ವಿಜಯರಾಜೇಂದ್ರ ಮಂಟಪದಲ್ಲಿ ೬೩ ಗೋವುಗಳನ್ನು ದೇವಾಲಯದ ಶಿವಾಚಾರ್ಯರಿಗೆ ದಾನ ಬಿಟ್ಟ ಅಂಶವನ್ನು, ಕೋಲಾರದ ೧೦೫೪ರ ಶಾಸನ ವ್ಯಕ್ತಪಡಿಸಿದರೆ, ಯಲ್ಲೂರಿ (೧೦೫೭)ನ ಶಾಸನವು ಯುದ್ಧರಂಗದಿಂದ ಪಲಾಯನಗೈದ ಚಾಳುಕ್ಯ ಆಹವಮಲ್ಲನ ಪರಿಯನ್ನು ಉತ್ಪ್ರೇಕ್ಷೆಯಿಂದ ವರ್ಣಿಸುತ್ತಾ, ಯಲ್ಲೂರು ಗ್ರಾಮದ ಬೆದ್ದಲು ಭೂಮಿಯ ಉತ್ಪನ್ನದ ಐದನೆಯ ಒಂದು ಭಾಗವನ್ನು ದೇವಾದಾಯವಾಗಿ ದೇವರಿಗೆ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅಲ್ಲದೇ ಅಂದಿನ ದಿನಗಳಲ್ಲಿ ಚಲಾವಣೆಯಲ್ಲಿದ್ದ ಚಿನ್ನದ ನಾಣ್ಯ (ಕಾಸು)ವನ್ನು ಉಲ್ಲೇಖಿಸುವುದರ ಜೊತೆಗೆ, ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಭೆಯ ಬಗೆಗೂ ದಾಖಲಿಸುತ್ತದೆ. ಈ ಯುದ್ಧರಂಗದಲ್ಲಿ ಚೋಳ ರಾಜಾಧಿರಾಜನು ವೀರಮರಣವನ್ನಪ್ಪಿದಾಗ ಅವನ ಸೋದರ ಇಮ್ಮಡಿ ರಾಜೇಂದ್ರನ ಮುಂದಾಳತ್ವದಲ್ಲಿ ಮುನ್ನುಗ್ಗಿದ ಚೋಳ ಸೈನ್ಯದ ಆಕ್ರಮಣದಿಂದ ಚಾಳುಕ್ಯ ಜಯಸಿಂಹ, ದಶವರ್ಮ, ನನ್ನಿನೊಳಂಬ ಮುಂತಾದವರು ಚಾಳುಕ್ಯ ಸೈನ್ಯದಲ್ಲಿ ಹತರಾದ ಅಂಶ ಕೆಂಗೇರಿ ಬಳಿಯ ಒಳಗೆರೆಹಳ್ಳಿಯಿಂದ ವರದಿಯಾಗಿರುವ ಸುಮಾರು ೧೦೫೫ರ ಶಾಸನದಿಂದ ವೇದ್ಯವಾಗುತ್ತದೆ.

**ಇಮ್ಮಡಿ ರಾಜೇಂದ್ರ ಚೋಳದೇವ(೧೦೫೨–೬೨):** ಅಣ್ಣ ರಾಜಾಧಿರಾಜನ ವೀರಮರಣದಿಂದಾಗಿ ಚೋಳ ಸಿಂಹಾಸನವನ್ನು ಅಲಂಕರಿಸಿದ ಇವನು ಅಣ್ಣನೊಂದಿಗೆ ಜಂಟಿಯಾಗಿ ಕೆಲವು ವರ್ಷ ರಾಜ್ಯಭಾರ ಮಾಡಿದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಕುಪ್ಪಂ ಯುದ್ಧದ ಅಂತಿಮ ಗೆಲುವಿನ ಶ್ರೇಯಸ್ಸು ಇವನಿಗೆ ಸಲ್ಲಬೇಕಾಗಿದ್ದು, ಅದನ್ನು ಇವನ ಶಾಸನಗಳು ಸಂದರ್ಭೋಚಿತವಾಗಿ ವರ್ಣಿಸಿವೆ. ಈತನ ಆಳ್ವಿಕೆಗೆ ಸೇರಿದ ಕೋಲಾರ (೧೦೫೪) ಹಾಗೂ ಯಲ್ಲೂರು (೧೦೫೭) ಶಾಸನಗಳನ್ನು ಈಗಾಗಲೇ ಚರ್ಚಿಸಲಾಗಿದ್ದು, ಅವು, ಚಾಳುಕ್ಯರ ಮೇಲೆ ವಿಜಯ ಸಾಧಿಸಿ, ಹಿಂತಿರುಗುತ್ತಿದ್ದ ರಾಜೇಂದ್ರಚೋಳನು ಅಲ್ಲಿ ತಾತ್ಕಾಲಿಕವಾಗಿ

ತಂಗಿದ್ದಾಗ ನೀಡಿದ ದಾನ ಶಾಸನಗಳಾಗಿವೆಯಾದರೂ, ಚೋಳ–ಚಾಳುಕ್ಯ ಸಂಬಂಧವನ್ನು ನಿರ್ಧರಿಸುವಲ್ಲಿ ಸಾಕಷ್ಟು ನೆರವಾಗುತ್ತವೆ. ಇವನ ನಂತರ ಅಧಿಕಾರಕ್ಕೆ ಬಂದ ಅವನ ಮಗ **ರಾಜಮಹೇಂದ್ರದೇವ ಚೋಳ(೧೦೬೨–೬೩)**ನು ಅಲ್ಪಾವಧಿ ಅಧಿಕಾರದಲ್ಲಿದ್ದು, ಅವನ ನಂತರ ಇಮ್ಮಡಿ ರಾಜೇಂದ್ರ ಚೋಳನ ಕಿರಿಯ ಸೋದರನಾದ **ಒಂದನೆಯ ವೀರರಾಜೇಂದ್ರ(ಕರಿಕಾಲ)ಚೋಳ (೧೦೬೩–೧೦೭೧)**ನು ಅಧಿಕಾರಕ್ಕೆ ಬಂದನು. ಚಾಳುಕ್ಯರೊಂದಿಗೆ ಮೂರು ಯುದ್ಧಗಳನ್ನು ಹೂಡಿದ ಇವನು ಸುಮಾರು ೧೦೬೪ರಲ್ಲಿ ಜರುಗಿದ ಕೂಡಲಸಂಗಮ ಯುದ್ಧದಲ್ಲಿ ಒಂದನೆಯ ಸೋಮೇಶ್ವರ ಮತ್ತವನ ಮಕ್ಕಳಾದ ಇಮ್ಮಡಿ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ ಹಾಗೂ ಮುಮ್ಮಡಿ ಜಯಸಿಂಹರನ್ನು ಯುದ್ಧರಂಗದಿಂದ ಪಲಾಯನಗೆಯ್ಯುವಂತೆ ಮಾಡಿದ ಅಂಶವನ್ನು ಅನೇಕ ಚೋಳ ಶಾಸನಗಳು ಸೂಚಿಸುತ್ತವೆ. ಚಾಳುಕ್ಯರ ಮೇಲೆ ನಿರ್ಣಾಯಕ ಗೆಲುವನ್ನು ಪಡೆದ ಇವನು ಕಂಪ್ಲಿ ಪಟ್ಟಣವನ್ನು ಸುಟ್ಟು ಕರಡಿಕಲ್‌ನಲ್ಲಿ ವಿಜಯಸ್ತಂಭವನ್ನು ಸ್ಮಾರಕವಾಗಿ ನಿಲ್ಲಿಸಿದನೆಂದೂ ಅವು ದಾಖಲಿಸಿವೆ. ಇವನ ನಂತರ ಅಧಿಕಾರಕ್ಕೆ ಬಂದ **ಆದಿರಾಜೇಂದ್ರ ಚೋಳ (೧೦೬೮–೭೦)**ನು ಒದನೆಯ ವೀರರಾಜೇಂದ್ರನ ಮಗನೂ, ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಮೈದುನನೂ ಆಗಿದ್ದನು. ಆದರೆ ಇವನ ಆಳ್ವಿಕೆಯು ನಗಣ್ಯವಾಗಿದ್ದು, ಇವನ ನಂತರ ಚೋಳ ಸಿಂಹಾಸನವನ್ನು ಏರಿದ ಒಂದನೆಯ ಕುಲೋತ್ತುಂಗನು (೧೦೬೫) ತನ್ನ ಆಳ್ವಿಕೆಯ ವರ್ಷವನ್ನು ಒಂದನೆಯ ವೀರರಾಜೇಂದ್ರನ ಆಡಳಿತಾವಧಿಯ ಮುಕ್ತಾಯದ ವರ್ಷದಿಂದಲೇ ಆರಂಭಿಸಿರುವುದು ಗಮನಾರ್ಹ.

**ಒಂದನೆಯ ಕುಲೋತ್ತುಂಗ(ರಾಜೇಂದ್ರ)ಚೋಳ(೧೦೭೦–೧೧೨೦):** ಒಂದನೆಯ ರಾಜೇಂದ್ರನ ಮಗಳ ಮಗನೂ, ರಾಜೇಂದ್ರದೇವನ ಅಳಿಯನೂ ಆದ ಇವನು ಚಾಳುಕ್ಯ ವಿಕ್ರಮಾದಿತ್ಯನ ಬೆಂಬಲವಿದ್ದ ಒಂದನೆಯ ವೀರರಾಜೇಂದ್ರನ ಮಗ ಆದಿರಾಜೇಂದ್ರನನ್ನು ಪದಚ್ಯುತಗೊಳಿಸಿ, ಚೋಳ ಸಿಂಹಾಸನವನ್ನು ಏರಿದ್ದು ಮಹತ್ವದ ಬೆಳವಣಿಗೆಯಾಗಿತ್ತು. ಸುಮಾರು ಅರ್ಧ ಶತಮಾನ ಕಾಲ ರಾಜ್ಯಭಾರ ನಡೆಸಿದ ಇವನು, ವೆಂಗಿ ಚಾಳುಕ್ಯ ಮನೆತನಕ್ಕೆ ಸೇರಿದವನಾಗಿದ್ದು, ಇವನ ತಾಯಿಯು ಚೋಳ ಮೂಲದವಳಾಗಿದ್ದಳು. ಈತನ ಆಡಳಿತದ ೧೧ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಶಾಸನದಿಂದ ಈತನು ಚಾಳುಕ್ಯ ಆರನೆಯ ವಿಕ್ರಮಾದಿತ್ಯನನ್ನು ಕೋಲಾರ ಜಿಲ್ಲೆಯ ನಂಗಲಿ ಪ್ರಾಂತದಿಂದ ಮಣಲೂರು ಮಾರ್ಗವಾಗಿ ತುಂಗಭದ್ರೆಯಾಚೆಗೆ ಹೊರದಬ್ಬಿದನೆಂದು ಗೊತ್ತಾಗುತ್ತದೆ. ಅದಕ್ಕೂ ಮೊದಲು ಚಾಳುಕ್ಯ ಸಿಂಹಾಸನಕ್ಕಾಗಿ ಏರ್ಪಟ್ಟಿದ್ದ ಸೋದರರ ಅಂತಃಕಲಹದಲ್ಲಿ ಆರನೆಯ ವಿಕ್ರಮಾದಿತ್ಯನ ವಿರುದ್ಧ ಇಮ್ಮಡಿ ಸೋಮೇಶ್ವರನಿಗೆ ವೆಂಗಿಯ ಕುಲೋತ್ತುಂಗ ಚೋಳ ಬೆಂಬಲಿಸಿದ್ದನು. ಆದರೆ ತನ್ನಣ್ಣ ಇಮ್ಮಡಿ ಸೋಮೇಶ್ವರನನ್ನು ಬದಿಗೊತ್ತಿ ಗದ್ದುಗೆ ಏರುವಲ್ಲಿ ಯಶಸ್ವಿಯಾದ ಆರನೆಯ ವಿಕ್ರಮಾದಿತ್ಯ (೧೦೭೬–೧೧೨೬) ನು ಕುಲೋತ್ತುಂಗನ ಪ್ರಾಬಲ್ಯವನ್ನು ಹತ್ತಿಕ್ಕಲು ಯತ್ನಿಸಿದನು. ಚಾಳುಕ್ಯರು, ಪಾಂಡ್ಯರು ಹಾಗೂ ಕಳಿಂಗರ ಮೇಲೆ ಗೆಲುವು ಸಾಧಿಸಿದ ಕುಲೋತ್ತುಂಗನ ಆಳ್ವಿಕೆಯ ಕೊನೆಯ ಭಾಗದಲ್ಲಿ (೧೧೧೮) ಅವನ ಮಗನಾದ ವಿಕ್ರಮಚೋಳನು ಜಂಟಿಯಾಗಿ ರಾಜ್ಯಭಾರ ಮಾಡಲಾರಂಭಿಸಿದನು. ಇವನ ಆಳ್ವಿಕೆಯ ೪೬ನೆಯ ವರ್ಷದಲ್ಲಿ (೧೧೧೬–೧೧೧೭) ಚೋಳರ ವಶದಲ್ಲಿದ್ದ ತಲಕಾಡು ಪಟ್ಟಣವು ಹೊಯ್ಸಳರ ಕೈವಶವಾಯಿತು. ಅಲ್ಲದೆ ಚೋಳರ ವಶದಲ್ಲಿದ್ದ ಗಂಗವಾಡಿ ಪ್ರಾಂತವನ್ನು ದಂಡನಾಯ್ಕ ಗಂಗರಾಜನ ನೆರವಿನೊಂದಿಗೆ ಸಂಪೂರ್ಣ ವಶಪಡಿಸಿಕೊಳ್ಳುವ ಮೂಲಕ ಚೋಳರನ್ನು ಗಂಗವಾಡಿಯಿಂದ ಹೊರದಬ್ಬುವಲ್ಲಿ ಹೊಯ್ಸಳ ವಿಷ್ಣುವರ್ಧನನು ಯಶಸ್ವಿಯಾದನು. ಈ ಸೋಲಿನಿಂದ ಚೋಳರ ಆಡಳಿತವು ಕೋಲಾರ ಜಿಲ್ಲೆಯ ಈಶಾನ್ಯ ಭಾಗಗಷ್ಟೇ ಸೀಮಿತಗೊಂಡಿತು. ಈ ಗೆಲುವಿನಿಂದಾಗಿ 'ತಲಕಾಡುಗೊಂಡ' ಎಂಬ ಬಿರುದನ್ನು ಧರಿಸಿದ ಹೊಯ್ಸಳ ವಿಷ್ಣುವರ್ಧನನು ೧೧೧೭ರ ವೇಳೆಗೆ ಚೋಳರನ್ನು ಸೋಲಿಸಿ, ತಲಕಾಡು–ಕೋಲಾರಗಳನ್ನೊಳಗೊಂಡ ಗಂಗವಾಡಿ ಸೇರಿದಂತೆ ಕೊಂಗುನಾಡಿನವರೆಗೆ ಆಳುತ್ತಿದ್ದ ಅಂಶವನ್ನು ಚಾಮರಾಜನಗರ ತಾಲೂಕಿನ ೧೦೩೮ರ ಶಾಸನವು ದಾಖಲಿಸಿದೆ. ಒಂದನೆಯ ಕುಲೊತ್ತುಂಗನ ಆಳ್ವಿಕೆಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಜಿಲ್ಲೆಯ ಕೋಲಾರ, ಮುಳಬಾಗಿಲು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಂಗಾರಪೇಟೆ ಹಾಗೂ ಮಾಲೂರು ತಾಲೂಕುಗಳಲ್ಲಿ ಲಭಿಸಿವೆ. ಇವನ ಆಳ್ವಿಕೆಯ ಎರಡನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ೧೦೭೧ರ ಕೋಲಾರ ಶಾಸನದಿಂದ, ಅರಸನ ಅಧಿಕಾರಿಯಾದ ಅಂಬಲವನ್ ತಿರುಪ್ಪೊಂಡೆಯಾರನು ಕೋಲಾರದ ಪಿಡಾರಿಗುಡಿಯಲ್ಲಿ ಮಂಟಪವೊಂದನ್ನು ನಿರ್ಮಿಸಿದ ಅಂಶ ವೇದ್ಯವಾದರೆ ಇನ್ನೊಂದು ಶಾಸನದಿಂದ ಕೋಲಾರದ ಪಿಡಾರಿ ದೇವಾಲಯದಲ್ಲಿ ವೀರಭದ್ರ, ಬ್ರಾಹ್ಮಣಿ, ಈಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡೇಶ್ವರಿ ಹಾಗೂ ಗಣಪತಿಯರನ್ನು ಮೂಲಸ್ಥಾನದಲ್ಲೂ, ಕ್ಷೇತ್ರಪಾಲ ದೇವರು ಮಹಾಸೇನ, ಸೂರ್ಯದೇವ, ಯೋಗಿನಿ ಹಾಗೂ ಯೋಗೀಶ್ವರರನ್ನು ಪರಿವಾರ ದೇವತೆಗಳಾಗಿಯೂ ಆರಾಧಿಸಲ್ಪಡುತ್ತಿದ್ದ ಅಂಶ, ಆಯಾ ದೇವರುಗಳಿಗೆ ನೀಡಿರುವ

ದತ್ತಿಗಳಿಂದ ವೇದ್ಯವಾಗುತ್ತದೆ. ಅದರಲ್ಲೂ ಕೊನೆಯ ಎರಡು ದೇವರಿಗೆ ಮದ್ಯಪಾನದ ಸೇವೆಯೂ ಇದ್ದುದು ಉಲ್ಲೇಖಾರ್ಹವಾಗಿದ್ದು, ಎಲ್ಲಾ ದೇವರಿಗೂ ತಲಾ ನಾಲ್ಕು ನಳಿ ಅಕ್ಕಿ, ಎರಡು ಬಗೆಯ ತರಕಾರಿ ಪಲ್ಯೆ, ಎರಡು ಅಡಿಕೆ ಹಾಗೂ ನಾಲ್ಕು ವಿಳೆಯದೆಲೆಯ ದೈನಂದಿನ ಸೇವೆಗೆ ವ್ಯವಸ್ಥೆ ಮಾಡಲಾಗಿತ್ತು.

ಇದೇ ಅರಸನ ಆಳ್ವಿಕೆಯ ಏಳನೆಯ ವರ್ಷಕ್ಕೆ ಸೇರಿದ ನರಸಾಪುರದ ೧೦೭೬ರ ಶಾಸನದಿಂದ ಕೈವಾರ ನಾಡೊಳಗಣ 'ಜನಾರ್ಧನ ಚತುರ್ವೇದಿ ಮಂಗಲ'ವಾದ ವೆಳ್ಳಿಯೂರ (ಬೆಳ್ಳೂರು) ಗೋವುಗಳನ್ನು ರಕ್ಷಿಸುವ ಯತ್ನದಲ್ಲಿ ಮಡಿದ ವೀರನಿಗಾಗಿ ಇರುಮುಡಿ ಚೋಳ ಮಾಯಲಟ್ಟಿಯು ವೀರಗಲ್ಲನ್ನು ನಿಲ್ಲಿಸಿದ ಅಂಶ ಗೊತ್ತಾಗುತ್ತದೆ. ಮುಳಬಾಗಿಲು ತಾಲೂಕಿನ ಆವನಿಯಿಂದ ವರದಿಯಾಗಿರುವ ೧೦೭೯ರ ಶಾಸನದಿಂದ ಇಬ್ಬರು ಚೋಳ ದಂಡನಾಯಕರು, ಆವನಿಯ ತಿರುರಾಮೇಶ್ವರ ದೇವರ ನಂದಾದೀಪಕ್ಕೆಂದು ೨೪ ಗೋವುಗಳನ್ನು ಗುಡಿಯ ಪಂಚಾಚಾರ್ಯ ಪೂಜಾರಿಗೆ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇವನ ಆಳ್ವಿಕೆಯ ೧೧ನೆಯ ವರ್ಷಕ್ಕೆ ಸೇರಿದ ವೀರಗಲ್ಲು ಶಾಸನವೊಂದು ಶಿಡ್ಲಘಟ್ಟ ತಾಲೂಕಿನ ಬೆಳ್ಳಟ್ಟಿಯಲ್ಲಿ ಲಭ್ಯವಿದ್ದು, ಬಹಳ ಹಾಳಾಗಿದೆ. ಇದೇ ಅರಸನಿಗೆ ಸಂಬಂಧಿಸಿದ ೧೦೮೨ರ ಸೀತಿಬೆಟ್ಟ (ಕೋಲಾರ ತಾ.) ಶಾಸನವು, ಕುವಲಾಲ ನಾಡಿನ ಸಾತನೂರಿನ ಪಾಲಕನಾದ, ವೈಶ್ಯಕುಲದ ವೀರಚೋಳ ಬ್ರಹ್ಮರಾಯನು ಸೀತಿಬೆಟ್ಟದಲ್ಲಿ ಕ್ಷೇತ್ರಪಾಲದೇವರಿಗೆ ಪೀಠ ಹಾಗೂ ಮಂಟಪಗಳನ್ನು ಮಾಡಿಸಿದ ಅಂಶವನ್ನು ದಾಖಲಿಸಿದೆ. ಇವನ ಆಳ್ವಿಕೆಯ ೨೦ನೇ ವರ್ಷಕ್ಕೆ (೧೦೮೯)ಸೇರಿದ ಕೋಲಾರ ತಾಲೂಕಿನ ಕಣ್ಣೂರಿನ ಶಾಸನವು ಕುಲೋತ್ತುಂಗ ಚೋಳನು ವಿಲ್ಲವರ್(ಚೇರ) ಹಾಗೂ ಮೀನವರ್(ಪಾಂಡ್ಯ)ರನ್ನು ಸೋಲಿಸಿದ ಅಂಶವನ್ನು ದಾಖಲಿಸುತ್ತಾ, ಕುವಲಾಲ ನಾಡಿನ ಕಳನಿಯೂರಿನ (ಇಂದಿನ ಕಣ್ಣೂರು) ತಿರುವಿರಾಮೇಶ್ವರ ಮಹಾದೇವರಿಗೆ, ಜಯಂಗೊಂಡ ಚೋಳ ಬ್ರಹ್ಮಮಾರಾಯನು, ೧೮ ಗೇಣಿನ ಕೋಲಲ್ಲಿ ೧೦೦೦ ಕುಳಿ ಗದೆಯನ್ನು ಅಳೆಸಿ ದಾನ ಬಿಟ್ಟ ಅಂಶವನ್ನೂ ತಿಳಿಸುತ್ತದೆ. ಇವನ ಆಳ್ವಿಕೆಯ ೨೩ನೆಯ ವರ್ಷಕ್ಕೆ ಸೇರಿದ ನಂದಿಯ ೧೦೯೨ರ ಶಾಸನದಿಂದ ನಂದಿಯ ನಂದೀಶ್ವರ ದೇವರಿಗೆ ಮದುರಾಂತಕ ಎಂಬ ಚಿನ್ನದ ನಾಣ್ಯಕ್ಕೂ ಮಿಗಿಲಾದ ಶುದ್ಧ ಚಿನ್ನದಿಂದ ಮಾಡಿದ, ಎಂಟು ಕಲಂಜು ಹಾಗೂ ಒಂದು ಕುನಿ ತೂಕದ ಬಂಗಾರದ ತಟ್ಟೆಯನ್ನು ದಂಡನಾಯಕ ಗಂಗೇಯರಾಜನು ಕಾಣಿಕೆಯಾಗಿ ಸಲ್ಲಿಸಿದ ಅಂಶ ಗೊತ್ತಾಗುತ್ತದೆ.

ಇದೇ ಅರಸನ ಆಳ್ವಿಕೆಯ ೨೯ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಮುಳಬಾಗಿಲು ತಾಲೂಕಿನ ೧೦೯೮ರ ಆವನಿ ಶಾಸನವು ಕುಲೋತ್ತುಂಗನು ಯುವರಾಜನಾಗಿ ಸಕ್ಕರಗೊಟ್ಟಂ ಮೇಲೆ ಗೆಲುವು ಪಡೆದದ್ದು, ಕುಂತಲರಾಜ ವಿಕ್ಕಲ (ಆರನೆಯ ವಿಕ್ರಮಾದಿತ್ಯ)ನನ್ನು ಸೋಲಿಸಿ ಪಲಾಯನಗೆಯ್ಯುವಂತೆ ಮಾಡಿದ್ದನ್ನು ಹೇಳುತ್ತಾ, ಯುದ್ಧದ ಪರಿಣಾಮವಾಗಿ ಶತ್ರು ಸೈನ್ಯ ನಂಗಲಿಯಿಂದ–ತುಂಗಭದ್ರೆಯವರೆಗೂ ಹೆಣವಾಗಿ ಬಿದ್ದಿದ್ದನ್ನು ವರ್ಣಿಸುವುದರ ಜೊತೆಗೆ ಇನ್ನೂ ಅನೇಕ ಚಾರಿತ್ರಿಕ ಘಟನೆಗಳನ್ನು ದಾಖಲಿಸುತ್ತಾ ಗಂಗ ಮಂಡಲದ ಸಿಂಗಣ್ಣ, ಪಾಂಡ್ಯ ಮಂಡಲದ ಚೋಳಮಾರ್ತಾಂಡ ಬ್ರಹ್ಮಮಾರಾಯ ಹಾಗೂ ಇಳನಗರನಾಡಿನ ಗೌಡನು ಆವನಿಯ ಶ್ರೀರಾಮೇಶ್ವರ ದೇವರ ನಂದಾದೀಪ ಸೇವೆಗೆಂದು ೨೪ ಗೋವುಗಳನ್ನು ಮೂವರು ಸ್ಥಳೀಯ ಬ್ರಾಹ್ಮಣರಿಗೆ ದಾನ ನೀಡಿದ ಅಂಶವನ್ನು ದಾಖಲಿಸಿದೆ. ಅಲ್ಲಿಂದಲೇ ವರದಿಯಾಗಿರುವ ಸುಮಾರು ೧೧೦೦ರ ಇನ್ನೊಂದು ಶಾಸನವು ಬಹಳ ಹಾಳಾಗಿದ್ದು, ವಿವರ ಅಸ್ಪಷ್ಟವಾಗಿದೆ. ಇವನ ಆಳ್ವಿಕೆಯ ೩೩ನೇ ವರ್ಷದಲ್ಲಿ ನೀಡಿರುವ ನಂದನವನದ ೧೧೦೨ರ ಶಾಸನದ ಬಿರುದಿರುವ ಭಾಗವಷ್ಟೇ ಇದ್ದು ಉಳಿದ ವಿವರ ಹಾಳಾಗಿದೆ. ಆವನಿಯ ೧೧೦೨ರ ಶಾಸನದಿಂದ ಗಂಗೇಯರಾಜನು ಆವನಿಯ ರಾಮೇಶ್ವರ ದೇವರ ನಂದಾದೀಪದ ಸೇವೆಗೆಂದು ೨೪ ಗೋವುಗಳನ್ನು ಮತ್ತು ಶೈವ ಪಂಚಾಚಾರ್ಯ ಅರ್ಚಕರಿಗೆ ಪ್ರತ್ಯೇಕವಾಗಿ ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಆವನಿಯ ೧೧೦೪ರ ಇನ್ನೊಂದು ಶಾಸನವು ರಾಜೇಂದ್ರಚೋಳ ಬ್ರಹ್ಮಮಾರಾಯನು ಇದೇ ದೇವರ ನಂದಾದೀಪಕ್ಕೆಂದು ೨೪ ಗೋವುಗಳನ್ನು ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಅರಸನ ಆಳ್ವಿಕೆಯ ೩೯ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಶಿಡ್ಲಘಟ್ಟ ತಾಲೂಕಿನ ಚಿಲಕಲನೇರ್ಪು ಗ್ರಾಮದಲ್ಲಿರುವ ವೀರಗಲ್ಲು ಶಾಸನದಲ್ಲಿ ಚೋಳ ವಂಶಾವಳಿಯನ್ನು ನೀಡಲಾಗಿದ್ದು, ಹಂದಿಬೇಟೆಯಲ್ಲಿ ಮಡಿದ ಸೋದರ ವೇಮಯ್ಯ ಗೌಂಡನಿಗೆ ಸ್ಮಾರಕವಾಗಿ ವೀರಗಲ್ಲನ್ನು ನಿಲ್ಲಿಸಿ, ಗಂಗೈಕೊಂಡ ಚೋಳೇಶ್ವರ ಮಹಾದೇವರಿಗೆ ೧೦೦ ಕುಳಿ ಭೂಮಿಯನ್ನು ದಾನಬಿಟ್ಟ ಅಂಶವನ್ನೂ ದಾಖಲಿಸಲಾಗಿದೆ. ಇವನ ಆಳ್ವಿಕೆಗೆ ಸೇರಿದ ಎರಡು ಶಾಸನಗಳು ಮಾಲೂರು ತಾಲೂಕಿನ ದೊಡ್ಡಶಿವಾರದಲ್ಲಿವೆಯಾದರೂ ಬಹಳ ಹಾಳಾಗಿರುವುದರಿಂದ ವಿವರ ತಿಳಿಯುವುದಿಲ್ಲ. ಇದೇ ತಾಲೂಕಿನ ಮಡಿವಾಳದಲ್ಲಿರುವ ೧೧೧೨ರ ಶಾಸನದಿಂದ ಮಲಿಯೂರಿನ ಗಂಗೈಕೊಂಡೀಶ್ವರ ಮಹಾದೇವರಿಗೆ ಬಿಟ್ಟ

ಭೂದಾನವನ್ನು ಹಾಳು ಮಾಡದೇ ಸಂರಕ್ಷಿಸುವವರ ಎರಡು ಪಾದಗಳನ್ನು ತನ್ನ ತಲೆಯ ಮೇಲೆ ಇಟ್ಟುಕೊಳ್ಳುವುದಾಗಿ ದಾನಿಯು ಶಾಪಾಶಯ ಭಾಗದಲ್ಲಿ ಹೇಳಿಕೊಂಡಿರುವುದು ಅಪರೂಪದ ಅಂಶವಾಗಿದೆ. ಈ ಶಾಪಾಶಯದ ಉಲ್ಲೇಖ, ಜಿಲ್ಲೆಯ ಇನ್ನೂ ನಾಲ್ಕಾರು ಶಾಸನಗಳಲ್ಲಿ ಕಂಡುಬಂದಿರುವುದು ಗಮನಾರ್ಹವಾಗಿದೆ. ಇದೇ ಅರಸನ ಆಳ್ವಿಕೆಯ ೪೪ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ನಂದಿ ಶಾಸನದಿಂದ (೧೧೧೩), ಮದುರಾಂತಕ ಎಂದೇ ಪ್ರಸಿದ್ಧವಾಗಿದ್ದ ಚಿನ್ನದ ನಾಣ್ಯವನ್ನು ದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ಒಂದನೆಯ ಕುಲೋತ್ತುಂಗನ ಆಳ್ವಿಕೆಯಲ್ಲಿ ಕೋಲಾರ ಜಿಲ್ಲಾ ಪ್ರದೇಶವು ಪ್ರಾಮುಖ್ಯತೆ ಪಡೆದಿದ್ದ ಅಂಶ, ಅವನ ಕಾಲಕ್ಕೆ ಸೇರಿದಂತೆ ಜಿಲ್ಲೆಯಲ್ಲಿ ಲಭಿಸಿರುವ ಈ ಶಾಸನಗಳಿಂದ ಖಚಿತವಾಗುತ್ತದೆ. ಏತನ್ಮಧ್ಯೆ, ಚೋಳ ಪ್ರಾಂತದವರಾದ ಶ್ರೀವೈಷ್ಣವ ಧರ್ಮಸುಧಾರಕರಾದ ರಾಮಾನುಜಾಚಾರ್ಯರು (೧೦೧೭–೧೧೩೭) ಚೋಳ ಒಂದನೆಯ ಕುಲೋತ್ತುಂಗನ ಕಾಲದಲ್ಲಿ ಹೊಯ್ಸಳ ರಾಜ್ಯಕ್ಕೆ ಆಗಮಿಸಿ, ಹೊಯ್ಸಳ ವಿಷ್ಣುವರ್ಧನನಿಂದ ಉದಾರ ಪೋಷಣೆ ಪಡೆದು ಸಾಲಿಗ್ರಾಮ, ಕೆರೆತೊಣ್ಣೂರು, ಮೇಲುಕೋಟೆಗಳನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಹೊಯ್ಸಳ ರಾಜ್ಯದಲ್ಲಿ ಶ್ರೀವೈಷ್ಣವ ಧರ್ಮವನ್ನು ಜನಪ್ರಿಯಗೊಳಿಸಿ, ೧೧೨೦ರ ಸುಮಾರಿನಲ್ಲಿ ಚೋಳನಾಡಿಗೆ ಹಿಂತಿರುಗಿದ್ದು, ಮಹತ್ವದ ಬೆಳವಣಿಗೆಯಾಗಿದ್ದು, ಅದರ ಪ್ರಭಾವವನ್ನು ಜಿಲ್ಲೆಯಲ್ಲೂ ಗುರುತಿಸಬಹುದಾಗಿದೆ.

**ವಿಕ್ರಮ ಚೋಳ (೧೧೧೮–೧೧೩೫):** 'ತ್ಯಾಗಸಮುದ್ರ' ಎಂಬ ಬಿರುದನ್ನು ಹೊಂದಿದ್ದು, ಅಕಳಂಕನೆಂದೂ ಪ್ರಸಿದ್ಧನಾಗಿದ್ದ ಇವನು, ಒಂದನೆಯ ಕುಲೋತ್ತುಂಗನ ನಾಲ್ಕನೆಯ ಮಗನಾಗಿದ್ದು, ೧೧೧೮ರಿಂದಲೇ ಜಂಟಿಯಾಗಿ ತಂದೆಯೊಂದಿಗೆ ರಾಜ್ಯಭಾರ ಕೈಗೊಂಡಿದ್ದನು. ಅದಕ್ಕೂ ಮೊದಲು ಇವನು ವೆಂಗಿ ನಾಡಿನ ಪ್ರಾಂತಾಧಿಕಾರಿಯಾಗಿ ೧೦೯೭–೧೧೧೮ರವರೆಗೆ ಆಡಳಿತ ನಡೆಸುವ ಮೂಲಕ ಅನುಭವವನ್ನು ಪಡೆದಿದ್ದನು. ಆದರೆ ಈತನು ಅಧಿಕಾರಕ್ಕೆ ಬರುವ ವೇಳೆಗೆ ಹೊಯ್ಸಳರು ವಿಷ್ಣುವರ್ಧನನ ಮುಂದಾಳತ್ವದಲ್ಲಿ ಚೋಳರನ್ನು ಗಂಗವಾಡಿ ಪ್ರಾಂತದಿಂದ ಹೊರದಬ್ಬುವಲ್ಲಿ ಯಶಸ್ವಿಯಾಗಿದ್ದು, ಅಲ್ಲಿಂದೀಚೆಗೆ ಕೋಲಾರದ ಈಶಾನ್ಯ ಭಾಗಕಷ್ಟೇ ಚೋಳರ ಅಧಿಕಾರ ಸೀಮಿತಗೊಂಡಿದ್ದು, ಇವನ ಶಾಸನಗಳು ಜಿಲ್ಲೆಯ ಕೋಲಾರ, ಚಿಂತಾಮಣಿ, ಹಾಗೂ ಶಿಡ್ಲಘಟ್ಟ ತಾಲೂಕುಗಳಲ್ಲಿ ಮಾತ್ರ ಲಭಿಸಿವೆ. ಇವನ ಆಳ್ವಿಕೆಯ ಎರಡನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಐದು ಶಾಸನಗಳು ಶಿಡ್ಲಘಟ್ಟ ತಾಲೂಕಿನ ಸುಗಟೂರಿ(೧೧೨೦)ನಲ್ಲಿ ಪತ್ತೆಯಾಗಿದೆ. ಅವುಗಳಲ್ಲಿ ನಾಲ್ಕು ಬಹಳ ಹಾಳಾಗಿದ್ದು, ಅರಸನ ಉಲ್ಲೇಖದೊಂದಿಗೆ ಕೈವಾರ ನಾಡೊಳಗಿದ್ದ 'ಅರಮೋಳಿದೇವ ಚತುರ್ವೇದಿ ಮಂಗಲ'ದ ಪ್ರಸ್ತಾಪವಿರುವ ಭಾಗವಷ್ಟೇ ಅವುಗಳಲ್ಲಿ ಉಳಿದಿದೆ. ಆದರೂ ಸಾಂದರ್ಭಿಕ ಆಧಾರದ ಮೇಲೆ ಸುಗಟೂರು ಆ ವೇಳೆಗಾಗಲೇ ಒಂದು ಅಗ್ರಹಾರವಾಗಿದ್ದು 'ಅರಮೋಳಿದೇವ ಚತುರ್ವೇದಿ ಮಂಗಲ' ಎಂಬುದು ಅದಕ್ಕಿದ್ದ ವಿಶೇಷಣವೆಂದು ಊಹಿಸಬಹುದಾಗಿದೆ. ಅಲ್ಲದೇ ಈ ಶಾಸನಗಳಿಂದ ಅವನಿಗೆ 'ಶ್ರೀ ರಾಜರಾಜ' ಎಂಬ ಬಿರುದಿದ್ದ ಅಂಶವೂ ಗೊತ್ತಾಗುತ್ತದೆ. ಇಲ್ಲಿಯ ಉಳಿದೊಂದು ಶಾಸನದಲ್ಲಿ ನಲ್ಲೂರಿನ ಮುನಿಪುಂಗವನಾದ ಉದಯಮಾರ್ತಾಂಡ ಬ್ರಹ್ಮಮಾರಾಯನ ಉಲ್ಲೇಖದ ಜೊತೆಗೆ 'ಅರುಮೋಳಿ ಚತುರ್ವೇದಿ ಮಂಗಲ' (ಸುಗುಟೂರು)ದ ನಿವಾಸಿ ಕುವಲಯ್ಯ ಮತ್ತವನ ಸೋದರ ಸೆಲ್ವಮಣಿ ವಾಮನರು ಸಭಾಮಂಟಪ, ಅರಮನೆ ಹಾಗೂ ಮಂಟಪಗಳಿಂದ ಕಂಗೊಳಿಸುತ್ತಿದ್ದ ಸುಗುಟೂರಿನಲ್ಲಿ, ಸೋಮಚಂದ್ರ ದೇವಾಲಯವನ್ನು ನಿರ್ಮಿಸಿ, ಶಿವ–ಪಾರ್ವತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಚಿನ್ನದ ಪಾದಪೀಠವನ್ನು ಅರ್ಪಿಸಿ, ದೇವರ ಪೂಜೆಗೆಂದು ಹೊಸವೂರನ್ನು ಖರೀದಿಸಿ ಸರ್ವಮಾನ್ಯವಾಗಿ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅಲ್ಲದೇ ಶಾಸನದಲ್ಲಿ ಗಣಪತಿ ಹಾಗೂ ಸೂರ್ಯ ಮೂರ್ತಿಗಳನ್ನು ಉಪದೇವತೆಗಳಾಗಿ ಪ್ರತಿಷ್ಠಾಪಿಸಿ, ದಾನ ಬಿಟ್ಟ ಅಂಶವೂ ಇದೇ. ಮಿಗಿಲಾಗಿ ದೇವರ ಪೂಜಾವಿಧಿಗೆಂದು ತೋಟದಲ್ಲಿ ನೆಟ್ಟ ವಿವಿಧ ಜಾತಿಯ ಹೂಗಿಡಗಳ ಸುದೀರ್ಘ ಪಟ್ಟಿಯೂ ಇದ್ದು, ಅರ್ಚಕರ ಉಪಯೋಗಕ್ಕೆಂದು ಗುಡಿಯ ಪಶ್ಚಿಮ ಭಾಗದಲ್ಲಿ ಗಂಗಾನದಿಯ ಪವಿತ್ರ ಜಲ ಹಾಗೂ ಮಣ್ಣನ್ನು ಸೇರಿಸಿ ನಿರ್ಮಿಸಿದ ಬಾವಿಯ ಬಗೆಗೂ ದಾಖಲಿಸಿರುವುದು ಕುತೂಹಲಕರವಾಗಿದೆ. ಅಲ್ಲದೆ ಸುಗುಟೂರು ಹಿಂದೆ ಪ್ರಮುಖ ನೃತ್ಯ ಶಾಲೆಯನ್ನು ಹೊಂದಿದ್ದು, ನಾಟ್ಯಕಲೆಗೆ ಪ್ರಸಿದ್ಧವಾಗಿದ್ದ ಅಂಶವೂ ಗೊತ್ತಾಗುತ್ತದೆ. ಇದೇ ಅರಸನ ಆಳ್ವಿಕೆಯ ಮೂರನೆಯ ವರ್ಷದಲ್ಲಿ (೧೧೨೧) ನೀಡಲ್ಪಟ್ಟಿರುವ ಚಿಂತಾಮಣಿ ತಾಲೂಕಿನ ಜಗತನಹಳ್ಳಿಯ ವೀರಗಲ್ಲು ಶಾಸನ, ಹಂದಿಬೇಟೆಯಲ್ಲಿ ಮಡಿದ ವೀರನಿಗಾಗಿ ಮುತ್ತರಾಯನು ವೀರಗಲ್ಲು ನಿಲ್ಲಿಸಿದ ಅಂಶವನ್ನು ದಾಖಲಿಸಿದರೆ, ಇದೇ ಅರಸನ ಆಳ್ವಿಕೆಯ ಐದನೆಯ ವರ್ಷಕ್ಕೆ ಸೇರಿದ ಇದೇ ತಾಲೂಕಿನ ಪೊಟ್ಟಪಲ್ಲಿಯ ಶಾಸನವೂ ವೀರಗಲ್ಲಾಗಿದ್ದು, ಬಹಳ ಹಾಳಾಗಿರುವುದರಿಂದ ವಿವರ ಲಭಿಸುವುದಿಲ್ಲ. ಅದೇ ಊರಿನಲ್ಲಿರುವ ೧೧೨೪ರ ಇನ್ನೊಂದು ವೀರಗಲ್ಲು ಶಾಸನದಿಂದ ಮುತ್ತರಸನು ಪುಲಿಕುಂಚಿಯಲ್ಲಿ ಹುಲಿಯನ್ನು ಇರಿದು ಕೊಂದು ತಾನೂ ಸತ್ತ ಅಂಶ ವೇದ್ಯವಾಗುತ್ತದೆ. ವಿಕ್ರಮಚೋಳನ ಆಳ್ವಿಕೆಯ ೧೨ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ದೊಡ್ಡನಂಜರಳ್ಳಿಯ ೧೧೩೦ರ

ಶಾಸನವು ಗ್ರಂಥಾಕ್ಷರ ಹಾಗೂ ತಮಿಳುಭಾಷೆಯಲ್ಲಿದ್ದು, ವಿಕ್ರಮಚೋಳದೇವನು ಕಳಿಂಗ ಹಾಗೂ ಕಡಲಮಲೈಗಳನ್ನು ಹಾಳುಗೆಡವಿದ ಅಂಶ ಅದರಿಂದ ವೇದ್ಯವಾಗುತ್ತದೆ.

ಈತನ ಆಳ್ವಿಕೆಯ ಹತ್ತನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಶ್ರೀನಿವಾಸಪುರ ತಾಲೂಕಿನ ಮಡಿವಾಳ (ಬೇಚಿರಾಕ್) ಶಾಸನ (೧೧೨೭–೨೮)ದಿಂದ, ವಿಕ್ರಮ ಚೋಳನ ಆಳ್ವಿಕೆಯಲ್ಲಿ ಪುದಲ್ನಾಡ ಮಾಂಡಲೀಕರಸನ ಮಗನಾದ ವಿಕ್ರಮ ಚೋಳ ವೀರನೊಳಂಬನು ಕುರನೆಲ್ಲಿ(ಇಂದಿನ ಕುರ್ನಳ್ಳಿ)ಯ ಲೋಕೇಶ್ವರ ದೇವಾಲಯದ ವಿಮಾನವನ್ನು ನಿರ್ಮಿಸಿ, ಚಿನ್ನದ ಪ್ರಭಾವಳಿಯನ್ನು ದೇವರಿಗೆ ಸಲ್ಲಿಸುವುದರ ಜೊತೆಗೆ ಪೂಜಾವಿಧಿಗೆಂದು ಭೂದಾನ ನೀಡಿದ ಅಂಶ ಗೊತ್ತಾಗುತ್ತದೆ. ಅದೇ ವರ್ಷದಲ್ಲಿ ನೀಡಲ್ಪಟ್ಟಿರುವ ಇನ್ನೊಂದು ಶಾಸನ ಕೋಲಾರ ತಾಲೂಕಿನ ದಳಸನೂರಿನಲ್ಲಿದ್ದು, ನಿಗರಿಲಿ ಚೋಳಮಂಡಲದೊಳಗಣ ಪುದನಾಡ ಮಾಂಡಲಿಕನಾದ ರಾಜೇಂದ್ರ ಚೋಳನ ಆದೇಶದಂತೆ, ಪುದಲ್ನಾಡ ಮಾರನೆಂಬುವನು ತಿಲದನೂರಿನ (ದಳಸನೂರು) ಹಿರಿಯ ಕೆರೆಯ ಕೆಳಗೆ ಇದ್ದ ೩೫೦ ಕುಳಿ ಕಾಡನ್ನು ಕಡಿದು, ಸಾಗುವಳಿ ಭೂಮಿಯನ್ನು ಸಿದ್ಧಪಡಿಸಿ, ಅಲ್ಲಿಯ ಅಂಕಕಾರೇಶ್ವರ ದೇವರ ಅರ್ಚಕ ಆದಿತ್ಯದೇವ ಭಟ್ಟನಿಗೆ ಅದನ್ನು ದೇವದಾನವಾಗಿ ನೀಡಿದ ಅಂಶ ಇದರಿಂದ ವೇದ್ಯವಾಗುತ್ತದೆ. ಜಿಲ್ಲೆಯ ಪೊಟ್ಟಪಳ್ಳಿ ಮಡಿವಾಳ ಹಾಗೂ ದೊಡ್ಡನಂಜರಳ್ಳಿ ಶಾಸನಗಳಿಂದ, 'ಮುಕ್ಕೋಕಿಲನಡಿಗಳ್' ಎಂಬ ಹೆಸರಿನ ರಾಣಿಯೂ ವಿಕ್ರಮಚೋಳನಿಗಿದ್ದ ಅಂಶ ಗೊತ್ತಾಗುತ್ತದೆ.

ಇವನ ನಂತರ ಅವನ ಎರಡನೆಯ ಮಗನಾದ **ಇಮ್ಮಡಿ ಕುಲೋತ್ತುಂಗ ಚೋಳ**(೧೧೩೩–೪೫)ನು ಅಧಿಕಾರಕ್ಕೆ ಬಂದನು. ಆರಂಭದಲ್ಲಿ ತಂದೆಯೊಂದಿಗೆ ಕೆಲವು ವರ್ಷ ಜಂಟಿಯಾಗಿ ರಾಜ್ಯಭಾರ ನಡೆಸಿದ ಇವನು, ವಿಕ್ರಮಚೋಳನ ಮರಣಾನಂತರ (೧೧೩೫) ಸ್ವತಂತ್ರವಾಗಿ ಆಳಲಾರಂಭಿಸಿದನು. ಈತನ ಆಳ್ವಿಕೆಯು ಶಾಂತಿಯುತವಾಗಿದ್ದು, ಅವನ ಕಾಲಕ್ಕೆ ಸೇರಿದ ಶಾಸನಗಳಾವುದೂ ಈವರೆಗೆ ಅವರ ರಾಜ್ಯದ ಗಡಿಭಾಗವಾಗಿದ್ದ ಕೋಲಾರ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ. ಆದರೆ ಕುಪ್ಪೇನಹಳ್ಳಿ(ಕೋಲಾರ ತಾ.)ಯ ಸುಮಾರು ೧೧೪೦ರ ಶಾಸನದಲ್ಲಿ ಯಾವುದೇ ಆಳರಸರ ಉಲ್ಲೇಖವಿರದೆ, ಮಹಾಮಂಡಳೇಶ್ವರ ತಿಮ್ಮಯ್ಯದೇವ ಚೋಳ ಮಹಾರಾಜರು ತಿರುಮಲದೇವರಿಗೆ ಭೂದಾನ ನೀಡಿದ ಅಂಶವನ್ನು ದಾಖಲಿಸಿದ್ದು, ಇವನನ್ನು, ನಂದಿಬೆಟ್ಟದಲ್ಲಿ ಗಜಸಿಂಹ ಲಾಂಛನವನ್ನು ಕೆತ್ತಿಸಿದ ತಿರುಮಲರಸದೇವನ ತಂದೆಯಾದ ನಲ್ಲತಿರುಮಲರಸನೆಂದು ಬಿ.ಎಲ್.ರೈಸ್ ಗುರುತಿಸಿದ್ದಾರೆ. ಇದು ಅವನು ಇಮ್ಮಡಿ ಕುಲೋತ್ತುಂಗನಿಗೆ ಸಾಮಂತನಾಗಿರಲಿಲ್ಲವೆಂಬ ಅಂಶವನ್ನು ಸೂಚಿಸುತ್ತದೆ. ಇಮ್ಮಡಿ ಕುಲೋತ್ತುಂಗನ ಆಳ್ವಿಕೆಯಿಂದೀಚೆಗೆ ಚೋಳರ ಆಡಳಿತವು ಕೋಲಾರ ಜಿಲ್ಲೆಯಲ್ಲಿ ಸಂಪೂರ್ಣ ಕಣ್ಮರೆಯಾಗಿ ಜಿಲ್ಲೆಯು ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿತು. ಹೊಯ್ಸಳ ವಿಷ್ಣುವರ್ಧನನ ಬಿರುದುಗಳಲ್ಲಿ 'ನಂಗಲಿಗೊಂಡ" ಎಂಬ ಬಿರುದು ಮೇಲಿಂದ ಮೇಲೆ ಅವನ ಶಾಸನಗಳಲ್ಲಿ ಕಂಡುಬರುತ್ತಿದ್ದು, ಇದು ಕೋಲಾರ ಪ್ರದೇಶವನ್ನೊಳಗೊಂಡ ನಿಕರಿಲಿ ಚೋಳಮಂಡಲವು ಹೊಯ್ಸಳರಿಗೆ ಸಂಪೂರ್ಣವಾಗಿ ವಶವಾದ ಅಂಶವನ್ನು ಸೂಚಿಸುತ್ತದೆ.

ಇವನ ನಂತರ ಅಧಿಕಾರಕ್ಕೆ ಬಂದ ಅವನ ಸೋದರ **ಇಮ್ಮಡಿ ರಾಜರಾಜ(೧೧೪೬–೧೧೭೩),** ಆನಂತರದಲ್ಲಿ ಬಂದ **ಇಮ್ಮಡಿ ರಾಜಾಧಿರಾಜ(೧೧೬೮–೧೧೯೫)** ಹಾಗೂ **ಮುಮ್ಮಡಿ ಕುಲೋತ್ತುಂಗ ಚೋಳ(೧೧೭೮–೧೨೧೮)ರ** ಆಳ್ವಿಕೆಯಲ್ಲಿ ಚೋಳ ಸಾಮ್ರಾಜ್ಯವು ಕ್ಷೀಣಿಸಲಾರಂಭಿಸಿ, ಮಾರವನ್ ಸುಂದರ ಪಾಂಡ್ಯನು ೧೨೨೨ರ ಚೋಳ ರಾಜ್ಯವನ್ನು ವಶಪಡಿಸಿಕೊಂಡನಾದರೂ ೧೨೨೩ರಲ್ಲಿ ಅದನ್ನು ಮತ್ತೆ ಮುಮ್ಮಡಿ ಕುಲೋತ್ತುಂಗನಿಗೆ ವಹಿಸಿಕೊಟ್ಟನು. ಇವನ ನಂತರ ಅಧಿಕಾರಕ್ಕೆ ಬಂದ **ಮುಮ್ಮಡಿ ರಾಜರಾಜ(೧೨೧೬–೧೨೫೭)** ಹಾಗೂ **ಮುಮ್ಮಡಿ ರಾಜೇಂದ್ರ(೧೨೪೬–೯೮)** ರ ಆಳ್ವಿಕೆಯಲ್ಲಿ ಚೋಳ ಸಾಮ್ರಾಜ್ಯವು ಹಲವಾರು ಏಳು–ಬೀಳುಗಳನ್ನು ಕಂಡಿತು.

ಈ ಅವಧಿಯಲ್ಲಿ ಚೋಳ–ಪಲ್ಲವ ಸಮ್ಮಿಶ್ರ ಮೂಲದ ಮಾಂಡಲೀಕರು ಕೋಲಾರ ಜಿಲ್ಲೆಯ ಆವನಿ, ಟೇಕಲ್ ಹಾಗೂ ಕುರುಡುಮಲೈ ಭಾಗಗಳ ಮೇಲೆ ಹಿಡಿತವನ್ನು ಹೊಂದಿದ್ದರು. ಈ ಚೋಳ–ಪಲ್ಲವ ವಂಶಕ್ಕೆ ಸೇರಿದ ಮಾರಾಳ್ವಾರ್ ಬಗ್ಗೆ ಮುಳಬಾಗಿಲು ತಾಲೂಕಿನ ಆವನಿ (೧೨೨೨) ಶಾಸನ ಉಲ್ಲೇಖಿಸಿದರೆ, ಈ ವಂಶದ ಪ್ರಮುಖ ಅರಸನಾದ ಜಯಂಗೊಂಡ ಚೋಳ ಇಳವಂಜಿರಾಯನ ಉಲ್ಲೇಖ ಜಿಲ್ಲೆಯ ಕೋಲಾರ ಹಾಗೂ ಮುಳಬಾಗಿಲು ತಾಲೂಕಿನ ಶಾಸನಗಳಲ್ಲಿ ಕಂಡುಬರುತ್ತಿದ್ದು,

ಮೇಲೆ ಉಲ್ಲೇಖಿಸಿರುವ ಮಾರಾಳ್ವಾರ್ ಹಾಗೂ ಇಳವಂಜಿರಾಯರಿಬ್ಬರೂ ಒಬ್ಬರೇ ಎಂದು ರೈಸ್ ಅಭಿಪ್ರಾಯಪಡುತ್ತಾರೆ. ಇಳವಂಜಿರಾಯನ ಮಗನಾದ ಕೂತ್ತಾಂಡನ್‌ದೇವನ ಶಾಸನಗಳು ೧೨೨೫ರ ತೇದಿಯನ್ನು ಹೊಂದಿದ್ದು, ಅವನ ಮಡದಿಯಾದ ಸೆಂಗಂಡೈಳನ್ನು ಆವನಿಗೌಡ ನೊಳಂಬರಾಯನಾದ ವಾಸುದೇವನ ಮಗಳಾದ ಸಂಗಾಳ್ವಾರ್ ಎಂದು ಗುರುತಿಸಲಾಗಿದೆ. ಆ ಕಾಲದ ಇತರ ಸಾಮಂತರಂತೆ ಇವನೂ ಕೂಡ ತನ್ನನ್ನು ಸ್ವತಂತ್ರ್ಯ ಅರಸನೆಂದೇ ಶಾಸನದಲ್ಲಿ (೧೨೨೮) ಹೇಳಿಕೊಂಡಿದ್ದಾನೆ. ಸುಮಾರು ೧೨೩೧ರ ಶಾಸನದಲ್ಲಿ ಟೇಕಲ್ ರಾಯನೆಂಬುವನ ಉಲ್ಲೇಖವಿದೆ. ಮುಳಬಾಗಿಲು ತಾಲೂಕಿನ ೧೨೩೪ರ ಶಾಸನದಲ್ಲಿ ರಾಜಾಧಿರಾಜ ಮಹಾರಾಯನ ಉಲ್ಲೇಖವಿದ್ದು, ಮಹಾರಾಯ ವೀರಯ್ಯನ ಮಗನಾದ ಯಲವಂಜಿರಾಯನು ಮುಳಬಾಗಿಲಿನ ಸೋಮೇಶ್ವರ ದೇವಾಲಯವನ್ನು ಪುನರ್‌ಜೀರ್ಣೋದ್ಧಾರಗೊಳಿಸಿ ಉದಾರ ದಾನ ನೀಡಿದ ಅಂಶವನ್ನು ಅದು ತಿಳಿಸುತ್ತದೆ. ಮುಳಬಾಗಿಲು ತಾಲೂಕಿನ ೧೨೫೪ರ ಇನ್ನೊಂದು ಶಾಸನದಲ್ಲಿ ಕೂತ್ತಾಂಡಂದೇವನ ಮಗನಾದ ವಾಸುದೇವ ಇಲ್ಲವೇ ಜಯಂಗೊಂಡ ಚೋಳ ಇಳವಂಜಿರಾಯ ಮತ್ತವನ ಮಡದಿ ಶೆಟ್ಟಾಳ್ವಾರ್‌ಳ ಉಲ್ಲೇಖವಿದೆ. ಇವನು ಸ್ವತಂತ್ರವಾಗಿ ಆಳುತ್ತಿದ್ದು, ಸುಮಾರು ೧೨೬೮ರ ಶಾಸನದಲ್ಲಿ ಇನ್ನೊಬ್ಬ ಕೂತ್ತಾಂಡನ ಆಡಳಿತದ ಉಲ್ಲೇಖವಿದ್ದು, ೧೨೬೯ರ ಶಾಸನದಲ್ಲಿ ಕಿರಿಯ ವಾಸುದೇವನ ಪ್ರಸ್ತಾಪವಿದೆ. ಈ ಭಾಗವು ೧೨೮೦ರವರೆಗೆ ವೀರಗಂಗರ ಹಿಡಿತದಲ್ಲಿದ್ದ ಅಂಶವನ್ನು ಸೂಚಿಸುವ ಅನೇಕ ಶಾಸನಗಳು ಜಿಲ್ಲೆಯಲ್ಲಿ ಪತ್ತೆಯಾಗಿವೆ.

ಮುಮ್ಮಡಿ ರಾಜೇಂದ್ರನ ಆಡಳಿತದ ಕೊನೆಯ ವರ್ಷಗಳಲ್ಲಿ ಪಾಂಡ್ಯ, ಹೊಯ್ಸಳ ಹಾಗೂ ಕಾಕತೀಯರ ಧಾಳಿಗಳಿಂದಾಗಿ ಚೋಳ ಸಾಮ್ರಾಜ್ಯವು ಅಸ್ಥಿರಗೊಳ್ಳಲಾರಂಭಿಸಿತು. ಈ ಅವಧಿಯಲ್ಲಿ ಪಾಂಡ್ಯರಿಗೆ ಸೋತ ಮುಮ್ಮಡಿ ರಾಜೇಂದ್ರಚೋಳನೇ ಅವರ ಮಾಂಡಲೀಕನಾಗಬೇಕಾಯಿತು. ಇಲ್ಲಿಂದಾಚೆಗೆ ಪಾಂಡ್ಯರ ಮಾಂಡಲೀಕರಾಗಿದ್ದ ಚೋಳರು ಮುಂದೆ ೧೩೧೦ರಲ್ಲಿ ಮಲಿಕ್ ಕಾಫರ್ ಧಾಳಿಯಿಂದಾಗಿ ಪಾಂಡ್ಯರು ಪತನಗೊಂಡ ನಂತರ ಸ್ವತಂತ್ರರಾದಂತೆ ತೋರುತ್ತದೆ. ಸುಮಾರು ೧೩೭೧ರ ಶಾಸನವೊಂದರಲ್ಲಿ ಕಾಣಸಿಗುವ ತ್ರಿಭುವನ ವೀರಚೋಳದೇವನೆಂಬುವನ ಉಲ್ಲೇಖವೇ ಚೋಳರ ಕೊನೆಯ ಉಲ್ಲೇಖವಾಗಿದ್ದು, ಆನಂತರ ತಮಿಳು ಚೋಳರ ಉಲ್ಲೇಖ ಕಂಡು ಬರುವುದಿಲ್ಲ.

### ದ್ವಾರಸಮುದ್ರದ ಹೊಯ್ಸಳರು(ಸುಮಾರು ೧೦೦೬–೧೩೪೨)

ಮೂಡಿಗೆರೆ (ಚಿಕ್ಕಮಗಳೂರು ಜಿಲ್ಲೆ) ತಾಲೂಕಿನ ಸೊಸೆಯೂರು (ಇಂದಿನ ಅಂಗಡಿ ಗ್ರಾಮ) ಹೊಯ್ಸಳರ ಮೂಲಸ್ಥಳವಾಗಿದ್ದು, ಜೈನಯತಿ ಸುದತ್ತಮುನಿಗಳ ನಿರ್ದೇಶನದಲ್ಲಿ ವಾಸಂತಿಕಾ ದೇವಿಯ ಸನ್ನಿಧಿಯಲ್ಲಿ ಹುಲಿಯನ್ನು ಕೊಲ್ಲುವ ಮೂಲಕ 'ಹೊಯ್ಸಳನಾದ ಸಳ'ನು ಈ ಮನೆತನದ ಆಳ್ವಿಕೆಗೆ ನಾಂದಿ ಹಾಡಿದ ಘಟನೆಯನ್ನು ಹೊಯ್ಸಳರ ಶಾಸನಗಳು ಸಾಂಪ್ರದಾಯಿಕವಾಗಿ ಉಲ್ಲೇಖಿಸಿವೆ. ಆರಂಭದಲ್ಲಿ ಮಲೆನಾಡು ಪ್ರದೇಶದ ಮೇಲೆ ಹಿಡಿತ ಸಾಧಿಸುವ ಮೂಲಕ 'ಮಲೆಪೆರೋಳ್‌ಗಂಡ' ಎಂಬ ಬಿರುದನ್ನು ಇವನು ಧರಿಸಿದ್ದು, ಅದನ್ನು ಈ ಮನೆತನದ ಎಲ್ಲಾ ಅರಸರು ಅಭಿಮಾನದಿಂದ ಧರಿಸಿದ್ದ ಅಂಶ ಅವರ ಶಾಸನ ಹಾಗೂ ನಾಣ್ಯಗಳಿಂದ ಖಚಿತವಾಗುತ್ತದೆ. ಶಾಸನಗಳಲ್ಲಿ ಇವರು ತಮ್ಮನ್ನು ಚಂದ್ರವಂಶಜರೆಂದೂ, ಯಾದವ ಕುಲದವರೆಂದೂ, ದ್ವಾರಾವತಿಪುರವರಾಧೀಶ್ವರರೆಂದೂ ಕರೆದುಕೊಂಡಿದ್ದಾರೆ. ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ದ್ವಾರಸಮುದ್ರ (ಇಂದಿನ ಹಳೇಬೀಡು) ದಿಂದ ಸುಮಾರು ಮೂರು ಶತಮಾನಗಳಷ್ಟು ಕಾಲ ರಾಜ್ಯಭಾರ ನಡೆಸಿದ ಇವರು ಆರಂಭದಲ್ಲಿ ಗಂಗರ ಸಾಮಂತರಾಗಿದ್ದು, ಅವರ ಪತನಾನಂತರ ಕಲ್ಯಾಣದ ಚಾಳುಕ್ಯರ ಸಾಮಂತರಾದರು. ಆರನೆಯ ವಿಕ್ರಮಾದಿತ್ಯನ (೧೦೭೬–೧೧೨೬) ಅಧಿಕಾರಾವಧಿಯಲ್ಲಿ ಹೊಯ್ಸಳ ವಿಷ್ಣುವರ್ಧನನು ಚೋಳರನ್ನು ಸೋಲಿಸಿ, ಅವರನ್ನು ತಲಕಾಡಿನಿಂದ ಹೊರದಬ್ಬುವ ಮೂಲಕ ಗಂಗವಾಡಿ–೯೬,೦೦೦ ಪ್ರಾಂತವನ್ನು ೧೧೧೬ರಲ್ಲಿ ವಶಪಡಿಸಿಕೊಂಡು ತಲಕಾಡುಗೊಂಡ ಎಂಬ ಬಿರುದನ್ನೂ ಧರಿಸಿದನು.

ಚೋಳರ ಮೇಲಿನ ದಿಗ್ವಿಜಯದಿಂದ ಉಬ್ಬಿದ ಹೊಯ್ಸಳ ವಿಷ್ಣುವರ್ಧನನು ಸ್ವತಂತ್ರವಾಗುವ ವಿಫಲ ಯತ್ನ ನಡೆಸಿದನಾದರೂ ಅದು ಪೂರ್ಣ ಫಲಪ್ರದವಾದದ್ದು ಇಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲೇ. ಇದೇ ಸಮಯದಲ್ಲಿ ಕಲ್ಯಾಣದ ಚಾಳುಕ್ಯರು ಅಶಕ್ತಗೊಂಡು ಚಾಳುಕ್ಯರ ಸಂಬಂಧಿಯೂ, ಸಾಮಂತನೂ ಆಗಿದ್ದ ಇಮ್ಮಡಿ ಬಿಜ್ಜಳನು ಬಂಡಾಯದ ಬಾವುಟವನ್ನು ಹಾರಿಸಿ, ಚಾಳುಕ್ಯ ಮುಮ್ಮಡಿ ತೈಲಪನನ್ನು ಪದಚ್ಯುತಗೊಳಿಸಿ ಬಂಧನದಲ್ಲಿಟ್ಟು, ಚಾಳುಕ್ಯ ಸಿಂಹಾಸನವನ್ನೇರುವ ಮೂಲಕ ಕಳಚೂರಿಗಳ (೧೧೬೩–೧೧೮೩) ಮಧ್ಯಂತರ ಆಳ್ವಿಕೆಗೆ ನಾಂದಿ ಹಾಡಿದನಾದರೂ, ಬಹುಬೇಗ ಹಿನ್ನಡೆ ಕಂಡ ಕಳಚೂರಿಗಳನ್ನು ೧೧೮೩ರಲ್ಲಿ

ಉಚ್ಚಾಟಿಸುವ ಮೂಲಕ ಚಾಳುಕ್ಯ ನಾಲ್ಕನೆಯ ಸೋಮೇಶ್ವರನು ಕಲ್ಯಾಣದ ಚಾಳುಕ್ಯರ ಆಡಳಿತವನ್ನು ಪುನರಾರಂಭಿಸಿದನು. ಆದರೆ ಅದು ಬಹಳ ಕ್ಷಣಿಕದ್ದಾಗಿದ್ದು, ಕ್ರಮೇಣ ಚಾಳುಕ್ಯರು ಅಧಿಕಾರದಿಂದ ನಿರ್ಗಮಿಸಿದರು. ತತ್ಪರಿಣಾಮವಾಗಿ ಉಂಟಾದ ರಾಜಕೀಯ ಪ್ರಕ್ಷುಬ್ಧತೆಯ ಲಾಭ ಪಡೆದು ತುಂಗಭದ್ರೆಯ ಉತ್ತರ ಭಾಗದಲ್ಲಿ ದೇವಗಿರಿಯ ಸೇಉಣರು ಪ್ರಬಲಗೊಂಡರೆ, ದಕ್ಷಿಣದಲ್ಲಿ ದ್ವಾರಸಮುದ್ರದ ಹೊಯ್ಸಳರು ಪ್ರಬಲಗೊಂಡು ಚಾಳುಕ್ಯ ಸಾಮ್ರಾಜ್ಯವು ಇವರಿಬ್ಬರ ನಡುವೆ ಹರಿದು ಹಂಚಿಹೋಯಿತು. ಇಲ್ಲಿಂದಾಚೆಗೆ ಕಲ್ಯಾಣದ ಮೇಲೆ ಪ್ರಭುತ್ವ ಸಾಧಿಸಲು ಈ ಎರಡೂ ಮನೆತನಗಳು ಸ್ಪರ್ಧಿಗಿಳಿದವಾದರೂ ಅಂತಿಮವಾಗಿ ತುಂಗಭದ್ರೆ ಅವುಗಳ ನಡುವಣ ಗಡಿಯಾಗಿ ಮಾರ್ಪಟ್ಟಿತು. ಮುಂದೆ ಸೋಮೇಶ್ವರನ ಆಳ್ವಿಕೆಯಲ್ಲಿ ಹೊಯ್ಸಳ ಸಾಮ್ರಾಜ್ಯವು ವಿಭಜಿಸಲ್ಪಟ್ಟು ದ್ವಾರಸಮುದ್ರವನ್ನೊಳಗೊಂಡ ಪ್ರಧಾನ ಶಾಖೆ ಮುಮ್ಮಡಿ ನರಸಿಂಹನಿಗೆ ದಕ್ಕಿದರೆ, ಕೋಲಾರ, ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳೂ ಸೇರಿದಂತೆ ಹೊಯ್ಸಳ ಸಾಮ್ರಾಜ್ಯಕ್ಕೊಳಪಟ್ಟಿದ್ದ ತಮಿಳುನಾಡು ಗಡಿ ಭಾಗವು ಸೋಮೇಶ್ವರನ ಇನ್ನೊಬ್ಬ ಮಗನಾದ ರಾಮನಾಥನ ಪಾಲಿಗೆ ಲಭಿಸಿತು. ತತ್ಪರಿಣಾಮವಾಗಿ ಕೋಲಾರ ಜಿಲ್ಲೆಯು ರಾಮನಾಥನ ನೇರ ಆಡಳಿತವನ್ನು ವೀಕ್ಷಿಸಿತು. ಆದರೆ ಮುಂದೆ ಮುಮ್ಮಡಿ ವೀರಬಲ್ಲಾಳನು ಈ ಶಾಖೆಯನ್ನು ರಾಮನಾಥನ ಮಗನ ಕಾಲದಲ್ಲಿ ವಶಪಡಿಸಿಕೊಳ್ಳುವ ಮೂಲಕ ವಿಭಜಿತಗೊಂಡಿದ್ದ ಹೊಯ್ಸಳ ಸಾಮ್ರಾಜ್ಯವನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾದನು. ಏತನ್ಮಧ್ಯೆ, ಪ್ರಾದೇಶಿಕ ರಾಜಕೀಯದಲ್ಲಿ ಮಗ್ನನಾಗಿದ್ದ ಮುಮ್ಮಡಿ ಬಲ್ಲಾಳನು ಉತ್ತರಭಾರತದಲ್ಲಾಗುತ್ತಿದ್ದ ರಾಜಕೀಯ ಬೆಳವಣಿಗೆಯನ್ನು ಮನಗಾಣದಾದನು. ತತ್ಪರಿಣಾಮವಾಗಿ ೧೩೪೨ರಲ್ಲಿ ಮಧುರೆ ಸುಲ್ತಾನರೊಂದಿಗೆ ಹೋರಾಡುತ್ತಾ ಅಸುನೀಗುವುದರೊಂದಿಗೆ ಹೊಯ್ಸಳ ಸಾಮ್ರಾಜ್ಯವು ಅವಸಾನಗೊಂಡಿತು.

ಹೊಯ್ಸಳರು ರಾಜಕೀಯವಾಗಿ ಸುಮಾರು ೧೦೦೬ರಿಂದ ಪ್ರಧಾನವಾಗಿ ಕಾಣಿಸಿಕೊಂಡರೂ ಅವರ ವ್ಯಾಪ್ತಿಗೆ ಕೋಲಾರ ಜಿಲ್ಲಾ ಪ್ರದೇಶವನ್ನೊಳಗೊಂಡ ನಿಕರಿಲಿ ಚೋಳ ಮಂಡಲವು ಒಳಪಟ್ಟಿದ್ದು, **ಹೊಯ್ಸಳ ವಿಷ್ಣುವರ್ಧನನ**(೧೧೦೮–೧೧೫೨) ಕಾಲದಲ್ಲೇ. ಅದರಲ್ಲೂ ೧೧೧೪–೧೭ರಲ್ಲಿ ಜರುಗಿದ ತಲಕಾಡು ಕದನಾ ನಂತರವೇ. ಈ ಯುದ್ಧದ ಪರಿಣಾಮವಾಗಿ ಗಂಗವಾಡಿಯಿಂದ ಚೋಳರು ಹೊರದೂಡಲ್ಪಟ್ಟು, ಗಂಗವಾಡಿ, ಕೊಂಗುದೇಶ ಹಾಗೂ ಕುವಲಾಲ ನಾಡುಗಳು ವಿಷ್ಣುವರ್ಧನನ ಕೈಸೇರಿದವು. ಆಗ ಕೋಲಾರದಲ್ಲಿ ಹೊಯ್ಸಳ ಠಾಣೆಯೊಂದನ್ನು ಸ್ಥಾಪಿಸಿ, ಸೋದರ ಉದಯಾದಿತ್ಯನನ್ನು ಅದರ ನಿರ್ವಹಣೆಗೆಂದು ನೇಮಿಸಲಾಯಿತು. ಈ ಸಮಯದಲ್ಲಿ ಉದಯಾದಿತ್ಯನ ಮಗಳಾದ ಏಚಲಾದೇವಿಯು ವಿಜಯಾದಿತ್ಯಮಂಗಲ (ಇಂದಿನ ಬೇತಮಂಗಲ)ದಲ್ಲಿ ಗತಿಸಿದ ಅಂಶವನ್ನು ಶಾಸನವೊಂದು(?) ದಾಖಲಿಸಿದೆ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಆದರೆ, ಗೌರಿಬಿದನೂರು ತಾಲೂಕಿನ ದಾರಿನಾಯಕನ ಪಾಳ್ಯದ ೧೧೧೯ರ ಶಾಸನ ಉದಯಾದಿತ್ಯನ ಆಡಳಿತವನ್ನು ಉಲ್ಲೇಖಿಸುತ್ತಾ, ದಂಡನಾಯಕ ವಿಟ್ಟಿಯಣ್ಣನ ಆದೇಶದಂತೆ, ಯುದ್ಧದಲ್ಲಿ ಮಡಿದ ಏಚರಸನ ಸಲುವಾಗಿ ಅವನ ಮಗ ಪುಲ್ಲರಸನು ಜಯಸ್ಥಂಭವನ್ನು ನಿಲ್ಲಿಸಿದ ಅಂಶವನ್ನು ದಾಖಲಿಸಿದೆ. ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಚಿಕ್ಕಬಳ್ಳಾಪುರ ತಾಲೂಕಿನ ೧೧೩೫ರ ನಂದಿಯ ತಮಿಳು ಶಾಸನವು ಹೊಯ್ಸಳ ವಿಟ್ಟಿ (ವಿಷ್ಣುವರ್ಧನ) ಅರಸನನ್ನು 'ತಲೈಕಾಡುಗೊಂಡ'ನೆಂದು ಕರೆಯುತ್ತಾ, ನಂದಿಯ ತಿರುನಂದೀಶ್ವರ ದೇವರ ಸೇವೆಗೆಂದು ವಿಕ್ರಮಚೋಳ ಮಂಡಲದ ಚನ್ನೈ ನಾಡೊಳಗಣ ನೆಡುಮನೂರು ಗ್ರಾಮವನ್ನು ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ. ಈತನಿಗೆ 'ನಂಗ್ಗಲಿಗೊಂಡ' ಎಂಬ ಬಿರುದಿದ್ದು, 'ನಂಗಲಿ' ಮುಳಬಾಗಿಲು ತಾಲೂಕಿನಲ್ಲಿರುವುದು ಗಮನಾರ್ಹ.

ಈತನ ನಂತರ ಅಧಿಕಾರಕ್ಕೆ ಬಂದ **ಒಂದನೆಯ ನರಸಿಂಹ** (೧೧೫೨–೧೧೭೩)ನ ಕಾಲಕ್ಕೆ ಸೇರಿದ ನಾಲ್ಕಾರು ಶಾಸನಗಳು ಜಿಲ್ಲೆಯಲ್ಲಿ ಲಭ್ಯವಿದೆ. ಅವುಗಳಲ್ಲಿ ಕೋಲಾರ ತಾಲೂಕಿನ ೧೧೫೩ರ ಬೆಳ್ಳೂರು ಶಾಸನದಿಂದ ಹಿಂದೆ ಕೈವಾರ ನಾಡಿನಲ್ಲಿದ್ದ ವೆಳ್ಳಿಯೂರು, 'ವಿಷ್ಣುವರ್ಧನ ಚತುರ್ವೇದಿ ಮಂಗಲ' ಎಂಬ ವಿಶೇಷಣವನ್ನು ಹೊಂದಿದ್ದ ಅಗ್ರಹಾರವಾಗಿದ್ದು, ವೆಳ್ಳಿಯೂರಿನ ಶ್ರೀ ನರಸಿಂಗ ವಿನ್ನಗರ ದೇವರಿಗೆಂದು ಗ್ರಾಮಸಭೆಯ ಸದಸ್ಯರೊಬ್ಬರಿಗೆ, ಬ್ರಾಹ್ಮಣ ಗೃಹಿಣಿ ಆಳ್ವಾನಂಗೈಸಾನಿಯು ಭೂದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ಧಾರ್ಮಿಕ ದತ್ತಿಯಾದ ಈ ಶಾಸನದಲ್ಲಿ ಒಂದನೆಯ ನರಸಿಂಹದೇವನು ತಲಕಾಡು, ನಂಗಲಿ, ಉಚ್ಚಂಗಿ, ವನವಾಸಿ, ಪಾನುಂಗಲ್, ಬೆಳ್ವೊಲಗಳನ್ನು ಆಳುತ್ತಿದ್ದನೆಂಬ ಸಾಂದರ್ಭಿಕ ವಿವರಣೆಯೂ ಲಭ್ಯವಿದ್ದು, ಇದೇ ವಿವರವನ್ನು ಒಂದನೆಯ ನರಸಿಂಹನ ಬೆಳ್ಳೂರಿನ ೧೧೬೭ರ ಶಾಸನದಲ್ಲೂ ಕಾಣಬಹುದಾಗಿದೆ. ಈ ಊರಿಗೆ ಇದ್ದ ವಿಶೇಷಣವನ್ನು ಆಧರಿಸಿ ಬೆಳ್ಳೂರನ್ನು ವಿಷ್ಣುವರ್ಧನನ ಕಾಲದಲ್ಲೇ ಅಗ್ರಹಾರವನ್ನಾಗಿ ಪರಿವರ್ತಿಸಲಾಗಿತ್ತೆಂದು ಊಹಿಸಬಹುದಾಗಿದೆ. ಒಂದನೆಯ

ನರಸಿಂಹನ ಕಾಲಕ್ಕೆ ಸೇರಿದ ಬೇತಮಂಗಲದ (ಬಂಗಾರಪೇಟೆ ತಾ.) ೧೧೫೫ರ ಶಾಸನದಿಂದ, ವಿಷ್ಣುವರ್ಧನನ ಗರುಡನಾಗಿದ್ದ ಹಿರಿಯ ದಂಡನಾಯಕ ಚೋಕ್ಕಿಮ್ಮಯ್ಯನು ಗಂಗವಾಡಿ–೯೬೦೦೦ವನ್ನು ಆಳುತ್ತಿದ್ದ ಸಂದರ್ಭದಲ್ಲಿ, ನಂಗಲಿಯ ಬಳಿ ಶಂಕ ಹಾಗೂ ಪನರ್‌ಜೊಟ್ಟರೆಂಬ ಅರಸರನ್ನು ಸೋಲಿಸಿ ಕಂಚಿ–ಕೊಂಗು ನಾಡುಗಳನ್ನು ವಶಪಡಿಸಿಕೊಂಡು ಈ (ಬೇತಮಂಗಲ) ಪಡೈವೀಡಿನಲ್ಲಿ (ಸೇನಾಶಿಬಿರ) ತಂಗಿದ್ದಾಗ, ಬಹು ಹಿಂದೆಯೇ ಹಾಳಾಗಿದ್ದ ವಿಜಯಾದಿತ್ಯ ಮಂಗಲದ ಮಹಾತಟಾಕದ ಏರಿಯನ್ನು ಕಲ್ಲಿನಿಂದ ಕಟ್ಟಿಸಿ, ದೊಡ್ಡ ತೂಬನ್ನು ಅಳವಡಿಸಿ, ಕೆರೆಯನ್ನು ಪುನರ್ ಜೀರ್ಣೋದ್ಧಾರ ಮಾಡಿ, ಕೆರೆಯ ಮೂಡಲ ಕಟ್ಟೆಯ ಬುಡದಲ್ಲಿ ೪೦೦ ಕುಳಿ ಗದ್ದೆಯನ್ನು, ನೂತನವಾಗಿ ನಿರ್ಮಿಸಿದ್ದ ದುರ್ಗಾ ಕೊಯಿಲಿನ ದೇವಿಯ ಸೇವೆಗೆಂದು ದಾನಬಿಟ್ಟ ಅಂಶವನ್ನು ದಾಖಲಿಸಿದೆ. ಇದೇ ಕಾಲಕ್ಕೆ ಸೇರಿದ (೧೧೫೫) ಸೋಮಾಂಬುದಿ ಶಾಸನ ಆಲೂರು ಕೆರೆಯ ನಿರ್ಮಾಣದ ಬಗ್ಗೆ ದಾಖಲಿಸಿದೆ. ಇದೇ ಅರಸನಿಗೆ ಸೇರಿದ ಅದೇ ಊರಿನ ೧೧೬೭ರ ಇನ್ನೊಂದು ಶಾಸನದಿಂದ, ಅಮರೇಶ್ವರ ದಂಡನಾಯಕನು, ವಿಜಯಾದಿತ್ಯ ಮಂಗಲದ ನೆಲೆವೀಡಿನಲ್ಲಿ ತಂಗಿದ್ದಾಗ, ಮನವಾಳ್ವಾರ ದೇವರ ಕಲ್ಯಾಣೋತ್ಸವ ಸೇವೆಯನ್ನು ನೆರವೇರಿಸಿ, ದೇವರ ಸೇವೆಗೆಂದು ೧೦೦೦ ಕುಳಿ ಭೂಮಿಯನ್ನು ವಿತ್ತಿರುಂಡ ಪೆರುಮಾಳರಿಂದ ಖರೀದಿಸಿ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಇವನ ಆಳ್ವಿಕೆಗೆ ಸೇರಿದ ಶಾಸನಗಳು ಬೆಳ್ಳೂರು(೧೧೫೩,೧೧೬೭), ಮಾದಮಂಗಲ(೧೧೬೩) ಮುಂತಾದೆಡೆಗಳಲ್ಲೂ ಲಭಿಸಿವೆ.

**ಇಮ್ಮಡಿ ಬಲ್ಲಾಳ(೧೧೭೩–೧೨೨೦):** ಒಂದನೆಯ ನರಸಿಂಹನ ನಂತರ ಅಧಿಕಾರಕ್ಕೆ ಬಂದ ಇವನ ಆಳ್ವಿಕೆಯಲ್ಲಿ ನೀಡಲ್ಪಟ್ಟಿರುವ ಅನೇಕ ಶಾಸನಗಳು ಜಿಲ್ಲೆಯಲ್ಲಿ ಲಭಿಸಿವೆ. ಗೌರಿಬಿದನೂರು ತಾಲೂಕಿನ ಕಾಚಮಾಚೇನಹಳ್ಳಿಯಿಂದ ವರದಿಯಾಗಿರುವ ಇವನ ಕಾಲಕ್ಕೆ ಸೇರಿದ ಶಾಸನವೊಂದು, ಶ್ರೀಕರಣದ ಹೆಗ್ಗಡೆ ಯರೆಯಣ್ಣ ಹಾಗೂ ದಂಡನಾಯಕ ಬಿಲ್ಲಗೋವಿಂದರಸರು 'ಉಮ್ಮಡಿ' ರಣರಂಗಕ್ಕೆಂದು ತೆರಳಿದಾಗ, ಅವರಿಗೆ ಗೆಲುವಾಗಲೆಂದು ಪೋಚಿಯ ಕರಿಯನಾಯಕನು ಮುಂದಾಗಿ ಆತ್ಮಾರ್ಪಣೆ ಮಾಡಿಕೊಂಡ ಸಂದರ್ಭದಲ್ಲಿ ಅವನ ವಂಶಸ್ಥರಿಗೆ 'ನೆತ್ತಪಟ್ಟೆ'ಯಾಗಿ ಕೆರೆ ಕೆಳಗಿನ ಭೂಮಿಯನ್ನು ಉಂಬಳಿ ನೀಡಿದ ಅಂಶವನ್ನು ದಾಖಲಿಸಿದೆ. ಇವನ ಕಾಲಕ್ಕೆ ಸೇರಿದ ಸುಮಾರು ೧೧೮೦ರ ಕಲ್ಲಂದೂರು ಶಾಸನ ಬಹಳ ಹಾಳಾಗಿದ್ದು, ಕುವಲಾಲನಾಡಿನ ಉಲ್ಲೇಖವಷ್ಟೇ ಉಳಿದಿದೆ. ಇವನ ಆಳ್ವಿಕೆಗೆ ಸಂಬಂಧಿಸಿದ ಶಾಸನಗಳು, ಜಿಲ್ಲೆಯ ಆವನಿ(೧೧೮೫), ಹೋಳೂರು(೧೧೯೩), ವಿಭೂತಿಪುರ(೧೧೯೮), ಮಳ್ಳೂರು, ಮಡಿವಾಳ(೧೨೦೦), ಕಾಚಮಂಚೇಪಲ್ಲಿ(೧೨೨೦) ಮುಂತಾದೆಡೆಗಳಲ್ಲೂ ಲಭಿಸಿದ್ದು, ಮಹತ್ವದ ಮಾಹಿತಿಯನ್ನು ಒದಗಿಸುತ್ತದೆ.

ಇವನ ನಂತರ ಅಧಿಕಾರಕ್ಕೆ ಬಂದ **ಇಮ್ಮಡಿ ನರಸಿಂಹ (೧೨೨೦–೧೨೩೬)**ನ ಆಳ್ವಿಕೆಯಲ್ಲಿ ಹೊಯ್ಸಳ ಸಾಮ್ರಾಜ್ಯವು ಕೋಲಾರ ಭಾಗದ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳಲಾರಂಭಿಸಿತು. ಈ ಅವಧಿಯಲ್ಲಿ ಜಯಂಗೊಂಡಚೋಳ ಮತ್ತವನ ಉತ್ತರಾಧಿಕಾರಿಗಳು ನೀಡಿರುವ ಶಾಸನಗಳು ಜಿಲ್ಲೆಯ ಮುಳಬಾಗಿಲು ಹಾಗೂ ಬಂಗಾರಪೇಟೆ ತಾಲೂಕುಗಳಲ್ಲಿ ಲಭಿಸಿವೆ. ಈ ಅವಧಿಯಲ್ಲಿ ಜಯಂಗೊಂಡ ಚೋಳ ಮತ್ತವನ ವಂಶಸ್ಥರು ಕೂಡು(ಕುರುಡು)ಮಲೈ, ಬೇತಮಂಗಲ ಹಾಗೂ ಮಡಿವಾಳ ಪ್ರದೇಶಗಳಲ್ಲಿ ಸ್ವತಂತ್ರವಾಗಿ ರಾಜ್ಯಭಾರ ಮಾಡಿದರು. ಇಮ್ಮಡಿ ನರಸಿಂಹನ ನಂತರ ಬಂದ **ಸೋಮೇಶ್ವರ (೧೨೩೬–೧೨೫೪)**ನ ಕಾಲದಲ್ಲೂ ಇದೇ ಪರಿಸ್ಥಿತಿ ಮುಂದುವರಿಯಿತು. ಬಾಲ್ಯದಿಂದಲೂ ಸೋದರತ್ತೆ ಸೋಮಲಾದೇವಿ (ಚೋಳರಾಣಿ)ಯ ಪೋಷಣೆಯಲ್ಲಿ ಬೆಳೆದ ಇವನು, ತಮಿಳುನಾಡಿನೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದು, ಹೊಯ್ಸಳ ರಾಜಧಾನಿಯನ್ನು ಕಣ್ಣಾನೂರು ಕೊಪ್ಪಂಗೆ ವರ್ಗಾಯಿಸಿಕೊಂಡಿದ್ದನು. ಕೋಲಾರ ಜಿಲ್ಲಾ ಭಾಗದಲ್ಲಿ ಇವನ ಕಾಲದ ಹೊಯ್ಸಳ ಶಾಸನಗಳು ಕಂಡುಬರುವುದಿಲ್ಲ.

ಆದರೆ ಇವನ ನಂತರ ಹೊಯ್ಸಳ ಸಾಮ್ರಾಜ್ಯವು ಅವನ ಇಬ್ಬರು ಮಕ್ಕಳಾದ **ಮುಮ್ಮಡಿ ನರಸಿಂಹ (೧೨೫೪–೧೨೯೧)** ಹಾಗೂ **ರಾಮನಾಥರ(೧೨೫೪–೧೨೯೫)**ನಡುವೆ ವಿಭಜಿಸಲ್ಪಟ್ಟಿತು. ಮುಮ್ಮಡಿ ನರಸಿಂಹನು ಹೊಯ್ಸಳ ರಾಜ್ಯದ ತಿರುಳ್ಭಾಗವನ್ನು ದೋರಸಮುದ್ರದಿಂದ ಆಳಿದರೆ, ರಾಮನಾಥನು ಕೋಲಾರ ಜಿಲ್ಲಾ ಪ್ರದೇಶದ ಭಾಗವನ್ನೊಳಗೊಂಡಂತೆ ಹೊಯ್ಸಳ ಸಾಮ್ರಾಜ್ಯದ ತಮಿಳು ಪ್ರದೇಶಗಳನ್ನು ರಾಜಧಾನಿ ಕಣ್ಣಾನೂರಿನಿಂದ ಆಳುವಂತಾಯಿತು. ತತ್ಪರಿಣಾಮವಾಗಿ ಈ ಸೋದರರ ನಡುವೆ ರಾಜಕೀಯ ಘರ್ಷಣೆಯು ಏರ್ಪಟ್ಟ ಅಂಶ ಅವರ ಕಾಲದ ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ಅದರಲ್ಲೂ ಹೊಯ್ಸಳ

ರಾಮನಾಥನು 'ಕುಂದಣ'ವನ್ನು ತನ್ನ ಪ್ರಮುಖ ನೆಲೆಯನ್ನಾಗಿ ಮಾಡಿಕೊಂಡಿದ್ದ ಅಂಶ ಅವನ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ಉತ್ತನೂರಿನ ಶಾಸನವೊಂದು ಬಹಳ ತ್ರುಟಿತಗೊಂಡಿದ್ದರೂ ಹೊಯ್ಸಳ ರಾಮನಾಥನ ಆಡಳಿತವನ್ನು ಉಲ್ಲೇಖಿಸುತ್ತದೆ. ಇವನ ಆಳ್ವಿಕೆಯ ೩೧ನೆಯ ವರ್ಷದಲ್ಲಿ ನೀಡಲ್ಪಟ್ಟಿರುವ ಕೋಲಾರ ತಾಲೂಕಿನ ಮಡಿವಾಳ ಶಾಸನದಿಂದ (೧೨೮೬), ಮಲ್ಲೈಯೂರುಗೊಂಡ, ಶನಿವಾರಸಿದ್ಧಿ, ಗಿರಿದುರ್ಗಮಲ್ಲ, ಪಾಂಡ್ಯಕುಲ ಸಮುದ್ಧರಣ, ಮಕರರಾಜ್ಯ ಪ್ರತಿಷ್ಠಾಚಾರ್ಯ ಮುಂತಾದ ಬಿರುದುಗಳನ್ನು ಇವನು ಹೊಂದಿದ್ದ ಅಂಶ ವೇದ್ಯವಾಗುತ್ತದೆ. ಅಲ್ಲದೇ ನಿಗಿರಿಲಿ ಚೋಳಮಂಡಲದ ಕೈವಾರ ನಾಡಿನ ಅಂಬಡಕ್ಕಿಪರುಪ್ಪಿನ ಕುರಿತ್ತಿ ಉಳಿಗಯ್ಯನು ಪೆರುಮಾಲ ದೇವರಿಗೆ 'ಕೋಳಿ ಕೂಗುವ (ಕೋಳಿ ಕೂವಿನ ಊರು ಅಂದರೆ ಜನವಸತಿ ಇರುವ) ಎಲ್ಲಾ ಊರುಗಳಿಂದಲೂ ತಲಾ ಒಂದೊಂದು ಪಣವನ್ನು ದಾನಬಿಟ್ಟ ಅಂಶವನ್ನೂ ಈ ಶಾಸನ ದಾಖಲಿಸಿದೆ. ಸುಮಾರು ಇದೇ ಕಾಲಕ್ಕೆ ಸೇರಿದ ಕೋಲಾರದ ಶಾಸನವೊಂದು, ಕುವಲಾಲದ ಪಿಡಾರಿ (ಕೋಲಾರಮ್ಮ) ದೇವಿಯ ಹೆಸರಿನಲ್ಲಿ ಬಿಟ್ಟ ಕೋಳಿಗಳನ್ನು ಹಿಡಿದು ತಿನ್ನುವವರು ('ಕುವಲಾಲತ್ತು ಪಿಡಾರಿಯ ಕೋಳಿ ಪಿಡಿಚು ತಿಂಬರುಂ'), ದೇವಿಯ ಕೋಪಕ್ಕೆ ತುತ್ತಾಗಿ ಹಾಳಾಗಲಿ ಎಂದು ಹೇಳುತ್ತದೆ. ಇದೇ ಅರಸನ ಆಳ್ವಿಕೆಗೆ ಸೇರಿದ ೧೨೯೧ರ ನೆರನಳ್ಳಿ (ಕೋಲಾರ ತಾ.) ಶಾಸನವು ಪೆರುಮಂಗಲದ ಆರ್ಯ ವಿಂಡುವಾರ ಪೆರುಮಾಳನು ಅಜ್ಜಿಗಾಗಿ ತನ್ನ ತಂದೆಯು ನಿರ್ಮಿಸಿದ್ದ ಈಶ್ವರ ದೇವರಿಗೆಂದು ಕಾನಕಟ್ಟೆಯನ್ನು ನಿರ್ಮಿಸಿ, ಭೂದಾನ ನೀಡಿದ ಅಂಶವನ್ನು ದಾಖಲಿಸಿದೆ. ಇದೇ ವರ್ಷಕ್ಕೆ ಸೇರಿದ ಶಾಹಪುರದ ವೀರಗಲ್ಲು ಶಾಸನದಿಂದ ವಿಡ್ಲ್ವೈ ಯುದ್ಧದಲ್ಲಿ ಮಂಜಯಮಾವುತ್ತರು ಹಾಗೂ ಇಳವಂಜಿರಾಯರು ಸೆಣಸುತ್ತಿದ್ದಾಗ ಹತನಾದ ನಂಬಿಸೆಟ್ಟಿಯ ಮಗ ವಿಲ್ಲಿಯ ಸ್ಮಾರಕವಾಗಿ ವೀರಗಲ್ಲನ್ನು ನೆಟ್ಟು ಉಂಬಳಿ ನೀಡಿದ ಅಂಶ ಗೊತ್ತಾಗುತ್ತದೆ. ಇಲ್ಲಿ ಉಕ್ತವಾಗಿರುವ ಇಳವಂಜಿರಾಯನು ರಾಮನಾಥನ ಮಂತ್ರಿಯಾಗಿದ್ದನೆಂದು ಶಾಸನದಿಂದ ಗೊತ್ತಾಗುತ್ತದೆ. ಮಡಿವಾಳದಿಂದ ವರದಿಯಾಗಿರುವ ೧೨೯೩ರ ಶಾಸನ ಮಂಜಯ ಮಾವುತ್ತನು, ರಾಮನಾಥನ ಕುಮಾರನಂತಿದ್ದು, ಅರಸನ ಶ್ರೇಯಸ್ಸಿಗಾಗಿ ಮಡಿವಾಳದ ಸ್ವಯಂಭು ದೇವರಿಗೆ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅದೇ ಊರಿನ ೧೨೯೫ರ ಇನ್ನೊಂದು ಶಾಸನದಿಂದ ಸ್ವಯಂಭು ನಾಯನಾರ್ ದೇವರಿಗೆಂದು ಇಳವಂಜಿನಾಡಿನ ಕೇಶವನ ಪಳ್ಳದಲ್ಲಿ (ಇಂದಿನ ಕ್ಯಾಸಂಬಳ್ಳಿ) ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಜಿಲ್ಲೆಯ ಉತ್ತನೂರು, ಕೈವಾರ, ಆವನಿ, ಬೆಳ್ಳೂರು, ಮಡಿವಾಳ, ಬೇತಮಂಗಲ, ವೇಮಗಲ್ಲು, ಕುತ್ತಾಂಡಹಳ್ಳಿ, ಬ್ಯಾಲದಹಳ್ಳಿ, ಸೂಲಿಕುಂಟೆ, ಉಳ್ಳೇರಹಳ್ಳಿ, ಚಂಬೆ, ಉರಿಗಾವ್, ಬ್ರಾಹ್ಮಣಪಲ್ಲಿ, ಚೋಳಗಟ್ಟ, ಉಪ್ಪಾರಪೇಟೆ, ಮಾಕರವಳ್ಳಿ, ಶಾಹಪುರ, ನೆರ್ನಹಳ್ಳಿ, ಕೀಲುಕೊಪ್ಪ, ವಿಭೂತಿಪುರ ಮುಂತಾದೆಡೆಗಳಲ್ಲಿ ಲಭಿಸಿವೆ.

ರಾಮನಾಥನ ನಂತರ ಅವನ ಮಗನಾದ **ವಿಶ್ವನಾಥನು** ಹೊಯ್ಸಳರ ಕಣ್ಣಾನೂರು ಶಾಖೆಗೆ ಉತ್ತರಾಧಿಕಾರಿಯಾದನು. ಇವನ ಆಳ್ವಿಕೆಯ ಮೂರನೆಯ ವರ್ಷದಲ್ಲಿ (೧೨೯೭) ನೀಡಲ್ಪಟ್ಟಿರುವ ಚಿಂತಾಮಣಿ ತಾಲೂಕಿನ ಕುರುಬೂರಿನ ಶಾಸನ, ಮುಕ್ಕಣ ಕಾಡುವೆಟ್ಟಿ ಪಲ್ಲವಾದಿತ್ಯನನ್ನು ಉಲ್ಲೇಖಿಸುತ್ತಾ ಕುರುಂಬೂರ ಕಿತ್ತರಸನ ಮಗನಾದ ಶ್ರೀಪತಿನಾಯಕನು ವಿಜಯಮಾದೇಶ್ವರ ದೇವರ ಸೇವೆಗೆಂದು, ನೆರೆಯ ಕಟ್ಟಿಗ್ರೈಪಳ್ಳಿಯನ್ನು ದೇವದಾನವಾಗಿ ಉಂಬಳಿ ಬಿಟ್ಟ ಅಂಶವನ್ನು ದಾಖಲಿಸಿದೆ. ಇವನನ್ನು **ಮುಮ್ಮಡಿ ಬಲ್ಲಾಳ** (೧೨೯೨–೧೩೪೨)ನು ೧೩೦೦ರಲ್ಲಿ ಸೋಲಿಸುವ ಮೂಲಕ ಹೊಯ್ಸಳ ಸಾಮ್ರಾಜ್ಯದ ಕಣ್ಣಾನೂರು ಶಾಖೆಯು ಮೂಲಶಾಖೆಯೊಂದಿಗೆ ವಿಲೀನವಾಗುವಂತೆ ಮಾಡಿದನು. ಮುಮ್ಮಡಿ ಬಲ್ಲಾಳನ ಆಳ್ವಿಕೆಯ ಆರಂಭದ ವರ್ಷಗಳು ಹೊಯ್ಸಳರ ಸ್ಥಿರ ಆಡಳಿತವನ್ನು ವೀಕ್ಷಿಸಿತು. ಆದರೂ ಉತ್ತರದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲಿಕ್ ಕಾಫರ್‌ನ ಧಾಳಿಗಳಿಂದಾಗಿ ದಕ್ಷಿಣ ಭಾರತವು ರಾಜಕೀಯ ಕ್ಷೋಭೆಗೆ ಒಳಗಾಯಿತು. ೧೩೧೧ರಿಂದ ಆರಂಭಗೊಂಡ ಮಲಿಕ್ ಕಾಫರ್‌ನ ನಿರಂತರ ದಖನ್ ಧಾಳಿಗಳಿಂದಾಗಿ ದಕ್ಷಿಣದಲ್ಲಿ ರಾಜಕೀಯ ಕುಸಿತವುಂಟಾಯಿತು. ೧೩೧೧ರ ಧಾಳಿಯಲ್ಲಿ ಸೋತ ಬಲ್ಲಾಳನು ತನ್ನ ಮಗನಾದ ವಿರೂಪಾಕ್ಷ ಬಲ್ಲಾಳನನ್ನು ಮಲ್ಲಿಕ್ ಕಾಫರನ ಜೊತೆಗೆ ದೆಹಲಿಗೆ ಕಳುಹಿಸಬೇಕಾಗಿ ಬಂದು, ೧೩೧೩ರಲ್ಲಿ ದೆಹಲಿಯಿಂದ ಅವನೂ ಹಿಂತಿರುಗಿದನು. ಮುಂದೆ ೧೩೨೭ರಲ್ಲಿ ಜರುಗಿದ ಧಾಳಿಯಲ್ಲಿ ಮುಮ್ಮಡಿ ಬಲ್ಲಾಳನ ರಾಜಧಾನಿಯು ಧಾಳಿಕೋರರ ದುರಾಕ್ರಮಣಕ್ಕೆ ಈಡಾಗಿ, ಹೊಸದಾಗಿ ರಾಜಧಾನಿಯನ್ನು ರೂಪಿಸಿಕೊಳ್ಳಬೇಕಾಗಿ ಬಂದಾಗ, ಇವನು ಹೊಸವೀಡನ್ನು ಕಟ್ಟಿಕೊಂಡು ಕ್ಷೇಮದಿಂದ ರಾಜ್ಯಭಾರ ಮಾಡುತ್ತಿದ್ದ ಅಂಶ ಗೌರಿಬಿದನೂರು ತಾಲೂಕಿನ ಹೊಸೂರಿನ ೧೩೩೦ರ ಶಾಸನದಿಂದ ವೇದ್ಯವಾಗುತ್ತದೆ. ಈ ಶಾಸನ ಲಭಿಸಿರುವ ಹೊಸೂರು ಗ್ರಾಮವೇ ಶಾಸನೋಕ್ತ ಹೊಸವೀಡಾಗಿದ್ದಿರಬೇಕೆಂಬ ಅಭಿಪ್ರಾಯ ಕೆಲವು ವಿದ್ವಾಂಸರಲ್ಲಿದೆ. ದಕ್ಷಿಣದಲ್ಲಿ ಮಧುರೆ ಪಾಂಡ್ಯರು ನಾಶಗೊಂಡು ಸುಲ್ತಾನರ ಆಳ್ವಿಕೆಗೆ ಅದು ಒಳಪಟ್ಟರೆ, ಸೇವುಣ, ವಾರಂಗಲ್

ರಾಜ್ಯಗಳು ತೊಘಲಕ್ ಧಾಳಿಗೆ ತರಗೆಲೆಯಂತೆ ತೂರಿ ಹೋಗಿ, ಹೊಯ್ಸಳ ಸಾಮ್ರಾಜ್ಯವಷ್ಟೇ ಉಳಿದಿತ್ತು. ಆದರೆ ಮಧುರೆ ಸುಲ್ತಾನರೊಂದಿಗೆ ಕದನದಲ್ಲಿ ತೊಡಗಿದ್ದ ಹೊಯ್ಸಳ ಮುಮ್ಮಡಿ ಬಲ್ಲಾಳನು ಅಂತಿಮವಾಗಿ ತೊಘಲಕ್ ಮನೆತನದ ಮಹಮದ್ ಬಿನ್ ತೊಘಲಕ್‌ನ ಕಾಲದಲ್ಲಿ ಸಂಪೂರ್ಣ ಸೋಲನ್ನು ಅನುಭವಿಸಬೇಕಾಯಿತು. ಇದರೊಂದಿಗೆ ಹೊಯ್ಸಳ ಸಾಮ್ರಾಜ್ಯವೂ ಅವಸಾನಗೊಂಡಿತು.

ಇವನ ಆಳ್ವಿಕೆಗೆ ಸೇರಿದ ಶಾಸನಗಳು ಜಿಲ್ಲೆಯ ಲಕ್ಕೂರು, ಹೊಸೂರು, ದೊಡ್ಡಕಲ್ಲಹಳ್ಳಿ, ಮಡಿವಾಳ, ಸೀತಿಬೆಟ್ಟ, ಬರಗೂರು, ಮತ್ತಹಳ್ಳಿ, ತೇರಹಳ್ಳಿ, ಕೆಂದಟ್ಟಿ, ಶಿವಾರಪಟ್ನ, ಟೇಕಲ್, ಅರಾಭಿಕೊತ್ತನೂರು, ಹುಣಸೇನಹಳ್ಳಿ, ಯಲವದಹಳ್ಳಿ, ಮುದಿಯನೂರು, ಚನ್ನರಾಯಪುರ, ಹೋಲೇರಹಳ್ಳಿ (೧೩೪೨) ಮುಂತಾದೆಡೆಗಳಲ್ಲಿ ಲಭಿಸಿವೆ. ಅವುಗಳ ನೆರವಿನಿಂದ ಹೊಯ್ಸಳ ಸಾಮ್ರಾಜ್ಯದ ಅವನತಿಯನ್ನು ಹಾಗೂ ಜೊತೆಜೊತೆಯಲ್ಲೇ ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ಪೂರಕವಾದ ಪೂರ್ವಭಾವಿ ಸಿದ್ಧತೆಯನ್ನೂ ಗ್ರಹಿಸಬಹುದಾಗಿದೆ. ಮುಮ್ಮಡಿ ಬಲ್ಲಾಳನ ಮಗನೆಂದೇ ಶಾಸನಗಳಲ್ಲಿ ಕರೆಯಲ್ಪಟ್ಟಿರುವ ದಾಡಿ ಸಿಂಗೇಯನಾಯಕನ ಕಿರಿಯ ಸೋದರನಾದ ಬಲ್ಲಪ್ಪ (ಬಾಳಪ್ಪ) ದಂಡನಾಯಕನ ಉಲ್ಲೇಖವು ೧೩೨೮ರಿಂದ ೧೩೩೯ರವರೆಗಿನ ಅನೇಕ ಶಾಸನಗಳಲ್ಲಿ ಕಂಡುಬರುತ್ತಿದ್ದು, ೧೩೪೩ರ ಶಾಸನವೊಂದರಲ್ಲೂ ಉಲ್ಲೇಖಿಸಲ್ಪಟ್ಟಿದೆ.

## ವಿಜಯನಗರ ಸಾಮ್ರಾಜ್ಯ (೧೩೩೬–೧೬೪೬)

ದಕ್ಷಿಣ ಭಾರತದ ಇತಿಹಾಸದಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಈ ಸಾಮ್ರಾಜ್ಯದ ಆಡಳಿತಾವಧಿಯಲ್ಲಿ ಸಂಗಮ(೧೩೩೬–೧೪೮೦), ಸಾಳುವ (೧೪೮೦–೧೫೦೮), ತುಳುವ (೧೫೦೮–೧೫೭೦) ಹಾಗೂ ಅರವೀಡು (೧೫೭೦–೧೬೪೬) ರಾಜಮನೆತನಗಳು, ವಿಜಯನಗರವನ್ನು ತಮ್ಮ ರಾಜಧಾನಿಯನ್ನಾಗಿಕೊಂಡು ೧೫೬೫ರವರೆಗೆ ಆಡಳಿತ ನಡೆಸಿದವು. ಆದರೆ ೧೫೬೫ರ ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ಮುಸ್ಲಿಂ ಆಕ್ರಮಣಕಾರರ ಕೈಯಲ್ಲಿ ವಿಜಯನಗರದ ಸೇನೆ ಸೋತಾಗ ಯುದ್ಧರಂಗದಿಂದ ಪಲಾಯನ ಮಾಡಿ ರಾಜಧಾನಿ ವಿಜಯನಗರಕ್ಕೋಡಿ ಬಂದ ವೆಂಕಟಪತಿರಾಯನು, ಅರಸ ಸದಾಶಿವರಾಯ, ರಾಣಿವಾಸ, ಹಾಗೂ ರಾಜಭಂಡಾರದೊಂದಿಗೆ ಪೆನುಗೊಂಡೆಗೆ ದೌಡಾಯಿಸಿದನು. ತತ್ಪರಿಣಾಮವಾಗಿ ರಾಜನ ಅಂಕಿತ ತಪ್ಪಿದ ರಾಜಧಾನಿ ಪಟ್ಟಣ ವಿಜಯನಗರವು ಆಂತರಿಕ ಘರ್ಷಣೆ, ಒಳಜಗಳ, ನೆರೆಯ ಗುಡ್ಡಗಾಡು ಜನರ ಸುಲಿಗೆಯನ್ನು ವೀಕ್ಷಿಸಿತು. ಇದೂ ಸಾಲದೆಂಬಂತೆ ವಿಜಯದ ಉನ್ಮಾದದಿಂದ ಕೂಡಿದ ಮುಸ್ಲಿಂ ಆಕ್ರಮಣಕಾರರ ಸುಲಿಗೆಗೂ ಬಲಿಯಾಯಿತು. ಅನಂತರ ಪೆನುಗೊಂಡೆಯಿಂದ ಆಡಳಿತವನ್ನು ಮುಂದುವರಿಸಿದ ಅರವೀಡುಗಳು ಮುಂದೆ ಶ್ರೀರಂಗರಾಯನ ಕಾಲದಲ್ಲಿ ರಾಜಧಾನಿಯನ್ನು ಪೆನುಗೊಂಡೆಯಿಂದ ಚಂದ್ರಗಿರಿಗೆ ಸ್ಥಳಾಂತರಿಸಿದ್ದು, ೧೬೪೬ರಲ್ಲಿ ಸಾಮ್ರಾಜ್ಯವು ಪತನಗೊಂಡಾಗ ಇದೇ ಅವರ ರಾಜಧಾನಿಯಾಗಿತ್ತು. ಆದರೆ, ಈ ಎಲ್ಲಾ ಅರಸರ ಆಳ್ವಿಕೆಯಡಿ ವಿವಿಧ ರಂಗಗಳಲ್ಲಿ ಗಮನಾರ್ಹ ಪ್ರಗತಿಯುಂಟಾಯಿತು. ಈ ಸಾಮ್ರಾಜ್ಯದ ವ್ಯಾಪ್ತಿಗೊಳಪಟ್ಟಿದ್ದ ಕೋಲಾರ ಜಿಲ್ಲೆಯಲ್ಲಿ ವಿಜಯನಗರದರಸರ ಕಾಲದ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಯಲ್ಲಿರುವ ನೂರಾರು ಶಾಸನಗಳು ಈವರೆಗೆ ಪತ್ತೆಯಾಗಿವೆ. ಅವುಗಳನ್ನು ಆಧರಿಸಿ ಈ ಅರಸರ ಕಾಲದಲ್ಲಿ ಜಿಲ್ಲೆಯ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಾದ ಮಹತ್ವದ ಬೆಳವಣಿಗೆಯನ್ನು ಅರಿಯಬಹುದಾಗಿದೆ.

### ಸಂಗಮರು

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಭದ್ರ ಬುನಾದಿಯನ್ನು ಹಾಕಿದ ಸಂಗಮ ಸೋದರರಾದ ಹಕ್ಕ–ಬುಕ್ಕ, ಕಂಪಣ, ಮುದ್ದಪ್ಪ ಹಾಗೂ ಮಾರಪ್ಪರ ಆರಂಭದ ರಾಜಕೀಯ ಚಟುವಟಿಕೆ ಕೋಲಾರ ಜಿಲ್ಲೆಯಲ್ಲಿ ಕೇಂದ್ರೀಕೃತವಾಗಿತ್ತೆಂಬುದು ಉಲ್ಲೇಖಾರ್ಹ. ಇದನ್ನು ಈ ಮನೆತನದ ಆರಂಭದ ಅರಸರ ಕಾಲಕ್ಕೆ ಸೇರಿದ ಶಾಸನಗಳು ಮನವರಿಕೆ ಮಾಡಿಕೊಡುತ್ತವೆ. ಈ ಅರಸು ಮನೆತನದ ಆರಂಭಿಕ ವರ್ಷದಲ್ಲಿ ನೀಡಲ್ಪಟ್ಟಿರುವ ೧೩೩೬ರ ಶಾಸನದ ಪ್ರತಿಯಷ್ಟೇ ಲಭ್ಯವಿದೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಸಂಬಂಧಿಸಿದಂತೆ ಇರುವ ಸಾಂಪ್ರದಾಯಿಕ ಕತೆಯನ್ನು ದಾಖಲಿಸುತ್ತಾ, ಕುಂಜರಕೋನ(ಅನೆಗುಂದಿ)ವನ್ನು ಆಳುತ್ತಿದ್ದ **ಒಂದನೆಯ ಹರಿಹರನು (೧೩೩೬–೧೩೫೬)**, ವಿದ್ಯಾರಣ್ಯರ ಸೂಚನೆಯಂತೆ ರಾಜಧಾನಿ ವಿದ್ಯಾ(ವಿಜಯ)ನಗರಪಟ್ಟಣವನ್ನು

ನಿರ್ಮಿಸಿದನೆಂದು ಅದು ತಿಳಿಸುತ್ತದೆ. ಇವನ ಸೋದರನಾದ ಮುದ್ದಪ್ಪನನ್ನು ಮುಳಬಾಗಿಲಿಗೆ ರಾಜ್ಯಪಾಲನನ್ನಾಗಿ ನೇಮಿಸಲಾಗಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡ ಹತ್ತು ವರ್ಷಗಳ ಅಂತರದಲ್ಲಿ ಬಹಮನಿ ಸಾಮ್ರಾಜ್ಯ (೧೩೪೭)ವು ಸ್ಥಾಪಿಸಲ್ಪಟ್ಟಿತು. ಇದರಿಂದ ಮುಂದಿನ ಎರಡು ಶತಮಾನಗಳಿಗೂ ಹೆಚ್ಚು ಕಾಲ ಹಿಂದೂ–ಮುಸ್ಲಿಂ ಸ್ರಾಮ್ರಾಜ್ಯಗಳ ನಡುವಣ ನಿರಂತರ ಘರ್ಷಣೆಯನ್ನು ದಕ್ಷಿಣ ಭಾರತವು ವೀಕ್ಷಿಸಬೇಕಾಗಿ ಬಂತು. ಇವನ ಆಳ್ವಿಕೆಗೆ ಸೇರಿದ ಶಾಸನಗಳು ಜಿಲ್ಲೆಯ ಟೇಕಲ್, ಮುದಿಯನೂರು, ಚಿಕ್ಕದಾಸೇನಹಳ್ಳಿ, ನುಕ್ಕನಹಳ್ಳಿ, ದೊಮ್ಮಲೂರು, ಆವನಿ, ಯಡಹಳ್ಳಿ ಮುಂತಾದೆಡೆಗಳಲ್ಲಿ ಲಭಿಸಿವೆ. ಇವನ ನಂತರ ಬಂದ ಸೋದರ **ಒಂದನೆಯ ಬುಕ್ಕರಾಯ (೧೩೫೬–೭೭)**ನ ಆಳ್ವಿಕೆಯಲ್ಲಿ ಮಂತ್ರಿ ಮಲ್ಲರಸನು ಬುಕ್ಕನ ಮಗ ಇಮ್ಮಡಿ ಹರಿಹರನ ಆದೇಶದಂತೆ ಕೋಲಾಲ ನಾಡಿನ ಇರುಗಿಸೆಟ್ಟಿಗೆ ಭೂದಾನ ನೀಡಿದ ಅಂಶವನ್ನು ಶಾಸನವೊಂದು ದಾಖಲಿಸಿದೆ.

ವಿಜಯನಗರುದರಸರ ಆಳ್ವಿಕೆಯಲ್ಲಿ ಇಂದಿನ ಮುಳಬಾಗಿಲು, ಮುಳವಾಯಿ ರಾಜ್ಯವೆಂದೇ ಪ್ರಸಿದ್ಧವಾಗಿದ್ದು, ಪ್ರಾಂತಾಧಿಕಾರಿಯ ಆಡಳಿತಕ್ಕೆ ಒಳಪಟ್ಟಿದ್ದ ಅಂಶ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ಮುಳವಾಯಿ ರಾಜ್ಯವು ಇಂದಿನ ಕೋಲಾರ ಜಿಲ್ಲೆಯ ಜೊತೆಗೆ ನೆರೆಯ ತಮಿಳುನಾಡಿನ ಸೇಲಂ, ಧರ್ಮಪುರಿ, ಉತ್ತರ ಹಾಗೂ ದಕ್ಷಿಣ ಆರ್ಕಾಟ್ ಜಿಲ್ಲೆಗಳನ್ನೂ ಒಳಗೊಂಡಿದ್ದು, ಸಾಮಾನ್ಯವಾಗಿ ಯುವರಾಜರನ್ನು ಅದರ ಆಡಳಿತಕ್ಕೆ ನಿಯೋಜಿಸಲಾಗುತ್ತಿತ್ತು. ಹರಿಹರನ ಮಗನಾದ ಒಂದನೆಯ ಕಂಪಣನು ೧೩೫೧ರಲ್ಲೂ ಹಾಗೂ ಬುಕ್ಕನ ಮಗ ಇಮ್ಮಡಿ ಕಂಪಣನು ೧೩೫೬ರಿಂದ ೧೩೬೬ರವರೆಗೆ ಮುಳುವಾಯಿಯಿಂದಾಳುತ್ತಿದ್ದರು. ಇಮ್ಮಡಿ ಕಂಪಣನ ರಾಣಿಯಾದ ಗಂಗಾಂಬಿಕೆಯು ತನ್ನ ಗಂಡ ಕಂಪಣನು ಬುಕ್ಕರಾಯನ ಮುಂದಾಳತ್ವದಲ್ಲಿ ಮಧುರೈ ಸುಲ್ತಾನನ ಮೇಲೆ ಕೈಗೊಂಡ ದಿಗ್ವಿಜಯವನ್ನು ವರ್ಣಿಸುವ 'ವೀರ ಕಂಪಣರಾಯ ಚರಿತೆ' ಅಥವಾ 'ಮಧುರೆ ವಿಜಯಂ' ಎಂಬ ಕೃತಿಯನ್ನು ರಚಿಸಿದ್ದಾಳೆ. ಕಂಪಣ ಒಡೆಯರ ಕಾಲಕ್ಕೆ ಸೇರಿದ ಶಾಸನಗಳು ಮಡಿವಾಳ, ಸೀತಿಬೆಟ್ಟ, ಚಿಕ್ಕಾಪುರ, ಕುರುಡುಮಲೆ, ಆವನಿ, ಕೈವಾರ, ಬೆಳ್ಳೂರು, ಬಿಸ್ಸೇನಹಳ್ಳಿ, ವೇಮಗಲ್ ಮುಂತಾದೆಡೆಗಳಲ್ಲಿ ಲಭಿಸಿವೆ. ಒಂದನೆಯ ಹರಿಹರನ ಕಾಲಕ್ಕೆ ಸೇರಿದ ಮಾಲೂರು ತಾಲೂಕಿನ ೧೩೪೬ ರ ಶಾಸನದಿಂದ ಟೇಕಲ್ನಾಡ ಪ್ರಜೆಗಳಿಗೆ ಒಂದನೆಯ ಹರಿಹರ ಮತ್ತವನ ಸೋದರ ಮುದ್ದಪ್ಪರು ಆದೇಶವೊಂದನ್ನು ನೀಡಿದ ಅಂಶ ಗೊತ್ತಾಗುತ್ತದೆ. ಇದೇ ರೀತಿ ಜಿಲ್ಲೆಯ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನೊಳಗೊಂಡ ಸಾದಲಿ ರಾಜ್ಯವನ್ನು ನಾಗಣ್ಣ ಒಡೆಯನು ಆಳುತ್ತಿದ್ದ ಅಂಶವು ಒಂದನೆಯ ಬುಕ್ಕನ ೧೩೭೧ರ ಶಾಸನದಿಂದ ವೇದ್ಯವಾಗುತ್ತದೆ. ಅಲ್ಲದೆ, ನಾಗಣ್ಣ ಒಡೆಯ ಮತ್ತವನ ಮಗ ದೀಪಣ್ಣ ಒಡೆಯರು ಸಾದಲಿ ರಾಜ್ಯವನ್ನು ಆಳುತ್ತಿದ್ದ ಅಂಶ ೧೩೭೦–೮೫ರ ಕಾಲಾವಧಿಯಲ್ಲಿ ಅವರಿಂದ ನೀಡಲ್ಪಟ್ಟಿರುವ ಶಾಸನಗಳಿಂದ ಗೊತ್ತಾಗುತ್ತದೆ.

ಒಂದನೆ ಬುಕ್ಕನ ಮರಣಾನಂತರ (೧೩೭೭) ಅಧಿಕಾರಕ್ಕೆ ಬಂದ **ಇಮ್ಮಡಿ ಹರಿಹರ (೧೩೭೭–೧೪೦೪)**ನ ಆಡಳಿತಾವಧಿಯು ನಿರಂತರ ಯುದ್ಧಗಳನ್ನು ವೀಕ್ಷಿಸಿತು. ಇವನ ಕಾಲಕ್ಕೆ ಸೇರಿದ ಶಾಸನಗಳು ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲಭಿಸಿವೆ. ಇವನ ನಂತರ ಅಧಿಕಾರಕ್ಕಾಗಿ ಸೋದರರ ನಡುವೆ ನಡೆದ ಅಂತಃಕಲಹದಲ್ಲಿ **ಇಮ್ಮಡಿ ಬುಕ್ಕ (೧೪೦೪–೦೬)**ನು ಯಶಗಳಿಸಿ ಅಧಿಕಾರ ಗದ್ದುಗೆಯನ್ನು ಏರಿದನು. ನಿಗರಿಲಿ ಚೋಳ ಮಂಡಲದ ಆಡಳಿತವನ್ನು ರಾಜಧಾನಿ ಮುಳಬಾಗಿಲಿನಿಂದ ನಿರ್ವಹಿಸುತ್ತಿದ್ದ ಇವನಿಗೆ ನಂತರದಲ್ಲಿ ಪೆನುಗೊಂಡೆಯ ಹೊಣೆಯನ್ನೂ ವಹಿಸಲಾಯಿತು. ಈತನ ಕಾಲಕ್ಕೆ ಸೇರಿದ ಬಾಗೇಪಲ್ಲಿ ತಾಲೂಕಿನ ಕೊಲ್ಲೂರು ಶಾಸನ, ಅರಸನು ಸಿಂಗಯ್ಯಭಟ್ಟನೆಂಬ ದಶತಂತ್ರ ವಿಶಾರದನ ನೇತೃತ್ವದಲ್ಲಿ ಹೆಣ್ಣೆ ಹೊಳೆಯನ್ನು ರಾಜಧಾನಿ ಪೆನುಗೊಂಡೆಗೆ ಹರಿಸುವ ಯೋಜನೆಯನ್ನು ರೂಪಿಸಿದ ಅಂಶವನ್ನು ತಿಳಿಸುತ್ತದೆ. ತತ್ಸಂಬಂಧವಾಗಿ ಹೆಣ್ಣೆ ಹೊಳೆಗೆ ಕಾಲುವೆ ನಿರ್ಮಿಸಿ, ನೀರನ್ನು ಸಿರವೂರ ಕೆರೆಗೆ ಹರಿಸುವ ಮೂಲಕ ಆ ಕಾಲುವೆಗೆ 'ಪ್ರತಾಪ ಬುಕ್ಕರಾಯ ಮಂಡಲ ಕಾಲುವೆ' ಎಂದು ಹೆಸರಿಟ್ಟನೆಂಬ ಅಂಶವನ್ನೂ ದಾಖಲಿಸುತ್ತದೆ. ಇದೇ ಅರಸನ ಕಾಲಕ್ಕೆ ಸೇರಿದ ತಿರುಮಣಿ ಶಾಸನದಿಂದ ಅರಸನ ಮೊಮ್ಮಗಳಾದ ಜೊಮ್ಮಾದೇವಿಯು ಕಾಲುವೆಯೊಂದನ್ನು ನಿರ್ಮಿಸಿ, ನೀರನ್ನು ಹರಿಸುವ ಯೋಜನೆಗೆ ಸಂಬಂಧಿಸಿದಂತೆ ವಿಧಿಸಿದ ಅನೇಕ ಕಟ್ಟುಪಾಡುಗಳು ಉಲ್ಲೇಖಾರ್ಹವಾಗಿದ್ದು, ಇಂದಿಗೂ ಆದರ್ಶಪ್ರಾಯವಾಗಿರುವುದು ಗಮನಾರ್ಹವಾಗಿದೆ. ನಿಗದಿತ ಯೋಜನೆಯಂತೆ ನೀರು ಕಾಲುವೆಗಳ ಮೂಲಕ ಸಮರ್ಪಕವಾಗಿ ಹರಿದು ನಿರ್ದಿಷ್ಟ ಸ್ಥಳವನ್ನು ತಲುಪುವಲ್ಲಿ ವಿಫಲವಾದರೆ ಆ ಕಾಲುವೆಯನ್ನು ನಿರ್ಮಿಸಿದ ಗುತ್ತಿಗೆದಾರರೇ ವೈಫಲ್ಯದ ಪೂರ್ಣ ಜವಾಬ್ದಾರಿಯನ್ನು ಹೊರಬೇಕಾಗಿದ್ದು, ಅದಕ್ಕಾಗಿ ಅವರಿಗೆ ಪಾವತಿಸಿದ್ದ ಹಣವನ್ನು ಅವರಿಂದ ಪುನರ್‌ಪಡೆಯಲಾಗುತ್ತಿತ್ತೆಂಬ ಮಹತ್ವದ ಅಂಶವನ್ನೂ ಈ ಶಾಸನ ದಾಖಲಿಸಿದೆ. ಇದು ಸಹಜವಾಗಿ ಅಧಿಕಾರಿಗಳ ಕಾರ್ಯಕ್ಷಮತೆಯನ್ನು

ಹೆಚ್ಚಿಸಲು ನೆರವಾಗುತ್ತಿತ್ತೆಂದು ಭಾವಿಸಬಹುದಾಗಿದೆ. ಇವನ ಆಳ್ವಿಕೆಗೆ ಸೇರಿದ ಶಾಸನಗಳು ಜಿಲ್ಲೆಯ ಹೊಸೂರು, ಯಲಗಲಹಳ್ಳಿ, ವಾನರಾಸಿ, ಕೋಲಾರ, ಬೆಳ್ಳೂರು, ಕಂದವಾರ, ವಿಭೂತಿಪುರ, ಸೆಟ್ಟಿಕೊತ್ತನೂರು, ಮುಟ್ಟೂರು, ಕಲ್ಲುಡಿ, ರಾಯಸಂದ್ರ, ಮುಳಬಾಗಿಲು, ದೇವರಗುಡಿಪಲ್ಲಿ, ನಗರಕೆರೆ, ಹೊದಲಿ, ತಿರುಮಣಿ ಮುಂತಾದೆಡೆಗಳಲ್ಲಿ ಲಭಿಸಿವೆ.

**ಒಂದನೆಯ ದೇವರಾಯ (೧೪೦೬–೧೪೨೨)** ಇಮ್ಮಡಿ ಬುಕ್ಕನ ನಂತರ ಅವನ ಸೋದರ ಒಂದನೆಯ ದೇವರಾಯನು ೧೪೦೬ರಲ್ಲಿ ಅಧಿಕಾರಕ್ಕೆ ಬಂದನು. ಆವರೆಗೆ ಅವನು ಶಿರಾ ಪ್ರಾಂತದ ಆಡಳಿತವನ್ನು ನಿರ್ವಹಿಸುತ್ತಿದ್ದು, ಅದೂ ಕೂಡ ಕೋಲಾರ ಜಿಲ್ಲೆಯ ಕೆಲವು ಪ್ರದೇಶಗಳನ್ನು ಒಳಗೊಂಡಿದ್ದಂತೆ ತೋರುತ್ತದೆ. ಈತನ ಅಧಿಕಾರಾವಧಿಯಲ್ಲಿ ಅವನ ಮಗನಾದ ವೀರವಿಜಯರಾಯನು ಮುಳಬಾಗಿಲು ರಾಜ್ಯದ ಪ್ರಾಂತಾಧಿಕಾರಿಯಾಗಿದ್ದ ಅಂಶ ಅವನ ೧೪೦೮ರ ಶಾಸನವೊಂದರಿಂದ ಗೊತ್ತಾಗುತ್ತದೆ. ಮುಳುವಾಯಿಯ ನಾಚಿಯಾರಮ್ಮನ ಗುಡಿಯ ಪೂಜಾರಿಗಳು ಕೆಲವು ಬ್ರಾಹ್ಮಣರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಈ ಹಿಂದೆ ಪಾಲಾರ್ ನದಿಗೆ ನಿರ್ಮಿಸಿದ್ದ ಅರಳಿ ಅಣೆಯು ಹಾಳಾಗಿದ್ದು, ಅದನ್ನು ದುರಸ್ತಿಗೊಳಿಸಿ ಅಗ್ರಹಾರವನ್ನು ದೇವಿಯ ಹೆಸರಲ್ಲಿ ನಿರ್ಮಿಸಿ ಅದಕ್ಕೆ ತಗಲುವ ವೆಚ್ಚಕ್ಕಾಗಿ ಭೂದಾನವನ್ನು ನೀಡಿದ ಅಂಶವನ್ನು ಇದು ದಾಖಲಿಸಿದೆ. ಸುಮಾರು ೧೪೧೬ರಲ್ಲಿ ಮುಳುವಾಯಿ ರಾಜ್ಯವು ದೇವರಾಯನ ಮಂತ್ರಿ ದಂಡನಾಯಕ ನಾಗಣ್ಣನ ನಿಯಂತ್ರಣದಲ್ಲಿದ್ದ ಅಂಶ ಇನ್ನೊಂದು ಶಾಸನದಿಂದ ವೇದ್ಯವಾಗುತ್ತದೆ. ಇವನ ಆಳ್ವಿಕೆಗೆ ಸೇರಿದ ಶಾಸನಗಳು ಜಿಲ್ಲೆಯ ಮಂಚೇನಹಳ್ಳಿ, ಬೆಳ್ಳೂರು, ಅರಾಭಿಕೊತ್ತನೂರು, ಕೊರನಹಳ್ಳಿ, ಕಾಗಲವೇಣಿ, ರಾಮೇಶ್ವರ, ಹೊಸಕೋಟೆ, ಕೊಡಿಗೆಹಳ್ಳಿ, ಕತ್ತರಿಗುಪ್ಪೆ, ಮುಳಬಾಗಿಲು, ಕೆಂದಟ್ಟಿ, ತಿಪ್ಪಸಂದ್ರ, ಅರೆಹಳ್ಳಿ ಮುಂತಾದೆಡೆಗಳಲ್ಲಿ ಲಭಿಸಿವೆ.

ಒಂದನೆಯ ದೇವರಾಯನ ನಂತರ ವಿಜಯನಗರ ಸಿಂಹಾಸನವನ್ನೇರಿದವರಲ್ಲಿ **ಇಮ್ಮಡಿ ದೇವರಾಯ (೧೪೨೨–೪೬)** ಪ್ರಮುಖನಾಗಿದ್ದು, ಪ್ರಾಂತಾಧಿಕಾರಿಯಾಗಿ ಮುಳುವಾಯಿ ರಾಜ್ಯವನ್ನು ೧೪೧೭ರಲ್ಲಿ ಆಳುತ್ತಿದ್ದ ಅವನು ವಿಜಯನಗರ ಸಿಂಹಾಸನವನ್ನು ಏರಿದ ನಂತರ ಲಕ್ಕಣ್ಣ ಒಡೆಯನು ಮುಳುವಾಯಿ ರಾಜ್ಯದ ಆಡಳಿತವನ್ನು ನಿರ್ವಹಿಸುತ್ತಿದ್ದು, ಭೂದಾನ ನೀಡಿದ ಅಂಶವನ್ನು ೧೪೨೮ರ ಶಾಸನವೊಂದು ತಿಳಿಸಿದರೆ, ಸುಮಾರು ೧೪೩೦ರ ವೇಳೆಗೆ ಇದೇ ಲಕ್ಕಣ್ಣ ಒಡೆಯನು ಮುಳುವಾಯಿ–ಟೇಕಲ್ ನಾಡುಗಳೆರಡನ್ನೂ ಆಳುತ್ತಿದ್ದ ಅಂಶವನ್ನು ಇನ್ನೊಂದು ಶಾಸನ ಒಳಗೊಂಡಿದೆ. ಈತ ಮತ್ತವನ ಸೋದರ ಮಾದಣ್ಣ ದಂಡನಾಯಕರನ್ನು ಹೆಗ್ಗಡೆದೇವರೆಂದು ಶಾಸನಗಳಲ್ಲಿ ಕರೆಯಲಾಗಿದ್ದು, ಇವರು ೧೪೩೦–೩೩ರ ಕಾಲಾವಧಿಯ ಟೇಕಲ್‌ನ ಶಾಸನಗಳಲ್ಲಿ ಮೇಲಿಂದ ಮೇಲೆ ಹೆಸರಿಸಲ್ಪಟ್ಟಿದ್ದಾರೆ. ಮುಂದೆ, ೧೪೩೩ರಲ್ಲಿ ಅವರು ಟೇಕಲ್ ನಾಡಿನ ಆಡಳಿತದ ಹೊಣೆಯನ್ನು ಇಮ್ಮಡಿ ದೇವರಾಯನ ಆದೇಶದಂತೆ ಸಾಳುವ ಗೋಪರಸನಿಗೆ ನೀಡಿದಂತೆ ತೋರುತ್ತದೆ. ಸಾಳುವ ಗೋಪರಸನು, ಇಮ್ಮಡಿ ದೇವರಾಯನ ಅಕ್ಕ ಹರಿಯಮ್ಮ ಮತ್ತವಳ ಗಂಡ ತಿಪ್ಪರಾಜ ಒಡೆಯನ ಮಗನಾಗಿದ್ದು, ಇವನ ಆಡಳಿತವನ್ನು ವಿವರಿಸುವ ಅನೇಕ ಶಾಸನಗಳು ಮಾಲೂರು ತಾಲೂಕಿನ ಟೇಕಲ್ ಪರಿಸರದಿಂದ ವರದಿಯಾಗಿದೆ. ಅವುಗಳಲ್ಲೊಂದು ಹಿಂದೆ ಬಾಲಪ್ಪ ದಂಡನಾಯಕನಿಂದ ನಿರ್ಮಿಸಲ್ಪಟ್ಟಿದ್ದು ಈಗ ಶಿಥಿಲವಾಗಿರುವ ಟೇಕಲ್ ಕೋಟೆಯ ಹೊರ ಹಾಗೂ ಒಳ ಸುತ್ತುಗಳನ್ನು ಕಲ್ಲಿನಿಂದ ಪುನರ್‌ನಿರ್ಮಿಸಿ ಸ್ಥಿರಗೊಳಿಸುವಂತೆ ಮಂತ್ರಿ ಸಿಂಗರಾಜನಿಗೆ ಸಾಳುವ ಗೋಪರಸನು ಆದೇಶ ನೀಡಿದ ಅಂಶವನ್ನು ದಾಖಲಿಸಿದೆ. ಅದೇ ಊರಿನ ಇನ್ನೊಂದು ಶಾಸನದ ಪ್ರಕಾರ ಮಂತ್ರಿ ಸಿಂಗರಾಜನು ಒಡೆಯ ಗೋಪರಾಜನ ಹೆಸರಲ್ಲಿ ಗೋಪಸಮುದ್ರ ಹಾಗೂ ಅರಮನೆಯನ್ನು ನಿರ್ಮಿಸಿದ ಅಂಶವನ್ನು ತಿಳಿಸುತ್ತದೆ. ಅಲ್ಲದೇ ಅರಮನೆಯಿಂದಲೇ ವರದರಾಜಗುಡಿಯ ಸುಂದರ ಗೋಪುರವನ್ನು ವೀಕ್ಷಿಸಲು ಅನುಕೂಲವಾಗುವಂತೆ ಅರಮನೆಯನ್ನು ನಿರ್ಮಿಸಿದ ಅಂಶವನ್ನೂ ದಾಖಲಿಸಿದೆ. ಸುಮಾರು ೧೪೪೪ರಲ್ಲಿ ಅಣ್ಣಪ್ಪ/ಅರುಣಪ್ಪ ಒಡೆಯನು ಮುಳುವಾಯಿ ರಾಜ್ಯವನ್ನು ಆಳುತ್ತಿದ್ದ ಅಂಶ ಶಾಸನವೊಂದರಿಂದ ಗೊತ್ತಾಗುತ್ತದೆ. ಇಮ್ಮಡಿ ದೇವರಾಯನ ಕಾಲದ ಶಾಸನಗಳು ಜಿಲ್ಲೆಯ ಮುಳಬಾಗಿಲು, ಹುಣಸೇನಹಳ್ಳಿ, ವಿರೂಪಾಕ್ಷಪುರ, ಮಿಟ್ಟಹಳ್ಳಿ ಮುಂತಾದೆಡೆಗಳಲ್ಲಿ ಲಭಿಸಿದೆ. ಇಮ್ಮಡಿ ದೇವರಾಯನ ಮರಣಾನಂತರ (೧೪೪೬) ಬಂದ **ಮಲ್ಲಿಕಾರ್ಜುನ (೧೪೪೬–೧೪೬೫)**ನ ಕಾಲಕ್ಕೆ ಸೇರಿದ ಎರಡು ಶಾಸನಗಳು ಜಿಲ್ಲೆಯಲ್ಲಿ ಪತ್ತೆಯಾಗಿವೆ. ಇವನ ನಂತರದ ಕಾಲಕ್ಕೆ ಸೇರಿದ ಶಾಸನಗಳು ಮುಳಬಾಗಿಲು ಹಾಗೂ ಬಂಗಾರಪೇಟೆ ತಾಲೂಕುಗಳಲ್ಲಿ ದೊರೆತಿದ್ದು, ಅವರ ಅಶಕ್ತತೆಯಿಂದಾಗಿ ಸಂಗಮ ಮನೆತನವು ಅಧಿಕಾರ ಕಳೆದುಕೊಳ್ಳುವ ಮೂಲಕ ಸಾಳುವರ ಅಧಿಕಾರ ಆರೋಹಣಕ್ಕೆ ದಾರಿ ಮಾಡಿಕೊಟ್ಟಿತು.

### ಸಾಳುವರು

ವಿಜಯನಗರ ಸಾಮ್ರಾಜ್ಯದ ಪೂರ್ವಭಾಗವು ಸಾಳುವ ದಂಡನಾಯಕ, **ಕಠಾರಿ ಸಾಳುವ ಒಂದನೆಯ ನರಸಿಂಗರಾಜನ** ಆಡಳಿತಕ್ಕೆ ಒಳಪಟ್ಟಿದ್ದು, ಇವನು ಬಲಿಷ್ಟನಾಗಲಾರಂಭಿಸಿದ ಅಂಶ, ಅವನ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ಈತನ ಆಳ್ವಿಕೆಗೆ ಸೇರಿದ ೧೪೬೭ರ ಸೀತಿಬೆಟ್ಟ ಶಾಸನದಿಂದ, ಸೀತಿಬೆಟ್ಟದ ಭೈರವೇಶ್ವರ ದೇವಾಲಯಕ್ಕೆ ಹಿಂದೆ ರಾಜೇಂದ್ರ ಚೋಳ ಹಾಗೂ ಮುಮ್ಮಡಿ ಬಲ್ಲಾಳರು ನೀಡಿದ ದತ್ತಿ ಗ್ರಾಮಗಳು ದುಷ್ಟ ವ್ಯಕ್ತಿಗಳ ಕೈಗೆ ಸಿಕ್ಕಿ, ದುರುಪಯೋಗಕ್ಕೆ ತುತ್ತಾಗಿ ದೇವರ ಪೂಜಾಕಾರ್ಯ ಸ್ಥಗಿತಗೊಂಡಿದ್ದು, ಅದನ್ನು ಸಾಳುವ ನರಸಿಂಹನು ಪುನರ್‌ಭರಣ ಮಾಡಿದ ಅಂಶ ಗೊತ್ತಾಗುತ್ತದೆ. ಪ್ರಾಂತಾಧಿಕಾರಿಯಾಗಿ ಸೇವೆಯನ್ನು ಆರಂಭಿಸಿ, ರಾಜ್ಯಪಾಲನಾಗಿ ಬೆಳೆದು, ಅಂತಿಮವಾಗಿ ೧೪೮೫ರಲ್ಲಿ ವಿಜಯನಗರದ ಸಿಂಹಾಸನಕ್ಕೆ ತಾನೇ ವಾರಸುದಾರನಾಗುವಲ್ಲಿ ಇವನಿಗೆ ಪ್ರಧಾನಿ ಅಣ್ಣಮರಸಯ್ಯ, ಸೇನಾನಿ ಈಶ್ವರನಾಯಕ ಮತ್ತು ಇಬ್ಬರು ಮಕ್ಕಳಾದ ನರಸಣ್ಣ ನಾಯಕ ಹಾಗೂ ವೀರನರಸಿಂಹರ ಪೂರ್ಣ ಬೆಂಬಲ ಲಭಿಸಿತ್ತು. ಈಶ್ವರ ದಂಡನಾಯಕನು ಕೋಲಾರ ಪರಿಸರದಲ್ಲಿ ಆಡಳಿತ ನಿರ್ವಹಿಸುತ್ತಿದ್ದು, ಜಿಲ್ಲೆಯ ಒಂದೆರಡು ಶಾಸನಗಳಲ್ಲಿ ಪ್ರಧಾನವಾಗಿ ಉಲ್ಲೇಖಿಸಲ್ಪಟ್ಟಿದ್ದಾನೆ. ಒಂದನೆಯ ನರಸಿಂಗರಾಯನು ೧೪೮೫–೧೪೯೭ರವರೆಗೆ ರಾಜ್ಯಭಾರ ನಡೆಸುವ ಮೂಲಕ ವಿಜಯನಗರ ಸಾಮ್ರಾಜ್ಯದ ಉಳಿವಿಗೆ ನೆರವಾದನು. ಇವನ ಕಾಲದಲ್ಲಿ ನೀಡಲ್ಪಟ್ಟಿರುವ ರಾಜಗುಂಡ್ಲಹಳ್ಳಿ (೧೪೯೬) ಶಾಸನವು ಕೆರೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕಟ್ಟುಕೊಡುಗೆ ದಾಖಲೆಯಾಗಿದ್ದು, ಅಪರೂಪದ ಮಾಹಿತಿಯನ್ನು ಒಳಗೊಂಡಿದೆ. ಇದರಲ್ಲಿ ಬರುವ ಅಳತೆ ಕೋಲಿನ ಉಲ್ಲೇಖ, ಮಾರಳತೆಯ ಪ್ರಸ್ತಾಪ ಹಾಗೂ ಕೆರೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಹಂತದ ಕಾರ್ಯ ನಿರ್ವಹಣೆಯನ್ನು ಅತ್ಯಂತ ವಿವರವಾಗಿ ದಾಖಲಿಸಿರುವ ವೈಖರಿ ಉಲ್ಲೇಖಾರ್ಹವಾಗಿದೆ. **ಇಮ್ಮಡಿ ವೀರನರಸಿಂಹ (೧೪೯೭–೧೫೦೩)**; ತಂದೆ ಒಂದನೆಯ ನರಸಿಂಹನೊಂದಿಗೆ ಸುಮಾರು ೧೪೯೨ ರಿಂದ ೧೪೯೭ರವರೆಗೆ ಜಂಟಿಯಾಗಿ ರಾಜ್ಯಭಾರ ನಡೆಸಿದ್ದ ಇವನು, ಒಂದನೆಯ ನರಸಿಂಹನ ಮರಣಾನಂತರ (೧೪೯೭) ಸ್ವತಂತ್ರವಾಗಿ ರಾಜ್ಯಭಾರ ಮಾಡಲು ಮುಂದಾದನು. ಆ ವೇಳೆಗಾಗಲೇ ಒಂದನೆಯ ಸಾಳುವ ನರಸಿಂಹನಿಂದ ದಂಡನಾಯಕನಾಗಿ ನೇಮಕಗೊಂಡಿದ್ದ ತುಳುವ ಮನೆತನದ **ನರಸನಾಯಕನು** ಪ್ರಬಲನಾಗಿ ಬೆಳೆದಿದ್ದು, ಅಧಿಕಾರವನ್ನು ತನ್ನಲ್ಲೇ ಉಳಿಸಿಕೊಂಡನು. ಇದೂ ಸಾಲದೆಂಬಂತೆ ತಾನೇ ಸಿಂಹಾಸನವನ್ನೇರಿದರೂ ೧೫೦೩ರಲ್ಲಿ ಗತಿಸಿದನು.

### ತುಳುವರು

ಸಾಳುವರ ಆಡಳಿತವನ್ನು ಬದಿಗೊತ್ತಿ ಅಧಿಕಾರ ಗದ್ದುಗೆಯನ್ನು ಹಿಡಿದ ತುಳುವ ನರಸನಾಯಕನ ಮರಣಾನಂತರ **ತುಳುವ ವೀರ ನರಸಿಂಹನು** (೧೫೦೩–೦೮) ಅಧಿಕಾರಕ್ಕೆ ಬಂದನು. ಇವನ ಕಾಲಕ್ಕೆ ಸೇರಿದಂತೆ ಅನೇಕ ಶಾಸನಗಳು ಈವರೆಗೆ ಜಿಲ್ಲೆಯಲ್ಲಿ ಪತ್ತೆಯಾಗಿವೆ. ಅವುಗಳಲ್ಲಿ ಗೌರಿಬಿದನೂರು ತಾಲೂಕಿನ ನಗರಕೆರೆಯ ೧೫೦೫ರ ಶಾಸನವು ತುಳುವರ ವಂಶಾವಳಿಯನ್ನು ನೀಡುತ್ತಾ ವಿದ್ಯಾರಣ್ಯರ ಕೃಪೆಯಿಂದಾಗಿ ವಿದ್ಯಾನಗರಿಯ ರತ್ನಸಿಂಹಾಸನದಲ್ಲಿ ಕುಳಿತು ರಾಜ್ಯಭಾರ ಮಾಡುತ್ತಿದ್ದ ಇಮ್ಮಡಿ ವೀರನರಸಿಂಹನು ಮಲ್ಲನಾಯ್ಕನಹಳ್ಳಿಯನ್ನು ವಿರೂಪಾಕ್ಷದೇವರ ಸೇವೆಗೆಂದು ದಾನಬಿಟ್ಟ ಅಂಶವನ್ನು ಒಳಗೊಂಡಿದ್ದು, ಕೃಷ್ಣದೇವರಾಯನ ಉಲ್ಲೇಖವೂ ಅದರಲ್ಲಿದೆ.

**ಕೃಷ್ಣದೇವರಾಯ (೧೫೦೮–೨೯):** ವಿಜಯನಗರ ಸಾಮ್ರಾಜ್ಯದ ಆಳರಸರಲ್ಲೇ ಅತ್ಯಂತ ಪ್ರಬಲನಾಗಿದ್ದ ಕೃಷ್ಣದೇವರಾಯನು ವೀರನರಸಿಂಹನ ಮಲಸೋದರನಾಗಿದ್ದು, ಸಮರ್ಥ ಆಡಳಿತಗಾರ, ಯಶಸ್ವಿ ಸೇನಾನಿ ಹಾಗೂ ಘನ ವಿದ್ವಾಂಸನೂ ಆಗಿದ್ದನು. ಕಳಿಂಗ ಗಜಪತಿಯನ್ನು ೧೫೧೯ರಲ್ಲಿ ಸೋಲಿಸಿದ್ದ ಇವನು ಬಿಜಾಪುರ–ಬಹಮನಿ ಸಂಯುಕ್ತ ಸೈನ್ಯವನ್ನು ಡೋಣಿ ಹಾಗೂ ಕೋವಿಲಕೊಂಡ ಯುದ್ಧಗಳಲ್ಲಿ ಸೋಲಿಸಿದನು. ಅಲ್ಲದೆ ಬಿಜಾಪುರದ ಸುಲ್ತಾನ ಯೂಸುಫ್ ಆದಿಲ್ ಖಾನನನ್ನು ಯುದ್ಧದಲ್ಲಿ ಕೊಂದನೆಂದೂ ಹೇಳಲಾಗುತ್ತದೆ. ಪಶ್ಚಿಮ ಕರಾವಳಿಯಲ್ಲಿನ ದಂಗೆಯನ್ನು ನಿಗ್ರಹಿಸಲು ಸೈನ್ಯವನ್ನು ಮಂಗಳೂರಿಗೆ ಕಳುಹಿಸಿದ ಇವನು ಉಮ್ಮತ್ತೂರಿನ ನಂಜ(ಗಂಗ)ರಾಜನನ್ನು ಸೋಲಿಸಿ, ತನ್ನ ಮಂತ್ರಿ ಸಾಳುವ ತಿಮ್ಮನ ಸೋದರ, ಸಾಳುವ ಗೋವಿಂದರಾಜನನ್ನು ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದನು. ಅಲ್ಲದೆ ಶ್ರೀರಂಗಪಟ್ಟಣದ ಸಾಮಂತ ರಾಜನ ಮಗಳಾದ ತಿರುಮಲದೇವಿಯನ್ನು ಕೃಷ್ಣದೇವರಾಯನು ವಿವಾಹವಾದನು.

ಬಿಜಾಪುರದ ಸುಲ್ತಾನನಿಂದ ರಾಯಚೂರನ್ನು ೧೫೧೧ರಲ್ಲಿ ಪುನರ್ ವಶಪಡಿಸಿಕೊಂಡು, ಗಜಪತಿಗಳನ್ನು ೧೫೧೩ ಸೋಲಿಸಿ, ಉದಯಗಿರಿಯನ್ನು ವಶಪಡಿಸಿಕೊಂಡನು. ಕೊಂಡವೀಡು, ರಾಜಮಹೇಂದ್ರಿ ಪ್ರದೇಶಗಳನ್ನು ೧೫೧೫ರಲ್ಲಿ ವಶಪಡಿಸಿಕೊಂಡು ಪೋತನೂರಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು. ಗಜಪತಿಗಳ ರಾಜಧಾನಿ ಕಟಕ್‌ಗೆ ಮುತ್ತಿಗೆ ಹಾಕಿ ಸೋಲಿಸಿ, ಗಜಪತಿ ಅರಸನ ಮಗಳನ್ನೂ ವಿವಾಹವಾದನು. ಅಲ್ಲಿಂದ ವಾಪಸ್ಸಾಗುವ ಮಾರ್ಗದಲ್ಲಿ ೧೫೨೨ರಲ್ಲಿ ಗೋಲ್ಕಂಡದ ಸುಲ್ತಾನನನ್ನೂ ಸೋಲಿಸಿದನು. ಅಲ್ಲದೆ ರಾಯಚೂರನ್ನು ವಶಪಡಿಸಿಕೊಳ್ಳುವ ಬಿಜಾಪುರದ ಸುಲ್ತಾನನ ಯತ್ನವನ್ನೂ ವಿಫಲಗೊಳಿಸಿದನು. ಆದರೆ, ರಾಯಚೂರನ್ನು ವಶಪಡಿಸಿಕೊಳ್ಳಲು ವಿಜಾಪುರದವರು ಮತ್ತೊಮ್ಮೆ ಧಾಳಿ ಮಾಡಿದಾಗ ಅವರನ್ನು ಹಿಮ್ಮೆಟ್ಟಿಸಿ, ರಾಜಧಾನಿ ವಿಜಾಪುರವನ್ನು ತಾತ್ಕಾಲಿಕವಾಗಿ ವಶಪಡಿಸಿಕೊಂಡಿದ್ದನು. ಅಲ್ಲದೇ ಸೆರೆಯಲ್ಲಿದ್ದ ಗುಲಬರ್ಗಾದ ರಾಜಕುಮಾರನನ್ನು ಮುಕ್ತಗೊಳಿಸಿ, ಸಿಂಹಾಸನಕ್ಕೆ ತರುವ ಮೂಲಕ 'ಯವನ ರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನೂ ೧೫೨೩ರಲ್ಲಿ ಧರಿಸಿದನು. ಆ ವೇಳೆಗಾಗಲೇ ಪಶ್ಚಿಮ ಕರಾವಳಿಯಲ್ಲಿ ಕಾಣಿಸಿಕೊಂಡಿದ್ದ ಪೋರ್ಚುಗೀಸರೊಂದಿಗೆ ವಾಣಿಜ್ಯ ಸಂಬಂಧವನ್ನು ಹೊಂದಿದ್ದ ಇವನ ಸೇನೆಗೆ ಆರೇಬಿಯ ಕುದುರೆಗಳನ್ನು ಅವರೇ ಸರಬರಾಜು ಮಾಡಿಕೊಡುತ್ತಿದ್ದರು. ಅವನ ಆಸ್ಥಾನವು ಅಷ್ಟದಿಗ್ಗಜಗಳೆಂದೇ ಪ್ರಸಿದ್ಧರಾಗಿದ್ದ ಪಂಡಿತೋತ್ತಮರಿಂದ ಅಲಂಕರಿಸಲ್ಪಟ್ಟಿದ್ದು, ಸ್ವತಃ ವಿದ್ವಾಂಸನಾಗಿದ್ದ ಅರಸನು 'ಆಮುಕ್ತಮಾಲ್ಯದ' ಎಂಬ ಗ್ರಂಥವನ್ನು ರಚಿಸಿದ್ದಾನೆ. ತನ್ನ ಇಳಿವಯಸ್ಸನ್ನು, ಬಾಲಕ ತಿರುಮಲನ ಅಕಾಲ ಮರಣದಿಂದಾಗಿ ಪುತ್ರಶೋಕದೊಂದಿಗೆ ಕಳೆದು ೧೫೨೯ರಲ್ಲಿ ನಿಧನ ಹೊಂದಿದನು. ಇವನ ಆಳ್ವಿಕೆಗೆ ಸೇರಿದ ಶಾಸನಗಳು ಜಿಲ್ಲೆಯ ಮಂಚನಬೇಳೆ, ಶೆಟ್ಟಿಪಲ್ಲಿ, ಮಿಣಕನಗುರಿಕಿ, ಕಮ್ಮವಾರ, ಕಮ್ಮವಾರಪಲ್ಲಿ, ಸುಳಿದೇನಹಳ್ಳಿ, ಪಚ್ಚಿರೆಡ್ಡಿಪಲ್ಲಿ, ಹೊಸಹಳ್ಳಿ, ಸೋಮೇಶ್ವರಪಾಳ್ಯ, ಗದ್ದೆಕಣ್ಣೂರು, ಮುಳಬಾಗಿಲು, ಕೋಲಾರ, ಕೊಂಡಿಪಲ್ಲಿ, ಸುಗಟೂರು, ರಾಜಗುಂಡ್ಲಹಳ್ಳಿ, ಹಲ್ಲೂರು, ಆಲಂಗಿರಿ, ಗುಡಿಪಲ್ಲಿ, ವಿರೂಪಾಕ್ಷಪುರ ಮುಂತಾದೆಡೆಗಳಲ್ಲಿ ಲಭಿಸಿವೆ. ಇವುಗಳ ಆಧಾರದ ಮೇಲೆ ಆ ಕಾಲದ ಸಾಂಸ್ಕೃತಿಕ ಬೆಳವಣಿಗೆಯನ್ನು ಗ್ರಹಿಸಬಹುದಾಗಿದೆ.

**ಅಚ್ಯುತರಾಯ (೧೫೨೯–೧೫೪೨)**: ಕೃಷ್ಣದೇವರಾಯನ ಮರಣಾನಂತರ ಅಧಿಕಾರಕ್ಕೆ ಬಂದ ಅವನ ಸೋದರನಾದ ಅಚ್ಯುತರಾಯನು, ಏತನ್ಮಧ್ಯೆ ಬಿಜಾಪುರದ ಸುಲ್ತಾನರಿಗೆ ಹಸ್ತಾಂತರಗೊಂಡಿದ್ದ ರಾಯಚೂರು ಕೋಟೆಯನ್ನು ಮರುವಶಪಡಿಸಿಕೊಂಡನು. ಕಂಚಿ ಪ್ರಾಂತ್ಯದ ತಿರುವಾಡಿಯ ಅಧಿಕಾರಿ ಚೆಲ್ಲಪ್ಪನ ದಂಗೆಯನ್ನು ಹತ್ತಿಕ್ಕಿದ ಇವನು, ಕಳಿಂಗ ಗಜಪತಿ ಹಾಗೂ ಗೋಲ್ಕಂಡದ ಸುಲ್ತಾನರ ಧಾಳಿಯನ್ನೂ ಹಿಮ್ಮೆಟ್ಟಿಸಿದನು. ಈ ನಡುವೆ ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಇವನ ಆಸ್ಥಾನಕ್ಕೆ ಭೇಟಿ ನೀಡಿದ್ದನು. ಆದರೆ ಈತನ ಆಡಳಿತಾವಧಿಯಲ್ಲಿ ಅಧಿಕಾರವು ಅವನ ಇರ್ವರೂ ಸೋದರಳಿಯಂದಿರ ಕೈಯಲ್ಲಿ ಸಿಕ್ಕಿ ಸಾಮ್ರಾಜ್ಯವು ಅಶಕ್ತವಾಯಿತು.

ಅಚ್ಯುತರಾಯನ ನಿಧನದಿಂದಾಗಿ ಅಧಿಕಾರಕ್ಕೆ ಬಂದ ಅವನ ಮಗ ವೆಂಕಟನನ್ನು ಸೋದರಳಿಯ ಸಾಲುಕ್ಯ ತಿರುಮಲನು ಕೊಂದು ತಾನೇ ಅಧಿಕಾರಕ್ಕೆ ಬಂದನು. ಆದರೆ ಆಸ್ಥಾನಿಕರು ಅಚ್ಯುತನ ದಾಯಾದಿಯ ಮಗ ಸದಾಶಿವರಾಯನನ್ನು ಬೆಂಬಲಿಸಿದಾಗ, ಆ ಗುಂಪಿನ ಮುಂದಾಳತ್ವವನ್ನು ಅರವೀಡು ವಂಶದ ರಾಮರಾಯ (ಕೃಷ್ಣದೇವರಾಯನ ಅಳಿಯ)ನು ವಹಿಸಿದನು. ಇದರಿಂದ ಅಪ್ರತಿಭನಾದ ಸಾಲುಕ್ಯ ತಿರುಮಲನು ಆತ್ಮಹತ್ಯೆ ಮಾಡಿಕೊಳ್ಳುವುದರೊಂದಿಗೆ ಸದಾಶಿವರಾಯನು (೧೫೪೩–೧೫೭೦) ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯಲ್ಲಿ ಎಲ್ಲಾ ಅಧಿಕಾರಗಳು ಅಳಿಯ ರಾಮರಾಯ ಮತ್ತವನ ಸೋದರರಾದ ತಿರುಮಲ ಹಾಗೂ ವೆಂಕಟಾದ್ರಿಯರಲ್ಲಿ ಕೇಂದ್ರೀಕೃತಗೊಂಡು, ಹೆಸರಿಗಷ್ಟೆ ಸದಾಶಿವರಾಯನು ಅರಸನಾಗಿ ಉಳಿಯಬೇಕಾಯಿತು. ಸಾಮ್ರಾಜ್ಯದ ಹಿರಿಯ ಅಧಿಕಾರಿಗಳನ್ನು ತೆಗೆದುಹಾಕಿ ಅವರ ಸ್ಥಾನದಲ್ಲಿ ತನ್ನ ಹಿತೈಷಿಗಳನ್ನು ರಾಮರಾಯನು ನೇಮಿಸಿಕೊಂಡಿದ್ದರಿಂದ ಸಾಮ್ರಾಜ್ಯವು ಅಶಕ್ತವಾಯಿತು. ದಖನ್ನಿನ ಷಾಹಿ ಸುಲ್ತಾನರ ವಿರುದ್ಧ ಒಡೆದು ಆಳುವ ನೀತಿಯನ್ನು ಅನುಸರಿಸಿದ ಇವನು ಸಾಮ್ರಾಜ್ಯದ ಗಡಿಯನ್ನು ಉತ್ತರದಲ್ಲಿ ಕೃಷ್ಣಾನದಿಯಾಚೆಗೂ ವಿಸ್ತರಿಸುವಲ್ಲಿ ಯಶಸ್ವಿಯಾದನು. ಇವನು ಬಿಜಾಪುರದ ಸುಲ್ತಾನ ಆಲಿ ಆದಿಲ್ ಷಾನನ್ನು ತನ್ನ ದತ್ತುಪುತ್ರನೆಂದೇ ಪರಿಗಣಿಸಿದ್ದನೆಂದೂ ಹೇಳಲಾಗುತ್ತದೆ. ಆದರೆ ಅಂತಿಮವಾಗಿ ತಮ್ಮ ಒಡಕಿನಿಂದಾಗಿ ರಾಮರಾಯನು ಬಲಿಷ್ಠನಾಗಿರುವ ಅಂಶವನ್ನು ಮನಗಂಡ ಷಾಹಿ ಸುಲ್ತಾನರು, ಒಂದಾಗುವ ಮೂಲಕ ರಾಮರಾಯನನ್ನು ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ಸೋಲಿಸಿ, ಹತ್ಯೆಗೆಯ್ದರು. ಅವನ ಸೋದರರು ಯುದ್ಧರಂಗದಿಂದ ಕಾಲ್ತೆಗೆದರು. ಸೋದರ ವೆಂಕಟಪತಿರಾಯ ಸೆರೆಯಲ್ಲಿದ್ದ ಸದಾಶಿವರಾಯ, ರಾಣಿವಾಸ ಹಾಗೂ ಅಪಾರ ಸಂಪತ್ತಿನೊಂದಿಗೆ ರಾಜಧಾನಿ ವಿಜಯನಗರದಿಂದ ಪೆನುಗೊಂಡೆಗೆ ಪಲಾಯಾನ ಮಾಡಿದನು. ರಕ್ಷಕರಿಲ್ಲದ ರಾಜಧಾನಿ

ವಿಜಯನಗರವು ಒಳ–ಹೊರ ಸುಲಿಗೆಗೆ ಒಳಗಾಗಿ ಪಾಳು ಬೀಳುವಂತಾಯಿತು. ಸದಾಶಿವರಾಯನು ೧೫೭೦ರಲ್ಲಿ ನಿಧನ ಹೊಂದಿದನು. ಇವನ ಆಳ್ವಿಕೆಗೆ ಸೇರಿದ ಶಾಸನಗಳೂ ಜಿಲ್ಲೆಯಲ್ಲಿ ಲಭಿಸಿವೆ.

**ಅರವೀಡು**

ಅರವೀಡು ತಿರುಮಲನ ಕಾಲದಿಂದ (೧೫೭೦–೭೨) ಆರಂಭಗೊಂಡ ಆರವೀಡುಗಳ ಆಡಳಿತಾವಧಿಯಲ್ಲಿ ಪೆನುಗೊಂಡೆ, ಚಂದ್ರಗಿರಿ ಹಾಗೂ ವೆಲ್ಲೂರುಗಳು ಅವರ ರಾಜಧಾನಿಗಳಾಗಿದ್ದು, ಮುಂದೆ ಈ ಮನೆತನಕ್ಕೆ ಸೇರಿದ ಒಂದನೆಯ ಶ್ರೀರಂಗರಾಯ (೧೫೭೨–೮೬), ಇಮ್ಮಡಿ ವೆಂಕಟಪತಿರಾಯ (೧೫೮೬–೧೬೧೪), ಇಮ್ಮಡಿ ಶ್ರೀರಂಗರಾಯ (೧೬೧೪), ರಾಮದೇವ (೧೬೧೭–೧೬೩೨), ಇಮ್ಮಡಿ ವೆಂಕಟಪತಿರಾಯ (೧೬೩೨–೪೨) ಹಾಗೂ ಮುಮ್ಮಡಿ ಶ್ರೀರಂಗರಾಯ (೧೬೪೨–೧೬೭೦)ರು ರಾಜ್ಯಭಾರ ನಡೆಸಿದರು. ಇವರೆಲ್ಲರ ಕಾಲಕ್ಕೂ ಸೇರಿದಂತೆ ಹಲವಾರು ಶಾಸನಗಳು ಜಿಲ್ಲೆಯಲ್ಲಿ ಲಭಿಸಿವೆ.

**ಬಿಜಾಪುರದ ಆದಿಲ್‌ಷಾಹಿ ಸುಲ್ತಾನರು**

ಬಿಜಾಪುರವನ್ನು ರಾಜಧಾನಿಯನ್ನಾಗಿಸಿಕೊಂಡು ೧೪೮೯ರಿಂದ ರಾಜ್ಯಭಾರ ನಡೆಸಿದ ಆದಿಲ್ ಷಾಹಿ ಸುಲ್ತಾನರಲ್ಲಿ ಆರನೆಯವನಾದ ಮಹಮದ್ **ಆದಿಲ್ ಷಾ (೧೬೨೭–೫೬)**ನ ಆಳ್ವಿಕೆಯಲ್ಲಿ ಬಿಜಾಪುರದ ಸೇನೆಯು, ಸೇನಾನಿ ರಣದುಲ್ಲಾಖಾನನ ನಾಯಕತ್ವದಲ್ಲಿ ಮೈಸೂರು ಪ್ರಾಂತದ ಮೇಲೆ ಆಕ್ರಮಣ ಮಾಡಿತು. ಈ ಆಕ್ರಮಣದಲ್ಲಿ ರಣದುಲ್ಲಾಖಾನನ ನೆರವಿಗೆ ಮರಾಠ ದಂಡನಾಯಕ ಷಹಾಜಿಯನ್ನು ನಿಯೋಜಿಸಲಾಗಿತ್ತು. ತತ್ಪರಿಣಾಮವಾಗಿ ೧೬೪೪ರ ವೇಳೆಗೆ ಮೈಸೂರು ಪ್ರಾಂತದ ಉತ್ತರ ಭಾಗವನ್ನು ಬಹುಪಾಲು ವಶಪಡಿಸಿಕೊಳ್ಳುವಲ್ಲಿ ಅದು ಯಶಸ್ವಿಯಾಯಿತು. ಇದಕ್ಕೆ ಪೂರ್ವಭಾವಿಯಾಗಿ ೧೬೩೮ರಲ್ಲಿ ಕೆಂಪೇಗೌಡನನ್ನು ಸೋಲಿಸುವ ಮೂಲಕ ಬೆಂಗಳೂರನ್ನು ಅವರು ವಶಪಡಿಸಿಕೊಂಡಾಗ, ಕೆಂಪೇಗೌಡನು ಮಾಗಡಿಗೆ ತೆರಳಬೇಕಾಯಿತು. ಸುಮಾರು ೧೬೩೯ರಲ್ಲಿ ಸುಗುಟೂರಿನ ಪಾಳೇಗಾರ ಚಿಕ್ಕರಾಯನ ವಶದಲ್ಲಿದ್ದ ಕೋಲಾರ ಜಿಲ್ಲೆಯನ್ನೊಳಗೊಂಡ ಪ್ರದೇಶವನ್ನು ವಶಪಡಿಸಿಕೊಳ್ಳಲಾಯಿತು. ಅಲ್ಲದೆ ದೊಡ್ಡಬಳ್ಳಾಪುರ, ಶಿರಾ ಹಾಗೂ ಚಿತ್ರದುರ್ಗದ ದಕ್ಷಿಣ ಭಾಗಗಳು ಬಿಜಾಪುರದ ಸೈನ್ಯಕ್ಕೆ ವಶವಾದವು. ಈ ದಿಗ್ವಿಜಯವು ಪೂರ್ಣಗೊಳ್ಳುತ್ತಿದ್ದಂತೆ ಬೆಂಗಳೂರು, ಹೊಸಕೋಟೆ, ಕೋಲಾರ, ದೊಡ್ಡಬಳ್ಳಾಪುರ ಹಾಗೂ ಶಿರಾಗಳನ್ನೊಳಗೊಂಡ 'ಕರ್ನಾಟಿಕ್–ಬಿಜಾಪುರ–ಬಾಲಘಾಟ್' ಪ್ರಾಂತವನ್ನು ನೂತನವಾಗಿ ರೂಪಿಸಿ, ಅದನ್ನು ಷಹಾಜಿಗೆ ಜಹಗೀರಾಗಿ ನೀಡಲಾಯಿತು. ಸುಮಾರು ೧೬೩೦ರ ವೇಳೆಗಾಗಲೇ ಜಿಲ್ಲೆಯ ಕೋಲಾರ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಗೋಕುಂಟೆ ಮುಂತಾದೆಡೆಗಳಲ್ಲಿ ಕ್ರೈಸ್ತಮತಿಯರಿದ್ದರೆಂದು ಜೆಸ್ಯೂಟ್ ಪತ್ರಗಳಿಂದ ತಿಳಿದುಬರುತ್ತದೆ.

**ಮರಾಠರು**

ಆರಂಭದಲ್ಲಿ ಷಹಾಜಿಯು ಬೆಂಗಳೂರಿನಲ್ಲಿ ನೆಲೆಸಿದ್ದನಾದರೂ ಅನಂತರದಲ್ಲಿ ಕೋಲಾರ ಹಾಗೂ ದೊಡ್ಡಬಳ್ಳಾಪುರಗಳಲ್ಲಿ ಸ್ವಲ್ಪ ಕಾಲ ತಂಗಿದ್ದನು. ಸೋತ ಅರಸರ ಅಧೀನದಲ್ಲಿದ್ದ ರಾಜಧಾನಿ ಹಾಗೂ ಹೆಚ್ಚು ಉತ್ಪನ್ನವಿರುವ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಬದಲಾಗಿ ಕಡಿಮೆ ಉತ್ಪನ್ನವಿರುವ ಹಿಂದುಳಿದ ಸಾಗುವಳಿ ಪ್ರದೇಶವನ್ನು ಸೋತ ಪಾಳೇಗಾರರಿಗೆ ಜಹಗೀರಾಗಿ ನೀಡುವ ನೀತಿಯನ್ನು ಬಿಜಾಪುರದ ಸುಲ್ತಾನರು ಅನುಸರಿಸುತ್ತಿದ್ದರು. ಅದರಂತೆ ಸುಗುಟೂರು ಪಾಳೇಗಾರ ಚಿಕ್ಕರಾಯನ ಅಧೀನದಲ್ಲಿದ್ದ ಹೊಸಕೋಟೆ ಹಾಗೂ ಕೋಲಾರ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು, ಆನೇಕಲ್ ಹಾಗೂ ಪುಂಗನೂರು ಪ್ರದೇಶಗಳನ್ನು ಜಹಗೀರಾಗಿ ಅವನಿಗೆ ನೀಡಲಾಯಿತು.

ಇದರಿಂದಾಗಿ ಷಹಾಜಿಗೆ ೧೬೪೪ರಲ್ಲಿ ಜಹಗೀರಾಗಿ ಬಂದ ಕೋಲಾರ ಪ್ರದೇಶವು, ಬಿಜಾಪುರವು ಮೊಘಲರಿಗೆ ೧೬೮೬ರಲ್ಲಿ ಕೈವಶವಾಗುವವರೆಗೂ ಮರಾಠರ ಅಧೀನದಲ್ಲಿತ್ತು. ಬಿಜಾಪುರದ ಸೇವೆಯಲ್ಲಿ ೧೬೩೨ರಿಂದಿದ್ದ ಷಹಾಜಿಯನ್ನು ಅವನ ಮಗ ಶಿವಾಜಿಯ ಆಕ್ರಮಣಕಾರಿ ನೀತಿಯಿಂದಾಗಿ ಸಿಟ್ಟಾದ ಬಿಜಾಪುರದ ಸುಲ್ತಾನನು ೧೬೪೮ರಲ್ಲಿ ಬಂಧಿಸಿದನಾದರೂ, ೧೬೫೩ರಲ್ಲಿ ಮುಕ್ತಗೊಳಿಸಿ ಷಹಾಜಿಯ ಜಹಗೀರನ್ನು ಮತ್ತೆ ಮುಂದುವರಿಸಿದನು. ಷಹಾಜಿಯ ಬಂಧನ ಸಂದರ್ಭದಲ್ಲಿ ಜಹಗೀರಿನ ಉಸ್ತುವಾರಿಯನ್ನು ಹೊತ್ತಿದ್ದ ಅವನ ಹಿರಿಯ ಮಗ ಸಂಭಾಜಿಯು ೧೬೫೩ರಲ್ಲಿ ಜರುಗಿದ ಯುದ್ಧವೊಂದರಲ್ಲಿ

ಕೊಲ್ಲಲ್ಪಟ್ಟನು. ಮುಂದೆ ಷಹಾಜಿ ೧೬೬೪ರಲ್ಲಿ ಗತಿಸಿದನು. ಷಹಾಜಿಯ ಮರಣಾನಂತರ ಕಿರಿಯ ಹೆಂಡತಿಯ ಮಗನಾದ ವೆಂಕೋಜಿಗೆ ಮೈಸೂರು ಪ್ರಾಂತ ಹಾಗೂ ತಂಜಾವೂರಿನ ಜಹಗೀರನ್ನು ನೀಡಲಾಯಿತು. ಇವನು ೧೬೭೫ರಲ್ಲಿ ತಂಜಾವೂರನ್ನು ಗೆದ್ದುಕೊಂಡು ಅಲ್ಲಿಗೆ ತನ್ನ ಆಡಳಿತ ಕೇಂದ್ರವನ್ನು ವರ್ಗಾಯಿಸಿದನು. ಮಿಗಿಲಾಗಿ ತಾನು ಸ್ವತಂತ್ರನೆಂದೂ ಘೋಷಿಸಿಕೊಂಡನು. ಆಗ ಶಿವಾಜಿಯು ವೆಂಕೋಜಿಯ ಮೇಲೇರಿ ಬಂದು, ಅವನ ಮೇಲೆ ಒತ್ತಡ ಹೇರಲು ತನ್ನ ತುಕಡಿಯೊಂದನ್ನು ಅಲ್ಲೇ ಇಟ್ಟನಾದರೂ ಮುಂದೆ ಇಬ್ಬರ ನಡುವೆ ಒಮ್ಮತ ಏರ್ಪಟ್ಟು ಜಹಗೀರ್ ಪ್ರದೇಶವನ್ನು ಮಲತಮ್ಮ ವೆಂಕೋಜಿಗೆ ೧೬೭೮ರಲ್ಲಿ ಶಿವಾಜಿಯು ವಹಿಸಿಕೊಟ್ಟನು. ಆದರೆ ಮುಂದೆ ೧೬೮೦ರಲ್ಲಿ ಶಿವಾಜಿಯು ನಿಧನ ಹೊಂದಿದನು.

ವಿಶಾಲ ಸಾಮ್ರಾಜ್ಯವನ್ನು ಕಟ್ಟುವ ಹೊಂಗನಸನ್ನು ಕಂಡಿದ್ದ ಮರಾಠರು, ೧೬೮೦–೮೬ರ ಕಾಲಾವಧಿಯಲ್ಲಿ ಮೈಸೂರು ಸಂಸ್ಥಾನದ ವಿರುದ್ಧ ಹಲವಾರು ಬಾರಿ ಘರ್ಷಣೆಗೆ ಇಳಿಯಬೇಕಾಯಿತು. ಸಾಕಷ್ಟು ಏಳು–ಬೀಳುಗಳನ್ನು ಕಂಡ ಈ ಸಂಘರ್ಷದಲ್ಲಿ ಮರಾಠರೊಂದಿಗೆ ಮೈಸೂರು ಅರಸರು ಹೊಂದಾಣಿಕೆ ಮಾಡಿಕೊಳ್ಳುವುದರೊಂದಿಗೆ ೧೬೮೬ರಲ್ಲಿ ಮರಾಠರು ಮೈಸೂರು ಪ್ರಾಂತದಿಂದ ಕಾಲ್ತೆಗೆದರು. ಇದರ ಬೆನ್ನಲ್ಲೇ ಬಿಜಾಪುರದ ಸುಲ್ತಾನರೂ ಅವಸಾನಗೊಂಡು ಮೊಘಲರ ಆಗಮನವೂ ಆಯಿತು. ಈ ನಡುವೆ ಮರಾಠರ ಧಾಳಿಯಿಂದ ನಲುಗಿದ್ದ ಮೈಸೂರು ಅರಸರು ಚೇತರಿಸಿಕೊಂಡರು. ಇಂತಹ ಸಂದಿಗ್ಧ ಸಮಯದಲ್ಲಿ ಬೆಂಗಳೂರನ್ನು ಚಿಕ್ಕದೇವರಾಜ ಒಡೆಯರ್ ಮೊಘಲರಿಗೆ ಮೂರು ಲಕ್ಷ ರೂಪಾಯಿಗಳನ್ನು ನೀಡುವ ಮೂಲಕ ತಮ್ಮದಾಗಿಸಿಕೊಂಡರು.

ಜಿಲ್ಲೆಯಲ್ಲಿ ಮರಾಠರ ಆಡಳಿತ ಕಾಲದ (೧೬೩೯–೧೯೯೩) ನಾಲ್ಕಾರು ಶಾಸನಗಳು ಪತ್ತೆಯಾಗಿವೆ. ಅವುಗಳಲ್ಲಿ ನಂದಿ ಬೆಟ್ಟದಲ್ಲಿರುವ ೧೬೮೦ರ ಶಾಸನವು ನಂದಿ ಬೆಟ್ಟದ ಭೌಗೋಳಿಕ ಲಕ್ಷಣವನ್ನು ವರ್ಣಿಸುತ್ತಾ, ಅದು ಬಳ್ಳಾಪುರ ರಾಜ್ಯದ ಗಿರಿದುರ್ಗವಾಗಿದ್ದು ಅಬೇಧ್ಯವೆಂದೂ ಹೇಳುತ್ತಾ, ಮುಸ್ಲಿಂ ಧಾಳಿಯನ್ನು ಸಮರ್ಥವಾಗಿ ಎದುರಿಸಿದ ಕೋಟೆಯ ರಾಜ್ಯಪಾಲ ಬಾಲಾಜಿಕೃಷ್ಣನು, ಮಂತ್ರಿ ರಘನಾಥ ಪಂಡಿತನ ಆದೇಶದಂತೆ ಅದನ್ನು ವಶಪಡಿಸಿಕೊಂಡನೆಂದು ದಾಖಲಿಸಿದೆ. ಸಂಬಾಜಿಯ ಮಡದಿ ಜೈತಾಬಾಯಿಯು ದಾನ ನೀಡಿರುವ ಅನೇಕ ಶಾಸನಗಳಿದ್ದು, ಅವುಗಳಲ್ಲಿ ಹೆಚ್ಚಿನವು ದತ್ತಿ ಶಾಸನಗಳಾಗಿವೆ. ಇವುಗಳಲ್ಲಿ ಒಂದು ಶಾಸನ ಅವಳ ಮಗ ಮಲ್ಲೋಜಿಯದಾಗಿದೆ. ಶಿವಾಜಿಯ ಆಳ್ವಿಕೆಯಲ್ಲಿ ಕೋಲಾರವು ಏಳು ನಾಡುಗಳಲ್ಲಿ ಒಂದಾಗಿತ್ತು. ಮರಾಠಿ ಆಡಳಿತವು ನಾಮಕಾವಸ್ತೆಯದಾಗಿರದೆ, ಮರಾಠರ ಪ್ರಭಾವವು ಗಣನೀಯ ಪ್ರಮಾಣದಲ್ಲಿ ಜಿಲ್ಲೆಯ ಮೇಲೆ ಆಗಿರುವುದನ್ನು ಈ ಶಾಸನಗಳು ಸೂಚಿಸುತ್ತವೆ.

**ಮೊಘಲರ ಆಗಮನ**

ಔರಂಗಜೇಬನ ಆಡಳಿತಾವಧಿಯಲ್ಲಿ ಬಿಜಾಪುರದ ಸುಲ್ತಾನರ ಆಳ್ವಿಕೆಯು ೧೬೮೬ರಲ್ಲಿ ಅಂತ್ಯಗೊಂಡಿತು. ಇದರ ಬೆನ್ನಲ್ಲೇ ತುಂಗಭದ್ರೆಯ ದಕ್ಷಿಣದ ಪ್ರಾಂತಗಳನ್ನು ವಶಪಡಿಸಿಕೊಳ್ಳಲು ಮೊಘಲ್ ಸೇನೆಯನ್ನು ರವಾನಿಸಲಾಯಿತು. ದಕ್ಷಿಣ ಪ್ರಾಂತಗಳನ್ನು ಒಗ್ಗೂಡಿಸಿ ನೂತನ ಪ್ರಾಂತವನ್ನು ೧೬೮೩ರಲ್ಲಿ ರಚಿಸಿ, ಶಿರಾವನ್ನು ಅದರ ಆಡಳಿತ ಕೇಂದ್ರವನ್ನಾಗಿ ಮಾಡಲಾಯಿತು. ಬಸವಾಪಟ್ಟಣ, ಬೂದಿಹಾಳ, ಶಿರಾ, ಪೆನುಗೊಂಡ, ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ಕೋಲಾರ ಪರಗಣಗಳನ್ನು ಅದು ಒಳಗೊಂಡಿತ್ತು. ಖಾಸಿಂಖಾನ ಎಂಬುವನನ್ನು ನೂತನ ಪ್ರಾಂತದ ಫೌಜದಾರ್ ದಿವಾನನನ್ನಾಗಿ ನೇಮಿಸಲಾಯಿತು. ಈ ವ್ಯವಸ್ಥೆ ೧೭೫೭ರವರೆವಿಗೂ ಮುಂದುವರಿಯಿತು.

ಹದಿನೆಂಟನೆಯ ಶತಮಾನದ ಆರಂಭದಲ್ಲಿ ಮುಸ್ಲಿಂ ರಾಜ್ಯಪಾಲರ ಆಳ್ವಿಕೆಗೆ ಕೋಲಾರ ಜಿಲ್ಲೆಯು ಒಳಪಟ್ಟ ಅಂಶವನ್ನು ಅನೇಕ ಶಾಸನಗಳು ಸೂಚಿಸುತ್ತವೆ. ಮುಳಬಾಗಿಲು ತಾಲೂಕಿನ ೧೭೦೩ರ ಶಾಸನವು ತಿರುವಲಂಗಡು ಪಂಥಕ್ಕೆ ಸೇರಿದ ಇಬ್ಬರು ಶಿವಾಚಾರ ಗುರುಗಳ ನಡುವೆ, ಬೇಲೂರಿನ ಭವ–ಭೇರಿ ವರ್ತಕರ ಶಿಷ್ಯತ್ವದ ಸಾಮ್ಯಕ್ಕಾಗಿ ನಡೆದ ವಾಗ್ವಾದವನ್ನು ಗುಲಾಂ ಆಲಿ ಖಾನ್ ಸಾಹೇಬ ಎಂಬ ಮುಸ್ಲಿಂ ಅಧಿಕಾರಿಯು ಆಲಿಸಿ, ಸಾಕ್ಷಿಗಳನ್ನು ನಗರ ಪ್ರಾಂತದಿಂದ ಕರೆಸಿ ಪರಿಶೀಲಿಸಿ, ತೀರ್ಪು ನೀಡಿದ ಅಪರೂಪದ ಅಂಶವನ್ನು ತಿಳಿಸುತ್ತದೆ. ಇದೇ ಅಧಿಕಾರಿಯು, ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದು, ಮಡಿದ ವ್ಯಕ್ತಿಯೋರ್ವನ ಪರಿವಾರದವರಿಗೆ ಉಂಬಳಿ ನೀಡಿದ ಅಂಶವನ್ನು ಕೋಲಾರ ತಾಲೂಕಿನ ೧೭೧೨ರ ಶಾಸನವೊಂದು ದಾಖಲಿಸಿದೆ.

# ಸ್ಥಳೀಯ ಪಾಳೇಪಟ್ಟುಗಳು

ವಿಜಯನಗರ ಸಾಮ್ರಾಜ್ಯವು ಅಸ್ತಿತ್ವದಲ್ಲಿದ್ದ ಸಮಯದಲ್ಲಿ ಆಡಳಿತ ನಡೆಸುತ್ತಿದ್ದ ಪ್ರಾಂತೀಯ ಪ್ರಭುತ್ವಗಳು, ಆ ಸಾಮ್ರಾಜ್ಯದ ಹಿನ್ನಡೆಯೊಂದಿಗೆ ೧೬ನೆಯ ಶತಮಾನದಲ್ಲಿ ಬಲಿಷ್ಟ ಪಾಳೇಪಟ್ಟುಗಳಾಗಿ ರೂಪುಗೊಂಡವು. ಸಮರ್ಥ ಪಾಳೇಗಾರರ ನಾಯಕತ್ವದಲ್ಲಿ ಸ್ಥಳೀಯ ಆಡಳಿತವು ಸಮರ್ಪಕವಾಗಿ ನಿರ್ವಹಿಸಲ್ಪಡುತ್ತಿದ್ದು, ವಿವಿಧ ರಂಗಗಳಲ್ಲಿ ಪ್ರಗತಿಯೂ ಕಂಡು ಬಂತು. ಕೋಲಾರ ಜಿಲ್ಲೆಯಲ್ಲೂ ಅಂತಹ ಪಾಳೇಪಟ್ಟುಗಳು ಸ್ಥಳೀಯವಾಗಿ ಅಸ್ತಿತ್ವಕ್ಕೆ ಬಂದು ಪರಿಣಾಮಕಾರಿ ಆಡಳಿತವನ್ನು ಒದಗಿಸಿದ ಅಂಶವನ್ನು ಅನೇಕ ಶಾಸನಗಳು ಒಳಗೊಂಡಿದ್ದು, ಅವುಗಳ ಅಧ್ಯಯನದಿಂದ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯಲ್ಲಿದ್ದ ಸುಗುಟೂರು, ತಾಡಿಗೊಳ್ಳ, ಚಿಕ್ಕಬಳ್ಳಾಪುರ, ಗುಮ್ಮನಾಯಕನಪಾಳ್ಯ, ಗುಡಿಬಂಡೆ, ಮುಂತಾದ ಪಾಳೇಪಟ್ಟುಗಳ ಜೊತೆಗೆ ಜಿಲ್ಲೆಯ ಗಡಿಯಂಚಲ್ಲಿದ್ದ ನೆರೆಯ ಆವತಿ, ದೊಡ್ಡಬಳ್ಳಾಪುರ, ಹೊಸಕೋಟೆ, ದೇವನಹಳ್ಳಿ ಮುಂತಾದ ಪಾಳೆಪಟ್ಟುಗಳು ಜಿಲ್ಲೆಯ ವಿವಿಧ ಭಾಗಗಳ ಮೇಲೆ ಹೊಂದಿದ್ದ ನಿಯಂತ್ರಣದಿಂದಾಗಿ ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ.

### ಗುಮ್ಮನಾಯಕನ ಪಾಳ್ಯದ ಪಾಳೇಗಾರರು

ಗುಮ್ಮನಾಯಕನ ಪಾಳ್ಯವು (ಇಂದು ಇದು ವಸಂತಪುರ ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿದೆ) ಬಾಗೇಪಲ್ಲಿ ತಾಲೂಕಿನಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಹಿಂದೆ ಸ್ಥಳೀಯ ಪಾಳೇಗಾರರ ರಾಜಧಾನಿ ಪಟ್ಟಣವಾಗಿ ಮೆರೆದಿರುವ ಊರು. ಜಿಲ್ಲೆಯಲ್ಲಿ ತಲೆ ಎತ್ತಿದ್ದ ಸಾಮಂತ ಮನೆತನಗಳಲ್ಲಿ ಸುಮಾರು ೧೩೫೦ಕ್ಕಿಂತಲೂ ಮೊದಲೇ ತಲೆಯೆತ್ತಿದ ಗುಮ್ಮನಾಯಕನಪಾಳ್ಯದ ಪಾಳೇಪಟ್ಟು ಪ್ರಮುಖದ್ದಾಗಿದೆ. ಈ ಪಾಳೇಗಾರರ ಮೂಲಕ್ಕೆ ಸಂಬಂಧಿಸಿದಂತೆ ಹಲವಾರು ಐತಿಹ್ಯಗಳಿವೆ. ಆ ಪ್ರಕಾರ ಉತ್ತರ ಆರ್ಕಾಟ್ ಜಿಲ್ಲೆಯನ್ನು ಆಳುತ್ತಿದ್ದ ಚೋಳ ಸಾಮಂತ ಮಂಬಾನ ಸಂಬಂಧಿಕರಿವರೆಂದು ಹೇಳಲಾಗುತ್ತದೆ. ಮಂಬಾನು ಸುಮಾರು ಹತ್ತನೆಯ ಶತಮಾನದಲ್ಲಿದ್ದನೆಂದು ತಮಿಳು ಶಾಸನಗಳು ದಾಖಲಿಸಿವೆ. ಮಂಬಾನ ದಾಯಾದಿಯಾದ ಖಾದ್ರಿಪತಿನಾಯಕನು ವೈದುಂಬ ದಿಲೀಪನ ಸಾಮಂತನಾಗಿದ್ದು, ಭೈರವಕೊಂಡ ಹಾಗೂ ದೊಂಗಲಕೊಂಡ ಪ್ರಾಂತಗಳ ನಾಯಕನಾದನೆಂದೂ ಅವನೇ ಇವರ ಮೂಲಪುರುಷನೆಂದೂ ಹೇಳಲಾಗುತ್ತದೆ.

ಮತ್ತೊಂದು ಐತಿಹ್ಯದ ಪ್ರಕಾರ, ಇವರು ಮೂಲತಃ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲೂಕಿಗೆ ಸೇರಿದವರಾಗಿದ್ದು, ಪೆದ್ದಪಾಳ್ಯ ಅವರ ಮೂಲಸ್ಥಳವಾಗಿತ್ತು. ಇವರು ಗುರ್‍ರುಂಕೊಂಡ ಪ್ರಾಂತದಲ್ಲಿ ಬೇಟೆಯಾಡುತ್ತಿದ್ದ ಗುಡ್ಡಗಾಡು ಜನರಾಗಿದ್ದು, ಖಾದ್ರಿಪತಿನಾಯಕ ಅವರ ಮೂಲಪುರುಷ. ಇವನು ಸುಮಾರು ೧೩೪೩ರಲ್ಲಿ ಕಾರಣಾಂತರದಿಂದ ಪೆದ್ದಪಾಳ್ಯವನ್ನು ಬಿಟ್ಟು ದೊಂಗಲಕೊಂಡ ಬೆಟ್ಟಶ್ರೇಣಿ (ಇಂದಿನ ಗುಮ್ಮನಾಯಕನಹಳ್ಳಿ ಬಳಿಯ ಬೆಟ್ಟ) ತಲುಪಿ ಅಲ್ಲಿ ರಾಜ್ಯ ಸ್ಥಾಪಿಸಿದನೆಂದು ಹೇಳಲಾಗುತ್ತದೆ. ಹಯವದನರಾಯರ ಪ್ರಕಾರ ಈ ಪಾಳೇಪಟ್ಟಿನ ನಿರ್ಮಾಪಕ ಗುಮ್ಮನಾಯ್ಕನೆಂಬ ಬೇಡ ಮುಖಂಡನಾಗಿದ್ದು, ಇವನು ಪಾಪನಾಯಕನೆಂಬುವನ ಬಲಗೈ ಭಂಟನಾಗಿದ್ದು, ರಾಜಧಾನಿ ಪಾತಪಾಳ್ಯದಲ್ಲಿ ವಾಸಿಸುತ್ತಿದ್ದನು. ಆದರೆ ಪಾಪನಾಯಕನ ಕ್ರೂರ ಆಡಳಿತದಿಂದ ಬೇಸತ್ತಿದ್ದ ಇವನು ಪಾತಪಾಳ್ಯವನ್ನು ತ್ಯಜಿಸಿ, ತಮ್ಮ ಲಕ್ಕನಾಯಕನೊಂದಿಗೆ ದೇವರಾಜನಹಳ್ಳಿಗೆ ವಲಸೆ ಬಂದನು. ಮುಂದೆ ಸ್ವಲ್ಪದರಲ್ಲೇ ಪಾಪನಾಯಕನು ಹತ್ಯೆಗೀಡಾದಾಗ ಯೋಗಾಯೋಗವೆಂಬಂತೆ ಗುಮ್ಮನಾಯಕನಿಗೆ ಗುಪ್ತನಿಧಿಯೂ ಲಭಿಸಿತು. ಅದರ ನೆರವಿನಿಂದ ಸುಸಜ್ಜಿತವಾದ ಬೇಡಪಡೆಯನ್ನು ನಿರ್ಮಿಸಿ, ದೇವರಾಜನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ವಶಪಡಿಸಿಕೊಂಡು ತಮ್ಮ ಒಡೆತನವನ್ನು ಈ ಸೋದರರು ಸ್ಥಾಪಿಸಿಕೊಂಡರು. ಮುಂದೆ ಅಲ್ಲಿ ಗುಮ್ಮನಾಯಕ ಹಾಗೂ ಲಕ್ಕನಾಯಕ ಸೋದರರು ಊರೊಂದನ್ನು ನಿರ್ಮಿಸಿದರು. ಕ್ರಮೇಣ ಪ್ರಬಲರಾದ ಅವರು ನೆರೆಹೊರೆಯವರನ್ನು ಜೊತೆಗೂಡಿಸಿಕೊಂಡು ಕಡಪಾ ಭಾಗದ ಲೂಟಿಕೋರರಿಗೂ ಆಶ್ರಯ ನೀಡುವ ಮೂಲಕ ಅವರ ಸುಲಿಗೆಯಲ್ಲಿ ಅರ್ಧಪಾಲನ್ನು ತೆಗೆದುಕೊಳ್ಳಲಾರಂಭಿಸಿದರು. ಏತನ್ಮಧ್ಯೆ ಸುಮಾರು ೧೩೬೪ರಲ್ಲಿ ಬೆಟ್ಟದ ಸುತ್ತ ಕೋಟೆ–ಕೊತ್ತಲ ನಿರ್ಮಿಸುವ ಮೂಲಕ ಊರಿಗೆ ತನ್ನ ಅಣ್ಣ ಗುಮ್ಮರೆಡ್ಡಿನಾಯಕನ ಹೆಸರನ್ನೇ ಇಟ್ಟನು. ಇವನು ೧೩೭೨ರಲ್ಲಿ ನಿಧನ ಹೊಂದಿದ ನಂತರ ಅವನ ಮಗನಾದ **ಮಸಲ ನಾಯಕನು** (೧೩೭೨–೧೪೧೨) ಅಧಿಕಾರಕ್ಕೆ ಬಂದನು. ಪಾತಪಾಳ್ಯದ ನಾಯಕರನ್ನು ಸೋಲಿಸಿ, ಪಾತಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡ ಇವನು, ದೇವರಕೊಂಡಪಲ್ಲಿ, ಭಾಗ್ಯವಲ್ಲಿ (ಬಾಗೇಪಲ್ಲಿ), ಭೈರವಪಟ್ಟಣ, ಕಾರಕೂರು, ಕುಟ್ಲೂರು, ಗಡಿದಂ ಮತ್ತು ಚಿತ್ರಾವತಿಗಳನ್ನು ಜಯಿಸಿ ವಶಪಡಿಸಿಕೊಂಡನು. ಇವನ ಆಳ್ವಿಕೆಯ ಅವಧಿಯಲ್ಲೇ **ಶಿಂಗಿರಪ್ಪನಾಯಕನೆಂಬುವನು** (೧೩೩೮–೧೪೧೫) ಗುಮ್ಮನಾಯಕನಪಾಳ್ಯದ ನಾಯಕನಾಗಿ ರಾಜ್ಯಭಾರ ಮಾಡಿದ ಅಂಶ

ಹರಿಹರನ ತಾಮ್ರಶಾಸನಗಳಿಂದ ಗೊತ್ತಾಗುತ್ತದೆ. ಮಸಲನಾಯಕ ಹಾಗೂ ಶಿಂಗಿರಪ್ಪನಾಯಕ ಇಬ್ಬರು ಒಬ್ಬರೇ ಎಂಬ ಆಭಿಪ್ರಾಯವೂ ಇದ್ದು, ದೇವರಾಯನ ಸಾಮಂತರಾಗಿ ಆಳಲಾರಂಭಿಸಿದರೆಂದು ತಿಳಿದು ಬರುತ್ತದೆ. ಇವನ ನಂತರ ಅವನ ಮಗನಾದ **ಕದಿರಪ್ಪನಾಯಕನು (೧೪೧೨–೧೪೭೨)** ಅಧಿಕಾರಕ್ಕೆ ಬಂದನು. ಸಾಗುವಳಿಯ ಸುಧಾರಣೆಗಾಗಿ ಕ್ರಮ ಕೈಗೊಂಡ ಇವನು, ಗ್ರಾಮಲೆಕ್ಕಿಗರನ್ನು ನೇಮಿಸುವ ಮೂಲಕ ಕಂದಾಯ ಆಡಳಿತದಲ್ಲಿ ಸುಧಾರಣೆಯನ್ನು ಮಾಡಿದನು. ಅತ್ಯಂತ ಜನಪ್ರಿಯ ನಾಯಕನಾಗಿದ್ದ ಇವನು ಆಡಳಿತದ ಅನುಕೂಲಕ್ಕಾಗಿ ಅಟ್ಟವಣಿ ಚಾವಡಿ, ಬೊಕ್ಕಸದ ಚಾವಡಿ, ನಾಣ್ಯದ ಚಾವಡಿ, ಗೋವಿನ ಚಾವಡಿ, ಹಾಗೂ ಸುಂಕದ ಚಾವಡಿಗಳನ್ನು ನಿರ್ಮಿಸಿದನು. ನಾಣ್ಯ ಟಂಕಿಸಲೆಂದು ಟಂಕಸಾಲೆಯನ್ನಾರಂಭಿಸಿದ ಇವನು ಗುಮ್ಮನಾಯಕನ ಪಾಳ್ಯದಿಂದ, ನಂದಿ–ತ್ರಿಶೂಲವಿರುವ ನಾಣ್ಯಗಳನ್ನು ಚಲಾವಣೆಗೆ ತಂದನು. ವಿಜಯನಗರದರಸರ ನಿಷ್ಠಾವಂತ ಸಾಮಂತನಾಗಿದ್ದ ಇವನು ಇತರ ಪಾಳೇಗಾರರು ಹಾಗೂ ನಾಯಕರಿಂದ ಕೇಂದ್ರಾಡಳಿತಕ್ಕೆ ಸಂದಾಯವಾಗಬೇಕಿದ್ದ ವಾರ್ಷಿಕ ಪೊಗದಿಯನ್ನು ಸಾಮ್ರಾಟನ ಪರವಾಗಿ ವಸೂಲಿ ಮಾಡುವ ಜವಾಬ್ದಾರಿಯನ್ನು ಹೊಂದಿದ್ದನು. ಗುರ್ರಂಕೊಂಡ ಹಾಗೂ ಪೆನುಗೊಂಡೆಯ ಪಾಳೇಗಾರರು ಪೊಗದಿ ನೀಡಲು ನಿರಾಕರಿಸಿದಾಗ ಸೇನಾನಿ ಸೂಜಾನಸಿಂಗ್‌ನ ನೆರವಿಗೆ ಕದಿರಪ್ಪನಾಯಕನು ತನ್ನ ಸೇನೆಯೊಂದಿಗೆ ತೆರಳಿದ್ದನೆಂದು ತಿಳಿದುಬರುತ್ತದೆ. ಅಲ್ಲದೇ ಅವರನ್ನು ಸೋಲಿಸಿ ಕಪ್ಪ ವಸೂಲಿ ಮಾಡಿ ರಾಯನಿಗೆ ಒಪ್ಪಿಸಿದ ಅಂಶವನ್ನು ಹೆಮ್ಮೆಯಿಂದ ಶಾಸನಗಳಲ್ಲಿ ಹೇಳಿಕೊಳ್ಳಲಾಗಿದೆ. ಮರುವರ್ಷ ಕಪ್ಪ ನಿಡದೆ ತಿರುಗಿಬಿದ್ದ ಪಾತಪಲ್ಲಿ, ಅಮರಗೊಂಡ, ಕೊಂಕುಟ್ಟಿ ಹಾಗೂ ಎಲ್ಲಂಟ್ಲುವಿನ ಏಳು ಪಾಳ್ಯದವರನ್ನು ನಿಗ್ರಹಿಸಲೆಂದು ಸಾರ್ವಭೌಮನ ಪರವಾಗಿ ಕದಿರಪ್ಪನಾಯಕನು ತನ್ನ ಸೋದರರಾದ ಬಂಗಾರಪ್ಪನಾಯಕ ಹಾಗೂ ವಸಂತನಾಯಕರೊಡನೆ ಅವರ ಮೇಲೇರಿ ಹೋಗಿ ಕದಿರಂಪಲ್ಲಿಯಲ್ಲಿ ಯುದ್ಧಕ್ಕೆ ನಿಂತನು. ಯುದ್ಧದಲ್ಲಿ ತಮ್ಮಂದಿರನ್ನು ವೈರಿಗಳು ಮೋಸದಿಂದ ಕೊಂದಾಗ, ಕೋಪಾವಿಷ್ಟನಾದ ಕದಿರಪ್ಪನಾಯಕನು ಶತ್ರುಗಳ ಶಿರಸ್ಛೇದನ ಮಾಡಿ ಅದರ ಕುರುಹಾಗಿ ಅವರ ಬೆರಳುಗಳನ್ನು ಸಾರ್ವಭೌಮನಿಗೆ ಕಳುಹಿಸದನೆಂದು ಹೇಳಲಾಗುತ್ತದೆ. ಇದರಿಂದ ಸಂತೃಪ್ತನಾದ ಸಾಮ್ರಾಟ ಹರಿಹರನು ನಾಯಕನಿಗೆ ಬಾಗೇಪಲ್ಲಿ, ಚೇಳೂರುಗಳಿಗೆ ಸೇರಿದ ೨೩ ಹಳ್ಳಿಗಳನ್ನು ಬಳುವಳಿಯಾಗಿ ನೀಡುವುದರ ಜೊತೆಗೆ ಕದಿರಪ್ಪನಾಯಕನನ್ನು ೧೬ ಮಂದಿ ಸೇನಾಧಿಪತಿಗಳ ಮೇಲಿನ ಮಹಾಸೇನಾಧಿಪತಿಯನ್ನಾಗಿ ಮಾಡಿದನೆಂದೂ ಹೇಳಲಾಗುತ್ತದೆ. ಅಲ್ಲದೇ ೨೦೦೦ ಚಿನ್ನದ ವರಾಹ, ಬೆಳ್ಳಿ ಅಂಬಾರಿ, ನಗಾರಿ, ಕುದುರೆ, ಛತ್ರಿ–ಚಾಮರ, ಪಟ್ಟದಕತ್ತಿ ಹಾಗೂ ಮುತ್ತಿನ ಕಂಠಿಹಾರಗಳನ್ನು ವಿಜಯದಶಮಿಯಂದು ಇವನಿಗೆ ನೀಡಿ ಗೌರವಿಸಿದನೆಂದೂ ಶಾಸನದಲ್ಲಿ ಹೇಳಲಾಗಿದೆ. ವಿಜಯನಗರದ ಮಾದರಿಯಲ್ಲಿ ವಿಜಯದಶಮಿಯನ್ನು ಗುಮ್ಮನಾಯಕನ ಪಾಳ್ಯದಲ್ಲೂ ಆಚರಿಸುವ ಸಂಪ್ರದಾಯ ಇವನ ಕಾಲದಲ್ಲಿ ಆರಂಭಗೊಂಡಿತು. ಅದರ ಕುರುಹಾಗಿ ಇಂದಿಗೂ ಹಾಳುಕೋಟೆಯ ಮಧ್ಯದಲ್ಲಿರುವ ದಿಬ್ಬವನ್ನು 'ವಿಜಯದಶಮಿ ದಿಬ್ಬ' ಎಂದೇ ಕರೆಯಲಾಗುತ್ತಿದೆ. ಆ ಕಾರಣದಿಂದಾಗಿ ಗುಮ್ಮನಾಯಕನ ಪಾಳ್ಯವನ್ನು ಕೋಲಾರ ಜಿಲ್ಲೆಯ 'ಹಾಳು ಹಂಪೆ' ಎಂದೇ ಕೆಲವು ವಿದ್ವಾಂಸರು ಪರಿಗಣಿಸಿದ್ದಾರೆ.

ಇವನ ಮರಣಾನಂತರ ಅವನ ಹಿರಿಯ ಮಗನಾದ **ನರಸಿಂಹ ನಾಯಕ (೧೪೭೨–೧೪೭೫)** ಅಧಿಕಾರಕ್ಕೆ ಬಂದನಾದರೂ, ಮೂರು ವರ್ಷಗಳ ನಂತರ ಅವನ ಸೋದರನಾದ **ಇಮ್ಮಡಿ ಕದಿರಪ್ಪನಾಯಕ (೧೪೭೫–೮೨)** ಸಿಂಹಾಸನವನ್ನೇರಿದನು. ತರುವಾಯ ಅವನ ಇನ್ನೊಬ್ಬ ಸೋದರ **ಎರಡನೆಯ ಮಸಲನಾಯಕ (೧೪೮೩–೧೫೦೦)** ಅಧಿಕಾರಕ್ಕೆ ಬಂದನು. ಇವನು ಪಾಪಾಘ್ನಿ ನದಿಗೆ ಒಡ್ಡು ಕಟ್ಟಿಸಿ, ಬ್ರಹ್ಮ ಸರೋವರವನ್ನು ನಿರ್ಮಿಸಿದನು. ಇವನ ನಂತರ ಅವರ ಸೋದರನಾದ **ವೀರನಾಯಕ (೧೫೦೦–೧೫೩೨)** ಅಧಿಕಾರಕ್ಕೆ ಬಂದನು. ಇವನ ನಂತರ ಅವರ ಹಿರಿಯ ಮಗನಾದ **ವಸಂತ ನಾಯಕ (೧೫೩೨–೩೭)** ಅಧಿಕಾರಕ್ಕೆ ಬಂದನು. ಅನಂತರ ಅವನ ಮಗ **ಎರಡನೆಯ ಲೊಕ್ಕನಾಯಕ (೧೫೩೭–೧೫೬೦)** ಸಿಂಹಾಸನವನ್ನು ಏರಿದನು. ಇವನು ಪೆನುಗೊಂಡೆಗೆ ವಿಧೇಯತೆಯಿಂದ ನಡೆದುಕೊಂಡು ಕೋಟೆ ದುರಸ್ತಿಗೊಳಿಸಿ ತೋರಣ ಹಾಗೂ ಅಗಸಿಗಳನ್ನು ನಿರ್ಮಿಸಿದನೆಂದು ಸ್ಥಳಪುರಾಣ ದಾಖಲಿಸಿದೆ. ಕೋಟೆಯ ಸುತ್ತ ಆಳವಾದ ಕಂದಕ ತೋಡಿಸಿ, ಅದನ್ನು ನೀರಿನಿಂದ ತುಂಬಿಸುವ ವ್ಯವಸ್ಥೆ ಮಾಡುವ ಮೂಲಕ ಗುಮ್ಮನಾಯಕನಕೋಟೆಯು ಗಿರಿದುರ್ಗದ ಜೊತೆಗೆ ಜಲದುರ್ಗವೂ ಆಗುವಂತೆ ಮಾಡಿದನು. ಕೋಟೆಯ ಪಶ್ಚಿಮ ಭಾಗದಲ್ಲಿ ನಿರ್ಮಿಸಿದ ಕೆರೆಗೆ ರಾಣಿಕೆರೆ ಎಂದೂ ಬೆಟ್ಟದ ಮೇಲ್ಗಡೆ ಕೋಟೆಯ ಮಧ್ಯಭಾಗದಲ್ಲಿ ಆಳವಾದ ಕಲ್ಯಾಣಿಯನ್ನು ನಿರ್ಮಿಸಿ ಅದಕ್ಕೆ ರಾಜರ (ದೊರಾಲ) ಬಾವಿ ಎಂದೂ ಕರೆದನು. ಇವನು ನಿರ್ಮಿಸಿದ ಅರಮನೆಯು ಮಾಳಿಗೆಯಿಂದ ಕೂಡಿದ್ದು, ಸುಸಜ್ಜಿತವಾಗಿತ್ತು.

ಇವನ ನಂತರ ಅಧಿಕಾರಕ್ಕೆ ಬಂದ **ವೀರದಾಸಪ್ಪನಾಯಕ (೧೫೬೦–೭೨)**ನು ವಿಜಯನಗರದ ಪರವಾಗಿ ರಕ್ಕಸಗಿ–ತಂಗಡಗಿ ಕಾಳಗ (೧೫೬೫)ದಲ್ಲಿ ಸಂಯುಕ್ತ ಮುಸ್ಲಿಂ ಸೇನೆಯ ವಿರುದ್ಧ ಹೋರಾಡಿದನು. ಹಂಪೆ ಪತನಾನಂತರ, ಪೆನುಗೊಂಡೆಗೆ

ವಿಧೇಯನಾಗಿದ್ದನು. ಶ್ರೀರಂಗರಾಯನಿಗೆ ಕಿರುಕುಳ ಕೊಡುತ್ತಿದ್ದ ದಿಲಾವರ್‌ಖಾನನ ವಿರುದ್ಧ ಹೋರಾಡಿ ಅವನನ್ನು ವೀರದಾಸಪ್ಪನು ಸೋಲಿಸಿದನೆಂದು ವಿಜಯನಗರದ ಶಾಸನಗಳು ದಾಖಲಿಸಿವೆ. ತತ್ಪರಿಣಾಮವಾಗಿ 'ರಾಯರ ಮಗ' ಎಂಬ ಬಿರುದನ್ನು ಇವನು ರಾಯನಿಂದ ಪಡೆದುಕೊಂಡನು. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ದುರಸ್ತಿ ಕಾರ್ಯದ ಹೊಣೆಯನ್ನು ಶ್ರೀರಂಗರಾಯನು ಇವನಿಗೆ ವಹಿಸಿದ್ದು, ಅದರಂತೆ ವೀರದಾಸಪ್ಪನು ೨೦೦೦ ಮಂದಿ ಗಾರೆ ಕೆಲಸದವರನ್ನು ಅಲ್ಲಿಗೆ ಕರೆದೊಯ್ದು, ದೇವಾಲಯದ ಪೂರ್ವ ದಿಕ್ಕಿನ ಮೂರು ಗೋಪುರಗಳನ್ನು ಸ್ವಂತ ಖರ್ಚಿನಿಂದ ನಿರ್ಮಿಸಿದನೆನ್ನಲಾಗಿದ್ದು, ಅದೇ ವರ್ಷ ಇವನು ಸಾವನ್ನಪ್ಪಿದನು.

ಅಲ್ಲಿಂದೀಚೆಗೆ ಈ ಪಾಳೇಪಟ್ಟಿನ ಸ್ಥಿತಿ ಏನಾಯಿತೆಂಬುದಕ್ಕೆ ಮಾಹಿತಿ ಲಭ್ಯವಿಲ್ಲ. ಹಯವದನರಾಯರ ಪ್ರಕಾರ **ಇಮ್ಮಡಿ ನರಸಿಂಹ ನಾಯಕನು** ಈ ಸಂತತಿಯ ಕೊನೆಯ ಅರಸನಾಗಿದ್ದು ಬಹಳ ಅಸಮರ್ಥನಿದ್ದನೆಂದು ತಿಳಿದು ಬರುತ್ತದೆ. ತತ್ಪರಿಣಾಮವಾಗಿ ರಾಜ್ಯದ ಪ್ರಮುಖರು ಸಾನಿ ನರಸಿಂಹಯ್ಯ ಎಂಬುವನನ್ನು ದಳವಾಯಿಯನ್ನಾಗಿ ನೇಮಕ ಮಾಡಿದರು. ಬಹುಚತುರನಾದ ಇವನು ಬಲುಬೇಗ ನಾಯಕನನ್ನು ಮೂಲೆಗುಂಪು ಮಾಡಿ, ಇಟಕಲ್‌ದುರ್ಗವನ್ನು ವಶಪಡಿಸಿಕೊಂಡು ತನ್ನ ಹೆಸರಿನಲ್ಲೇ ರಾಜಾಜ್ಞೆ ಹೊರಡಿಸಲಾರಂಭಿಸಿದನು. ಆದರೆ ನರಸಿಂಹನಾಯಕನ ರಾಣಿಯಾದ ರಾಮಕ್ಕ ಚತುರಳಾಗಿದ್ದು, ದಳವಾಯಿಯ ಒಳಮನಸ್ಸನ್ನು ಅರಿತು ಮರಾಠ ಪೇಶ್ವೆ ಬಾಜಿರಾಯನ ದಳಪತಿಯಾದ ಮುರಾರಿರಾಯನನ್ನು ಸಂಧಿಸಿ ಗುಪ್ತವಾಗಿ ಒಪ್ಪಂದ ಮಾಡಿಕೊಂಡು, ಅವರ ನೆರವಿನಿಂದ ಸಾನಿ ನರಸಿಂಹಯ್ಯನನ್ನು ಹತ್ಯೆಗೈಯ್ಯಲು ಯತ್ನಿಸಿದಳು. ಆದರೆ ಈ ಸಂಚು ಬಯಲಾಗಿ ದಳವಾಯಿಯು ಮರಾಠರಿಗೆ ಹಣ ನೀಡಿ ಅವರನ್ನು ಒಲಿಸಿಕೊಂಡನು. ಆದರೆ ಈ ವೈಫಲ್ಯದಿಂದ ಹಿಂಜರಿಯದ ರಾಣಿ ರಾಮಕ್ಕ, ಎಲ್ಲಾ ಸಾಮಂತರಿಗೂ ಪತ್ರ ಬರೆದು ಸ್ವತಂತ್ರ ಘೋಷಿಸಿಕೊಳ್ಳಲು ಗಂಡನ ಹೆಸರಲ್ಲಿ ಅವರಿಗೆ ಆದೇಶ ಹೊರಡಿಸಿದಳು. ಎಲ್ಲಾ ಸಾಮಂತರೂ ಒಗ್ಗೂಡಿ ೧೭೫೦ರಲ್ಲಿ ಗಡಿದಂ ಬಳಿ ದಳವಾಯಿ ನರಸಿಂಹಯ್ಯನನ್ನು ಸೋಲಿಸುವಲ್ಲಿ ಯಶಸ್ವಿಯಾದರು. ಸೋತ ದಳವಾಯಿಯನ್ನು ಗಡಿಪಾರು ಮಾಡಲಾಯಿತು. ಆದರೆ ಚಿಕ್ಕಬಳ್ಳಾಪುರದಲ್ಲಿ ನೆಲೆನಿಂತ ದಳವಾಯಿಯು ಮರುವರ್ಷವೇ ಹೃದಯಘಾತದಿಂದ ನಿಧನನಾದನು. ಏತನ್ಮಧ್ಯೆ ಗುಮ್ಮನಾಯಕನ ಪಾಳ್ಯವು ತನ್ನೆಲ್ಲ ಪ್ರಾಂತಗಳನ್ನು ಕಳೆದುಕೊಂಡು ಕೇವಲ ದುರ್ಗಕ್ಕಷ್ಟೇ ಅದರ ಆಡಳಿತ ಸೀಮಿತವಾಗಿತ್ತು. ಹೈದರಾಲಿಯು ೧೭೬೦ರಲ್ಲಿ ಗುಮ್ಮನಾಯಕನಪಾಳ್ಯದ ಮೇಲೆ ಯುದ್ಧ ಹೂಡಿ, ದುರ್ಗವನ್ನು ವಶಪಡಿಸಿಕೊಂಡು ಸೂರೆ ಮಾಡಿದನು. ನಾಯಕ ಮತ್ತವನ ರಾಣಿಯರನ್ನು ಬಂಧಿಸಿ, ಮೊದಲು ಗುರ್ರುಕೊಂಡಕ್ಕೆ ಕರೆತರಲಾಯಿತು. ಅನಂತರ ಅವರನ್ನು ಶ್ರೀರಂಗಪಟ್ಟಣಕ್ಕೆ ವರ್ಗಾಯಿಸುವಾಗ, ಮಾರ್ಗ ಮಧ್ಯದಲ್ಲಿ ನಾಯಕನು ಸಾವನ್ನಪ್ಪಿದನೆಂದು ಕೋಲಾರ ಗ್ಯಾಸೆಟಿಯರ್ (೧೯೬೮) ದಾಖಲಿಸಿದೆ. ಆದರೆ ಇನ್ನೊಂದು ಮೂಲದ ಪ್ರಕಾರ ನರಸಿಂಹನಾಯಕನು ಕೋಟೆಯಿಂದ ಪಲಾಯನ ಮಾಡಿದನು. ಹೈದರಾಲಿಯು ಬೂದಿಕೋಟೆಗೆ ವಾಪಸ್ಸಾದ ನಂತರ ನಾಯಕನು ಕೋಟೆಯ ಪುನರ್ ನಿರ್ಮಾಣಕ್ಕೆ ಯತ್ನಿಸಿದನಾದರೂ ಪ್ರಯೋಜನವಾಗಲಿಲ್ಲ. ತತ್ಪರಿಣಾಮವಾಗಿ ಹೈದರ್–ಟೀಪ್ಪುರನ್ನು ಅತಿಯಾಗಿ ದ್ವೇಷಿಸಲಾರಂಭಿಸಿದನು. ಬ್ರಿಟೀಷರು ೧೭೯೯ರಲ್ಲಿ ಟೀಪು ಮೇಲೆ ಯುದ್ಧ ಸಾರಿ ಜನರಲ್ ಹ್ಯಾರಿಸ್ಸನ ನಾಯಕತ್ವದಲ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ, ಆಂಗ್ಲರ ಪರವಾಗಿ ಗುಮ್ಮನಾಯಕನ ಪಾಳ್ಯದ ಸೇನೆ ಹೋರಾಟದಲ್ಲಿ ಭಾಗವಹಿಸಿತ್ತೆಂದು ಹೇಳಲಾಗುತ್ತದೆ. ಆದರೆ ಅನಂತರ ಈ ಪಾಳೇಪಟ್ಟಿನ ವಿಷಯ ತಿಳಿದುಬರುವುದಿಲ್ಲ. ಮೈಸೂರು ಅರಸರ ಆಳ್ವಿಕೆಯಲ್ಲಿ ಗುಮ್ಮನಾಯಕನ ಪಾಳ್ಯವು ೧೮೮೯ರವರೆಗೆ ತಾಲೂಕು ಕೇಂದ್ರವಾಗಿತ್ತು. ಅನಂತರ ತಾಲೂಕು ಕೇಂದ್ರವನ್ನು ಬಾಗೇಪಲ್ಲಿಗೆ ವರ್ಗಾಯಿಸಲಾಯಿತು. (ವಿವರಗಳಿಗೆ ಅಧ್ಯಾಯ–೧೭, ಗುಮ್ಮನಾಯಕನ ಪಾಳ್ಯ ನೋಡಿ)

## ಚಿಕ್ಕಬಳ್ಳಾಪುರದ ಪಾಳೇಗಾರರು

ಇವರು ಆವತಿ ಪ್ರಭುಗಳ ಶಾಖಾ ಮನೆತನದವರಾಗಿದ್ದು, ಅವರ ಉಗಮಕ್ಕೆ ಸಂಬಂಧಿಸಿದಂತೆ ಸ್ಥಳೀಯ ಐತಿಹ್ಯ ಈ ರೀತಿ ಇದೆ. ಸುಮಾರು ೧೪೭೮ರಲ್ಲಿ ಈ ಮನೆತನಕ್ಕೆ ಸೇರಿದ ಮಲ್ಲಭೈರೇಗೌಡನೆಂಬುವನು, ತನ್ನ ಮಗ ಮರಿಗೌಡನೊಂದಿಗೆ ಬೇಟೆಗೆಂದು ಉತ್ತರದತ್ತ ಪ್ರಯಾಣ ಮಾಡಿದನಂತೆ. ಇಂದು ಚಿಕ್ಕಬಳ್ಳಾಪುರ ಪಟ್ಟಣವಿರುವ ಸ್ಥಳದಲ್ಲಿ ಹಿಂದೆ ಇದ್ದ ಕೋಡಿಮಂಚನಹಳ್ಳಿ ಗ್ರಾಮದಲ್ಲಿ ಹುಲ್ಲೆಯೊಂದು ನಾಯಿಯ ಮೇಲೇರಿ ಹೋಗಿ ಕಾದಾಡುತ್ತಿದ್ದ ದೃಶ್ಯವನ್ನು ಕಂಡು, ಇದು ಗಂಡು ಮೆಟ್ಟಿನ ನಾಡೆಂದು ಭಾವಿಸಿದ ಅವರು ವಿಜಯನಗರದ ಅರಸರ ಒಪ್ಪಿಗೆ ಪಡೆದು ಅಲ್ಲೊಂದು ಕೋಟೆ ಕಟ್ಟಿ ಪೇಟೆಯನ್ನು ಸ್ಥಾಪಿಸಿದರಂತೆ. ಅದರಂತೆ ಚಿಕ್ಕಬಳ್ಳಾಪುರವು ಮರಿಗೌಡ ಮತ್ತವನ ವಂಶಸ್ಥರ ಅಧೀನದಲ್ಲಿ ಬಹಳ ಕಾಲ ಉಳಿಯಿತು. ಈ ಮನೆತನದವರು ಶಿಡ್ಲಘಟ್ಟವನ್ನು ಖರೀದಿಸುವ ಮೂಲಕ ತಮ್ಮ ಪಾಳೇಪಟ್ಟಿನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಕ್ರಮೇಣ ನಂದಿದುರ್ಗ, ಕಲವರದುರ್ಗ, ಗುಡಿಬಂಡೆ ಹಾಗೂ ಇಟ್ಟಲ್‌ದುರ್ಗಗಳಲ್ಲಿ ಕೋಟೆಯನ್ನು ನಿರ್ಮಿಸುವ ಮೂಲಕ ತಮ್ಮ ಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡರು.

ಚಿಕ್ಕಬಳ್ಳಾಪುರದ ಕೋಟೆ–ಪೇಟೆ ನಿರ್ಮಾಣವನ್ನು ಪೂರೈಸಿದ **ಮರಿಗೌಡನು (೧೪೭೮–೧೫೦೨)** ಸುಮಾರು ೨೪ ವರ್ಷ ರಾಜ್ಯಭಾರ ಮಾಡಿದನು.

ಅವನ ನಂತರ ಅಧಿಕಾರಕ್ಕೆ ಬಂದ **ದೊಡ್ಡಭೈರೇಗೌಡ** (೧೫೦೨–೧೬೦೫)ನು ಮೂರು ವರ್ಷ ರಾಜ್ಯಭಾರ ನಡೆಸಿದನು. ನಂತರ ಅವನ ಮಗನಾದ **ರಂಗಪ್ಪಗೌಡನು (೧೫೦೫–೧೫೪೭)** ಅಧಿಕಾರಕ್ಕೆ ಬಂದು ಸುಮಾರು ೪೨ ವರ್ಷ ಕಾಲ ರಾಜ್ಯಭಾರ ಮಾಡಿದನು. ಇವನಿಗೆ ಮಕ್ಕಳಿಲ್ಲದ ಕಾರಣ ಅವನ ಸೋದರನಾದ **ಜೋಗಿಭೈರೇಗೌಡ** (೧೫೪೭–೮೭) ಅಧಿಕಾರದ ಚುಕ್ಕಾಣಿ ಹಿಡಿದು ಸುಮಾರು ೩೦ ವರ್ಷ ಆಡಳಿತ ನಡೆಸಿದನು. ಇವನ ಉತ್ತರಾಧಿಕಾರಿಯಾಗಿ ಅಧಿಕಾರವನ್ನು ಅಲಂಕರಿಸಿದ ಅವನ ಮಗ **ದೊಡ್ಡಭೈರೇಗೌಡ** (೧೫೮೭–೧೬೨೭) ಸುಮಾರು ೪೦ ವರ್ಷ ರಾಜ್ಯಭಾರ ಮಾಡಿದನು. ಇವನಿಗೂ ಮಕ್ಕಳಿಲ್ಲದ ಕಾರಣ ಅವನ ರಾಣಿ **ವೆಂಕಟಮ್ಮಳು** (೧೬೨೭–೧೬೪೨) ಸುಮಾರು ೧೫ ವರ್ಷ ಕಾಲ ಪಾಳೇಪಟ್ಟಿನ ಆಡಳಿತವನ್ನು ನಿರ್ವಹಿಸಿದಳು. ಅವಳು ಸಾವಿನಂಚಲ್ಲಿದ್ದಾಗ, ತಾನೇ ಬಾಲ್ಯದಿಂದಲೂ ಪೋಷಿಸಿದ್ದ, ಜೋಗಿ ಭೈರೇಗೌಡನ ಮೊಮ್ಮಗನಾದ **ಇಮ್ಮಡಿ ಮರಿಗೌಡ (೧೬೪೨–೧೬೮೭)**ನೆಂಬುವನನ್ನು ಸಿಂಹಾಸನಕ್ಕೆ ತನ್ನ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿದಳೆಂದು ಹೇಳಲಾಗುತ್ತದೆ. ಆದರೆ ಇನ್ನೊಂದು ಮೂಲಕ ಪ್ರಕಾರ ಇವನು ದೇವನಹಳ್ಳಿ ಪಾಳೇಗಾರನ ಮಗನಾಗಿದ್ದು ಅವನನ್ನು ವೆಂಕಟಮ್ಮಳು ದತ್ತು ಪಡೆದು ಅಧಿಕಾರ ಗದ್ದುಗೆಗೆ ಏರಿಸಿದಳೆಂಬ ಅಭಿಪ್ರಾಯವೂ ಇದೆ. ಸುಮಾರು ೧೬೪೨ರಲ್ಲಿ ಅಧಿಕಾರಕ್ಕೆ ಬಂದ ಇವನು ೪೫ ವರ್ಷಗಳ ಕಾಲ ರಾಜ್ಯಭಾರ ನಡೆಸಿದ ನಂತರ ಕಾರಣಾಂತರವಾಗಿ ಅವನನ್ನು ಪದಚ್ಯುತಗೊಳಿಸಲಾಯಿತು. ಇವನ ಹಿರಿಯಣ್ಣ **ಅಣ್ಣೇಗೌಡ (೧೬೮೭–೧೭೦೫)**ನು ಅಧಿಕಾರಕ್ಕೆ ಬಂದು ಸುಮಾರು ೧೮ ವರ್ಷ ಆಳಿದನು. ಶಿಡ್ಲಘಟ್ಟವನ್ನು ಖರೀದಿಸಿದ ಇವನು ಅಲ್ಲೂ ಕೋಟೆ–ಪೇಟೆಗಳನ್ನು ನಿರ್ಮಾಣ ಮಾಡಿದನು. ಅಲ್ಲದೇ ಸುಮಾರು ೨೦ ಲಕ್ಷ ಪಗೋಡಗಳ ದೊಡ್ಡ ಮೊತ್ತವು ಅದೃಷ್ಟವಶಾತ್ ಇವನಿಗೆ ಲಭಿಸಿತು. ಕಾರಣಾಂತರದಿಂದ ಪದಚ್ಯುತಗೊಂಡಿದ್ದ ಇಮ್ಮಡಿ ಮರಿಗೌಡನಿಗೆ ಸಾದಲಿ ಹಾಗೂ ಇಟಿಕಲ್‌ದುರ್ಗಗಳನ್ನು ಜಹಗೀರಾಗಿ ನೀಡಿದ್ದಂತೆ ತೋರುತ್ತದೆ.

ಅಣ್ಣೆಗೌಡನ ನಂತರ ಸಿಂಹಾಸನವನ್ನು ಏರಿದ ಅವನ ಮಗ **ಹಾವಳಿ ಭೈರೇಗೌಡ (೧೭೦೫)**ನು ಕ್ರೂರ ಆಡಳಿತದಿಂದಾಗಿ ಕೇವಲ ನಾಲ್ಕು ತಿಂಗಳು ರಾಜ್ಯಭಾರ ಮಾಡಲು ಸಾಧ್ಯವಾಯಿತು. ಇವನನ್ನು ಬದಿಗೊತ್ತಿ ಅಧಿಕಾರಕ್ಕೆ ಬಂದ ಅವನ ದಾಯಾದಿ **ಬೈಚೇಗೌಡ (೧೭೦೫–೧೭೨೧)**ನು ಸುಮಾರು ೧೬ ವರ್ಷ ರಾಜ್ಯಭಾರ ನಡೆಸಿದನು. ಈತನ ಅಧಿಕಾರಾವಧಿಯಲ್ಲಿ ಮೈಸೂರು ಅರಸರು ಚಿಕ್ಕಬಳ್ಳಾಪುರ ಕೋಟೆಯನ್ನು ವಶಪಡಿಸಿಕೊಳ್ಳಲು ಯತ್ನಿಸಿ ಚಿಕ್ಕಬಳ್ಳಾಪುರಕ್ಕೆ ಮುತ್ತಿಗೆ ಹಾಕಿದರು. ಆದರೆ ಬೈಚೇಗೌಡನ ಕೋರಿಕೆಯಂತೆ ಮರಾಠರು ಅವನ ನೆರವಿಗೆ ಧಾವಿಸಿದಾಗ, ಮೈಸೂರು ಸೈನ್ಯವು ಮುತ್ತಿಗೆಯನ್ನು ಹಿಂತೆಗೆದುಕೊಂಡಿತು. ಆದರೆ ಅದಾಗಲೇ ಪಾಳೇಪಟ್ಟಿನ ಕೆಲವು ಭಾಗಗಳನ್ನು ವಶಪಡಿಸಿಕೊಂಡಿದ್ದ ಅವರು ಅದಕ್ಕೇ ತೃಪ್ತಿಪಟ್ಟುಕೊಳ್ಳಬೇಕಾಯಿತು. ಇದರ ಬೆನ್ನಲ್ಲೇ ಅವನು ಬರುಡಕುಂಟೆಯನ್ನು ಖರೀದಿಸಿ ತನ್ನ ಪಾಳೇಪಟ್ಟಿಗೆ ಸೇರಿಸಿಕೊಂಡನು. ಈ ಅವಧಿಯಲ್ಲಿ ಚಿಕ್ಕಬಳ್ಳಾಪುರದಲ್ಲಿದ್ದ ಕ್ರೈಸ್ತ ಗುರು ಸ್ವಾಮಿ ಪೋನ್‌ತೇನ ನನ್ನು ವಿರೋಧಿಸಿ ಸ್ಥಳೀಯ ಹರಿದಾಸರು (೧೦–೧–೧೭೦೯) ದೊಂಬಿಯನ್ನುಂಟು ಮಾಡಿದರೆಂದು ಜೆಸುಯಿಟ್ ಪತ್ರದಿಂದ ತಿಳಿದು ಬರುತ್ತದೆ. ಆದರೂ ಚಿಕ್ಕಬಳ್ಳಾಪುರದಲ್ಲಿ 'ನಿಜ ದೇವರ ಆಲಯ' (ಇಗರ್ಜಿ)ವನ್ನು ಆರಂಭಿಸುವಲ್ಲಿ ಯಶಸ್ವಿಯಾದರೆಂದು ತಿಳಿದುಬರುತ್ತದೆ. ಸ್ವಾಮಿ ಕರೋನರ ೧೭೨೦ರ ಪತ್ರದಿಂದ ಚಿಕ್ಕಬಳ್ಳಾಪುರಕ್ಕೆ ಅವರು ಬಂದಿದ್ದ ವಿಷಯ ಗೊತ್ತಾಗುತ್ತದೆ. ಚಿಕ್ಕಬಳ್ಳಾಪುರದ ತಿಮ್ಮಯ್ಯನೆಂಬ ಹರಿದಾಸನು ಸುಮಾರು ೧೭೩೫ರಲ್ಲಿ ಮತಾಂತರಗೊಂಡು 'ಲಿಯೋ' ಎಂಬ ಹೆಸರು ಧರಿಸಿದನೆಂದು ಇನ್ನೊಂದು ಜೆಸುಯಿಟ್ ಪತ್ರದಿಂದ ಗೊತ್ತಾಗುತ್ತದೆ. ಸುಮಾರು ೧೭೩೦–೩೯ರ ಅವಧಿಯಲ್ಲಿ ಜೆಸುಯಿಟ್ ಕಾಲ್ಮೆಟರು ಚಿಕ್ಕಬಳ್ಳಾಪುರಕ್ಕೆ ಬಂದಿದ್ದಾಗ, ಸ್ಥಳೀಯ ನೆರವಿನೊಂದಿಗೆ ಇಗರ್ಜಿಗೆ ಕಲ್ಲುಗೋಡೆ ಹಾಗೂ ಗೋಪುರಗಳನ್ನು ನಿರ್ಮಿಸಲಾಯಿತು. ಇವರು ೧೭೩೯ರಲ್ಲಿ ಗತಿಸಿದಾಗ (ಚಿಕ್ಕಬಳ್ಳಾಪುರ) ಅವರನ್ನು ಶಿಡ್ಲಘಟ್ಟದಲ್ಲಿ ಸಮಾಧಿ ಮಾಡಲಾಯಿತೆಂದು ತಿಳಿದು ಬರುತ್ತದೆ.

ಬೈಚೇಗೌಡನ ಉತ್ತರಾಧಿಕಾರಿಯಾಗಿ ಅಧಿಕಾರಕ್ಕೆ ಬಂದ **ದೊಡ್ಡ ಭೈರೇಗೌಡನು** ಆಳಿದ್ದು ಎರಡು ವರ್ಷಗಳಾದರೂ ಆ ಅವಧಿಯಲ್ಲಿ, ಮೈಸೂರು ಅರಸರು ಹಿಂದೇ ಸ್ವಾಧೀನಪಡಿಸಿಕೊಂಡಿದ್ದ ಪ್ರದೇಶಗಳನ್ನು ಅವರಿಂದ ಪುನರ್ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದನು. ಇವನ ನಂತರ ಸಿಂಹಾಸನವನ್ನು ಏರಿದ ಅವನ ಸೋದರ **ವೆಂಕಟ ನಾರಾಯಣಗೌಡ** (೧೭೨೩–೫೦)ನು ಸುಮಾರು ೩೫ ವರ್ಷ ರಾಜ್ಯಭಾರ ನಡೆಸಿದ ನಂತರ ಅವನ ಮಗನಾದ ಬೈಚೇಗೌಡನು ಅಧಿಕಾರಕ್ಕೆ ಬಂದನಾದರೂ, ಅಧಿಕಾರದಲ್ಲಿದ್ದುದು ಕೇವಲ ಒಂಬತ್ತು ತಿಂಗಳು ಮಾತ್ರ. ಇವನ ನಂತರ ಅವನ ಚಿಕ್ಕಪ್ಪನಾದ **ಚಿಕ್ಕಪ್ಪನಾಯಕ**ನು ಆಡಳಿತ

ನಡೆಸಲು ಮುಂದಾದನು. ಇವನ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನದ ಪ್ರಬಲ ಶಕ್ತಿಯಾಗಿದ್ದ ಹೈದರಾಲಿಯು ೧೭೬೨ರಲ್ಲಿ ಚಿಕ್ಕಬಳ್ಳಾಪುರದ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಳ್ಳಲು ಮೂರು ತಿಂಗಳ ಕಾಲ ಹರಸಾಹಸ ಮಾಡಿದನಾದರೂ ಸ್ವಾಧೀನಪಡಿಸಿಕೊಳ್ಳಲಾಗದ ಸಂದರ್ಭದಲ್ಲಿ ಸಂಧಿ ಏರ್ಪಟ್ಟು, ಪಾಳೇಗಾರರು ಐದು ಲಕ್ಷ ಪಗೋಡವನ್ನು ಪೊಗದಿಯಾಗಿ ನೀಡುವಂತಾಗಿ, ಚಿಕ್ಕಬಳ್ಳಾಪುರದ ಮುತ್ತಿಗೆಯನ್ನು ಹಿಂತೆಗೆದುಕೊಳ್ಳಲಾಯಿತು. ಒಪ್ಪಂದದಂತೆ ಅರ್ಧ ಮೊತ್ತವನ್ನು ಆ ಕ್ಷಣದಲ್ಲೇ ಪಾವತಿಸಲಾಯಿತು. ಉಳಿದ ಮೊತ್ತದ ವಸೂಲಾತಿಗಾಗಿ ಅಧಿಕಾರಿಯೋರ್ವನನ್ನು ಚಿಕ್ಕಬಳ್ಳಾಪುರದಲ್ಲಿ ಬಿಡಲಾಯಿತು. ಆದರೆ ಹೈದರಾಲಿಯು ಸೇನೆಯೊಂದಿಗೆ ಚಿಕ್ಕಬಳ್ಳಾಪುರದಿಂದ ನಿರ್ಗಮಿಸುತ್ತಿದ್ದಂತೆ ಚಿಕ್ಕಪ್ಪಗೌಡನು ಗುತ್ತಿಯಲ್ಲಿದ್ದ ಮರಾಠ ಸೇನಾನಿ ಮುರಾರಿರಾಯನಿಗೆ ಸಂದೇಶವನ್ನು ರವಾನಿಸಿದನು. ಸುದ್ದಿ ತಲುಪುತ್ತಿದ್ದಂತೆ ಮುರಾರಿರಾಯನು ಮರಾಠ ಸೇನಾ ತುಕಡಿಯೊಂದನ್ನು ಚಿಕ್ಕಪ್ಪನಾಯಕನ ಸಹಾಯಕ್ಕೆಂದು ಚಿಕ್ಕಬಳ್ಳಾಪುರಕ್ಕೆ ನಿಯೋಜಿಸಿದನು. ಆ ಸೇನಾ ತುಕಡಿಯ ಕಟ್ಟೆಚ್ಚರದ ಕಾವಲಿಗೆ ಚಿಕ್ಕಬಳ್ಳಾಪುರವನ್ನು ವಹಿಸಿದ ನಾಯಕನು ರಾಜಪರಿವಾರದೊಂದಿಗೆ ನಂದಿದುರ್ಗದಲ್ಲಿ ಆಶ್ರಯ ಪಡೆದನು. ಈ ಬೆಳವಣಿಗೆಯನ್ನು ತಿಳಿದ ಹೈದರಾಲಿಯು ತಕ್ಷಣವೇ ಚಿಕ್ಕಬಳ್ಳಾಪುರಕ್ಕೆ ಮರು ಮುತ್ತಿಗೆ ಹಾಕಿ ಕೋಟೆಯನ್ನು ವಶಪಡಿಸಿಕೊಂಡು ಅದರ ರಕ್ಷಣೆಗೆ ನಿಯೋಜಿಸಲ್ಪಟ್ಟಿದ್ದ ಮರಾಠ ಸೈನಿಕರನ್ನು ತೀವ್ರವಾಗಿ ಶಿಕ್ಷಿಸಿದನು. ಅದರ ಬೆನ್ನಲ್ಲೇ ನಂದಿದುರ್ಗ, ಕಳವಾರದುರ್ಗ, ಗುಡಿಬಂಡೆ, ಇಟಿಕಲ್‌ದುರ್ಗ ಹಾಗೂ ಕೋಟೆಕೊಂಡಗಳಿಗೂ ಮುತ್ತಿಗೆ ಹಾಕಿ ಅವನ್ನೂ ಸ್ವಾಧೀನಪಡಿಸಿಕೊಂಡನು. ಚಿಕ್ಕಬಳ್ಳಾಪುರದ ಪಾಳೇಗಾರ ಚಿಕ್ಕಪ್ಪಗೌಡ ಮತ್ತವನ ಕುಟುಂಬದವರನ್ನು ಬಂಧಿಸಿ, ಬೆಂಗಳೂರಿನ ಸೆರೆಮನೆಯಲ್ಲಿಡಲಾಯಿತು. ಸೆರೆಮನೆಯಲ್ಲೇ ನಿಧನಹೊಂದಿದ ಚಿಕ್ಕಪ್ಪಗೌಡನಿಗೆ ಮಕ್ಕಳಿರಲಿಲ್ಲ. ಮುಂದೆ ಪಾಳೇಗಾರನ ಕುಟುಂಬದ ಇತರ ಬಂಧಿಗಳನ್ನು ಕೊಯಮತ್ತೂರಿನ ಸೆರೆಮನೆಗೆ ಸ್ಥಳಾಂತರಿಸಲಾಯಿತು. ಸ್ವಲ್ಪ ಕಾಲ ಗ್ರಹಣಗ್ರಸ್ಥವಾಗಿದ್ದ ಈ ಪಾಳೇಪಟ್ಟಿಗೆ ಲಾರ್ಡ್ ಕಾರ್ನ್‌ವಾಲೀಸನು ನಾರಾಯಣಗೌಡನೆಂಬುವನನ್ನು ನೇಮಿಸುವ ಮೂಲಕ ಅದಕ್ಕೆ ಮರುಜೀವ ನೀಡಿದನು. ಆದರೆ ಈ ಸಮಾಚಾರವನ್ನು ತಿಳಿದ ಟೀಪು ತಕ್ಷಣವೇ ಚಿಕ್ಕಬಳ್ಳಾಪುರದ ಮೇಲೇರಿ ಬಂದು ಮುತ್ತಿಗೆ ಹಾಕಿದಾಗ ಅಲ್ಪವಿರೋಧವನ್ನು ಎದುರಿಸಿದನಾದರೂ ಅಂತಿಮವಾಗಿ ಚಿಕ್ಕಬಳ್ಳಾಪುರ ಕೈವಶವಾಯಿತು. ಬ್ರಿಟೀಷರು ೧೭೯೧ರಲ್ಲಿ ನಂದಿದುರ್ಗವನ್ನು ವಶಪಡಿಸಿಕೊಂಡ ನಂತರ, ಸ್ವಲ್ಪ ಕಾಲ ಅದರ ನಿಯಂತ್ರಣವನ್ನು ಪಾಳೇಗಾರನು ಹೊಂದಿದ್ದನು. ಆದರೆ ಟೀಪು–ಬ್ರಿಟೀಷರ ನಡುವೆ ಸಂಧಾನ ಏರ್ಪಟ್ಟ ಪರಿಣಾಮವಾಗಿ ಚಿಕ್ಕಬಳ್ಳಾಪುರದ ಪಾಳೇಗಾರನು ಅಧಿಕಾರವಿಹೀನನಾದನು. ಇದರೊಂದಿಗೆ ಚಿಕ್ಕಬಳ್ಳಾಪುರದ ಪಾಳೇಪಟ್ಟಿನ ಅವಸಾನವಾಯಿತು.

**ಸುಗುಟೂರು ಪಾಳೇಗಾರರು**

ಸುಗುಟೂರು ನಾಡಪ್ರಭುಗಳೆಂದೇ ಖ್ಯಾತರಾಗಿರುವ ಇವರು ತಮ್ಮೇಗೌಡ ಇಲ್ಲವೇ ತಿಮ್ಮೇಗೌಡ ಎಂಬ ಬಿರುದನ್ನು ಸಾಮಾನ್ಯವಾಗಿ ಧರಿಸುತ್ತಿದ್ದ ಅಂಶ ಅವರ ಶಾಸನಗಳಿಂದ ವೇದ್ಯವಾಗುತ್ತದೆ. ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆಗೆ ಅನತಿ ದೂರದಲ್ಲಿರುವ ಸುಗುಟೂರು ಪ್ರಾಚೀನ ಊರಾಗಿದ್ದು, ಚೋಳರ ಕಾಲಕ್ಕಾಗಲೇ ಪ್ರಮುಖ ನೆಲೆಯಾಗಿದ್ದ ಅಂಶ ಸುಗುಟೂರಿನಲ್ಲಿ ಪತ್ತೆಯಾಗಿರುವ ಚೋಳ ಶಾಸನಗಳಿಂದ ವೇದ್ಯವಾಗುತ್ತದೆ. ಅಂತಹ ಚಾರಿತ್ರಿಕ ಮಹತ್ವದ ಊರಾಗಿದ್ದ ಸುಗುಟೂರನ್ನು ಈ ಪ್ರಭುಗಳು ತಮ್ಮ ರಾಜಧಾನಿ ಪಟ್ಟಣವನ್ನಾಗಿ ಮಾಡಿಕೊಂಡಿದ್ದು ಸದಂರ್ಭೋಚಿತವಾಗಿತ್ತು. ಇವರ ಆಳ್ವಿಕೆಗೆ ಜಿಲ್ಲೆಯ ಕೋಲಾರ, ಮುಳಬಾಗಿಲು ಹಾಗೂ ಶಿಡ್ಲಘಟ್ಟ ತಾಲೂಕು ಭಾಗಗಳು ಒಳಪಟ್ಟಿದ್ದು, ಹೊಸಕೋಟೆ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಪಟ್ಟಣವನ್ನು ಹುಟ್ಟುಹಾಕಿದ್ದು, ಈ ಪಾಳೇಗಾರರ ವಂಶಸ್ಥರೇ. ಸುಮಾರು ೧೪೫೧ರಿಂದ ೧೬೮೯ರ ಕಾಲಾವಧಿಗೆ ಸೇರಿದ ಇವರ ಅನೇಕ ಶಾಸನಗಳು ಜಿಲ್ಲೆಯಲ್ಲಿ ಲಭಿಸಿವೆ.

ಈ ಮನೆತನದ ಮೂಲಕ್ಕೆ ಸಂಬಂಧಿಸಿದಂತೆ ನಾಲ್ಕಾರು ಐತಿಹ್ಯಗಳಿವೆ. ಅವುಗಳಲ್ಲೊಂದು ಸುಗುಟೂರು ಪ್ರಭುಗಳ ಮೂಲಪುರುಷನನ್ನು ಪಾಲಾರ್ ನದಿಯ ಪೂರ್ವದ ಅಲಕೂರ ಬಳಿಯ ವಡೇರಹಳ್ಳಿ ಗ್ರಾಮದ ದೇವಪ್ಪಗೌಡನೊಂದಿಗೆ ಸಮೀಕರಿಸುತ್ತದೆ. ಅವನಿಗಿದ್ದ ತಮ್ಮಪ್ಪಗೌಡ ಹಾಗೂ ಬಯ್ಯಮ್ಮರೆಂಬ ಮಕ್ಕಳಲ್ಲಿ ಬಯ್ಯಮಳ ಸೌಂದರ್ಯಕ್ಕೆ ಮನಸೋತ ಕಂಚಿಯ ರಾಜನು ಆಕೆಯನ್ನು ವಿವಾಹವಾಗ ಬಯಸಿದನಂತೆ. ಇದಕ್ಕೆ ಸಮ್ಮತಿಸದ ದೇವಪ್ಪಗೌಡನು ತನ್ನ ಸೋದರರು ಹಾಗೂ ಬಂಧುಮಿತ್ರರೊಡನೆ ಚರ್ಚಿಸಿ, ಗುಟ್ಟಾಗಿ ಊರನ್ನು ತ್ಯಜಿಸಿ ಪಾಲಾರ್ ನದಿಯನ್ನು ದಾಟಿ, ಶಿಡ್ಲಘಟ್ಟ ತಾಲೂಕಿನ ಜಂಗಮಕಟ್ಟೆ ಬಳಿ ಆಯಕಟ್ಟಾದ ಸ್ಥಳದಲ್ಲಿ ಊರನ್ನು ಕಟ್ಟಿ ನೆಲೆಸಿದರಂತೆ. ಊರ ಸುತ್ತ ಸುರಗುತ್ತಲಿಯ ಬೇಲಿಯನ್ನು ಕಟ್ಟಿದ್ದರಿಂದ ಊರಿಗೆ

ಸುರಗುತ್ತಲಿಯೂರು>ಸುರಗುತ್ತಲೂರು>ಸುಗುಟೂರು ಎಂಬ ಹೆಸರು ಬಂತೆಂದು ಹೇಳಲಾಗುತ್ತದೆ. ಇನ್ನೊಂದು ಐತಿಹ್ಯದ ಪ್ರಕಾರ ಕಂಚಿಯ ಬಳಿಯಿರುವ ಯಣಮಂಜಿ ಪುತ್ತೂರಿನಲ್ಲಿ ರಣಭೈರೇಗೌಡ ಮತ್ತವನ ಐವರು ಸೋದರರು ನೆಲೆಸಿದ್ದರು. ರಣಭೈರೇಗೌಡನ ಮಗಳಾದ ದೊಡ್ಡಮ್ಮಳ ಮೇಲೆ ಸ್ಥಳೀಯ ಪಾಳೇಗಾರನ ದುಷ್ಟ ಕಂಗಳು ಬಿದ್ದ ಪರಿಣಾಮವಾಗಿ ರಣಭೈರೇಗೌಡ ಮತ್ತವನ ಪರಿವಾರದವರು ದೊಡ್ಡಮ್ಮಳೊಂದಿಗೆ ಊರನ್ನು ತ್ಯಜಿಸಿ ಉತ್ತರಕ್ಕೆ ಪ್ರಯಾಣಿಸಿ, ಪಾಲಾರ್ ನದಿಯನ್ನು ದಾಟಿ ಆವತಿ ಎಂಬಲ್ಲಿಗೆ ಬಂದು ತಂಗಿದರಂತೆ. ಅಲ್ಲಿ ಗುಪ್ತ ನಿಧಿ ದೊರೆಯಲು ಆವತಿ ಪ್ರದೇಶವನ್ನು ಅಭಿವೃದ್ಧಿಪಡಿಸಿ, ಆವತಿ ನಾಡ ಪ್ರಭುಗಳಾದರಂತೆ. ಕ್ರಮೇಣ ಈ ಸೋದರರು ದೇವನಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಯಲಹಂಕ ಮುಂತಾದೆಡೆಗಳಲ್ಲಿ ಪ್ರತ್ಯೇಕ ಪಾಳೇಪಟ್ಟು ನಿರ್ಮಿಸಿದರಂತೆ. ಅದರಲ್ಲಿ ತಿಮ್ಮೇಗೌಡನೆಂಬುವನ್ನು ಜಂಗಮಕೋಟೆ ಬಳಿಯ ಸುಗುಟೂರಿನಲ್ಲಿ ರಾಜ್ಯ ಕಟ್ಟಿದನೆಂದು ತಿಳಿದುಬರುತ್ತದೆ. ಮತ್ತೊಂದು ಐತಿಹ್ಯದ ಪ್ರಕಾರ ಕಂಚಿ ಸಮೀಪದ ಮುದ್ವಾರಪುರದ ಸೀತಾಗೌಡನೆಂಬುವನು ಸಮೀಪದ ಬಂಧುಗಳನ್ನೊಳಗೊಂಡ ಏಳು ಕುಟುಂಬಗಳೊಡನೆ ಚಿತ್ತೂರು ತಾಲೂಕಿನ ವಾರಿಗಪಲ್ಲಿಗೆ ಬಂದು ನೆಲೆಸಿದನಂತೆ. ಅಲ್ಲಿ ಕೆಲಕಾಲವಿದ್ದ ನಂತರ ಸುಮಾರು ೧೫೨೦ರಲ್ಲಿ ಸುಗುಟೂರಿಗೆ ಬಂದು ನೆಲೆಸಿ, ಊರನ್ನು ಅಭಿವೃದ್ಧಿಪಡಿಸಿ ಕೋಟೆ ಕಟ್ಟಿಸಿ, ಚನ್ನಕೇಶವನ ಗುಡಿ ಕಟ್ಟಿಸಿದನಂತೆ. ಮುಂದೆ ಇವನ ವಂಶಕ್ಕೆ ಸೇರಿದ ತಿಮ್ಮಯ್ಯಗೌಡನೆಂಬುವನು ಕೋಲಾರ ಸುತ್ತಮುತ್ತಲ ಪ್ರದೇಶವನ್ನು ವಶಪಡಿಸಿಕೊಂಡು ಕೋಟೆ–ಕೊತ್ತಲ ನಿರ್ಮಿಸಿದನೆಂದು ಗೊತ್ತಾಗುತ್ತದೆ. ಇನ್ನೊಂದು ಐತಿಹ್ಯದ ಪ್ರಕಾರ ಆವತಿ ನಾಡ ಪ್ರಭುಗಳ ಸೋದರನಾದ ತಮ್ಮೇಗೌಡನು ವಿಜಯನಗರದರಸರ ಕೃಪೆಗೆ ಪಾತ್ರನಾಗಿ ಸುಗುಟೂರು ನಾಡಪ್ರಭು ಎಂದೆನಿಸಿಕೊಂಡನೆಂದೂ, ಸುಗುಟೂರು ಬಳಿ, ಗುಪ್ತನಿಧಿಯನ್ನು ಕಂಡುಹಿಡಿದನಾದರೂ ಸ್ವಾಧೀನಪಡಿಸಿಕೊಳ್ಳಲು ಅಡ್ಡಿಯುಂತಾಯಿತೆಂದು ತಿಳಿದುಬರುತ್ತದೆ. ಆದರೆ ಮುಂದೆ ಮುಸ್ಲಿಮರ ವಿರುದ್ಧ ಕೆಚ್ಚಿನಿಂದ ಹೋರಾಡಿ ಸಾರ್ವಭೌಮನ ಪ್ರಶಂಸೆಗೆ ಪಾತ್ರನಾಗಿ 'ರಾಯಲು' 'ಚಿಕ್ಕರಾಯ' ಎಂಬ ಬಿರುದನ್ನು ಗಳಿಸಿದನೆಂದು ಗೊತ್ತಾಗುತ್ತದೆ. ಈ ಎಲ್ಲಾ ಐತಿಹ್ಯಗಳಲ್ಲಿ ಸುಗುಟೂರು ಪಾಳೇಗಾರರ ಪೂರ್ವಿಕರು ಕಂಚಿ ಕಡೆಯಿಂದ ವಲಸೆ ಬಂದವರೆಂಬ ಅಂಶ ಸಾಮಾನ್ಯವಾಗಿರುವುದು ಗಮನಾರ್ಹವಾಗಿದೆ. ಆದರೆ ಇವರು ಮೂಲತಃ ಕೋಲಾರ ಜಿಲ್ಲೆಯ ಮುಳಬಾಗಿಲು–ಬಂಗಾರಪೇಟೆ ಪ್ರದೇಶದವರಾಗಿರುವ ಸಾಧ್ಯತೆಗಳಿವೆ.

ಸುಗುಟೂರು ಪ್ರಭುಗಳ ಮೂಲಪುರುಷನನ್ನು ಶಾಸನಾಧಾರಗಳ ಮೇಲೆ **ದೇವಪ್ಪಗೌಡ**ನೆಂದು ಹೇಳಬಹುದಾಗಿದ್ದು, ಇಮ್ಮಡಿ ಹರಿಹರ (೧೩೭೭–೧೪೦೪)ನ ಕಾಲದಲ್ಲಿ ನಾಗಣ್ಣ ಒಡೆಯನ ಮಗನಾದ ದೇವಯ್ಯ ಒಡೆಯನೆಂಬುವನು ಸೇನಾಪತಿಯಾಗಿದ್ದ ಅಂಶ ನೆರೆಯ ಹೊಸಕೋಟೆ ತಾಲೂಕಿನ ಶಾಸನವೊಂದರಿಂದ ಗೊತ್ತಾಗುತ್ತದೆ. ಆದರೆ ಸುಗುಟೂರು ಪಾಳೇಗಾರರ ಆಳ್ವಿಕೆಯನ್ನು ನೇರವಾಗಿ ಉಲ್ಲೇಖಿಸುವ ಪ್ರಾಚೀನತಮ ಶಾಸನವು ಮಾಲೂರು ತಾಲೂಕಿನ ಜೋಡಿಪುರ ಗ್ರಾಮದಲ್ಲಿ ಲಭ್ಯವಿದೆ. ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ ಈ ಶಾಸನವು ಸುಗುಟೂರಿನ ತಮ್ಮೇಗೌಡನದ್ದಾಗಿದ್ದು, ಅದರಲ್ಲಿ ಅವನ ತಂದೆ ದೇವಪ್ಪಗೌಡನ ಉಲ್ಲೇಖವಿರುವುದು ಗಮನಾರ್ಹ. ಈ ದೇವಪ್ಪಗೌಡನನ್ನು ಉಲ್ಲೇಖಿಸುವ ಇನ್ನೊಂದು ಶಾಸನವು ಚಿಂತಾಮಣಿ ತಾಲೂಕಿನ ವಡಿಗೇನಹಳ್ಳಿ(ಬೇಚಿರಾಕ್)ಯಲ್ಲಿದೆ. ಈ ಶಾಸನವನ್ನು ಆತನ ಮೊಮ್ಮಗನಾದ ಚಿಕ್ಕರಾಯ ತಮ್ಮೇಗೌಡನು ನೀಡಿದ್ದಾನೆ. ದೇವಪ್ಪಗೌಡನು ೧೪ನೆಯ ಶತಮಾನದ ಕೊನೆಯ ದಶಕದಿಂದ ೧೪೨೧ರವರೆಗೆ ಸುಗುಟೂರು ಸುತ್ತಮುತ್ತಲಿನ ಪ್ರದೇಶವನ್ನು ಮಾತ್ರ ಆಳುತ್ತಿದ್ದಂತೆ ತೋರುತ್ತದೆ. ಇವನ ನಂತರ ಅವನ ಮಗನಾದ **ತಮ್ಮಪ್ಪಗೌಡನು (೧೪೨೨–೧೪೬೪)** ೧೪೨೨ರಿಂದ ರಾಜ್ಯಭಾರ ಮಾಡಲಾರಂಭಿಸಿದ ಅಂಶ ಮಾಲೂರು ತಾಲೂಕಿನ ಜೋಡಿಪುರ ಗ್ರಾಮದ ಶಾಸನದಿಂದ ಗೊತ್ತಾಗುತ್ತದೆ. ತನ್ನ ತಂದೆ ದೇವಪ್ಪಗೌಡನಿಗೆ ಧರ್ಮವಾಗಲೆಂದು ದಾನಬಿಟ್ಟ ಅಂಶವನ್ನು ಈ ಶಾಸನವು ದಾಖಲಿಸುತ್ತಿದ್ದು, ಇದರಿಂದ ದೇವಪ್ಪಗೌಡನು ಸುಮಾರು ೧೪೨೨ರಲ್ಲಿ ಸತ್ತಿರಬಹುದೆಂದು ತರ್ಕಿಸಬಹುದಾಗಿದೆ. ತಮ್ಮಪ್ಪಗೌಡನು ೧೪೬೪ಕ್ಕೆ ಮೊದಲೇ ಕೋಟೆಯನ್ನು ನಿರ್ಮಿಸುವ ಮೂಲಕ ಹೊಸಕೋಟೆಯನ್ನು ಹುಟ್ಟುಹಾಕಿ, ಗುರು ನಿಜಗುಣ ಸುಜ್ಞಾನಸ್ವಾಮಿಗೆ ಹೊಸಹಳ್ಳಿಯನ್ನು ದತ್ತಿಬಿಟ್ಟ ಅಂಶ, ಹೊಸಕೋಟೆಯ ತಾಮ್ರ ಶಾಸನದಿಂದ ಗೊತ್ತಾಗುತ್ತದೆ. ಸುಮಾರು ನಾಲ್ಕು ದಶಕಕ್ಕೂ ಅಧಿಕ ಕಾಲ ರಾಜ್ಯಭಾರ ನಡೆಸಿದ ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಲಭಿಸಿರುವ ಪುರಾವೆ ಅತ್ಯಲ್ಪ. ಇವನ ನಂತರ ಅಧಿಕಾರಕ್ಕೆ ಬಂದ ಅವನ ಮಗ **ಚಿಕ್ಕರಾಯ ತಮ್ಮೇಗೌಡ(೧೪೬೯–೧೫೪೨)**ನ ಆಳ್ವಿಕೆಯಡಿ ಸುಗುಟೂರು ರಾಜ್ಯವು ನಾಲ್ಕು ದಿಕ್ಕಲ್ಲೂ ವಿಸ್ತರಿಸಲ್ಪಟ್ಟಿತು. ಮುಸ್ಲಿಮರು ಪೆನುಗೊಂಡೆಗೆ ಮುತ್ತಿಗೆ ಹಾಕಿದಾಗ, ತನ್ನ ಶೌರ್ಯ ಮೆರೆದು ಅವರನ್ನು ಹಿಮ್ಮೆಟ್ಟಿಸುವ ಮೂಲಕ ನರಸಿಂಗರಾಯನಿಂದ 'ಗಂಡಪೆಂಡೇರ' ಎಂಬ ವಿಶಿಷ್ಟ ಕಾಲಂದುಗೆಯನ್ನು ಇವನು ಪಡೆದನೆಂದು ತಿಳಿದುಬರುತ್ತದೆ. ಬಿಲ್ಲಗೊಂಡನಹಳ್ಳಿ (ಇಂದಿನ

ಸರ್ಜಾಪುರ) ಯಲ್ಲಿ ಈತನು ಸುಂದರವಾದ ಚನ್ನಕೇಶವ ದೇವಾಲಯವನ್ನು ೧೫೨೭ರಲ್ಲಿ ನಿರ್ಮಿಸಿದ್ದನೆಂದು ತಿಳಿದುಬರುತ್ತದೆ. ವೀರಾಂಬಿಕೆ ಇವನ ರಾಣಿಯಾಗಿದ್ದು ಹಲಸಮ್ಮ ಎಂಬ ಸೋದರಿಯೂ ಇವನಿಗಿದ್ದಳು. ಸುಮಾರು ಏಳು ದಶಕಗಳ ಸುದೀರ್ಘ ಆಳ್ವಿಕೆಯ ನಂತರ ಇವನ ಮಗನಾದ **ಇಮ್ಮಡಿ ತಮ್ಮೇಗೌಡನು (೧೫೪೨–೧೬೦೮)** ಅಧಿಕಾರಕ್ಕೆ ಬಂದನು. ಈತನ ಗಂಡು ಮಕ್ಕಳಲ್ಲಿ ಒಬ್ಬನಾದ ಅಯ್ಯಪಗೌಡನು ಮುಳಬಾಗಿಲು ಹಾಗೂ ಕೋಲಾರ ಪ್ರದೇಶವನ್ನು ಆಳುತ್ತಿದ್ದನು. ಗುಮ್ಮಳಾಪುರದಿಂದ ವರದಿಯಾಗಿರುವ ೧೫೭೪ರ ಶಾಸನದಿಂದ ಗುಮ್ಮಳಾಪುರದ ವೀರಮಾಹೇಶ್ವರರು ವೆಂಕಟೇಶ್ವರ ಉಪಾಧ್ಯಾಯ ಎಂಬ ಬ್ರಾಹ್ಮಣನಿಗೆ ಭೂದಾನ ನೀಡಿದ ಅಂಶ ಗೊತ್ತಾಗುತ್ತದೆ. ಇಮ್ಮಡಿ ತಮ್ಮೇಗೌಡನ ಮರಣಾನಂತರ ಅವನ ಮಗನಾದ **ಮುಮ್ಮಡಿ ತಮ್ಮೇಗೌಡ (೧೬೦೮–೧೬೪೨)** ಅಧಿಕಾರಕ್ಕೆ ಬಂದನು. ಆದರೆ ಇವನನ್ನು ಅವನ ಸೋದರ ಅಯ್ಯಪಗೌಡನು ಪದಚ್ಯುತಗೊಳಿಸಿ, ಹೊಸಕೋಟೆ, ಬಿಲಗೊಂಡನಹಳ್ಳಿ ಮುಂತಾದ ಪ್ರದೇಶಗಳನ್ನು ಆಕ್ರಮಿಸಿಕೊಂಡನು. ಆದರೆ ಈ ದುರಾಕ್ರಮಣವನ್ನು ನಿಯಂತ್ರಿಸಲು ಮುಂದಾದ ನೆರೆಯ ಬೆಂಗಳೂರಿನ ಪಾಳೇಗಾರ, ಇಮ್ಮಡಿ ಕೆಂಪೇಗೌಡನು ೧೬೧೨ರಲ್ಲಿ ಅಯ್ಯಪಗೌಡನನ್ನು ಕೊಂದು ಹೊಸಕೋಟೆಯಲ್ಲಿ ಮುಮ್ಮಡಿ ತಮ್ಮೇಗೌಡನನ್ನು ಪುನರ್ ಪ್ರತಿಷ್ಠಾಪಿಸಿದನು. ಸ್ವತಃ ಕವಿಯಾಗಿದ್ದ ಮುಮ್ಮಡಿ ತಮ್ಮೇಗೌಡನು ತ್ರಿಭಾಷೆ (ಕನ್ನಡ, ತೆಲುಗು ಹಾಗೂ ಸಂಸ್ಕೃತ) ಗಳಲ್ಲಿ ಸಾಹಿತ್ಯ ರಚಿಸಿರುವನೆಂದು ತಿಳಿದುಬರುತ್ತದೆ. ಈತನ ಆಶ್ರಯದಲ್ಲಿ ಅನೇಕ ಕವಿಗಳಿದ್ದರು. ಈತನು ತೆಲುಗು ಭಾಷೆಯಲ್ಲಿ ರಾಜೇಂದ್ರ ಚೋಳ ಚರಿತ್ರೆ, ಕುಮಾರಾರ್ಜುನೀಯ, ಸೌಂದರೇಶಚರಿತ ಎಂಬ ಕೃತಿಗಳನ್ನು ರಚಿಸಿದ್ದನೆಂದು ತಿಳಿದು ಬರುತ್ತದೆ. ಅಲ್ಲದೇ ಕನ್ನಡದಲ್ಲಿ 'ನಂದಿನಾಥ ಚರಿತೆ' ಎಂಬ ಯಕ್ಷಗಾನವನ್ನೂ 'ಶಂಕರ ಸಂಹಿತೆ' ಎಂಬ ಷಟ್ಪದಿ ಕೃತಿಯನ್ನೂ ರಚಿಸಿದ್ದಾನೆ. ಮಿಗಿಲಾಗಿ ಸಂಸ್ಕೃತದಲ್ಲೂ ಈತ ಕೃತಿ ರಚಿಸಿದ್ದಾನೆ.

ಸುಮಾರು ೧೬೩೮ರಲ್ಲಿ ಬಿಜಾಪುರದ ದಂಡನಾಯಕ ರಣದುಲ್ಲಾಖಾನನ ಧಾಳಿಗೆ ಈಡಾದ ಕೋಲಾರ, ಹೊಸಕೋಟೆ ಮುಂತಾದ ಪ್ರದೇಶಗಳು ನಂತರ ಮರಾಠ ಸರದಾರ ಷಹಾಜಿಗೆ ಜಹಗೀರಾಗಿ ನೀಡಲ್ಪಟ್ಟವು. ಆಗ ಏರ್ಪಟ್ಟ ಕರಾರಿನಂತೆ ಸುಗುಟೂರು, ಹೊಸಕೋಟೆ, ಜಂಗಮಕೋಟೆ ಹಾಗೂ ಕೋಲಾರ ಪ್ರದೇಶಗಳನ್ನು ತನ್ನದಾಗಿಸಿಕೊಂಡ ಷಹಾಜಿಯು, ಸುಗುಟೂರು ಪಾಳೇಗಾರರ ವಂಶದ ಕುಡಿ, ಬಾಲಕ ಚಿಕ್ಕರಾಯ ಬಸವಗೌಡನ ಪೋಷಣೆಯ ಹೊಣೆ ಹೊತ್ತಿದ್ದ, ಅವನ ಸೋದರತ್ತೆ ಹಲಸಮ್ಮನಿಗೆ ಪುಂಗನೂರು ಮುಂತಾದ ಪ್ರದೇಶಗಳನ್ನೂ ಹಾಗೂ ಹೊಸಕೋಟೆಯನ್ನು ಆಳುತ್ತಿದ್ದ ಮುಮ್ಮಡಿ ಚಿಕ್ಕರಾಯ ತಮ್ಮೇಗೌಡನಿಗೆ ಹೊಸಕೋಟೆಯಿಂದ ದಕ್ಷಿಣಕ್ಕಿದ್ದ ಆನೆಮಲ್ಲೆ ಪ್ರದೇಶವನ್ನೂ ಜಹಗೀರಾಗಿ ನೀಡಿದನು. ತತ್ಪರಿಣಾಮವಾಗಿ ಇಂದಿನ ಆನೇಕಲ್ ಪಟ್ಟಣ ತಲೆ ಎತ್ತುವಂತಾಯಿತು.

ಇವನ ನಂತರ ಅವನ ಮಗ **ಮುಮ್ಮಡಿ ತಮ್ಮೇಗೌಡನು (೧೬೪೨–೭೦)** ರಾಜನಾದನು. ೧೬೬೪ರಲ್ಲಿ ಷಹಾಜಿಯು ಗತಿಸಿ, ೧೬೭೫ರಲ್ಲಿ ಅವನ ಕಿರಿಯ ಮಗ ವೆಂಕೋಜಿಯು ತಂಜಾವೂರನ್ನು ಗೆದ್ದನು. ಆ ಸಂದರ್ಭದಲ್ಲಿ ಬಹುಶಃ ಕಪ್ಪಕಾಣಿಕೆ ಸಂದಾಯ ಕರಾರಿನ ಮೇಲೆ ಹೊಸಕೋಟೆ ಸುಗುಟೂರು ಪ್ರದೇಶಗಳನ್ನು ಸುಗುಟೂರು ಪಾಳೇಗಾರರಿಗೆ ಹಿಂತಿರುಗಿಸಿದಂತೆ ತೋರುತ್ತದೆ.

**ಇಮ್ಮಡಿ ಚಿಕ್ಕರಾಯ ಚಿಕ್ಕತಮ್ಮೇಗೌಡ (೧೬೭೦–೧೬೯೩)**ನು ಮರಾಠರ ಅಧೀನ ಅರಸನಾಗಿ ಆಳ್ವಿಕೆ ಮುಂದುವರಿಸಿದಂತೆ ತೋರುತ್ತಿದ್ದು, ೧೬೮೬ರಲ್ಲಿ ಹೊಸಕೋಟೆ ಪ್ರದೇಶವು ಮೊಘಲರ ವಶವಾಯಿತು. ಶಿರಾ ಪಟ್ಟಣವು ಪ್ರಾಂತೀಯ ಕೇಂದ್ರವಾಗಿ ಮಾರ್ಪಟ್ಟು, ಅಲ್ಲಿಂದ ಖಾಸಿಂಖಾನನು ಪ್ರಾಂತಾಧಿಕಾರಿಯಾಗಿ ಮೊಘಲರ ಪರವಾಗಿ ಆಡಳಿತ ನಡೆಸಿದನು. ಮುಳಬಾಗಿಲು ಭಾಗದ ೧೬೮೮ರ ಶಾಸನವೊಂದು ಯೂಸೂಫ್ ಜಿ ಎಂಬ ಮುಸ್ಲಿಂ ಸೈನಿಕನ ಪರಾಕ್ರಮಕ್ಕಾಗಿ ಆತನಿಗೆ ದತ್ತಿ ಬಿಟ್ಟ ವಿವರವನ್ನು ದಾಖಲಿಸಿದೆ. ಸುಮಾರು ೧೬೯೩ರ ನಂತರದ ಶಾಸನಗಳಲ್ಲಿ ಮುಮ್ಮಡಿ ಚಿಕ್ಕರಾಯ ತಮ್ಮೇಗೌಡನ ಪ್ರಸ್ತಾಪವಿದೆ. ಅನಂತರವೂ ಈ ಮನೆತನದ ಆಡಳಿತ ೧೮೦೦ರವರೆಗೂ ಮುಂದುವರಿದು, ಆನೇಕಲ್ ಅವರ ರಾಜಧಾನಿಯಾಗಿ ಮಹತ್ವದ ಪಾತ್ರವಹಿಸಿತು.

ಈ ಪಾಳೇಗಾರರ ಶಾಸನಗಳಲ್ಲಿ ಕಂಡು ಬರುವ ಸುಗುಟೂರು ಸೀಮೆ, ಕೋಳಾಲ ಸೀಮೆ, ಮುಳುವಾಯಿ ಸೀಮೆಗಳು ಕೋಲಾರ ಜಿಲ್ಲಾ ಪ್ರದೇಶದಲ್ಲಿದ್ದ ಪ್ರಮುಖ ಆಡಳಿತ ಘಟಕಗಳಾಗಿದ್ದವು. ಸುಗುಟೂರಿನ ಚನ್ನಕೇಶವ ದೇವಾಲಯ ಇವರ ಕಾಲದ ನಿರ್ಮಿತಿಯಾಗಿದೆ. ಸುಮಾರು ೧೫೦೦ರಲ್ಲಿ ಚಿಕ್ಕರಾಯ ತಮ್ಮೇಗೌಡನ ಅಕ್ಕ ಹಲಸಮ್ಮಳು, ಆವನಿ ಬೆಟ್ಟದ ಧನುಷ್ಕೋಟಿ ತೀರ್ಥದ

ಉತ್ತರದ ಬಂಡೆಯ ಮೇಲೆ ಕಾಣಸಿಗುವ, ‘ದೇವತೆಗಳು ಬಂದು ಸೀತಾಭಗವತಿಗೆ ಪ್ರಸನ್ನವಾದ ಸ್ಥಳ’ ಎಂದು ಉಲ್ಲೇಖಿಸುವ ಶಾಸನದ ಬಳಿ, ೧೬ ದೇವತೆಗಳ ಏಕಪಾದ ಶಿಲ್ಪಗಳನ್ನು ರೇಖಿಸಿ, ಅವುಗಳ ಕೆಳಗೆ ವಿಷ್ಣು, ರುದ್ರ, ರಾಮ, ಸೀತೆ, ಕಾರ್ತಿಕೇಯ, ಕಾಮದೇವ, ದಕ್ಷಿಣಾಗ್ನಿ, ಆಹವಾನಿಯ, ಗ್ರುಹಸ್ಪತ್ಯ ಮತ್ತು ವಾಲ್ಮೀಕಿ ಎಂಬ ನಾಮಾಂಕಿತಗಳನ್ನು ಕೆತ್ತಿಸಿ, ಪಿತೃಗಳಿಗೆ ಪಿಂಡಪ್ರಧಾನ ಮಾಡಿರುವ ವಿಷಯವನ್ನು ಅಲ್ಲಿರುವ ಶಾಸನದಿಂದ ಮನಗಾಣಬಹುದಾಗಿದೆ. ಕೋಲಾರ ತಾಲೂಕಿನ ಬಿಟೇನಹಳ್ಳಿಯ ೧೫೫೯ರ ಶಾಸನವು ಅಲ್ಲಿಯ ವೀರಭದ್ರ ದೇವರಿಗೆಂದು ಅರ್ಚಕ ನಂಜಯ್ಯನಿಗೆ ಹೊಲವನ್ನು ಮಾನ್ಯವಾಗಿ ನೀಡಿದ ಅಂಶವನ್ನು ದಾಖಲಿಸಿದೆ. ಅಲ್ಲದೇ ಕೋಲಾರ ತಾಲೂಕಿನ ಕೆಂದಟ್ಟಿಯ ಗೋಪಾಲಸ್ವಾಮಿ ದೇವರಿಗೆ ದಾನಬಿಟ್ಟ ಅಂಶವನ್ನು ಅಲ್ಲಿಯ ಶಾಸನವೊಂದು ದಾಖಲಿಸಿದೆ. ಗುಮ್ಮಳಾಪುರದ ೧೫೨೪ರ ತಾಮ್ರ ಶಾಸನದಲ್ಲಿ ರಾಯಸಮುದ್ರ ಹಾಗೂ ತಮ್ಮಾಪುರ ಗ್ರಾಮಗಳನ್ನು ವೀರಣ್ಣ ಹಾಗು ಶಾಂತದೇವ ಶರಣರಿಗೆ ದತ್ತಿ ಬಿಟ್ಟ ವಿಚಾರವಿದೆ. ಗುಮ್ಮಳಾಪುರದ ೧೬೦೬ರ ಶಾಸನದಲ್ಲಿ ಉಕ್ತವಾಗಿರುವ ಕೊಲ್ಲಿಪಾಕೆಯ ರೇವಣ್ಣಸಿದ್ದೇಶ್ವರ ಸಂಪ್ರದಾಯಸ್ಥರಾದ, ಗುಮ್ಮಳಾಪುರದ ಸಿಂಹಾಸನಕ್ಕೆ ಕಾರಣಕರ್ತರಾದ ನಂಜೇದೇವರು ಅಯ್ಯನವರ ಉಲ್ಲೇಖವಿದೆ. ಮುಮ್ಮಡಿ ತಮ್ಮೇಗೌಡನು ಸೋಸಲಿ (ತಿರುಮಕೂಡಲು ನರಸೀಪುರ ತಾಲೂಕು) ಯ ಗುರುಮಠದ ರೇವಣಾರಾಧ್ಯರಿಗೆ ಬೂಸನಹಳ್ಳಿ ಗ್ರಾಮವನ್ನು ೧೬೭೯ ರಲ್ಲಿ ಸರ್ವಮಾನ್ಯವಾಗಿ ದತ್ತಿಬಿಟ್ಟ ಅಂಶವನ್ನು ಬೂಸನಹಳ್ಳಿ ಶಾಸನ ದಾಖಲಿಸಿದೆ. ಕೋಲಾರ ತಾಲೂಕಿನ ಗರುಡನಹಳ್ಳಿಯ ೧೬೧೪ರ ಶಾಸನದಿಂದ ಪಟ್ಟದ ಗುರುನಂಜೇದೇವಯ್ಯನವರು ಸುಗುಟೂರು ಸಿಂಹಾಸನಕ್ಕೆ ಆಪ್ತರಾಗಿದ್ದ ಅಂಶ ಸ್ಪಷ್ಟವಾಗುತ್ತದೆ. ಚಿಕ್ಕರಾಯ ತಮ್ಮೇಗೌಡನ ಆಳ್ವಿಕೆಗೆ ಸೇರಿದ ೧೬೫೨ರ ಚಿನ್ನಹೊಳಲಿ ಶಾಸನದಿಂದ ಪಾಳೇಗಾರನು ಅಲ್ಲೊಂದು ಶಿವಾಲಯ ನಿರ್ಮಿಸಿ, ಮಹಾದೇವನನ್ನು ಪ್ರತಿಷ್ಠಾಪಿಸಿ ದಾನ ಬಿಟ್ಟ ವಿಷಯವು ಗೊತ್ತಾಗುತ್ತದೆ.

ಸುಮಾರು ೧೬೬೩ರ ಇನ್ನೊಂದು ಶಾಸನವು ತಮ್ಮಪ್ಪಗೌಡನು ಸಾದಬಸವದೇವರಯ್ಯನಿಗೆ ದೊಡ್ಡನಲ್ಲೂರು ಗ್ರಾಮವನ್ನು ದತ್ತಿಬಿಟ್ಟ ಅಂಶವನ್ನು ತಿಳಿಸುತ್ತದೆ. ಇದರಿಂದ ಸುಗುಟೂರು ಪ್ರಭುಗಳು ವೀರಶೈವ ಗುರುಗಳಿಗೆ ಆಶ್ರಯ ಪೋಷಣೆ ನೀಡಿದ್ದ ಅಂಶ ಸ್ಪಷ್ಟವಾಗುತ್ತದೆ. ಇಮ್ಮಡಿ ಚಿಕ್ಕರಾಯ ತಮ್ಮೇಗೌಡನ ಕಾಲಕ್ಕೆ ಸೇರಿದ ೧೬೨೦ರ ಹರಳಕುಂಟೆ (ಕೋಲಾರ ತಾ.)ಯ ಶಾಸನದಿಂದ ಕೋಲಾರ ಬೆಟ್ಟದ ಅಂತರಗಂಗೆ ತೀರದಲ್ಲಿ ಏಕಾಂಬರನಾಥ ಮತ್ತು ಕಾಮಾಕ್ಷಮ್ಮ ದೇವತೆಗಳನ್ನು ಪ್ರತಿಷ್ಠಾಪಿಸಿ, ೩೩ ಗಣಮೂರ್ತಿ (ಪರಿವಾರ ದೇವತೆ)ಗಳನ್ನು ಸ್ಥಾಪಿಸಿ, ಆ ಗ್ರಾಮಕ್ಕೆ ಶಿವಕಾಂಚಿಪುರ ಎಂದು ಪುನರ್ ನಾಮಕರಣ ಮಾಡಿರುವ ಅಂಶ ವೇದ್ಯವಾಗುತ್ತದೆ. ಇದೇ ತಾಲೂಕಿನ ಕಲ್ಲಂದೂರಿನ ಶಾಸನವೊಂದರಿಂದ ‘ಕನ್ನಡ ಭಾರತಿ ಅಗ್ರಹಾರ’ ಎಂಬ ಅಭಿದಾನವೂ ಅದಕಿದ್ದ ಅಂಶ ಗೊತ್ತಾಗುತ್ತದೆ. ಆವನಿ ಸ್ಥಳ ಇವರ ಕಾಲದಲ್ಲಿ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದು ಇಮ್ಮಡಿ ತಮ್ಮೇಗೌಡನ ಮಡದಿಯಾದ ವೆಂಕಟಾಂಬೆಯು ಭೈರಕೂರಿನ ಚೊಕ್ಕಣ್ಣಗೌಡರ ಪುತ್ರಿಯಾಗಿದ್ದು, ಆವನಿಯ ರಾಮೇಶ್ವರ ಸ್ಥಾನದಲ್ಲಿ ಕೃಷ್ಣಸೋಮಯಾಜಿಗಳ ನೇತೃತ್ವದಲ್ಲಿ ಅಗ್ನಿಸ್ತೋಮ ಯಾಗವನ್ನು ಮಾಡಿಸಿದ್ದಾಳೆ. ಇದೇ ತಮ್ಮೇಗೌಡನ ಮಗಳಾದ ಕೆಂಪಮ್ಮಳು ಆವನಿಯ ನಾಗರಕುಂಟೆ ಸಮೀಪದಲ್ಲಿನ ಶಾಸನವೊಂದರ ಪ್ರಕಾರ ಕಾಶೀ ಅಮೃತಮಲ್ಲಿಕಾರ್ಜುನನಿಗೆ ಯಜ್ಞ ಮಾಡಿಸಿದ್ದು, ಬಳಿಯಲ್ಲೇ ನೆಟ್ಟಿರುವ ಯೂಪಸ್ಥಂಭವನ್ನೂ ನೋಡಬಹುದಾಗಿದೆ. ಅಲ್ಲದೆ, ಜಿಲ್ಲೆಯ ಶೇಷಾಪುರ, ಆವನಿ, ಮಳ್ಳೂರು, ತೊರದೇವಾಂಡಹಳ್ಳಿ, ಹುತ್ತೂರು, ಕೀಲುಕೊಪ್ಪ ಕೋಲಾರ, ವಡಿಗೇನಹಳ್ಳಿ, ಬುಸ್ಸನಹಳ್ಳಿ, ಹೊಸಪೇಟೆ, ಕೋಟೂರು, ಕಲ್ಲಂದೂರು, ತಡಗೊಡ್ಲು, ಗುಮ್ಮರೆಡ್ಡಿಪುರ, ಮಂಡಿಕಲ್, ಹೋಳೂರು, ಸುಗಟೂರು, ಹರಡಿ, ತೊರ್ನಹಳ್ಳಿ, ಹರಳಕುಂಟೆ, ಹುತ್ತನೂರು ಮುಂತಾದೆಡೆಗಳಲ್ಲೂ ಈ ಪಾಳೇಗಾರರ ಶಾಸನಗಳು ಪತ್ತೆಯಾಗಿವೆ.

**ತಾಡಿಗೊ(ೕಳ)ಳ್ಳ ಪಾಳೇಗಾರರು**

ಜಿಲ್ಲೆಯಲ್ಲಿ ಆಡಳಿತ ನಡೆಸಿದ ಸ್ಥಳೀಯ ಪಾಳೇಪಟ್ಟುಗಳಲ್ಲಿ ತಾಡಿಗೊಳ್ಳ ಪಾಳೇಗಾರರೂ ಪ್ರಮುಖರಾಗಿದ್ದು, ಇವರ ಆಳ್ವಿಕೆಗೆ ಜಿಲ್ಲೆಯು ಒಳಪಟ್ಟಿದ ಆಂಶವನ್ನು ಪುಷ್ಟೀಕರಿಸುವ ಹತ್ತಾರು ಶಾಸನಗಳು ಕೋಲಾರ ಜಿಲ್ಲೆಯಲ್ಲಿ ಲಭಿಸಿವೆ. ಈ ತಾಡಿಗೊಳ್ಳ ಗ್ರಾಮವನ್ನು ಶ್ರೀನಿವಾಸಪುರ ತಾಲೂಕಿನಲ್ಲಿರುವ ತಾಡಿಗೋಳ(ತಡಗೊಡ್ಲು)ವೆಂದು ಊಹಿಸಬಹುದಾಗಿದೆ.

ಈ ಪಾಳೇಗಾರರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಪತ್ತೆಯಾಗಿರುವ ಶಾಸನಗಳಲ್ಲಿ ರಾಯಲ್ಪಾಡು (೧೨೦೪) ಶಾಸನ ಮಹಾನಾಯಕಾಚಾರ್ಯ ತಾಡಿಗೋಳದ ವಸಂತನಾಯಕನ ಮಗ ತಿರುಮಲಪನಾಯಕನನ್ನು ಉಲ್ಲೇಖಿಸುತ್ತಾ, ತಿಮ್ಮರೆಡ್ಡಿಗೆ ಕೆರೆ

ಕೆಳಗಿನ ಭೂಮಿಯನ್ನು ಉಂಬಳಿ ಬಿಟ್ಟ ಅಂಶವನ್ನು ದಾಖಲಿಸಿದರೆ, ಅಡವಿ ಚಂಚುಕೂರು(೧೭೧೩) ಶಾಸನ, ತಾಡಿಗೋಳ ಮನೆತನದ ರಾಮಪ್ಪನಾಯಕ, ರಘುನಾಥನಾಯಕ ಹಾಗೂ ರಾಮಪ್ಪನಾಯಕರನ್ನು ಉಲ್ಲೇಖಿಸುತ್ತಾ ಮಲ್ಲಮ್ಮಾಂಬ ಸಮುದ್ರ ಎಂದು ಆ ಗ್ರಾಮಕ್ಕೆ ಹೆಸರಿಟ್ಟು ಅಗ್ರಹಾರವನ್ನಾಗಿಸಿ ದಾನಬಿಟ್ಟ ಅಂಶವನ್ನು ದಾಖಲಿಸಿದೆ. ಮಟ್ಟವಾರಿಪಲ್ಲಿ (೧೭೦೯) ಹಾಗೂ ರೆಡ್ಡಿವಾರಿಪಲ್ಲಿ (೧೭೧೫) (ಶ್ರೀನಿವಾಸಪುರ ತಾ.) ಶಾಸನಗಳು, ತಾಡಿಗೋಳದ ತಿರುಮಲಪ್ಪಯ್ಯನ ಮಗ ತಿರುಮಲನಾಯಕನನ್ನು ಉಲ್ಲೇಖಿಸುತ್ತಾ ವೆಂಕಟಪ್ಪ ಹಾಗೂ ವೀರಪ್ಪರಿಗೆ ಬಿಟ್ಟ ದಾನವನ್ನು ದಾಖಲಿಸಿದೆ. ಮುಡಿಮಡಗುವಿನ ಇನ್ನೊಂದು ಶಾಸನ, ಮಡಿದ ವೆಂಕಟಪ್ಪನಾಯಕನಿಗೆ, ತಿರುಮಲಪ್ಪನಾಯಕನು ನೆತ್ತರು ಪಟ್ಟಿಯಾಗಿ ಉಂಬಳಿ ನೀಡಿದ್ದನ್ನು ಅರಹುತ್ತದೆ. ಇದೇ ನಾಯಕನ ಕಾಲಕ್ಕೆ ಸೇರಿದ ಮಟ್ಟವಾರಿಪಲ್ಲಿ (೧೭೨೯)ಯ ಶಾಸನ, ದಳವಾಯಿ ರಂಗಪ್ಪನ ಮಗ ವೀರಪ್ಪನಿಗೆ ಬಿಟ್ಟ ಪುಲಿಮಾನ್ಯವನ್ನು ದಾಖಲಿಸಿದೆ. ವಸಂತನಾಯಕ ಅಮಾನಿಕೆರೆ ಗ್ರಾಮದ ಏರಿಯ ಮೇಲಿರುವ ೧೭೪೭ರ ಶಾಸನದಿಂದ ತಿರುಮಲಪ್ಪನಾಯಕನು ತಿಮ್ಮಾಯಿಗೆ, ತಿಮ್ಮಸಮುದ್ರ ಅಗ್ರಹಾರವನ್ನು ದಾನಬಿಟ್ಟ ಅಂಶ ಗೊತ್ತಾಗುತ್ತದೆ. ಇದೇ ಸ್ಥಳದ ೧೭೫೪ರ ಇನ್ನೊಂದು ಶಾಸನ, ವೆಂಕಟಪ್ಪನಾಯಕನು ಅಪ್ಪನಾಯಕನಿಗೆ ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ. ಜಿಂಕಲವಾರಿಪಲ್ಲಿ, ಸೀಗಲಪಾಳ್ಯ, ತೂಪಳ್ಳಿ, ಪಾಚಾರ ಮಾಕಲಪಲ್ಲಿ, ಬ್ರಾಹ್ಮಣಪಲ್ಲಿ (೧೭೪೪) ಹಾಗೂ ಕೂಸಂದ್ರ (೧೭೫೧)ದ ಶಾಸನಗಳು ತಾಡಿಗೋಳ ರಾಮಪ್ಪನಾಯಕನ ಆಡಳಿತವನ್ನು ಉಲ್ಲೇಖಿಸುತ್ತವೆ. ಮುತ್ತಕಪಲ್ಲಿ (೧೭೫೨) ಶಾಸನ ರಘುನಾಥನಾಯಕನನ್ನು ಉಲ್ಲೇಖಿಸಿದರೆ, ಸಾತಬಲ್ಲಿಪಲ್ಲಿಯ ಶಾಸನವೊಂದು ತಾಡಿಗೋಳದ ಕದಿರಿಪತಿ ನಾಯಕನನ್ನು ಉಲ್ಲೇಖಿಸುತ್ತದೆ. ಆದರೆ ಇವು ಅವರ ಇತಿಹಾಸವನ್ನು ಅರಿಯುವಲ್ಲಿ ಒದಗಿಸುವ ಮಾಹಿತಿ ಅತ್ಯಲ್ಪವಾಗಿದ್ದು, ಹೆಚ್ಚಿನ ಸಂಶೋಧನೆಗೆ ಅವಕಾಶವಿದೆ.

### ಆವತಿ ಪ್ರಭುಗಳು

ಸುಮಾರು ಹದಿನಾಲ್ಕನೆಯ ಶತಮಾನದ ಅಂತ್ಯ ಭಾಗದಲ್ಲಿ ಕಂಚಿ ಬಳಿಯ ಆಲೂರು ಗ್ರಾಮದ ಏಳು ಮಂದಿ ರೈತರು ರಣಭೈರೇಗೌಡನೊಂದಿಗೆ ಅವನ ಮಗಳಾದ ದೊಡ್ಡಮ್ಮ(ಭೈಯರಮ್ಮ)ನ ಮಾನರಕ್ಷಣೆಗಾಗಿ ಹುಟ್ಟೂರನ್ನು ರಾತ್ರೋರಾತ್ರಿ ತ್ಯಜಿಸಿ ತಮ್ಮ ಕುಟುಂಬ–ಪರಿವಾರದೊಂದಿಗೆ ಎತ್ತಿನಗಾಡಿಯಲ್ಲಿ ಪಯಣ ಮಾಡಿ, ಕೋಲಾರ ಜಿಲ್ಲೆಯ ನಂದಿದುರ್ಗದ ಪೂರ್ವಕ್ಕಿರುವ ರಾಮಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಬಂದು ತಂಗಿದರಂತೆ. ಹೀಗೆ ತಂಗಿದ ಅವರಲ್ಲಿ ರಣಭೈರೇಗೌಡನಿಗೆ ಅದೇ ಪರಿಸರದಲ್ಲಿ ನೆಲೆಸುವಂತೆ ಕನಸಿನಲ್ಲಿ ಹೇಳಿದಂತಾಯಿತಂತೆ. ಅದರಂತೆ ಅವರು ಅಲ್ಲೇ ನೆಲೆಸಿದರು. ಕ್ರಮೇಣ "ಆವತಿ" ಎಂದೇ ಅದು ಹೆಸರು ಪಡೆಯಿತು. ಇದು ಇಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನಲ್ಲಿದೆ. ತೆಲುಗು ಮೂಲದವರಾದ ಇವರನ್ನು "ಭಂಡಿಕಾಪಲು" ಎಂದೂ ಕರೆಯಲಾಗುತ್ತಿದ್ದು,ಇದಕ್ಕೆ ಅವರು ಹೊಂದಿದ್ದ ಎತ್ತಿನ ಬಂಡಿ ಕಾರಣವಾಗಿರಬೇಕು. ಇವರೇ ಮುಂದೆ ಮೊರಸು ಒಕ್ಕಲಿಗರೆಂದು ಪ್ರಸಿದ್ಧಿಗೆ ಬಂದು, ಕೋಲಾರ, ತುಮಕೂರು ಹಾಗೂ ಬೆಂಗಳೂರು ಜಿಲ್ಲೆಯಲ್ಲಿ ಇರುವ ಹೆಚ್ಚಿನ ರೈತರು ಇಂದಿಗೂ ಮೊರಸು ಒಕ್ಕಲಿಗರಾಗಿರುವುದು ಗಮನಾರ್ಹ. ಭೈರವದೇವನ ಆರಾಧಕರಾದ ಇವರು ಕರಗದಮ್ಮನನ್ನು ಮನೆದೇವತೆಯಾಗಿ ಪಡೆದಿದ್ದು, ತಮ್ಮ ಹೆಣ್ಣು ಮಕ್ಕಳ ಬಲಗೈನ ಉಂಗುರ ಬೆರಳು ಹಾಗೂ ಕಿರುಬೆರಳುಗಳನ್ನು ಸೀತಿಬೆಟ್ಟದ ಭೈರವನಿಗೆ ವಿವಾಹಪೂರ್ವದಲ್ಲಿ ಬಲಿ ನೀಡುವ ಸಂಪ್ರದಾಯ ಕಳೆದ ಶತಮಾನದವರೆಗೂ ಚಾಲ್ತಿಯಲ್ಲಿತ್ತು.

ಆರಂಭದಲ್ಲಿ ಸ್ವಲ್ಪ ಕಾಲ ಆವತಿಯಲ್ಲೇ ಒಟ್ಟಾಗಿದ್ದ ಈ ಸೋದರರು, ನಂತರ ಪ್ರತ್ಯೇಕವಾಗಿ ನೆಲೆಸಲು ತೀರ್ಮಾನಿಸಿದರು. ರಣಭೈರೇಗೌಡ ಆವತಿಯಲ್ಲೇ ನೆಲೆಸಿದರೆ, ಅವನ ಮಗನಾದ ದೊಡ್ಡಭೈರೇಗೌಡನು ದೇವನಹಳ್ಳಿ, ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರಗಳನ್ನು ಹುಟ್ಟು ಹಾಕಿದನು. ಸಣ್ಣ ಭೈರೇಗೌಡನು ಹೊಳವನಹಳ್ಳಿಗೆ ತೆರಳಿ ಕೊರಟಗೆರೆಯ ನಿರ್ಮಾಣಕ್ಕೆ ಕಾರಣೀಭೂತನಾದನು. ತಿಮ್ಮೇಗೌಡನು ಜಂಗಮಕೋಟೆ ಬಳಿಯ ಸುಗುಟೂರಿನಲ್ಲಿ ನೆಲೆಗೊಂಡು ಕೋಲಾರ, ಪುಂಗನೂರುಗಳ ಪಾಳೇಗಾರನಾದನು. ಮಿಗಿಲಾಗಿ ಹೊಸಕೋಟೆಯ ನಿರ್ಮಾತೃ ಕೂಡ ಆದನು. ಜಯಗೌಡನು ಯಲಹಂಕದಲ್ಲಿ ನೆಲೆಗೊಳ್ಳುವ ಮೂಲಕ ಯಲಹಂಕ ನಾಡಪ್ರಭುಗಳ ಆಳ್ವಿಕೆಗೆ ನಾಂದಿ ಹಾಡಿದನು. ಮಾಗಡಿ ಕೆಂಪೇಗೌಡರು ಆವತಿ ನಾಡಪ್ರಭುಗಳೆಂದೇ ತಮ್ಮನ್ನು ಶಾಸನಗಳಲ್ಲಿ ಕರೆದುಕೊಂಡಿದ್ದಾರೆ.

ಆವತಿ ವಂಶಜರಿಗೆ ಸೇರಿದ ಹತ್ತು–ಹತ್ತೆರಡು ಶಾಸನಗಳು ಜಿಲ್ಲೆಯ ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ ಹಾಗೂ ಶಿಡ್ಲಘಟ್ಟ ತಾಲೂಕುಗಳಲ್ಲಿ ಲಭಿಸಿವೆ. ಅವುಗಳ ಕಾಲ ೧೪೨೮ ರಿಂದ ೧೭೯೨ರವರೆಗೂ ವ್ಯಾಪಿಸಿದೆ. ಕುಡುವತ್ತಿ(ಚಿಕ್ಕಬಳ್ಳಾಪುರ

ತಾ.)ಯ ೧೪೩೮ರ ತಾಮ್ರ ಶಾಸನದಲ್ಲಿ ಇವರು ಭೈರವ ತಮ್ಮ ಕುಲದೈವ, ಮನೆದೇವರು ಕರಗದಮ್ಮನೆಂದೂ ಹೇಳಿಕೊಂಡಿದ್ದಾರೆ. ಇದೇ ಕುಡುವತಿ ಗ್ರಾಮವನ್ನು ಭೈರವ ಭೂಪಾಲನು ನಂದಿಯ ನಂದೀಶ್ವರ ಗುರುಗಳಿಗೆ ದತ್ತಿ ಬಿಟ್ಟ ಅಂಶ ಇನ್ನೊಂದು ಶಾಸನದಲ್ಲಿ ಉಕ್ತವಾಗಿದೆ. ನಂದಿಗ್ರಾಮದ (೧೫೭೫) ಶಾಸನದಲ್ಲಿ ಮಲೆಯ ಭೈರೇಗೌಡ, ಮಡದಿ ಭೈಯಕ್ಕ ಹಾಗೂ ಅವರ ಮಕ್ಕಳೀರ್ವರ ಹೆಸರಿದೆ. ಮಾರಯ್ಯಗೌಡನು ತನ್ನ ತಂದೆ–ತಾಯಿಗಳಿಗೆ ಪುಣ್ಯ ಬಯಸಿ ವೆಂಕಟೇಶ್ವರ ದೇವರಿಗೆ ದತ್ತಿ ಬಿಟ್ಟಿರುವ ಅಂಶ ಅವನಿಂದ ನೀಡಲ್ಪಟ್ಟಿರುವ ನಂದಿಗ್ರಾಮದ ಶಾಸನದಲ್ಲಿ ದಾಖಲಾಗಿದೆ. ಬಾಗೇಪಲ್ಲಿ ತಾಲೂಕಿನ ವೊಪ್ಪವಾರಪಲ್ಲಿ ಶಾಸನದಿಂದ ಹೊಲಗದ್ದೆಗಳನ್ನು ಚಿನ್ನಪ್ಪರೆಡ್ಡಿಗೆ ಉಂಬಳಿಯಾಗಿ ಇಮ್ಮಡಿ ಹಾವಳಿ ಭೈರೇಗೌಡನು ನೀಡಿದ ಅಂಶ ವೇದ್ಯವಾಗುತ್ತದೆ. ಇಮ್ಮಡಿ ಭೈಚೇಗೌಡನ ಕಾಲದ ಬೂದಿಹಾಳು (ಶಿಡ್ಲಘಟ್ಟ ತಾ.) (೧೬೩೧) ಶಾಸನದಿಂದ, ಇವನು ಶಿವಾಚಾರ ಸಂಪನ್ನರಾದ ಶ್ರೀಲಿಂಗಚಕ್ರಿಗಳಿಗೆ ಬೂದಿಹಾಳು ಗ್ರಾಮವನ್ನು ದತ್ತಿ ಬಿಟ್ಟ ಅಂಶ ಅರಿವಾಗುತ್ತದೆ. ಗೋಪಾರಗೌಡನು ೧೯೭೦ರಲ್ಲಿ ದೇವನಹಳ್ಳಿಯ ಮದನಗೋಪಾಲ ದೇವರಿಗೆ ದತ್ತಿಬಿಟ್ಟ ಅಂಶವನ್ನು ಶಿಡ್ಲಘಟ್ಟ ತಾಲೂಕಿನ ಮಳ್ಳೂರು ಹಾಗೂ ಮೇಲೂರು ಶಾಸನಗಳು ದಾಖಲಿಸಿವೆ. ಚಿಂತಾಮಣಿ ತಾಲೂಕಿನ ಬೋಡಂಪಲ್ಲಿ ಶಾಸನದಿಂದ ವೆಂಕಟನಾರಾಯಣಪ್ಪಗೌಡನು, ಕೆರೆ ನಿರ್ಮಾಣ ಮಾಡಿದವರಿಗೆ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ.  ಇದೇ ರೀತಿ ಜಿಲ್ಲೆಯ ಸಾದಲಿ ಶಾಸನ (೧೯೭೨), ಆವತಿ ವಂಶದ ರಾಮಸ್ವಾಮಿಗಳು ಭೂದಾನ ನಿಡಿದ ಅಂಶವನ್ನು ದಾಖಲಿಸಿದೆ.

**ಹರಪನಾಯಕನಹಳ್ಳಿ ಪಾಳೇಪಟ್ಟು**

ಮುಳಬಾಗಿಲು ತಾಲೂಕಿನ ಹರಪನಾಯಕನಹಳ್ಳಿಯ ಬಿಸೇಗೌಡನೆಂಬ ವೀರ, ಪುಟ್ಟ ಪಾಳೇಪಟ್ಟನ್ನು ಕಟ್ಟಿಕೊಂಡು ಸುಮಾರು ೧೯ನೆಯ ಶತಮಾನದ ಆರಂಭದಲ್ಲಿ ಅಲ್ಪಕಾಲ ಆಳಿದನೆಂದು ಹೇಳುವ ಮೌಖಿಕ ಪರಂಪರೆ ಈ ಭಾಗದಲ್ಲಿ ಜನಜನಿತವಾಗಿದೆ. ಆದರೆ ಇದನ್ನು ಪುಷ್ಟೀಕರಿಸುವ ಚಾರಿತ್ರಿಕ ದಾಖಲೆಗಳು ಲಭ್ಯವಿಲ್ಲ. ಆದರೂ ಮೌಖಿಕ ಪರಂಪರೆಯನ್ನು ಆಧರಿಸಿ ಬಿಸೇಗೌಡನ ಬದುಕನ್ನು ಅಲ್ಪಸ್ವಲ್ಪ ಚಿತ್ರಿಸಬಹುದಾಗಿದೆ. ಇವನ ವಂಶಜರು ಮೂಲತಃ ಕಂಚಿ–ಕಾಳಹಸ್ತಿ ಭಾಗದವರಾಗಿದ್ದು, ನಂತರದಲ್ಲಿ ಕೋಲಾರ ಜಿಲ್ಲೆಗೆ ಬಂದರೆಂದು ಹೇಳಲಾಗುತ್ತದೆ. ಬಾಲಕನಾಗಿದ್ದಾಗ, ಕಾಡಿನಲ್ಲಿ ಮೇಕೆ ಮೇಯಿಸುತ್ತಿದ್ದ ಬಿಸೇಗೌಡ, ಕಾಡಿನಲ್ಲಿ ವಾಸಿಸುತ್ತಿದ್ದ ಇರುಳಿಗರೊಂದಿಗೆ ಉತ್ತಮ ಒಡನಾಟ ಹೊಂದಿದ್ದು, ಅದರಿಂದ ಅವನಿಗೆ ಸಾಕಷ್ಟು ನೆರವು ಲಭಿಸಿತೆಂದು ಹೇಳಲಾಗುತ್ತದೆ. ಬಿಸೇಗೌಡನಿಗೆ ಇದ್ದ, ದಂಡು ಹಿರೇಗೌಡ ಹಾಗೂ ದಂಡು ಸಾಮೇಗೌಡ ಎಂಬ ಇಬ್ಬರು ಸೋದರರು, ಮೈಸೂರು ಅರಸರ ಸೇನೆಯಲ್ಲಿ ವೆ(ಬೆ)ಳ್ಳಿಕಟ್ಟೆ ಠಾಣೆಯ ಸರದಾರರಾಗಿದ್ದರಂತೆ. ಮೈಸೂರಿನಲ್ಲಿ ಬೆಳ್ಳಿಕಟ್ಟೆಗೆ ಮಿಷನ್ ರಸ್ತೆಯನ್ನು ದೇವರಾಜ ಅರಸು ರಸ್ತೆಯ ಪಾರ್ಶ್ವದಲ್ಲೇ ಕಾಣಬಹುದಾಗಿದೆ. ಈ ಬೆಳ್ಳಿಕಟ್ಟೆಗೆ ಸರದಾರರಾಗಿದ್ದ ಅವರ ಮೂಲಕವೇ ಬಿಸೇಗೌಡನೂ ಮೈಸೂರು ಅರಸರಲ್ಲಿ ಸೇವೆಗೆ ಸೇರಿದನೆಂದು ಹೇಳಲಾಗುತ್ತದೆ. ಉತ್ತಮ ಯೋಧನಾಗಿದ್ದ ಇವನು ನುರಿತ ಇರುಳಿಗನೋರ್ವನಿಂದ ಶಸ್ತ್ರ ಪ್ರಾವೀಣ್ಯತೆಯನ್ನು ಪಡೆದಿದ್ದನೆಂದು ತಿಳಿದುಬರುತ್ತದೆ. ಮುಂದೆ ಸುಮಾರು ೧೮೦೦ರ ಮೊದಲ ದಶಕದಲ್ಲಿ ಮೈಸೂರು ಅರಸರ ಪರವಾಗಿ ಚಂದ್ರಗಿರಿಗೆ ಮುತ್ತಿಗೆ ಹಾಕಿ ಕೊಳ್ಳೆ ಹೊಡೆದು ಯಶಸ್ವಿಯಾಗಿ ಹಿಂತಿರುಗುವಲ್ಲಿ ಬಿಸೇಗೌಡನಿಗೆ ಅವನ ಸೋದರ ಚಿಕ್ಕವೆಂಕಟಗೌಡನ ಪೂರ್ಣ ಬೆಂಬಲವಿತ್ತೆಂದು ತಿಳಿದುಬರುತ್ತದೆ. ಅಲ್ಲಿಂದ ಕೊಳ್ಳೆ ಹೊಡೆದು ತಂದಿದ್ದ ಸಂಪತ್ತನ್ನು ಆಳರಸರಿಗೆ ಒಪ್ಪಿಸಿದ ಬಿಸೇಗೌಡನ ನಿಷ್ಠೆಯನ್ನು ಮೆಚ್ಚಿದ ಅರಸರು, ಅವನಿಗೆ ಮಾಣಿಕ್ಯಗಳಿಂದ ಕೂಡಿದ ಹಿಡಿ ಇರುವ ಖಡ್ಗವನ್ನು ನೀಡಿ ಸನ್ಮಾನಿಸಿದರೆಂದೂ ಹೇಳಲಾಗುತ್ತದೆ. ಆದರೆ ಈ ಸೋದರರ ಏಳ್ಗೆಯನ್ನು ಸಹಿಸದ ನಂಗಲಿಯ ಗುಮಾಸ್ತನೊಬ್ಬ ಮೋಸದಿಂದ ಬಿಸೇಗೌಡನನ್ನು ತಾನೇ ಕೊಲ್ಲಿಸಿ, ಆತ್ಮಹತ್ಯೆ ಮಾಡಿಕೊಂಡನೆಂದು ಪುಕಾರು ಎಬ್ಬಿಸಿದನೆಂದು ಹೇಳಲಾಗುತ್ತದೆ. ಮಕ್ಕಳಿಲ್ಲದ ಬಿಸೇಗೌಡನ ಮಡದಿ ಚೌಡಮ್ಮಳು ತನ್ನ ಮೈದುನನ ಮಗುವನ್ನೆ ದತ್ತು ಪಡೆದ ಸಲಹಿದಳಂತೆ. ಕ್ರಮೇಣ ಈ ಬಿಸೇಗೌಡನ ದುರಂತದ ಸಾವನ್ನು ತಿಳಿದ ಮೈಸೂರು ಅರಸರು, ಚೌಡಮ್ಮನಿಗೆ ಜೋಡಿಗ್ರಾಮ ಮಾನ್ಯ ನೀಡಿ, ರಕ್ತಮಾನ್ಯವಾಗಿ ಕೊಂಡೇನಹಳ್ಳಿಯನ್ನು ದತ್ತಿಕೊಟ್ಟರೆಂದೂ ಹೇಳಲಾಗುತ್ತದೆ. ಬಿಸೇಗೌಡನ ಚಿಕ್ಕ ಕೋಟೆ ಮನೆ ಈಗಲೂ ಇದ್ದು, ಅದರಲ್ಲಿ ಅವನ ವಂಶಜರು ವಾಸವಿದ್ದಾರೆ. ಅವನದೆಂದು ಹೇಳಲಾಗುವ ಖಡ್ಗ, ಬಂದೂಕು ಹಾಗೂ ದಿನಚರಿ ಇದ್ದು, ವಿಜಯದಶಮಿಯಂದು ಅವನ್ನು ಹೊರಕ್ಕೆ ತೆಗೆದು ಪೂಜಿಸಿ ಮತ್ತೆ ಜೋಪಾನದಿಂದ ಭದ್ರಪಡಿಸಲಾಗುತ್ತದೆ.

## ಮೈಸೂರು ಅರಸರು

ವಿಜಯನಗರ ಸಾಮ್ರಾಜ್ಯದ ಸಾಮಂತ ಮನೆತನಗಳಲ್ಲಿ ಒಂದಾಗಿದ್ದ ಈ ಮನೆತನವು, ವಿಜಯನಗರ ಸಾಮ್ರಾಜ್ಯದ ಅವನತಿಯೊಂದಿಗೆ ಪ್ರಾಮುಖ್ಯತೆ ಗಳಿಸಿದ ರಾಜಮನೆತನಗಳಲ್ಲಿ ಒಂದಾಗಿದ್ದು, ೧೬ನೆಯ ಶತಮಾನದ ಉತ್ತರಾರ್ಧಭಾಗದಲ್ಲಿ ಮಹತ್ವ ಪಡೆಯಿತು. 'ದ್ವಾರಾವತಿಪುರವರಾಧೀಶ್ವರರು' ಎಂದು ಕರೆದುಕೊಂಡಿರುವ ಇವರು, ತಮ್ಮನ್ನು ಯದುಕುಲದವರೆಂದೂ ಗುರುತಿಸಿಕೊಂಡಿದ್ದು, ೧೩೯೯ರಿಂದ ರಾಜ್ಯಭಾರ ಮಾಡಲಾರಂಭಿಸಿದರೆಂಬ ಅಭಿಪ್ರಾಯವಿದೆ. ಆದರೆ ಈ ಮನೆತನದ ಆಳ್ವಿಕೆಯ ಪ್ರಭಾವವನ್ನು ವಿಜಯನಗರ ಸಾಮ್ರಾಟ ಕೃಷ್ಣದೇವರಾಯನ ಸಮಕಾಲೀನ ಸಾಮಂತರಾಜ **ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರ(೧೫೧೩–೫೩)** ಕಾಲದಿಂದ ಸ್ಪಷ್ಟವಾಗಿ ಕಾಣಬಹುದಾಗಿದೆ. ಅನಂತರ **ಇಮ್ಮಡಿ ತಿಮ್ಮರಾಜ(೧೫೫೩–೭೨), ಬೋಳ ಚಾಮರಾಜ ಒಡೆಯ(೧೫೭೨–೭೬)** ಹಾಗೂ **ಬೆಟ್ಟದ ಚಾಮರಾಜ ಒಡೆಯ(೧೫೭೬–೭೮)**ರ ಆಳ್ವಿಕೆಯ ನಂತರ ಅಧಿಕಾರಕ್ಕೆ ಬಂದ **ರಾಜ ಒಡೆಯರ್(೧೫೭೮–೧೬೧೭)** ಅತ್ಯಂತ ಬಲಿಷ್ಠ ಅರಸರಿದ್ದು, ಇವರ ಕಾಲದಲ್ಲಿ ರಾಜ್ಯವು ಸಾಕಷ್ಟು ವಿಸ್ತಾರಗೊಂಡಿತು. ಮಿಗಿಲಾಗಿ ವಿಜಯನಗರ ಸಾಮ್ರಾಜ್ಯದ ಶ್ರೀರಂಗಪಟ್ಟಣ ಪ್ರಾಂತದ ಅಧಿಕಾರಿ ತಿರುಮಲರಾಯನನ್ನು ೧೬೧೦ರಲ್ಲಿ ಸೋಲಿಸುವ ಮೂಲಕ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ರಾಜ ಒಡೆಯರಿಗೆ, ಚಕ್ರವರ್ತಿ ಇಮ್ಮಡಿ ವೆಂಕಟಪತಿರಾಯನ ಪರೋಕ್ಷ ಸಮ್ಮತಿಯೂ ಲಭಿಸಿತು. ಮುಂದೆ **ಐದನೆಯ ಚಾಮರಾಜ ಒಡೆಯ(೧೬೧೭–೩೭), ಇಮ್ಮಡಿ ರಾಜ ಒಡೆಯ(೧೬೩೭–೩೮)**ರು ಅಧಿಕಾರಕ್ಕೆ ಬಂದರು. ಆನಂತರ ಬಂದ **ಕಂಠೀರವ ನರಸರಾಜ ಒಡೆಯರ್(೧೬೩೮–೫೯)** ಮತ್ತು **ದೊಡ್ಡದೇವರಾಯ ಒಡೆಯರ(೧೬೫೯–೧೬೭೩)** ಆಳ್ವಿಕೆಯ ನಂತರ, ರಾಜ ಗದ್ದುಗೆಯನ್ನು ಏರಿದ **ಚಿಕ್ಕದೇವರಾಜ ಒಡೆಯರ(೧೬೭೩–೧೭೦೪)** ಅಧಿಕಾರಾವಧಿಯಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದ ಶಿವಾಜಿಯು ಮೈಸೂರು ರಾಜ್ಯದಲ್ಲೂ ಸುಲಿಗೆ ನಡೆಸಿದನಾದರೂ, ಕಪ್ಪ ಪಡೆದು ಹಿಂತಿರುಗಿದನು. ಕೆಳದಿ ಅರಸರು ಶಿವಾಜಿಯ ಮಗ ಸಂಭಾಜಿ ಹಾಗೂ ಗೋಲ್ಕಂಡ ಸುಲ್ತಾನರೊಂದಿಗೆ, ಚಿಕ್ಕದೇವರಾಯರನ್ನು ಎದುರಿಸದರಾದರೂ ೧೬೮೨ರಲ್ಲಿ ಬಾಣವಾರದ ಬಳಿ ಸೋಲುಂಡರು. ಕೆಂಗೇರಿ, ಚಿಕ್ಕನಹಳ್ಳಿ ಹಾಗೂ ತ್ಯಾಮಗೊಂಡ್ಲುಗಳು ಮೈಸೂರರಸರಿಗೆ ವಶವಾದವು. ಮೊಘಲರಿಗೆ ಮೂರು ಲಕ್ಷ ವರಾಹವನ್ನು ಪಾವತಿಸಿ, ಅವರಿಂದ ಬೆಂಗಳೂರನ್ನು ಪಡೆದು, ಹೊಸಕೋಟೆವರೆಗೂ ನಿಯಂತ್ರಣವನ್ನು ಹೊಂದಿದ್ದ ಇವರು ಉತ್ತಮ ಆಡಳಿತಗಾರರಾಗಿದ್ದು, ಅಠಾರ ಕಚೇರಿಯ ಸ್ಥಾಪನೆಗೆ ಕಾರಣರಾದರು.

ನಂತರ ಬಂದ **ಇಮ್ಮಡಿ ಕಂಠೀರವ ನರಸರಾಜರು(೧೭೦೪–೧೪)** ಕಿವುಡರಾಗಿದ್ದು, ಈ ಅವಧಿಯಲ್ಲಿ ಮೈಸೂರಿನ ಖಜಾನೆಯನ್ನು ವಶಪಡಿಸಿಕೊಳ್ಳಲು ಔರಂಗಜೇಬನಿಂದ ನಿಯೋಜಿಸಲ್ಪಟ್ಟಿದ್ದ ದಂಡನಾಯಕ ದಾವೂದ್‌ಖಾನನಿಗೆ ಮರಾಠರ ಚಟುವಟಿಕೆಗಳಿಂದ ಅಡ್ಡಿಯಾಯಿತು. ಮೊಘಲರಿಗೆ ಒಂದು ಕೋಟಿ ರೂಪಾಯಿಗಳನ್ನು ನೀಡಲು ಕಂಠೀರವ ನರಸರಾಜರು ಒಪ್ಪಿದರು. ಆದರೆ ಔರಂಗಜೇಬನ ನಿಧನ (೧೭೦೭)ದಿಂದಾಗಿ ನಿರ್ಭೀತಿಯಿಂದ ಮುನ್ನುಗ್ಗಿದ ಇವರು ಚಿಕ್ಕಬಳ್ಳಾಪುರ ಹಾಗೂ ಮಿಡಿಗೇಸಿ ಪಾಳೇಗಾರರನ್ನು ಸೋಲಿಸಿ, ಅವರಿಂದ ಕಪ್ಪ ಸಂಗ್ರಹಿಸಿದರು. ಶಿರಾವರೆವಿಗೂ ಮೈಸೂರು ಸೈನ್ಯ ಮುನ್ನುಗ್ಗಿತು. ಇದರಿಂದ ಸಿಟ್ಟಾದ ಮೊಘಲ್ ಅಧಿಕಾರಿ ಮೈಸೂರಿನ ಮೇಲೆ ೧೭೧೧ರಲ್ಲಿ ಧಾಳಿ ಮಾಡಿ, ಬಾಕಿ ಇದ್ದ ಕಪ್ಪಕಾಣಿಕೆಯನ್ನು ಅವರಿಂದ ವಸೂಲಿ ಮಾಡಿದನು.

ಇವರ ನಂತರ ಅಧಿಕಾರಕ್ಕೆ ಬಂದ ಬಾಲಕ **ದೊಡ್ಡ ಕೃಷ್ಣರಾಜನ(೧೭೧೪–೧೭೩೨)** ಕಾಲದಲ್ಲಿ ಕಳಲೆ ಚೆಲುವಯ್ಯ ಮತ್ತು ದೇವರಾಜಯ್ಯ ಎಂಬ ದಳವಾಯಿಗಳು ಪ್ರಬಲರಾದರು. ಆನಂತರ ಬಂದ **ನಾಲ್ಕನೆಯ ಚಾಮರಾಜ(೧೭೩೨–೩೪)** ಹಾಗೂ **ಚಿಕ್ಕಕೃಷ್ಣರಾಜ(೧೭೩೪–೬೬)**ರ ಕಾಲದಲ್ಲೂ ದಳವಾಯಿಗಳು ಪ್ರಬಲರಾಗಿದ್ದರು. ಏತನ್ಮಧ್ಯೆ ಕಳಲೆ ನಂಜರಾಜಯ್ಯ ದಳವಾಯಿ ಹುದ್ದೆಗೆ ೧೭೪೬ರಲ್ಲಿ ನೇಮಕಗೊಂಡನು. ಅಲ್ಲದೇ ಇಮ್ಮಡಿ ಕೃಷ್ಣರಾಜರ ಮಗಳನ್ನು ೧೭೪೮ರಲ್ಲಿ ವಿವಾಹವಾದನು. ಇದೇ ಅವಧಿಯಲ್ಲಿ ಬ್ರಿಟೀಷರು ಹಾಗೂ ಫ್ರೆಂಚರು ದಕ್ಷಿಣದ ರಾಜಕೀಯ ರಂಗದಲ್ಲಿ ಕಾಣಿಸಿಕೊಂಡರು. ಈ ಅವಧಿಯಲ್ಲಿ ಮೈಸೂರು ರಾಜ್ಯವು ಮರಾಠರ ಧಾಳಿಯನ್ನು ಮೇಲಿಂದ ಮೇಲೆ ೧೭೫೩, ೧೭೫೫ ಹಾಗೂ ೧೭೫೭ರಲ್ಲಿ ಎದುರಿಸಬೇಕಾಯಿತು. ಇದರಿಂದ ಸಂಸ್ಥಾನದ ಬೊಕ್ಕಸ ಬರಿದಾಯಿತು. ಮಿಗಿಲಾಗಿ ಅರಸರು ಹಾಗೂ

ದಳವಾಯಿ ನಂಜರಾಜಯ್ಯನ ನಡುವೆ ಭಿನ್ನಾಭಿಪ್ರಾಯ ಮೂಡಿತು. ಅಂತಹ ಸಂದರ್ಭದಲ್ಲಿ ದಂಡನಾಯಕ ಹೈದರಾಲಿಯನ್ನು ಮಧ್ಯಸ್ಥಿಕೆಗಾಗಿ ಆಸ್ಥಾನಕ್ಕೆ ಕರೆಯಿಸಲಾಯಿತು. ಮರಾಠರು ೧೭೫೮ರಲ್ಲಿ ಬಾಕಿ ವಸೂಲಿಗಾಗಿ ಮತ್ತೆ ಮೈಸೂರಿನ ಮೇಲೆ ಧಾಳಿ ಮಾಡಿದಾಗ ಹೈದರಾಲಿಯು ಅವರನ್ನು ಸೋಲಿಸಿ ಅವರಿಂದ ಬೆಂಗಳೂರನ್ನು ವಶಪಡಿಸಿಕೊಂಡನು. ನಂಜರಾಜಯ್ಯನ ಸ್ಥಾನದಲ್ಲಿ ಹೈದರಾಲಿಯನ್ನು ಸಂಸ್ಥಾನದ ದಳವಾಯಿಯನ್ನಾಗಿ ನೇಮಿಸಿ, ನವಾಬ್ ಬಿರುದನ್ನೂ ಮಹಾರಾಜರು ಹೈದರಾಲಿಗೆ ನೀಡಿ ಸನ್ಮಾನಿಸಿದರು. ಇದರೊಂದಿಗೆ ಹೈದರಾಲಿಯ ಸರ್ವಾಧಿಕಾರತ್ವದ ಆಡಳಿತ ಸಂಸ್ಥಾನದಲ್ಲಿ ಆರಂಭವಾಯಿತು.

### ಹೈದರಾಲಿಖಾನ್

ಮೈಸೂರು ಸಂಸ್ಥಾನದಲ್ಲಿ ಸಾಧಾರಣ ಸೈನಿಕನಾಗಿ ಸೇವೆಯನ್ನು ಆರಂಭಿಸಿದ ಇವನು ಸ್ವಪ್ರತಿಭೆಯಿಂದಾಗಿ ಬಲುಬೇಗ ಮೈಸೂರು ಅರಸರ ವಿಶ್ವಾಸಕ್ಕೆ ಪಾತ್ರನಾಗಿ ಆಡಳಿತ ಸೂತ್ರವನ್ನು ಪೂರ್ಣ ತನ್ನಲ್ಲೇ ಕೇಂದ್ರೀಕರಿಸಿಕೊಳ್ಳುವ ಮೂಲಕ ಸಂಸ್ಥಾನದ ಪ್ರಶ್ನಾತೀತ ಅಧಿಕಾರಿಯಾಗಿ ಬೆಳೆದು, ಅನಭಿಷಿಕ್ತ ಅರಸನಾಗಿ ಸಂಸ್ಥಾನದ ಆಡಳಿತವನ್ನು ನಿರಂಕುಶ ಪ್ರಭುವಿನೋಪಾದಿಯಲ್ಲಿ ಆಳಿದ ಅಪರೂಪದ ರಾಜಕೀಯ ನಿಪುಣ. ಅನಕ್ಷರಸ್ಥರಾದರೂ ಸಂಸ್ಥಾನದ ಆಡಳಿತವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮೂಲಕ ಸಂಸ್ಥಾನದ ಗಡಿಯನ್ನು ನಾಲ್ಕು ದಿಕ್ಕಲೂ ವಿಸ್ತರಿಸಿದ ಮಹಾನ್ ಯೋಧ, ಸಮರ್ಥ ಸೇನಾನಿ. ಬ್ರಿಟೀಷರ ಸಾಮ್ರಾಜ್ಯ ವಿಸ್ತರಣಾ ಧೋರಣೆಯನ್ನು ಹತ್ತಿಕ್ಕಲು ಯತ್ನಿಸಿ, ಅದಕ್ಕಾಗಿ ಅವರೊಂದಿಗೆ ಕದನಕ್ಕೆ ಇಳಿದ ಸಾಹಸಿ. ತನ್ನ ಶೌರ್ಯ ಸಾಹಸಗಳಿಂದ ಬ್ರಿಟೀಷರನ್ನೂ ತಲ್ಲಣಗೊಳಿಸಿದ ರಾಜನೀತಿತಂತ್ರಜ್ಞ, ಇಂತಹ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದ ಹೈದರ್ ಅಲಿಯು ಜನಿಸಿದ್ದು ಬಂಗಾರಪೇಟೆ ತಾಲೂಕಿನ ಬೂದಿಕೋಟೆಯಲ್ಲಿ ಎಂಬುದು ಗಮನಾರ್ಹ.

ಹೈದರಾಲಿಯ ಪೂರ್ವಿಕರು ಪಂಜಾಬ್ ಪ್ರಾಂತದವರಾಗಿದ್ದು, ಕಾಲಾಂತರದಲ್ಲಿ ಆಳಂದ ಮಾರ್ಗವಾಗಿ ಶಿರಾಕ್ಕೆ ಬಂದು ಶಿರಾದ ಸುಬೇದಾರನ ಬಳಿ ಕಾರಕೂನರಾಗಿ ಸೇವೆಯನ್ನು ಆರಂಭಿಸಿ, ಮುಂದೆ ಕೋಲಾರಕ್ಕೆ ವಲಸೆ ಬಂದರು. ಅವರಲ್ಲಿ, ಹೈದರಾಲಿಯ ತಂದೆಯಾದ ಫತೇಮಹಮದನು ಕೋಲಾರದಲ್ಲಿ ಆಶ್ರಯ ಪಡೆದು ಕಾರಕೂನನಾಗಿ ನೌಕರಿಗೆ ಸೇರಿದನು. ಗಂಜೀಕೋಟೆಯ ಮುತ್ತಿಗೆಯ ಸಂದರ್ಭದಲ್ಲಿ ಯುವಕ ಫತೇಮಹಮದನು ತೋರಿದ ಧೈರ್ಯ-ಸಾಹಸಗಳಿಂದ ಸುಪ್ರೀತನಾದ ಶಿರಾದ ಸುಬೇದಾರನು, ಅವನಿಗೆ ನಾಯಕ ಹುದ್ದೆಯನ್ನು ನೀಡಿದನು. ಮುಂದೆ ಇವನನ್ನು ಕೋಲಾರದಿಂದ ಚಿತ್ತೂರಿಗೆ ವರ್ಗಾಯಿಸಲಾಯಿತು. ಆದರೆ ಬಲುಬೇಗನೆ ಹಿಂದಕ್ಕೆ ಕರೆಸಿಕೊಂಡು ಕೋಲಾರದ ಫೌಜದಾರನನ್ನಾಗಿ ಅವನನ್ನು ನೇಮಿಸಿ, ಬೂದಿಕೋಟೆಯನ್ನು ಜಹಗೀರಾಗಿ ನೀಡಲಾಯಿತು. ಏತನ್ಮಧ್ಯೆ, ಫತೇಮಹಮದ್‌ನ ಮಗನಾದ ಹೈದರಾಲಿಯು ಬೂದಿಕೋಟೆಯಲ್ಲಿ ೧೭೨೨ರಲ್ಲಿ ಜನಿಸಿದನು. ಇವನು ಫತೇಮಹಮದ್‌ನ ನಾಲ್ಕನೆಯ ಮಡದಿಯ ಮಗನಾಗಿದ್ದನು. ಫತೇಮಹಮದ್‌ನ ಮೊದಲ ಮಡದಿಯು ಕೋಲಾರದವಳಾಗಿದ್ದು, ಮೂರು ಗಂಡು ಮಕ್ಕಳನ್ನು ಹಡೆದ ನಂತರ ಸಾವನ್ನಪ್ಪಿದ್ದಾಗ ಅವಳಿಗಾಗಿ ಸಮಾಧಿಯೊಂದನ್ನು ಕೋಲಾರದಲ್ಲಿ ನಿರ್ಮಿಸಲಾಯಿತು. ಫತೇ ಮಹಮದ್‌ನ ಎರಡನೆಯ ಮಡದಿಯು ನವಾಯತ್ ಕುಟುಂಬಕ್ಕೆ ಸೇರಿದ್ದು, ಕೊಂಕಣದಿಂದ ಆರ್ಕಾಟಿಗೆ ಪ್ರಯಾಣಿಸುವಾಗ ದರೋಡೆಕೋರರ ಕೈಗೆ ಸಿಕ್ಕಿ ತರಿಕೆರೆ ಬಳಿ ಹತಳಾದಳು. ಇವನ ಮೂರನೆಯ ಮಡದಿಯು ಮಕ್ಕಳಿಲ್ಲದೆ ಗತಿಸಿದ ನಂತರ ಅವಳ ಸೋದರಿಯನ್ನೇ ವಿವಾಹವಾದನು. ಹೈದರ್ ಆಲಿಯು ಜನಿಸಿದ್ದು ಇವಳ ಉದರದಲ್ಲೇ. ಸುಮಾರು ೧೭೨೯ರಲ್ಲಿ ಫತೇಮಹಮದ್ ಮತ್ತವನ ಮೊದಲ ಹೆಂಡತಿಯ ಹಿರಿಯ ಮಗ ಇಬ್ಬರೂ ಚಿತ್ತೂರಿನ ವಿರುದ್ಧದ ಕದನದಲ್ಲಿ ಸಾವನ್ನಪ್ಪಿದರು. ಅವರಿಬ್ಬರ ದೇಹವನ್ನು ತಂದು ಕೋಲಾರದಲ್ಲಿ ಸಂಸ್ಕಾರ ಮಾಡಿ

ಸಮಾಧಿಯನ್ನು ನಿರ್ಮಿಸಲಾಯಿತು. ಏತನ್ಮಧ್ಯೆ ಫತೇಮಹಮದ್‌ನು ಮಾಡಿದ ವಂಚನೆಗಾಗಿ ಅವನ ಕುಟುಂಬದ ಸದಸ್ಯರನ್ನು ದೊಡ್ಡಬಳ್ಳಾಪುರದಲ್ಲಿ ಬಂಧನದಲ್ಲಿರಿಸಲಾಯಿತು.

ಮುಂದೆ ಬಂಧನದಿಂದ ವಿಮುಕ್ತರಾದರೂ ಸಂಬಂಧಿಕರ ನೆರವು ಲಭಿಸದೆ ಅನಾಥರಾದ ಫತೇಮಹಮದ್‌ನ ಕುಟುಂಬದವರು ಅಂತಿಮವಾಗಿ ಮೈಸೂರು ಸಂಸ್ಥಾನದ ದಳವಾಯಿ ನಂಜರಾಜಯ್ಯನಲ್ಲಿ ಆಶ್ರಯ ಪಡೆದರು. ಅವನ ಸೇನೆಯಲ್ಲಿ ತೂರಿಕೊಂಡ ಹೈದರಾಲಿಯು, ೧೭೪೯ರ ದೇವನಹಳ್ಳಿ ಮುತ್ತಿಗೆಯಲ್ಲಿ ಶೌರ್ಯ ಮೆರೆದು ಪ್ರಸಿದ್ಧನಾದನು. ಆರ್ಕಾಟ್ ಸಿಂಹಾಸನದ ಉತ್ತರಾಧಿಕ್ಕಾರಕ್ಕಾಗಿ ನಡೆದ ಜಗ್ಗಾಟದ ಪರಿಣಾಮವಾಗಿ ಜರುಗಿದ ೧೭೫೧ರ ಜಿಂಜಿ ಕಾಳಗದಲ್ಲಿ ಮಹತ್ವದ ಪಾತ್ರ ವಹಿಸಿದನು. ಆ ಯುದ್ಧದಲ್ಲಿ ನಾಸಿರ್ ಜಂಗ್ ಸಾವನ್ನಪ್ಪಲು ಅವನ ಸಂಪತ್ತನ್ನು ಮುಟ್ಟುಗೋಲು ಹಾಕಿಕೊಂಡನು. ತತ್ಪರಿಣಾಮವಾಗಿ ದಿಂಡಿಗಲ್‌ನ ಫೌಜದಾರ್‌ನನ್ನಾಗಿ ೧೭೫೫ರಲ್ಲಿ ಹೈದರ್‌ನನ್ನು ನೇಮಿಸಲಾಯಿತು. ಇಲ್ಲಿಂದ ಮುಂದಕ್ಕೆ ಸಂಸ್ಥಾನದ ಆಡಳಿತದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಕ್ರಮೇಣ ಮೈಸೂರು ಅರಸರನ್ನು ಮೂಲೆಗುಂಪು ಮಾಡಿ ಎಲ್ಲಾ ಅಧಿಕಾರವನ್ನೂ ತನ್ನಲ್ಲೇ ಕೇಂದ್ರೀಕರಿಸಿಕೊಂಡ ಇವನು ೧೭೬೧ರ ವೇಳೆಗೆ ಸಂಸ್ಥಾನದ ಅನಭಿಷಕ್ತ ಸಾಮ್ರಾಟನಾದನು. ಏತನ್ಮಧ್ಯೆ ದಕ್ಷಿಣ ದಿಗ್ವಿಜಯ ಸಂದರ್ಭದಲ್ಲಿ ಮರಾಠರು ಶಿರಾವನ್ನು ೧೭೫೭ರಲ್ಲಿ ವಶಪಡಿಸಿಕೊಂಡರು. ಆದರೆ ಎರಡು ವರ್ಷಗಳ ನಂತರ ೧೭೫೯ರಲ್ಲಿ ಮೈಸೂರು ಅರಸರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಅದನ್ನು ಮೈಸೂರು ಸಂಸ್ಥಾನಕ್ಕೆ ಹಿಂತಿರುಗಿಸಲಾಯಿತು. ಈ ನಡುವೆ, ಸಂಸ್ಥಾನದಿಂದ ಕೈಬಿಟ್ಟುಹೋಗಿದ್ದ ಶಿರಾವನ್ನು ೧೭೬೧ರಲ್ಲಿ, ದಖನ್ನಿನ ಸುಬೇದಾರನ ಸೋದರ ಹಾಗೂ ಆದೋಣಿಯ ನವಾಬನಾಗಿದ್ದ ಬಸಾಲತ್ ಜಂಗ್‌ನ ನೆರವಿನೊಂದಿಗೆ ಹೈದರನು ವಶಪಡಿಸಿಕೊಂಡನು. ಬಸಾಲತ್ ಜಂಗನು ಹೈದರಾಲಿಗೆ ಶಿರಾದ ನವಾಬ ಎಂಬ ಬಿರುದನ್ನು ನೀಡಿ ಸನ್ಮಾನಿಸಿದನು. ಅದೇ ವರ್ಷ ಹೈದರಾಲಿಯು ಚಿಕ್ಕಬಳ್ಳಾಪುರಕ್ಕೆ ಮುತ್ತಿಗೆ ಹಾಕಿದನು. ಚಿಕ್ಕಬಳ್ಳಾಪುರದ ನಾಯಕರ ನೆರವಿಗೆ ಮರಾಠ ದಂಡನಾಯಕ ಮುರಾರಿರಾಯನು ಗುತ್ತಿಯಿಂದ ಧಾವಿಸಿ ಬಂದನಾದರೂ ಹೈದರನ ಕೈಯಲ್ಲಿ ಸೋಲುಣ್ಣಬೇಕಾಯಿತು. ಹೈದರಾಲಿಯು ಶಿರಾವನ್ನು ವಶಪಡಿಸಿಕೊಳ್ಳಲು ಮರಾಠರ ನೆರವನ್ನು ಕೋರಿ ಮರಾಠರ ಆಸ್ಥಾನಕ್ಕೆ ಹಾಗೂ ತನ್ನ ತಮ್ಮನ ನವಾಬಗಿರಿಯನ್ನು ಅಂಗೀಕರಿಸಲು ಒಪ್ಪಿಗೆ ಕೋರಿ ನಿಜಾಮನ ಆಸ್ಥಾನಕ್ಕೆ ರಾಯಭಾರಿಗಳನ್ನು ಏಕಕಾಲದಲ್ಲಿ ಕಳುಹಿಸಿದನು. ನಿಜಾಮನ ಆಸ್ಥಾನದಲ್ಲಿ ಹೈದರಾಲಿಯ ಅಪೇಕ್ಷೆ ಈಡೇರಿತಾದರೂ ಮರಾಠರನ್ನು ಸಂತೈಸುವಲ್ಲಿ ವಿಫಲನಾದನು.

ಮರಾಠರ ಧಾಳಿಯನ್ನು ಮುಂದಾಗಿ ನಿರೀಕ್ಷಿಸಿದ್ದ ಹೈದರಾಲಿಯು ತಾನೇ ಸುಸಜ್ಜಿತ ಸೇನೆಯೊಂದಿಗೆ ಕೃಷ್ಣಾ ತೀರವನ್ನು ಮುಟ್ಟಿದನು. ಹೈದರಾಲಿಯ ಮುನ್ನಡೆಯನ್ನು ನಿಯಂತ್ರಿಸಲು ಮೀರಜ್‌ನ ಮರಾಠ ಸಾಮಂತ ಗೋಪಾಲರಾಯನಿಗೆ ಪೇಶ್ವೆ ಆದೇಶಿಸಿದನಾದರೂ, ಗೋಪಾಲರಾಯನು ಸೋಲನ್ನು ಅನುಭವಿಸಬೇಕಾಯಿತು. ಇದರಿಂದ ಮಾಧವರಾವ್ ಪೇಶ್ವೆಯು ಸೇನೆಯೊಂದಿಗೆ ಕೃಷ್ಣಾ ನದಿಯನ್ನು ದಾಟಿ ಹೈದರಾಲಿಯ ಆಕ್ರಮಣವನ್ನು ನಿಯಂತ್ರಿಸಿ, ಹಿಮ್ಮೆಟ್ಟಿಸಲು ತಾನೇ ಮುನ್ನುಗ್ಗಿ ಬಂದನು. ರಟ್ಟಿಹಳ್ಳಿ ಬಳಿ ನಡೆದ ಕಾಳಗದಲ್ಲಿ ಹೈದರಾಲಿಯು ಸೋಲಿಸಲ್ಪಟ್ಟು ತೀವ್ರ ನಷ್ಟಕ್ಕೆ ತುತ್ತಾದನು. ಹೈದರಾಲಿಯು ಆಗಷ್ಟೇ ವಶಪಡಿಸಿಕೊಂಡಿದ್ದ ಉತ್ತರದ ಭಾಗಗಳನ್ನೆಲ್ಲಾ ಮರಾಠರು ಸ್ವಾಧೀನಪಡಿಸಿಕೊಂಡರು. ಸುಮಾರು ೧೭೬೫ರಲ್ಲಿ ಏರ್ಪಟ್ಟ ಸಂಧಾನದಂತೆ ಗುತ್ತಿಯ ಮುರಾರಿರಾಯನಿಂದ ಹೈದರನು ವಶಪಡಿಸಿಕೊಂಡ ಎಲ್ಲಾ ಪ್ರದೇಶಗಳನ್ನು ಹಿಂತಿರುಗಿಸುವುದರ ಜೊತೆಗೆ ೩೨ ಲಕ್ಷ ರೂಪಾಯಿಗಳನ್ನು ಯುದ್ಧದಂಡವಾಗಿ ಮರಾಠರಿಗೆ ಹೈದರ್ ಪಾವತಿಸಬೇಕಾಗಿ ಬಂತು. ಆದರೆ ಶಿರಾವನ್ನು ಹೈದರಾಲಿಗೆ ಬಿಟ್ಟುಕೊಡಲಾಯಿತು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಹೈದರನು ತೊಳಲುತ್ತಿದ್ದಾಗ, ಸಂಸ್ಥಾನದ ಪೂರ್ವಭಾಗದಲ್ಲಿ ಏರ್ಪಟ್ಟ ಅಶಾಂತಿಯನ್ನು ನಿಯಂತ್ರಿಸಲು ಮೀರ್ ಆಲಿ ರೇಜನನ್ನು ನಿಯೋಜಿಸುವ ಮೂಲಕ ಅದನ್ನು ತಹಬದಿಗೆ ತರಲಾಯಿತು. ನಂದಿದುರ್ಗದಲ್ಲಿ ತಲೆಮರೆಸಿಕೊಂಡಿದ್ದ ಚಿಕ್ಕಬಳ್ಳಾಪುರದ ನಾಯಕನನ್ನು ಬಗ್ಗು ಬಡಿದು ಕುಟುಂಬ ಸಮೇತ ಅವರನ್ನು ಯುದ್ಧ ಕೈದಿಗಳಾಗಿ ಬಂಧಿಸಿ ಮೊದಲು ಬೆಂಗಳೂರಿಗೂ, ಆನಂತರ ಕೊಯಮತ್ತೂರಿಗೂ ಕಳುಹಿಸಲಾಯಿತು.

ಸುಮಾರು ೧೭೬೭ರಲ್ಲಿ ಮರಾಠರು ಮತ್ತೆ ಮೈಸೂರಿನ ಗಡಿಯಲ್ಲಿ ಕಾಣಿಸಿಕೊಂಡರು. ಅವರ ಮುನ್ನಡೆಯನ್ನು ನಿಯಂತ್ರಿಸಲು ಹೈದರಾಲಿಯು ಅನುಸರಿಸಿದ ತಂತ್ರಗಳೆಲ್ಲವೂ ವಿಫಲವಾದವು. ಶಿರಾವನ್ನು

ವಶಪಡಿಸಿಕೊಂಡ ಮರಾಠರು ಸಂಸ್ಥಾನದ ಪೂರ್ವಭಾಗದತ್ತ ಮುನ್ನುಗ್ಗಿದರು. ಮರಾಠರೊಂದಿಗೆ ಸಂಧಾನಕ್ಕಾಗಿ ದೀರ್ಘ ಯತ್ನ ನಡೆಸಿದ ಹೈದರಲಿಯು ಅಂತಿಮವಾಗಿ ಅಪ್ಪಾಜಿರಾಮನ ಮಧ್ಯಸ್ಥಿಕೆಯಿಂದಾಗಿ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಯಿತು. ಅದರಂತೆ ಹೈದರಾಲಿಯು ಮರಾಠರಿಗೆ ೩೫ ಲಕ್ಷ ರೂಪಾಯಿಗಳನ್ನು ಯುದ್ಧ ವೆಚ್ಚವಾಗಿ ನೀಡುವಂತಾಯಿತು. ಇದರಲ್ಲಿ ಅರ್ಧವನ್ನು ತಕ್ಷಣದಲ್ಲಿ ಪಾವತಿಸಬೇಕೆಂತಲೂ, ಉಳಿದರ್ಧವನ್ನು ಪಾವತಿಸುವವರೆಗೆ ಕೋಲಾರದ ಕೋಟೆ ಹಾಗೂ ಕೋಲಾರ ಜಿಲ್ಲೆಯನ್ನು ಮರಾಠರ ವಶದಲ್ಲಿರಿಸಬೇಕೆಂದೂ ಕರಾರಾಯಿತು. ಅದರಂತೆ ಹೈದರಾಲಿಯು ಬಾಕಿ ಇದ್ದ ಮೊತ್ತವನ್ನು ಅದೇ ವರ್ಷದ ಮಧ್ಯಭಾಗದಲ್ಲಿ ಪಾವತಿಸಿ ಕೋಲಾರ ಜಿಲ್ಲೆಯನ್ನು ಮರಾಠರಿಂದ ಬಿಡಿಸಿಕೊಂಡನು.

ಮೊದಲನೆಯ ಆಂಗ್ಲೊ-ಮೈಸೂರು ಯುದ್ಧ (೧೭೬೭-೧೭೬೮) ಸಂದರ್ಭದಲ್ಲಿ ಬ್ರಿಟೀಷ್ ಕರ್ನಲ್ ಸ್ಮಿತ್ ಹಾಗೂ ಕರ್ನಲ್ ವುಡ್‌ರ ಸೇನಾಪಡೆಗಳ ಸೈನಿಕ ಚಟುವಟಿಕೆಗೆ ಕೋಲಾರ ಜಿಲ್ಲೆಯು ತುತ್ತಾಗಬೇಕಾಯಿತು. ಆ ವರ್ಷದ ಮಧ್ಯಭಾಗದಲ್ಲಿ ಕರ್ನಲ್ ಸ್ಮಿತ್‌ನ ರೆಜಿಮೆಂಟ್ ಕೋಲಾರ ಹಾಗೂ ಮುಳಬಾಗಿಲುಗಳನ್ನೊಳಗೊಂಡಂತೆ ಅನೇಕ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿತು. ಆದರೆ ಮುಳಬಾಗಿಲನ್ನು ೧೭೬೮ರ ಅಕ್ಟೋಬರ್ ವೇಳೆಗೆ ಹೈದರನು ಭೀಕರ ಕದನದ ಮೂಲಕ ಪುನರ್ ವಶಪಡಿಸಿಕೊಂಡನು. ತತ್ಪರಿಣಾಮವಾಗಿ ಕರ್ನಲ್ ಸ್ಮಿತ್‌ನನ್ನು ಮದ್ರಾಸ್‌ಗೆ ವಾಪಸ್ಸು ಕರೆಸಿಕೊಂಡು ಅವನ ಸ್ಥಾನಕ್ಕೆ ಕರ್ನಲ್ ವುಡ್‌ನನ್ನು ನಿಯೋಜಿಸಲಾಯಿತು. ಇವನು ೧೭೬೮ರ ನವೆಂಬರ್‌ನಲ್ಲಿ ಹೊಸೂರನ್ನು ಹೈದರ್‌ನಿಂದ ಮುಕ್ತಗೊಳಿಸಲು ಹೊರಟನು. ಆದರೆ ಯುದ್ಧ ಸಾಮಗ್ರಿ ಹಾಗೂ ಮದ್ದು-ಗುಂಡುಗಳನ್ನು ಬಾಗಲೂರಿನಲ್ಲೇ ಬಿಟ್ಟು ಹೊಸೂರಿನತ್ತ ಕರ್ನಲ್ ವುಡ್ ಬರುತ್ತಿರುವುದನ್ನು ತಿಳಿದ ಹೈದರನು ಬಳಸು ಮಾರ್ಗದಿಂದ ಬಂದು ಬಾಗಲೂರಿಗೆ ಮುತ್ತಿಗೆ ಹಾಕಿ ಅಲ್ಲಿದ್ದ ಆಹಾರ ಸಾಮಗ್ರಿ, ಯುದ್ಧ ಸಲಕರಣೆ, ಮದ್ದು, ಬಂದೂಕುಗಳ ಜೊತೆಗೆ ಹೇರನ್ನು ಹೊತ್ತು ನಿಂತಿದ್ದ ದನಗಳನ್ನೂ ಸ್ವಾಧೀನಪಡಿಸಿಕೊಂಡನು.

ಕೋಲಾರದೆಡೆಗೆ ಸಾಗುತ್ತಿದ್ದ ವುಡ್‌ನ ಮೇಲೆ ಆಲೇರಿ ಬಳಿ ಒಮ್ಮಿಂದೊಮ್ಮೆಗೆ ಧಾಳಿ ಮಾಡಿದ ಹೈದರನು ದೊಡ್ಡ ಗಾತ್ರದ ಹನ್ನೆರಡು ಫಿರಂಗಿಗಳಿಂದ ಮದ್ದನ್ನು ಉಡಾಯಿಸಿದನು. ಆದರೆ ಕರ್ನಲ್ ವುಡ್ ಮರು ಧಾಳಿ ಮಾಡದೇ ತಟಸ್ಥನಾಗುಳಿದುದರ ಪರಿಣಾಮವಾಗಿ ಬ್ರಿಟೀಷ್ ಸೈನ್ಯದ ಓರ್ವ ಸೇನಾ ಮುಖಂಡ, ೨೦ ಮಂದಿ ಯೂರೋಪಿಯನ್ನರು ಹಾಗೂ ೨೦೦ ಮಂದಿ ಸಿಪಾಯಿಗಳು ಸಾವನ್ನಪ್ಪಿದರು. ಅವರ ಶಿಬಿರದ ಮೇಲೆ ಅಂದು ರಾತ್ರಿಯಿಂದ ಮಾರನೆಯ ದಿನದ ಮಧ್ಯಾಹ್ನದವರೆಗೆ ಧಾಳಿಯನ್ನು ಮುಂದುವರಿಸಿದ ಹೈದರ್, ವೆಂಕಟಗಿರಿಯಿಂದ ಕ್ಯಾಪ್ಟನ್ ಫಿಟ್ಜೆರಾಲ್ಡ್ ಆಗಮಿಸುತ್ತಿರುವ ಸಮಾಚಾರ ಕೇಳುತ್ತಿದ್ದಂತೆ ಹಿಂದಕ್ಕೆ ಸರಿದನು. ಹೈದರನ ಧಾಳಿಯಿಂದ ನಲುಗಿ ಹೋಗಿರುವ ಸೇನಾಪಡೆಯೊಂದಿಗೆ ಸ್ವಲ್ಪ ಕಾಲ ಕೋಲಾರದಲ್ಲಿ ವಿಶ್ರಾಂತಿ ಪಡೆದು ಅನಂತರ ಪುನರ್ ಆಕ್ರಮಣಕ್ಕೆ ಸಜ್ಜಾಗುವುದು ಸೂಕ್ತವೆಂಬ ಸಲಹೆಯನ್ನು ವುಡ್‌ಗೆ ನೀಡಿದ ಫಿಟ್ಜೆರಾಲ್ಡ್, ಅದೇ ಸಂದರ್ಭದಲ್ಲಿ ತಾನು ಮುಂದುವರಿದು ಹೈದರಾಲಿಯಿಂದ ಬಾಗಲೂರನ್ನು ಪುನಃ ವಶಪಡಿಸಿಕೊಳ್ಳುವುದಾಗಿ ಸೂಚಿಸಿದನು. ಆದರೆ ಕರ್ನಲ್ ವುಡ್ ಇದಕ್ಕೆ ಸಮ್ಮತಿಸಲಿಲ್ಲ. ಫಿಡ್ಜೆರಾಲ್ಡನು ಇಲ್ಲಿನ ಪರಿಸ್ಥಿತಿಯನ್ನು ಮದ್ರಾಸಿನಲ್ಲಿದ್ದ ಕ್ಯಾಪ್ಟನ್ ಸ್ಮಿತ್‌ಗೆ ತಿಳಿಸಿದನು. ಮದ್ರಾಸ್ ಸರ್ಕಾರವು ಕರ್ನಲ್ ವುಡ್‌ನನ್ನು ತಕ್ಷಣವೇ ಹಿಂದಕ್ಕೆ ಕರೆಸಿಕೊಂಡು ೧೭೬೯ರಲ್ಲಿ ಮಿಲಿಟರಿ ವಿಚಾರಣೆಗೊಳಪಡಿಸಿ ಅವನನ್ನು ಸೇವೆಯಿಂದ ತೆಗೆದು ಹಾಕಿತು.

ಸಂಸ್ಥಾನವು ೧೭೭೧ರಲ್ಲಿ ಮತ್ತೆ ಮರಾಠ ಧಾಳಿಯನ್ನು ಎದುರಿಸಬೇಕಾಗಿ ಬಂತು. ಮೈಸೂರ ರಾಜ್ಯದ ಉತ್ತರ ಹಾಗೂ ಪೂರ್ವಭಾಗಗಳನ್ನು ವಶಪಡಿಸಿಕೊಂಡ ಮರಾಠರ ಪಡೆ ಮುನ್ನಡೆದಿದ್ದಾಗ ಅನಾರೋಗ್ಯಕ್ಕೆ ತುತ್ತಾದ ಮರಾಠ ಪೇಶ್ವೆ ಮಾಧವರಾಯನು, ಮಾವ ತ್ರಿಯಂಬಕರಾಯನಿಗೆ ನಾಯಕತ್ವ ವಹಿಸಿ ಪುಣೆಗೆ ಹಿಂತಿರುಗಿದನು. ಈ ಬದಲಾವಣೆಯಿಂದ ಸ್ಫೂರ್ತಿ ಪಡೆದ ಹೈದರನು ಯುದ್ಧರಂಗಕ್ಕೆ ಇಳಿದನಾದರೂ ಯಶಸ್ಸು ಲಭಿಸಲಿಲ್ಲ. ಹೈದರ್-ಮರಾಠರ ನಡುವೆ ೧೭೭೨ರ ಜೂನ್‌ನಲ್ಲಿ ಅದೇ ಅಪ್ಪಾಜಿರಾಮನ ಮಧ್ಯಸ್ಥಿಕೆಯಲ್ಲಿ ಸಂಧಾನವೇರ್ಪಟ್ಟಿತು. ಅದರಂತೆ ಹೈದರಾಲಿಯು ಮರಾಠರಿಗೆ ಮೂವತ್ತೈದು ಲಕ್ಷ ರೂ.ಗಳನ್ನು ಯುದ್ಧದಂಡವಾಗಿ (ಅದರಲ್ಲಿ ಐದು ಲಕ್ಷ ರೂ.ಗಳನ್ನು ದರ್ಬಾರು ವೆಚ್ಚ ಎಂದು ವಿಧಿಸಲಾಗಿತ್ತು) ನೀಡಬೇಕಾಗಿದ್ದು, ಅದರಲ್ಲಿ ಅರ್ಧಭಾಗವನ್ನು

ತಕ್ಷಣದಲ್ಲೇ ಪಾವತಿಸಿ ಉಳಿದರ್ಧ ಭಾಗವನ್ನು ಸಂದಾಯ ಮಾಡುವವರೆಗೆ ಕೋಲಾರ, ಹೊಸಕೋಟೆ, ದೊಡ್ಡಬಳ್ಳಾಪುರ, ಶಿರಾ, ಮಧುಗಿರಿ, ಚನ್ನರಾಯನದುರ್ಗ ಹಾಗೂ ಗುರ್ರಮಕೊಂಡಗಳನ್ನು ಬ್ರಿಟೀಷರಿಗೆ ಒತ್ತೆ ಇಡಬೇಕಾಯಿತು.

ಎರಡನೆಯ ಆಂಗ್ಲೋ–ಮೈಸೂರು ಯುದ್ಧ (೧೭೮೦–೮೨) ಸಂದರ್ಭದಲ್ಲಿ ಹೈದರಾಲಿಯು ದಕ್ಷಿಣ ಆರ್ಕಾಟ್ ಬಳಿಯ ನರಸಿಂಗಪೇಟೆಯಲ್ಲಿ ಮಡಿದಾಗ, ಅವನ ಸಾವನ್ನು ಗುಪ್ತವಾಗಿರಿಸಿ ಶವವನ್ನು ಕೋಲಾರಕ್ಕೆ ತರಲಾಯಿತು. ಅದೇ ಸಮಯದಲ್ಲಿ ಕರಾವಳಿ ಭಾಗದಲ್ಲಿ ಬ್ರಿಟೀಷರ ವಿರುದ್ಧ ಯುದ್ಧದಲ್ಲಿ ತೊಡಗಿದ್ದ ಟೀಪುನನ್ನು ತ್ವರಿತವಾಗಿ ಕರೆಸಿ ಅಧಿಕಾರವನ್ನು ವಹಿಸಿಕೊಡಲಾಯಿತು. ಹೈದರನ ಶವವನ್ನು ನಂತರದಲ್ಲಿ ಶ್ರೀರಂಗಪಟ್ಟಣಕ್ಕೆ ರವಾನಿಸಿ, ಗುಂಬಜ್‌ನಲ್ಲಿ ವಿಧಿವತ್ತಾಗಿ ಸಮಾಧಿ ಮಾಡಿ ಸುಂದರ ಸ್ಮಾರಕವನ್ನು ನಿರ್ಮಿಸಲಾಯಿತು.

**ಟಿಪ್ಪುಸುಲ್ತಾನ್**

ತಂದೆ ಹೈದರನೊಂದಿಗೆ ಎರಡನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಪಾಲ್ಗೊಂಡಿದ್ದ ಟಿಪ್ಪುವಿಗೆ ಬಾಲ್ಯದಲ್ಲಿ ಉತ್ತಮ ಶಿಕ್ಷಣವನ್ನು ಹೈದರ್ ಕೊಡಿಸಿದ್ದನು. ತಂದೆಯಂತೆ ಸಾಹಸಿಯೂ, ಚಾಣಾಕ್ಷನೂ ಆಗಿದ್ದ ಟಿಪ್ಪು ಬ್ರಿಟೀಷರನ್ನು ಸಂಸ್ಥಾನದಿಂದ ದೂರವಿಡುವ ಉದ್ದೇಶದಿಂದ ಅವರ ವಿರುದ್ಧ ಒಕ್ಕೂಟವನ್ನು ರೂಪಿಸಲು ಮುಂದಾಗಿದ್ದನು. ಉತ್ತಮ ಆಡಳಿತಗಾರನೂ ಚತುರನೂ ಆಗಿದ್ದ ಇವನ ಅಧಿಕಾರಾವಧಿಯಲ್ಲಿ ಸಾಕಷ್ಟು ಆಡಳಿತಾತ್ಮಕ ಸುಧಾರಣೆಗಳಾದವು. ಬ್ರಿಟೀಷ್ ವಿರೋಧಿಯಾಗಿದ್ದ ಇವನು ಬ್ರಿಟೀಷರ ವಿರುದ್ಧ ಮೂರನೆಯ ಆಂಗ್ಲೋ–ಮೈಸೂರು ಯುದ್ಧಕ್ಕೆ ೧೭೯೦ರಲ್ಲಿ ಸಜ್ಜಾದನು. ಮೂರನೆಯ ಆಂಗ್ಲೋ–ಮೈಸೂರು ಯುದ್ಧ (೧೭೯೦–೯೨) ಸಂದರ್ಭದಲ್ಲಿ ಚಿತ್ತೂರಿನಿಂದ ಬೆಂಗಳೂರಿನತ್ತ ಮುಗಳಿ ಪರ್ವತ ಶ್ರೇಣಿಯ ಮೂಲಕ ಸಾಗುತ್ತಿದ್ದ ಲಾರ್ಡ್ ಕಾರ್ನ್‌ವಾಲೀಸನು ಮಾರ್ಗಮಧ್ಯದಲ್ಲಿದ್ದ ಕೋಲಾರವನ್ನು ೧೭೯೧ರ ಫೆಬ್ರವರಿಯಲ್ಲಿ ಸ್ವಾಧೀನಪಡಿಸಿಕೊಂಡನು. ಆದರೆ ಇದನ್ನು ೧೭೯೨ರಲ್ಲಿ ಏರ್ಪಟ್ಟ ಶ್ರೀರಂಗಪಟ್ಟಣ ಒಪ್ಪಂದದ ಪ್ರಕಾರ ಮತ್ತೆ ಟೀಪ್ಪುವಿಗೆ ಹಿಂತಿರುಗಿಸಲಾಯಿತಾದರೂ, ನಂದಿದುರ್ಗವು ಬ್ರಿಟೀಷರ ಪ್ರಮುಖ ಸೇನಾನೆಲೆಯಾಗಿಯೇ ಮುಂದುವರಿಯಿತು. ಈ ಯುದ್ಧದಲ್ಲಿ ಹೀನಾಯ ಸೋಲುಂಡ ಟೀಪು ಅಪಮಾನಕರವಾದ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಾಕಷ್ಟು ಪ್ರದೇಶಗಳನ್ನು ಕಳೆದುಕೊಂಡು ಆರ್ಥಿಕ ದಿವಾಳಿಗೆ ಈಡಾದನು. ಒಪ್ಪಂದದಂತೆ ಯುದ್ಧದಂಡವನ್ನು ಪೂರ್ಣ ಪಾವತಿಸಲಾಗದೆ, ಬಾಕಿ ಉಳಿದ ಮೊತ್ತ ಸಂದಾಯ ಮಾಡುವವರೆಗೆ ತನ್ನಿಬ್ಬರು ಮಕ್ಕಳನ್ನು ಬ್ರಿಟೀಷರಲ್ಲಿ ಒತ್ತೆ ಇಡಬೇಕಾಯಿತು.

ಈ ಸೋಲಿನಿಂದಾಗಿ ಗಾಯಗೊಂಡ ಹುಲಿಯಂತಾಗಿದ್ದ ಟೀಪು ತನ್ನೆಲ್ಲ ಶಕ್ತಿಯನ್ನು ಬ್ರಿಟೀಷರ ವಿರುದ್ಧ ಕ್ರೋಡಿಕರಿಸಲು ನಿರ್ಧರಿಸಿದರು. ಇದಕ್ಕಾಗಿ ಬ್ರಿಟೀಷರ ವಿರೋಧಿಯಾದ ಫ್ರಾನ್ಸ್‌ನ ನೆಪೋಲಿಯನ್ನನಿಗೆ ಪತ್ರ ಬರೆದು ನೆರವು ಕೋರಿದನು. ಆದರೆ ಟೀಪುವಿನ ಎಲ್ಲಾ ಯತ್ನಗಳು ವಿಫಲಗೊಂಡು ೧೭೯೯ರ ನಾಲ್ಕನೆಯ ಆಂಗ್ಲೋ– ಮೈಸೂರು ಯುದ್ಧದಲ್ಲಿ ಟೀಪು, ಬ್ರಿಟೀಷರ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತಾ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ವೀರಮರಣವನ್ನಪ್ಪಿದನು. ಇದರೊಂದಿಗೆ ಬ್ರಿಟೀಷರು ನೆಮ್ಮದಿಯಿಂದ ಉಸಿರಾಡುವಂತಾಯಿತು. ಟೀಪುವಿನ ರಾಜ್ಯವು ವಿಭಜಿಸಲ್ಪಟ್ಟು ಬ್ರಿಟೀಷರು ಹಾಗೂ ಮರಾಠರ ನಡುವೆ ಹಂಚಲ್ಪಟ್ಟು, ಹೈದರನು ಅಧಿಕಾರ ಕಬಳಿಸುವ ಮೊದಲಿದ್ದ ಸಂಸ್ಥಾನದ ಪ್ರದೇಶಗಳನ್ನಷ್ಟೇ ಮೈಸೂರರಸರಿಗೆ ನೀಡುವ ಮೂಲಕ ಅವರ ಆಡಳಿತಕ್ಕೆ ಮರುಜೀವ ನೀಡಲಾಯಿತು.

**ಮೈಸೂರು ಅರಸರಿಗೆ ಮರುಅಧಿಕಾರ**

**ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯–೧೮೩೧):** ಟೀಪು ಮರಣಾನಂತರ ಶ್ರೀರಂಗಪಟ್ಟಣ ಒಪ್ಪಂದದಂತೆ ಮೈಸೂರು ಅರಸು ಮನೆತನಕ್ಕೆ ಸಂಸ್ಥಾನವನ್ನು ಆಳಲು ಅವಕಾಶ ಲಭಿಸಿತು. ಅದರಂತೆ ಮುಮ್ಮಡಿಯವರು ೧೭೯೯ರಲ್ಲಿ ಸಿಂಹಾಸನವನ್ನು ಏರಿದರು. ಪೂರ್ಣಯ್ಯನವರನ್ನು ಸಂಸ್ಥಾನಕ್ಕೆ ದಿವಾನರನ್ನಾಗಿ

ಮಾಡಲಾಯಿತು. ಅಲ್ಲಿಂದೀಚೆಗೆ ಕೋಲಾರ ಜಿಲ್ಲಾ ಪ್ರದೇಶವು ಮೈಸೂರು ಅರಸರ ಸುಬರ್ದಿಗೆ ಒಳಪಟ್ಟು, ಸಂಸ್ಥಾನದ ಅವಿಭಾಜ್ಯ ಅಂಗವಾಗಿ ಮುಂದುವರಿಯಿತು. ಆದರೆ ಮೈಸೂರು ಸಂಸ್ಥಾನದ ಆಡಳಿತವು ಮತ್ತೆ ೧೮೩೧ರಲ್ಲಿ ಗ್ರಹಣಕ್ಕೆ ಈಡಾಗಿ ಬ್ರಿಟೀಷ್ ಕಮೀಷನ್ನರುಗಳ ಆಡಳಿತಕ್ಕೆ ಹಾದಿ ಮಾಡಿಕೊಟ್ಟಿತು.

ಏತನ್ಮಧ್ಯೆ ಟೀಪುವಿನಿಂದ ವಶಪಡಿಸಿಕೊಂಡಿದ್ದ ಮೈಸೂರು ಸಂಸ್ಥಾನದ ಪ್ರದೇಶಗಳೂ ಸೇರಿದಂತೆ ಮದ್ರಾಸ್ ಪ್ರೆಸಿಡೆನ್ಸಿಯ ದಕ್ಷಿಣ ಭಾಗದಲ್ಲಿ ಸರ್ವೇಕ್ಷಣಾ ನಡೆಸಲು ಆರ್ಥರ್ ವೆಲ್ಲೆಸ್ಲಿಯಿಂದ ನಿಯೋಜಿಸಲ್ಪಟ್ಟ ಫ್ರಾನ್ಸಿಸ್ ಬುಕಾನನ್ನನು, ೧೮೦೦ ರ ಏಪ್ರಿಲ್ ೨೩ರಂದು ಮದ್ರಾಸಿನಿಂದ ಹೊರಟು, ೧೮೦೦ರ ಮೇ ಐದರಂದು ಬೇತಮಂಗಲ ತಲುಪಿ, ಟೇಕಲ್–ಮಾಲೂರು ಮಾರ್ಗವಾಗಿ ಬೆಂಗಳೂರನ್ನು ಮೇ ೧೦ರಂದು ತಲುಪಿದನು. ಮುಂದೆ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿ, ಬೆಂಗಳೂರಿಗೆ ಹಿಂತಿರುಗಿದ ಅವನು ವಕ್ಕಲೇರಿ (ಜುಲೈ ೬), ಕೋಲಾರ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಮಾರ್ಗವಾಗಿ ಮುನ್ನಡೆದು, ಬೆಂಗಳೂರು ಜಿಲ್ಲಾ ಗಡಿಯನ್ನು ಪ್ರವೇಶಿಸಿದನು. ಇವನ ಪ್ರವಾಸ ವರದಿಯಿಂದ ಜಿಲ್ಲೆಯ ಅಂದಿನ ಸಾಮಾಜಿಕ–ಆರ್ಥಿಕ ಚಿತ್ರಣವನ್ನೂ ಗ್ರಹಿಸಬಹುದಾಗಿದೆ.

**ಕಮೀಷನ್ನರುಗಳ ಆಡಳಿತ (೧೮೩೧–೧೮೮೧)**

ಈ ಅವಧಿಯಲ್ಲಿ ಜಿಲ್ಲೆಯಲ್ಲಿ ನೀರಾವರಿಗೆ ಪೂರಕವಾಗಿ ಕೆರೆಗಳ ಅಭಿವೃದ್ಧಿ ಹಾಗೂ ನಿರ್ಮಾಣ, ಸಾರಿಗೆ ಸಂಪರ್ಕ ವ್ಯವಸ್ಥೆಗೆ ಸಂಬಂಧಿಸಿದಂತೆ ರಸ್ತೆ ಸೇತುವೆಗಳ ನಿರ್ಮಾಣ; ಅದರಲ್ಲೂ ರೈಲು ಮಾರ್ಗಗಳ ನಿರ್ಮಾಣ ಹಾಗೂ ಕೋಲಾರ ಚಿನ್ನದ ಗಣಿ ಉದ್ಯಮದ ಪ್ರಾರಂಭದಂತಹ ಘಟನೆಗಳು ಜಿಲ್ಲೆಯ ಆರ್ಥಿಕ ಸ್ವರೂಪವನ್ನು ಬದಲಿಸಿದ ಮಹತ್ವದ ಬೆಳವಣಿಗೆಗಳು. ಕಮೀಷನರ್ ಎಲ್.ಬಿ.ಬೌರಿಂಗ್‌ರ ಆಡಳಿತಾವಧಿಯಲ್ಲಿ ಮದ್ರಾಸ್–ಬೆಂಗಳೂರು ಬ್ರಾಡ್‌ಗೇಜು ರೈಲುಮಾರ್ಗವು ೧೮೬೪ರಲ್ಲಿ ಸಂಚಾರಕ್ಕೆ ತೆರೆಯಲ್ಪಟ್ಟಿತ್ತು, ಕೋಲಾರದ ಚಿನ್ನದಗಣಿಯು ೧೮೮೧ರಿಂದ ಅಧಿಕೃತವಾಗಿ ತನ್ನ ಉತ್ಪಾದನೆಯನ್ನು ಆರಂಭಿಸಿತು.

**ಮೈಸೂರು ಅರಸರ ರಾಜ್ಯ ಪುನರ್ಧಾರಣ:** ಕಮೀಷನ್ನರುಗಳ ಆಡಳಿತ ಅಂತ್ಯಗೊಂಡ ನಂತರ (೧೮೮೧) ಸಂಸ್ಥಾನದ ಆಡಳಿತವು ಪುನರಾರಂಭಗೊಂಡಿತಾದರೂ ಆಳರಸರ ಅಧೀನದಲ್ಲಿದ್ದ ದಿವಾನರು ಆಡಳಿತದಲ್ಲಿ ಹಿರಿದಾದ ಪಾತ್ರ ವಹಿಸಲಾರಂಭಿಸಿದರು. **ನಾಲ್ವಡಿ ಕೃಷ್ಣರಾಜ ಒಡೆಯರ್** (೧೮೯೪–೧೯೪೦) ಅವರ ಆಡಳಿತಾವಧಿಯಲ್ಲಿ ಸಂಸ್ಥಾನವು ಆಧುನಿಕತೆಯ ಪಥದಲ್ಲಿ ಮುನ್ನಡೆಯುವ ಮೂಲಕ ಮಾದರಿ ರಾಜ್ಯವಾಗಿ ಪ್ರಗತಿ ಹೊಂದಿ, ಗಾಂಧೀಜಿಯವರಿಂದ 'ರಾಮರಾಜ್ಯ', 'ಮಾದರಿ ರಾಜ್ಯ' ಎಂಬ ಮೆಚ್ಚುಗೆಗೂ ಪಾತ್ರವಾಯಿತು. ಈ ಅವಧಿಯಲ್ಲಿ ಪೂರ್ಣಯ್ಯ, ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್‌ರಂತಹ ಸಮರ್ಥ ದಿವಾನರೂ ಆಳರಸರೊಂದಿಗೆ ಕೈಜೋಡಿಸಿದ್ದರಿಂದ ಇದೆಲ್ಲ ಸಾಧ್ಯವಾಯಿತು. ಬೆಂಗಳೂರು–ಹಿಂದೂಪುರ ಮೀಟರ್‌ಗೇಜ್ ಮಾರ್ಗವು ೧೮೯೧ರಲ್ಲಿ ಸಾರಿಗೆ ಸೇವೆಯನ್ನು ಆರಂಭಿಸಿತು. ಕೋಲಾರ–ಮಾರಿಕುಪ್ಪಂ ಬ್ರಾಡ್‌ಗೇಜ್ ಮಾರ್ಗವನ್ನು ೧೮೯೪ರಲ್ಲಿ ಆರಂಭಿಸುವ ಮೂಲಕ ಚಿನ್ನದ ಗಣಿ ಪ್ರದೇಶಕ್ಕೂ ರೈಲು ಸಾರಿಗೆಯನ್ನು ಕಲ್ಪಿಸಿಕೊಡಲಾಯಿತು. ಕೋಲಾರ ಚಿನ್ನದ ಗಣಿಗೆ ವಿದ್ಯುತ್ ಸೌಕರ್ಯವನ್ನು ಒದಗಿಸುವ ಸಲುವಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಶಿವಸಮುದ್ರದಲ್ಲಿ, ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ೧೯೦೨ರಲ್ಲಿ ಆರಂಭಿಸಿ ಕೆ.ಜಿ.ಎಫ್.ಗೆ ವಿದ್ಯುತ್ತನ್ನು ಸರಬರಾಜು ಮಾಡಿದ್ದು ಅಂದಿನ ದಿನಗಳಲ್ಲಿ ಒಂದು ಮೈಲಿಗಲ್ಲಾಗಿ ಪರಿಣಮಿಸಿತು. ಬೆಂಗಳೂರು–ಯಲಹಂಕ–ಚಿಕ್ಕಬಳ್ಳಾಪುರ–ಕೋಲಾರ–ಬಂಗಾರಪೇಟೆ ನಡುವಣ ನ್ಯಾರೋಗೇಜ್ ಮಾರ್ಗವನ್ನು ನಾಲ್ಕು ಹಂತಗಳಲ್ಲಿ (೧೯೧೨–೧೮) ಪೂರೈಸಲಾಯಿತು. ಅದರಂತೆ ಮೊದಲ ಮೂರು ಹಂತದಲ್ಲಿ ಬಂಗಾರಪೇಟೆ–ಕೋಲಾರ

(೧೯೧೩), ಕೋಲಾರ–ಚಿಕ್ಕಬಳ್ಳಾಪುರ (೧೯೧೬) ಹಾಗೂ ಚಿಕ್ಕಬಳ್ಳಾಪುರ–ಯಲಹಂಕ (೧೯೧೫) ನ್ಯಾರೋಗೇಜ್ ಮಾರ್ಗಗಳ ರಚನೆಯು ಜಿಲ್ಲೆಯ ಆಂತರಿಕ ಸಾರಿಗೆ ಸೇವೆಯನ್ನು ಗಣನೀಯವಾಗಿ ಸುಧಾರಿಸಿತು. ಮುಂದೆ, ಬೆಂಗಳೂರು–ಯಲಹಂಕ ನಡುವಣ ಮಾರ್ಗವನ್ನು ೧೯೧೮ರಲ್ಲಿ ಪೂರೈಸುವ ಮೂಲಕ ಬೆಂಗಳೂರು–ಕೋಲಾರ ನಡುವೆ ನ್ಯಾರೋಗೇಜು ರೈಲು ಸಂಪರ್ಕವನ್ನು ಕಲ್ಪಿಸಿದಂತಾಯಿತು.

೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ಮೊದಲು ಸಂಸ್ಥಾನದ ಮುಖ್ಯ ಎಂಜಿನಿಯರರಾಗಿ (೧೯೦೯–೧೨), ಅನಂತರ ದಿವಾನ (೧೯೧೨–೧೮)ರಾಗಿ ಸೇವೆ ಸಲ್ಲಿಸಿದ ಸರ್.ಎಂ.ವಿಶ್ವೇಶ್ವರಯ್ಯ (೧೮೬೧–೧೯೬೩)ನವರು ಚಿಕ್ಕಬಳ್ಳಾಪುರ ತಾಲೂಕಿನ ಮುದ್ದೇನಹಳ್ಳಿಯವರಾಗಿದ್ದು, ಸಂಸ್ಥಾನದ ಅಭ್ಯುದಯಕ್ಕಾಗಿ ದುಡಿದವರಲ್ಲಿ ಅಗ್ರಗಣ್ಯರಾಗಿದ್ದರು. ಸೆಪ್ಟೆಂಬರ್ ೧೫ರ ೧೮೬೧ರಂದು ಚಿಕ್ಕಬಳ್ಳಾಪುರ ತಾಲೂಕಿನ ಮುದ್ದೇನಹಳ್ಳಿಯಲ್ಲಿ ಜನಿಸಿದ ಇವರು, ಪ್ರೌಢ ಶಿಕ್ಷಣವನ್ನು ಚಿಕ್ಕಬಳ್ಳಾಪುರದಲ್ಲೂ, ಬಿ.ಎ ಪದವಿಯನ್ನು ಬೆಂಗಳೂರಿನಲ್ಲೂ, ಹಾಗೂ ಬಿ.ಇ ಪದವಿಯನ್ನು ಪುಣೆಯಲ್ಲೂ ಪಡೆದು, ಮುಂಬೈ–ಹೈದರಾಬಾದುಗಳಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿ, ಖ್ಯಾತಿ ಪಡೆದು ೧೯೦೯ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮುಖ್ಯ ಇಂಜಿನಿಯರ್ ಆಗಿ ನೇಮಕಗೊಂಡರು. ಮುಂದೆ ಸಂಸ್ಥಾನಕ್ಕೆ ದಿವಾನರೂ ಆದರು. ಇವರು ದಿವಾನರಾಗಿದ್ದ ಅವಧಿಯಲ್ಲಿ ಕಾವೇರಿ ನದಿಗೆ ಕನ್ನಂಬಾಡಿ ಅಣೆ ನಿರ್ಮಿಸಿ ರೈತರ ಉಸಿರಾದರು. ಹಲವಾರು ಕಾರ್ಖಾನೆಗಳನ್ನು ಆರಂಭಿಸುವ ಮೂಲಕ ಸಂಸ್ಥಾನದಲ್ಲಿ ಕೈಗಾರಿಕಾ ಕ್ರಾಂತಿಗೆ ನಾಂದಿ ಹಾಡಿದರು. "ಔದ್ಯೋಗಿಕರಣ ಇಲ್ಲವೇ ಸರ್ವನಾಶ" ಎಂಬ ಮಂತ್ರವನ್ನು ಘೋಷಿಸುವ ಮೂಲಕ ಸಂಸ್ಥಾನದ ಆರ್ಥಿಕ ಅಭ್ಯುದಯಕ್ಕೆ ಕಾರಣೀಭೂತರಾದರು. ಶಿಸ್ತು, ಪ್ರಾಮಾಣಿಕತೆ ಹಾಗೂ ಕರ್ತವ್ಯನಿಷ್ಠೆಗಳಿಗೆ ಹೆಸರಾಗಿದ್ದ, ಸರ್.ಎಂ.ವಿಶ್ವೇಶ್ವರಯ್ಯನವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ನೀಡುವ ಮೂಲಕ ಕೇಂದ್ರ ಸರ್ಕಾರವೂ ಅವರ ಸೇವೆಯನ್ನು ಗೌರವಿಸಿದೆ.

## ಸ್ವಾತಂತ್ರ್ಯ ಆಂದೋಲನ

**ರಾಜಕೀಯ ಜಾಗೃತಿ** : ಬ್ರಿಟೀಷ್ ಕಮೀಷನರುಗಳ ಆಡಳಿತಕ್ಕೆ ಒಳಪಡುವ ಮೂಲಕ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಾದ ಬದಲಾವಣೆಗಳಿಂದಾಗಿ ಸಂಸ್ಥಾನದಲ್ಲೂ ಜನಜಾಗೃತಿ, ರಾಜಕೀಯ ಅರಿವು ಮೂಡಲಾರಂಭಿಸಿತು. ತತ್ಪರಿಣಾಮವಾಗಿ ದಿವಾನ್ ರಂಗಾಚಾರ್ಲು ಅವರ ಸೇವಾವಧಿಯಲ್ಲಿ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯು (೧೮೮೧) ಆರಂಭಗೊಂಡಿದ್ದು ಇಡಿ ದೇಶಕ್ಕೆ ಮೊದಲ ಉದಾಹರಣೆಯಾಗಿತ್ತು. ಇದರ ಸದಸ್ಯರು ಚುನಾವಣೆ ಮೂಲಕ ಆಯ್ಕೆಗೊಂಡಿರದಿದ್ದರೂ ಸಾರ್ವಜನಿಕ ಕುಂದು–ಕೊರತೆಗಳನ್ನು ರಾಜಪ್ರಭುತ್ವದ ಗಮನಕ್ಕೆ ತರುವ ಮೂಲಕ ಮಹತ್ವದ ಪಾತ್ರ ವಹಿಸಲಾರಂಭಿಸಿದರು. ಇದಕ್ಕೆ ಸದಸ್ಯರನ್ನು ಆರಂಭದಲ್ಲಿ ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ನಾಮಕರಣ ಮಾಡುತ್ತಿದ್ದು, ಅವರ ಆಯ್ಕೆಯಲ್ಲಿ ಆಸ್ತಿ/ತೆರಿಗೆ ಪ್ರಮಾಣವನ್ನು ಅಳತೆಗೋಲಾಗಿ ಪರಿಗಣಿಸಲಾಗಿತ್ತು. ಈ ಸಭೆಯ ಮೊದಲನೆಯ ಸಮಾವೇಶ(೧೮೮೧)ದಲ್ಲಿ ಕೋಲಾರ ಜಿಲ್ಲೆಯಿಂದಲೂ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಏತನ್ಮಧ್ಯೆ ಸುಮಾರು ೧೮೮೫ರಲ್ಲಿ ರಾಷ್ಟ್ರಮಟ್ಟದಲ್ಲಿ ಸ್ಥಾಪನೆಗೊಂಡ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಕ್ರಮೇಣ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಆಂದೋಲನಕ್ಕೆ ಭದ್ರ ವೇದಿಕೆಯಾಗಿ ಮಾರ್ಪಟ್ಟಿತು. ಮುಂದೆ ೧೯೦೭ರಲ್ಲಿ ನ್ಯಾಯವಿಧಾಯಕ ಸಭೆ (ಲೆಜಿಸ್ಲೇಟಿವ್ ಕೌನ್ಸಿಲ್)ಯನ್ನು ದಿವಾನ ವಿ. ಮಾಧವರಾವ್ ಆರಂಭಿಸುವ ಮೂಲಕ ಸಂಸ್ಥಾನದಲ್ಲಿ ದ್ವಿಸದನ ಶಾಸನಾಂಗ ವ್ಯವಸ್ಥೆಗೆ ನಾಂದಿ ಹಾಡಿದರು. ತತ್ಪರಿಣಾಮವಾಗಿ ದಿನದಿಂದ ದಿನಕ್ಕೆ ಜನಜಾಗೃತಿ ಅಧಿಕಗೊಳ್ಳಲಾರಂಭಿಸಿತು. ಜನರನ್ನು ಪ್ರತಿನಿಧಿಸುವ ಪ್ರಜಾಮಿತ್ರಮಂಡಲಿ (೧೯೧೭)ಯಂತಹ ರಾಜಕೀಯ ಪಕ್ಷಗಳು ಸಂಸ್ಥಾನದಲ್ಲಿ ತಲೆ ಎತ್ತುವ ಮೂಲಕ ಆಡಳಿತದಲ್ಲಿ ಪ್ರಜೆಗಳ ಪಾಲ್ಗೊಳ್ಳುವಿಕೆ ಹೆಚ್ಚಾಗಲಾರಂಭಿಸಿತು. ಇದೇ ಪರಿಸ್ಥಿತಿ ಸಂಸ್ಥಾನದ ಅವಿಭಾಜ್ಯ ಅಂಗವಾಗಿದ್ದ ಕೋಲಾರ ಜಿಲ್ಲೆಯಲ್ಲೂ ಕಂಡು ಬಂದಿತು.

ರಾಷ್ಟ್ರಮಟ್ಟದಲ್ಲಿ ಗೋಪಾಲಕೃಷ್ಣ ಗೋಖಲೆ, ಲೋಕಮಾನ್ಯ ಬಾಲಗಂಗಾಧರ ತಿಲಕ್ ಹಾಗೂ ಮಹಾತ್ಮಗಾಂಧಿಯವರಂತಹ ಉನ್ನತ ಶ್ರೇಣಿಯ ನಾಯಕರ ಭಾಷಣ–ಬರವಣಿಗೆಗಳು, ಜನರಲ್ಲಿ ರಾಷ್ಟ್ರಕಲ್ಯಾಣಕ್ಕಾಗಿ ದನಿಯೆತ್ತುವ, ಹೋರಾಡುವ ಮನೋಭಾವವನ್ನು ಮೂಡಿಸುವಲ್ಲಿ ಯಶಸ್ವಿಯಾದವು. ೧೯೦೫ರ ವಂಗಭಂಗ ಚಳವಳಿ, ೧೯೦೬ರಲ್ಲಿ ತಿಲಕರು ಪ್ರಾರಂಭಿಸಿದ ಸ್ವದೇಶಿ ಚಳವಳಿ, ವಿದೇಶಿ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಹಾಗೂ ಸ್ವರಾಜ್ಯ ಬೇಡಿಕೆಗಳನ್ನೊಳಗೊಂಡ ಚತುರ್‌ಸೂತ್ರ ಚಳವಳಿ ಹಾಗೂ ಹೋಮ್‌ರೂಲ್ ಚಳವಳಿಗಳ ಕಾವು ಸಂಸ್ಥಾನದಲ್ಲಿ ಅಷ್ಟಕ್ಕಷ್ಟೇ ಇದ್ದ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯಲ್ಲಿನ ಪರಿಸ್ಥಿತಿಯಲ್ಲಿ ಏನೇನೂ ವ್ಯತ್ಯಾಸವಿರಲಿಲ್ಲವೆಂದೇ ಹೇಳಬೇಕು. ಅಂತಹ ದಿನಗಳಲ್ಲಿ ೧೯೧೫ರ ಮೇ ೨೦ ರಂದು ಮದ್ರಾಸಿನಿಂದ ಒಂದು ದಿನದ ಕಾರ್ಯಕ್ರಮಕ್ಕಾಗಿ ಬೆಂಗಳೂರಿಗೆ ಆಗಮಿಸುತ್ತಿದ್ದ ಗಾಂಧೀಜಿಯವರಿಗೆ ಬಂಗಾರಪೇಟೆಯ ಗುಜರಾತಿ ವರ್ತಕ ಸಮುದಾಯದವರು, ಮಾರ್ಗಮಧ್ಯದಲ್ಲಿರುವ ಬಂಗಾರಪೇಟೆಯ ರೈಲ್ವೆ ನಿಲ್ದಾಣದಲ್ಲೇ ಹೂಮಾಲೆ ಹಾಕಿ ಸನ್ಮಾನಿಸಿದರು. ಇದು ಸಂಸ್ಥಾನಕ್ಕೆ ಗಾಂಧೀಜಿಯವರ ಮೊದಲ ಭೇಟಿಯಾಗಿದ್ದು, ಅವರನ್ನು ಸಂಸ್ಥಾನದಲ್ಲಿ ಮೊದಲಿಗರಾಗಿ ಸನ್ಮಾನಿಸಿದ ಶ್ರೇಯಸ್ಸು, ಜಿಲ್ಲೆಯ ಬಂಗಾರಪೇಟೆಯ ಜನತೆಗೆ ಸಲ್ಲುತ್ತದೆ. ಮುಂದೆ ಧಾರವಾಡದಲ್ಲಿ ಜರುಗಿದ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನವು (೧೯೨೦) ಕನ್ನಡಿಗರ ರಾಜಕೀಯ ಆಕಾಂಕ್ಷೆಗಳಿಗೆ ಸ್ಫೂರ್ತಿಯನ್ನು ನೀಡಿತು. ಆ ಸಮ್ಮೇಳನದಲ್ಲಿ ನಡೆದ ಚರ್ಚೆಯ ಪರಿಣಾಮವಾಗಿ ೧೯೨೦ರ ನಾಗಪುರ ಕಾಂಗ್ರೆಸ್ ಸಮಾವೇಶದಲ್ಲಿ ಕರ್ನಾಟಕದಿಂದ ಸುಮಾರು ೮೦೦ಕ್ಕೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು, ಕರ್ನಾಟಕಕ್ಕೆ ಪ್ರತ್ಯೇಕ ಕಾಂಗ್ರೆಸ್ ಸಮಿತಿ ಬೇಕೆಂದು ಒತ್ತಾಯಿಸಿ, ಅದನ್ನು ಪಡೆಯುವಲ್ಲಿ ಯಶಸ್ವಿಯಾದರು. ತತ್ಪರಿಣಾಮವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ೧೯೨೦ರಲ್ಲಿ ಅಸ್ತಿತ್ವಕ್ಕೆ ಬಂದಿತಾದರೂ ಅದರ ಚಟುವಟಿಕೆಗಳು ಮದ್ರಾಸ್ ಹಾಗೂ ಮುಂಬಯಿ ಕರ್ನಾಟಕ ಪ್ರಾಂತಕ್ಕೆ ಮಾತ್ರ ಸೀಮಿತವಾಗಿದ್ದು, ಸಂಸ್ಥಾನದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯೂ ಅದೇ ವರ್ಷ ಅಸ್ತಿತ್ವಕ್ಕೆ ಬಂದಿತು. ಅಲ್ಲದೇ ಆ ವೇಳೆಗಾಗಲೇ ಅಸ್ತಿತ್ವದಲ್ಲಿದ್ದ ಪ್ರಜಾಮಿತ್ರಮಂಡಲಿ ಪಕ್ಷವು ಹಿಂದುಳಿದ ವರ್ಗದವರ ಏಳಿಗೆಯನ್ನೇ ಪ್ರಧಾನ ಗುರಿಯನ್ನಾಗಿ ಹೊಂದಿದ್ದು, ಅದಕ್ಕಾಗಿ ಸಂಸ್ಥಾನದಲ್ಲಿ ಪರಿಶ್ರಮಿಸುತ್ತಿತ್ತು. ಮುಂದೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕೋರಿಕೆಯಂತೆ ೧೯೨೪(ಬೆಳಗಾವಿ)ರಲ್ಲಿ ಜರುಗಿದ ೩೯ನೆಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಮಹಾತ್ಮ ಗಾಂಧೀಜಿಯವರು ವಹಿಸಿದ್ದು ಅಪರೂಪದ ಘಟನೆಯಾಗಿತ್ತು. ಆ ಅಧಿವೇಶನಕ್ಕೆ ಕೋಲಾರ ಜಿಲ್ಲೆಯಿಂದಲೂ ಪ್ರತಿನಿಧಿಗಳು ಭಾಗವಹಿಸಿರುವ ಸಾಧ್ಯತೆಗಳಿವೆಯಾದರೂ ಪೂರಕ ಮಾಹಿತಿ ಲಭ್ಯವಿಲ್ಲ. ಆದರೆ ಈ ಸಮಾವೇಶದಿಂದಾಗಿ ಕರ್ನಾಟಕದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತಾಯಿತು. ಈ ನಡುವೆ ರಾಷ್ಟ್ರೀಯ ಚಳವಳಿಯ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದಂತಹ ಜನ ಸಾಕಷ್ಟು ಸಂಖ್ಯೆಯಲ್ಲಿ ಸಂಸ್ಥಾನದೊಳಗಿದ್ದರು. ಆದರೆ ಅವರಿಗೆ ಸಂಸ್ಥಾನದಲ್ಲಿ ಕ್ರಿಯಾಶೀಲವಾಗಿರಲು ಸಾಧ್ಯವಾಗದ ಕಾರಣ, ಇತರೆಡೆ ಹೋಗಿ ಚಳವಳಿಯಲ್ಲಿ ಭಾಗವಹಿಸಬೇಕಾಯಿತು. ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ರಚನೆಗಾಗಿ ಬೇಡಿಕೆ ನಿರಂತರವಾಗಿ ಇದ್ದೇ ಇತ್ತು. ಅಲ್ಲದೇ ಸಂಸ್ಥಾನದಲ್ಲೂ ಕಾಂಗ್ರೆಸ್ ತನ್ನ ಪ್ರಭಾವವನ್ನು ಬೀರಲಾರಂಭಿಸಿತು.

**ನಂದಿಬೆಟ್ಟದಲ್ಲಿ ಗಾಂಧೀಜಿ (೧೯೨೭):** ಖಾದಿ ಪ್ರಚಾರಕ್ಕಾಗಿ ದಕ್ಷಿಣ ಭಾರತದಲ್ಲಿ ಗಾಂಧೀಜಿಯವರು ೧೯೨೭ರಲ್ಲಿ ಪ್ರವಾಸ ಕೈಗೊಂಡಿದ್ದಾಗ ಮಾರ್ಗ ಮಧ್ಯದಲ್ಲಿ ಲಘುಪಾರ್ಶ್ವ(ಲಕ್ವ)ವಾಯುವಿಗೆ ತುತ್ತಾದರು. ಆಗ ಅವರಿಗೆ ವಿಶ್ರಾಂತಿ ಪಡೆಯುವಂತೆ ಸೂಚಿಸಲಾಯಿತು. ಬೆಳಗಾವಿ ಬಳಿಯ ಅಂಬೋಲಿ ಗಿರಿಧಾಮಕ್ಕೆ ಹೋದರಾದರೂ ಅಲ್ಲಿನ ಹವಾಗುಣ ಹಿಡಿಸದಿದ್ದಾಗ, ಅಲ್ಲಿಂದ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿರುವ ನಂದಿಬೆಟ್ಟಕ್ಕೆ ಗಾಂಧೀಜಿಯವರು, ಮಡದಿ ಕಸ್ತೂರಿ ಬಾ ಹಾಗೂ ಹಂಜಾ ಹುಸೇನರೊಂದಿಗೆ ೧೯೨೭ರ ಏಪ್ರಿಲ್ ೨೦ರಂದು ಆಗಮಿಸಿದರು. ಅವರನ್ನು ಸುಲ್ತಾನಪೇಟೆ ಕಡೆಯಿಂದ ಡೋಲಿಯಲ್ಲಿ ಕೂರಿಸಿಕೊಂಡು

೧೭೭೫ ಮೆಟ್ಟಲುಗಳುಳ್ಳ ಎರಡು ಮೈಲಿ ಕಡಿದಾದ ಮಾರ್ಗವನ್ನು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸುಲ್ತಾನಪೇಟೆಯ ಸ್ವಯಂಸೇವಕರು ಉತ್ಸಾಹದಿಂದ ಏರಿದರು. ಪ್ರಶಾಂತವೂ ರಮ್ಯವೂ ಆಹ್ಲಾದಕರವೂ ಆದ ನಂದಿಗಿರಿಧಾಮದಲ್ಲಿ ಗಾಂಧೀಜಿಯವರು ಜೂನ್ ನಾಲ್ಕರವರೆಗೆ ಒಟ್ಟು ೪೫ ದಿನ ತಂಗಿದ್ದರು. ವಿಶ್ರಾಂತಿಗಾಗಿಯೇ ಬಂದಿದ್ದ ಅವರು ಈ ಅವಧಿಯಲ್ಲಿ ಯಾವುದೇ ಸಮಾರಂಭದಲ್ಲೂ ಭಾಗವಹಿಸದೆ ನಂದಿಯಲ್ಲೇ ಸಂಸ್ಥಾನದ ಅತಿಥಿಗಳಾಗಿ ತಂಗಿದ್ದರು. ಅಲ್ಲಿಯ ಕನ್ನಿಂಗ್ ಹ್ಯಾಂ ಭವನದಲ್ಲಿ ಗಾಂಧಿ ಪರಿವಾರಕ್ಕೆ ಸೂಕ್ತ ವ್ಯವಸ್ಥೆ ಮಾಡಲಾಗಿತ್ತು. ವ್ಯವಸ್ಥೆಯ ಉಸ್ತುವಾರಿಗಾಗಿ ಸಿ.ರಾಜಗೋಪಾಲಾಚಾರಿ ಮುಂದಾಗಿಯೇ ಗಿರಿಧಾಮಕ್ಕೆ ಆಗಮಿಸಿದ್ದರು. ಕೆಂಗೇರಿಯ ಗುರುಕುಲದ ಬ್ರಹ್ಮಚಾರಿ ರಾಮಚಂದ್ರ ಎಲ್ಲರಿಗಿಂತ ಮೊದಲೇ ನಂದಿಗೆ ಹೋಗಿ, ಗಾಂಧಿ ಪರಿವಾರಕ್ಕೆ ಬೇಕಾದ ವ್ಯವಸ್ಥೆಯನ್ನು ರೂಪಿಸುವಲ್ಲಿ ನಿರತರಾಗಿದ್ದರು. ಪ್ರತಿ ದಿನ ಸಂಜೆ ಗಾಂಧೀಜಿಯವರು ವಾಯುಸಂಚಾರದಿಂದ ಹಿಂತಿರುಗುತ್ತಿದ್ದಂತೆ ಪ್ರಾರ್ಥನೆ ನಡೆಯುತ್ತಿತ್ತು. ಗಾಂಧೀಜಿಯವರನ್ನು ಭೇಟಿಯಾಗಲು ದೇಶದ ವಿವಿಧ ಭಾಗಗಳಿಂದ ನಂದಿಬೆಟ್ಟಕ್ಕೆ ರಾಷ್ಟ್ರನಾಯಕರು ಬಂದು ಹೋಗುವುದು ಸರ್ವೇಸಾಮಾನ್ಯವಾಗಿತ್ತು. ಜಿಲ್ಲೆಯವರಾದ ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿ, ಟಿ.ರಾಮಾಚಾರ್, ಕೆ.ಸಂಪಂಗಿರಾಮಯ್ಯ, ಎನ್.ಸಿ.ತಿಮ್ಮಾರೆಡ್ಡಿ, ಎನ್.ಸಿ.ನಾಗಯ್ಯರೆಡ್ಡಿ ಹಾಗೂ ಇತರರು ಈ ವೇಳೆಗಾಗಲೇ ರಾಜಕೀಯ ರಂಗದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಬಂಗಾರಪೇಟೆ ತಾಲೂಕಿನ ಕ್ಯಾಸಂಬಳ್ಳಿಯ ರೆಡ್ಡಿ ರೈತ ಕುಟುಂಬವೊಂದರಲ್ಲಿ ೧೯೦೨ರಲ್ಲಿ ಜನಿಸಿದ ಚೆಂಗಲರಾಯರೆಡ್ಡಿಯವರು ಕೋಲಾರದ ಚಿನ್ನದಗಣಿಯಲ್ಲಿದ್ದ ಬ್ರಿಟೀಷರ ಆಂಗ್ಲ ಶಾಲೆಯಲ್ಲಿ ಮಾಧ್ಯಮಿಕ ಹಂತದವರೆಗಿನ ಶಿಕ್ಷಣ ಪಡೆದು ಮುಂದೆ ಬೆಂಗಳೂರಿನ ಲಂಡನ್ ಮಿಷನ್ ಶಾಲೆಯಲ್ಲಿ ಪ್ರೌಢ ಶಿಕ್ಷಣ ಪಡೆದರು. ಅನಂತರ ಮದ್ರಾಸ್‌ನಲ್ಲಿ ಬಿ.ಎ. ಹಾಗೂ ಬಿ.ಎಲ್. ಪದವಿಯನ್ನು ೧೯೨೦–೨೬ರ ಅವಧಿಯಲ್ಲಿ ಪಡೆದುಕೊಂಡರು. ಅಲ್ಲದೇ ಇವರು ಮದ್ರಾಸಿನಲ್ಲಿದ್ದಾಗ ಮಹಾತ್ಮಗಾಂಧಿ, ಅನಿಬೆಸೆಂಟ್‌ರಂತಹ ರಾಷ್ಟ್ರನಾಯಕರ ವೈಚಾರಿಕ ಭಾಷಣಗಳಿಂದ ಪ್ರೇರೇಪಿತರಾಗಿದ್ದರು. ಇವರು ಅಲ್ಲಿದ್ದ ಸಂದರ್ಭದಲ್ಲಿ ಹುಟ್ಟಿದ ಸೌತ್ ಇಂಡಿಯನ್ ಲಿಬರಲ್ ಫೆಡರೇಷನ್ ಪಕ್ಷವು ಬ್ರಾಹ್ಮಣೇತರ ಪಕ್ಷವಾಗಿದ್ದು, ಮುಂದೆ 'ಜಸ್ಟಿಸ್ ಪಕ್ಷವೆಂದು ಪ್ರಸಿದ್ಧವಾಯಿತು. ಮಿಗಿಲಾಗಿ ೧೯೨೦ರಲ್ಲಿ ನಡೆದ ಪ್ರಾಂತೀಯ ಚುನಾವಣೆಯಲ್ಲಿ ಈ ಪಕ್ಷವು ಬಹುಮತ ಗಳಿಸಿ ಅಧಿಕಾರವನ್ನೂ ಪಡೆದುಕೊಂಡಿತು. ಇದನ್ನು ಕಣ್ಣಾರೆ ಮದ್ರಾಸಿನಲ್ಲಿ ಕಂಡಿದ್ದ ಕೆ.ಸಿ.ರೆಡ್ಡಿಯವರು ಸ್ವಗ್ರಾಮಕ್ಕೆ ಹಿಂತಿರುಗಿದ ನಂತರ ಕೋಲಾರದಲ್ಲಿ ವಕೀಲವೃತ್ತಿಗೆ ತೊಡಗುವುದರ ಜೊತೆಗೆ ಸಮಾಜಸೇವೆಗೂ ಮುಂದಾದರು. ಆ ಸಂದರ್ಭದಲ್ಲಿ ಅನಾರೋಗ್ಯದಿಂದಾಗಿ ನಂದಿಬೆಟ್ಟದಲ್ಲಿ ತಂಗಿದ್ದ ಮಹಾತ್ಮಗಾಂಧಿಯವರನ್ನು ಕೆ.ಸಿ.ರೆಡ್ಡಿ ಮೊದಲ ಬಾರಿ ಭೇಟಿ ಮಾಡಿದರು. ಆ ಭೇಟಿಯಲ್ಲೇ ಗಾಂಧೀಜಿಯವರ ವ್ಯಕ್ತಿತ್ವದಿಂದ ಪ್ರಭಾವಿತರಾದ ಕೆ.ಸಿ.ರೆಡ್ಡಿಯವರು ದೇಶಸೇವೆಗೆ ತಮ್ಮನ್ನು ಅರ್ಪಿಸಿಕೊಳ್ಳಲು ನಿರ್ಧರಿಸಿದರು. ಮಿಗಿಲಾಗಿ ದೇಶೀಯ ಅರಸರ ಸಂಸ್ಥಾನಗಳಲ್ಲಿ ಬ್ರಿಟೀಷ್ ಪ್ರಾಂತದಲ್ಲಿನ ಸ್ವಾತಂತ್ರ್ಯ ಆಂದೋಲನ ಚಳವಳಿಗೆ ಬದಲಾಗಿ ಗ್ರಾಮಗಳ ನೈರ್ಮಲ್ಯ, ಹರಿಜನೋದ್ಧಾರಕ್ಕಾಗಿ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ರೆಡ್ಡಿಯವರಿಗೆ ಗಾಂಧೀಜಿಯವರು ಸಲಹೆ ನೀಡಿದ್ದರು.

ನಿಗಧಿತ ಅವಧಿಗೆ ಮೊದಲೇ ನಂದಿಬೆಟ್ಟದಿಂದ ೧೯೨೭ರ ಜೂನ್ ಐದರಂದು ಹೊರಟು ಚಿಕ್ಕಬಳ್ಳಾಪುರ ಮಾರ್ಗವಾಗಿ ಬೆಂಗಳೂರನ್ನು ಅಂದು ರಾತ್ರಿಯೇ ಗಾಂಧೀಜಿ ತಲುಪಿದರು. ಗಾಂಧೀಜಿಯವರಿಗಾಗಿ ಚಿಕ್ಕಬಳ್ಳಾಪುರದಲ್ಲಿ ಅಂದು ಏರ್ಪಡಿಸಿದ್ದ ಸಭೆಯಲ್ಲಿ ತಾಲೂಕಿನ ಜನತೆ ಹಾಗೂ ಹರಿಜನರು ಪ್ರತ್ಯೇಕ ಭಿನ್ನವತ್ತಳೆ ಹಾಗೂ ಹರಿಜನ ನಿಧಿಯನ್ನು ನೀಡಿದರು. ಸನ್ಮಾನಕ್ಕೆ ಮಾರುತ್ತರಿಸಿದ ಗಾಂಧೀಜಿ, ಅಸ್ಪೃಶ್ಯತೆಯನ್ನು ತೊಡೆದು ಹಾಕುವಂತೆ ಕರೆ ನೀಡಿದರು.

ನಂದಿಧಾಮದಿಂದ ಗಾಂಧೀಜಿಯವರು ನಿರ್ಗಮಿಸುತ್ತಿದ್ದಂತೆ (ಜೂನ್ ೫, ೧೯೨೭) ಕೋಲಾರಕ್ಕೆ ಹಿಂತಿರುಗಿದ ಕೆ.ಸಿ.ರೆಡ್ಡಿಯವರು ಸಾರ್ವಜನಿಕಸೇವೆ, ದಲಿತೋದ್ಧಾರ ಕಲ್ಯಾಣಕ್ಕಾಗಿ ಸೂಕ್ತ ವೇದಿಕೆ ಹುಡುಕುತ್ತಿದ್ದ ಸಂದರ್ಭದಲ್ಲಿ ಆ ವೇಳೆಗಾಗಲೇ ಬ್ರಾಹ್ಮಣೇತರ ಪಕ್ಷವೆಂದೇ ಪ್ರಚಲಿತಗೊಂಡಿದ್ದ 'ಪ್ರಜಾಮಿತ್ರ ಮಂಡಲಿ' ಪಕ್ಷಕ್ಕೆ ೧೯೨೭ರಲ್ಲಿ ಸೇರಿದರು. ಬಲುಬೇಗ ಪಕ್ಷದ ಹಿರಿಯ ನಾಯಕರ ವಿಶ್ವಾಸಕ್ಕೆ ಪಾತ್ರರಾಗುವ ಮೂಲಕ ಪಕ್ಷದ ಧುರೀಣರಲ್ಲಿ ತಾವೂ ಒಬ್ಬರಾದರು. ರಾಷ್ಟ್ರಮಟ್ಟದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿಯೂ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ರಚನೆಗಾಗಿಯೂ ಇವರು ನಿರಂತರವಾಗಿ ಯತ್ನಿಸುತ್ತಲೇ ಇದ್ದರು. ಈ ನಡುವೆ ೧೯೨೮ರ ಕಲ್ಕತ್ತಾ ಅಧಿವೇಶನದ ನಿರ್ಣಯದಂತೆ ಸಂಸ್ಥಾನಗಳಲ್ಲಿ ಕಾಂಗ್ರೆಸ್ ಕ್ರಿಯಾಶೀಲವಾಗಿರಲು

ಹಸಿರು ನಿಶಾನೆ ಲಭಿಸಿತು. ಅದರಂತೆ ೧೯೨೮ರಲ್ಲಿ ಮೈಸೂರು ರಾಜ್ಯ ಕಾಂಗ್ರೆಸ್ ಸ್ಥಾಪನೆಗೊಂಡಿತು. ಪ್ರಜಾಮಿತ್ರಮಂಡಲಿಯ ಚಳವಳಿ ಹಾಗೂ ನಿರಂತರ ಪ್ರಯತ್ನದಿಂದಾಗಿ ಸರ್ಕಾರಿ ಹುದ್ದೆಗಳಲ್ಲಿ ಬ್ರಾಹ್ಮಣೇತರರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವ ಬಗ್ಗೆ ವಿವೇಚಿಸಲು ಆಳರಸರು ಜಸ್ಟೀಸ್ ಮಿಲ್ಲರ್ ಸಮಿತಿಯನ್ನು ನೇಮಿಸಿದರು. ಅದು ವರದಿಯನ್ನು ನೀಡಿತಾದರೂ ಅದರ ಎಲ್ಲಾ ಸಲಹೆಗಳು ಸಂಪೂರ್ಣ ಕಾರ್ಯರೂಪಕ್ಕೆ ಬರಲಿಲ್ಲ. ಈ ವೇಳೆಗೆ ಪ್ರಜಾಮಿತ್ರಮಂಡಲಿಯ ಧ್ಯೇಯ–ಧೋರಣೆಗಳು ರೆಡ್ಡಿಯವರಿಗೆ ಸರಿದೋರಲಿಲ್ಲ. ಆದ್ದರಿಂದ ಕೆ.ಸಿ. ರೆಡ್ಡಿಯವರು ಜೊತೆಗಾರರಾದ ಎಚ್.ಸಿ.ದಾಸಪ್ಪ, ವಿ.ವೆಂಕಟಪ್ಪ ಎಚ್.ಬಿ.ಗುಂಡಪ್ಪಗೌಡ, ವಿ.ವೆಂಕಟಪ್ಪ, ಬಿ.ಎನ್. ಗುಪ್ತ ಎಚ್.ಸಿ. ದಾಸಪ್ಪ, ಡಿ.ಎಸ್.ಮಲ್ಲಪ್ಪ ಮುಂತಾದವರೊಡನೆ ಪ್ರಜಾಮಿತ್ರಮಂಡಲಿ ಪಕ್ಷದಿಂದ ಹೊರಬಂದರು. ಮುಂದೆ, ಎಚ್.ಬಿ.ಗುಂಡಪ್ಪಗೌಡ, ವಿ.ವೆಂಕಟಪ್ಪ ಬಿ.ಎನ್.ಗುಪ್ತ ಎಚ್.ಸಿ.ದಾಸಪ್ಪ ಡಿ.ಎಸ್.ಮಲ್ಲಪ್ಪ ಡಿ.ಎಚ್. ಚಂದ್ರಶೇಖರಯ್ಯ, ರಾವ್ ಸಾಹೇಬ್ ಚೆನ್ನಯ್ಯ, ಸುಬ್ಬಯ್ಯ, ಬಾಗೇಮನೆ ದೇವೇಗೌಡ, ಶಿವಮೊಗ್ಗೆಯ ಎಚ್.ಸಿದ್ದಯ್ಯ ಮುಂತಾದ ಪ್ರಮುಖರ ನೆರವಿನೊಂದಿಗೆ 'ಪ್ರಜಾಪಕ್ಷ' ಎಂಬ ನೂತನ ಸಂಘಟನೆಯನ್ನು ೧೯೩೦ರಲ್ಲಿ ಸ್ಥಾಪಿಸಿದರು. ಒಟ್ಟಾರೆ ಅನಾದಿಕಾಲದಿಂದಲೂ ಮೇಲ್ವರ್ಗದವರ ಶೋಷಣೆಗೆ ಬಲಿಯಾಗಿದ್ದ, ಅಧಿಕಾರದಿಂದ ವಂಚಿತರಾಗಿದ್ದ ಹಾಗೂ ಸಮಾಜದಲ್ಲಿ ಸಮಾನ ಸ್ಥಾನ–ಮಾನವನ್ನು ಪಡೆದುಕೊಳ್ಳಲು ಹೋರಾಡುವವರ ಪಕ್ಷ ಇದಾಯಿತು. ಇದರ ಮೊದಲ ಅಧಿವೇಶನವು ೧೯೩೧ರ ಸೆಪ್ಟೆಂಬರ್‌ನಲ್ಲಿ ಚನ್ನಪಟ್ಟಣದಲ್ಲೂ, ಎರಡನೆಯ ಅಧಿವೇಶನ (೧೯೩೨) ಹಾಸನದಲ್ಲೂ ಹಾಗೂ ಮೂರನೆಯದು ತುಮಕೂರಿನಲ್ಲೂ ಜರುಗಿದವು.

ಇವರು ೧೯೩೦ರಲ್ಲಿ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಗಳೆರಡಕ್ಕೂ ಏಕಕಾಲಕ್ಕೆ ಪ್ರತಿನಿಧಿಯಾಗಿ ಆಯ್ಕೆಗೊಂಡರು. ಅಲ್ಲದೇ ೧೯೩೦ರಿಂದ ೧೯೩೭ರವರೆಗೆ ಬಂಗಾರಪೇಟೆ ಕ್ಷೇತ್ರದಿಂದ ನಿರಂತರವಾಗಿ ಎರಡು ಸದನಗಳಿಗೂ ಸದಸ್ಯರಾಗಿದ್ದರೆಂದು ತಿಳಿದುಬರುತ್ತದೆ. ಏತನ್ಮಧ್ಯೆ ಕೋಲಾರ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ೧೯೩೩–೩೭ರವರೆಗೂ ಅವಿರೋಧವಾಗಿ ಆಯ್ಕೆಗೊಂಡು ಸೇವೆ ಸಲ್ಲಿಸಿದರು. ಪ್ರಜಾಪಕ್ಷದ ಜನಹಿತ ನಿರ್ಣಯಗಳನ್ನು, ದಿವಾನರು ಅಥವಾ ಮಹಾರಾಜರು ನಡೆಸಿ ಕೊಡದಿದ್ದರೆ ಕಂದಾಯ ನಿರಾಕರಣೆ ಚಳವಳಿ ನಡೆಸುವುದಾಗಿ ನಿರ್ಣಯವನ್ನು ಮಂಡಿಸಿದ್ದ ಪ್ರಜಾಪಕ್ಷದವರ ಬಗ್ಗೆ ದಿವಾನ್ ಮಿರ್ಜಾ ಇಸ್ಮಾಯಲರಿಗೆ ಅಸಮಾಧಾನವಿತ್ತು. ಕೋಲಾರದಲ್ಲಿ ಜರುಗಿದ ಪ್ರಜಾಪಕ್ಷದ ಐದನೆಯ ಸಮ್ಮೇಳನದಲ್ಲಿ ದಿವಾನ ಹುದ್ದೆಗೆ ಬರುವವರು, ಆ ಹುದ್ದೆಯಲ್ಲಿ ಐದು ವರ್ಷಕ್ಕಿಂತ ಹೆಚ್ಚು ಕಾಲ ಮುಂದುವರಿಯಬಾರದೆಂಬ ನಿರ್ಣಯವನ್ನು ದಿವಾನ ಮಿರ್ಜಾ ಇಸ್ಮಾಯಿಲ್‌ರನ್ನು ಮನಸ್ಸಿನಲ್ಲಿಟ್ಟುಕೊಂಡೇ ಪ್ರಜಾಪಕ್ಷವು ಅಂಗೀಕರಿಸಿದ್ದು, ಮಹತ್ವದ್ದಾಗಿತ್ತು. ಜಸ್ಟೀಸ್ ಪಕ್ಷದ ಬಿ.ಎನ್.ಗುಪ್ತರವರು ೧೯೩೦ರಲ್ಲಿ ಬೆಂಗಳೂರಿಗೆ ಬಂದು ನೆಲೆಸುತ್ತಿದ್ದಂತೆ ಪ್ರಜಾಪಕ್ಷದ ಕಾರ್ಯದರ್ಶಿಗಳಾದರು. ಪ್ರಜಾಪಕ್ಷ ವಿಚಾರಗಳನ್ನು ಪ್ರತಿಪಾದಿಸಲು ಪ್ರಜಾಮತ (೧೯೩೧) ಹಾಗೂ ಜನವಾಣಿ (೧೯೩೪) ಪತ್ರಿಕೆಗಳನ್ನು ಆ ವೇಳೆಗೆ ಮದ್ರಾಸಿನಿಂದಲೇ ಆರಂಭಿಸಿದ್ದರು. ಅದನ್ನು ಮಿರ್ಜಾ ಅವರ ಅನುಮತಿಯೊಂದಿಗೆ, ಬೆಂಗಳೂರಿಗೆ ವರ್ಗಾಯಿಸುತ್ತಿದ್ದಂತೆ ಕೆ.ಸಿ. ರೆಡ್ಡಿಯವರು ಜನವಾಣಿ ಪತ್ರಿಕೆಯ ಸಂಪಾದಕರಾದರು. ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ಈ ಪತ್ರಿಕೆಗಳು ಸರ್ಕಾರದ ಕೆಂಗಣ್ಣಿಗೆ ತುತ್ತಾಗಿದ್ದವು. ಆದರೂ ಎದೆಗುಂದದೆ ಇವರಿಬ್ಬರು ಧೈರ್ಯದಿಂದ ತಮ್ಮ ಕಾರ್ಯವನ್ನು ಮುಂದುವರಿಸಿದರು.

ಸರ್ಕಾರದೊಡನೆ ಸಮರ್ಥವಾಗಿ ಸೆಣಸಬೇಕಾದರೆ ತಳಹದಿ ಭದ್ರವಾಗಿರಬೇಕೆಂಬ ವಾದದ ಹಿನ್ನೆಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಂಘಟನೆಗೆ ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಪ್ರಜಾಪಕ್ಷವು ಮುಂದಾಯಿತು. ಪಕ್ಷದ ವತಿಯಿಂದ ಚಿತ್ರದುರ್ಗದಲ್ಲಿ (೧೯೩೨) ಜರುಗಿದ ಚಿತ್ರದುರ್ಗ ಜಿಲ್ಲಾ ರೈತ ಸಮ್ಮೇಳನದ ಅಧ್ಯಕ್ಷತೆಯನ್ನು ಸ್ವತಃ ಕೆ.ಸಿ.ರೆಡ್ಡಿಯವರೇ ವಹಿಸಿದ್ದರು. ಅದೇ ವರ್ಷ ಕೋಲಾರದಲ್ಲೂ ಕೋಲಾರ ಜಿಲ್ಲಾ ರೈತ ಸಮ್ಮೇಳನವನ್ನು ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಳಿಸಲಾಗಿತ್ತು. ತತ್ಪರಿಣಾಮವಾಗಿ ಸ್ಥಳೀಯ ಚುನಾವಣೆಗಳಲ್ಲಿ ಸ್ಪರ್ಧಿಸಿ ವಿಜಯಿಯಾದ ಪ್ರಜಾಪಕ್ಷವು ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು ಹಾಗೂ ಕೋಲಾರ ಸೇರಿದಂತೆ ಅನೇಕ ಜಿಲ್ಲಾ ಬೋರ್ಡುಗಳಲ್ಲಿ ಅಧಿಕಾರವನ್ನು ಸಂಪಾದಿಸಿಕೊಂಡಿತು. ಕೋಲಾರ ಜಿಲ್ಲಾ ಬೋರ್ಡಿಗೆ ಕೆ.ಸಿ.ರೆಡ್ಡಿ ಅಧ್ಯಕ್ಷರಾಗಿ ಆಯ್ಕೆಯಾದರು. ಪ್ರಜಾಪಕ್ಷಕ್ಕೆ ಗ್ರಾಮೀಣ ಬೆಂಬಲವಿದ್ದ ಹಿನ್ನೆಲೆಯಲ್ಲಿ ಅದರ ನಾಯಕತ್ವ ರೂಪುಗೊಂಡಿದ್ದರಿಂದ ರಾಜಕೀಯವಾಗಿ ಅದರ ಪ್ರಾಮುಖ್ಯತೆ ದಿನದಿಂದ ದಿನಕ್ಕೆ ಸಂಸ್ಥಾನದಲ್ಲಿ ವೃದ್ಧಿಸಲಾರಂಭಿಸಿತು. ಇದು ಕಾಂಗ್ರೆಸ್ಸಿಗೆ ಅಹಿತವೆನಿಸಿದ್ದು, ಸಹಜ ಕ್ರಿಯೆಯಾಗಿತ್ತು.

**ಉಪ್ಪಿನ ಸತ್ಯಾಗ್ರಹ (೧೯೩೦)**

ಮಹಾತ್ಮ ಗಾಂಧೀಜಿಯವರ ಮುಂದಾಳತ್ವದಲ್ಲಿ ಬ್ರಿಟೀಷರ ವಿರುದ್ಧ ೧೯೩೦ರ ಏಪ್ರಿಲ್ ಆರರಂದು ದಂಡಿಯಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಬಿರುಗಾಳಿ ದೇಶದುದ್ದಗಲಕ್ಕೂ ವ್ಯಾಪಿಸಿತು. ಕರ್ನಾಟಕದ ಬ್ರಿಟೀಷ್ ಪ್ರಾಂತಗಳಲ್ಲೂ ಮಾರ್ದನಿಸಿತು. ಆದರೆ ಕೋಲಾರ ಜಿಲ್ಲೆಯೂ ಸೇರಿದಂತೆ ಸಂಸ್ಥಾನದಲ್ಲಿ ಇದರ ಪ್ರಭಾವ ಅಷ್ಟಾಗಿ ಕಂಡು ಬರಲಿಲ್ಲ.

**ಅಸಹಕಾರ ಚಳವಳಿ**

ಮುಂದೆ ಮಹಾತ್ಮ ಗಾಂಧಿಯವರು ೧೯೩೨ರ ಜನವರಿ ನಾಲ್ಕರಂದು ಮುಂಬಯಿಯಲ್ಲಿ ಬಂಧನಕ್ಕೊಳಗಾದಾಗ ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿ, ರಾಬರ್ಟ್‌ಸನ್‌ಪೇಟೆ ಹಾಗೂ ಬಂಗಾರಪೇಟೆ ಪಟ್ಟಣಗಳಲ್ಲಿ ಪೂರ್ಣ ಹರತಾಳವನ್ನು ಆಚರಿಸಲಾಯಿತು. ಜಿಲ್ಲೆಯ ಎಲ್ಲಾ ಪಟ್ಟಣಗಳಲ್ಲೂ ಗಾಂಧೀಜಿ ಹಾಗೂ ಭಗತ್‌ಸಿಂಗ್‌ರ ಚಿತ್ರವಿದ್ದ ದೇಶೀಯ ಟವೆಲ್‌ಗಳನ್ನು ವಿತರಿಸಲಾಯಿತು. ವಿದೇಶಿ ವಸ್ತ್ರಗಳಿಗೆ ಬದಲು ದೇಶೀಯ ವಸ್ತ್ರಗಳನ್ನು ಮಾರುವಂತೆ ಸ್ಥಳೀಯ ವರ್ತಕರ ಮೇಲೆ ಒತ್ತಾಯ ಹೇರಲಾಯಿತು. ಅದೇ ತಿಂಗಳ ೨೬ರಂದು ಕೋಲಾರದ ವಿವಿಧ ಶಾಲಾ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮೆರವಣಿಗೆ ನಡೆಸಿ ಸ್ವಾತಂತ್ರ್ಯ ದಿನವೆಂದು ಆಚರಿಸಿದರು. ವಿದೇಶ ವಸ್ತುಗಳ ಬಹಿಷ್ಕಾರಕ್ಕೂ ಸ್ವದೇಶಿ ವಸ್ತುಗಳ ಉಪಯೋಗಕ್ಕೂ ಇದೇ ಸಂದರ್ಭದಲ್ಲಿ ಕರೆ ನೀಡಲಾಯಿತು. ಮಾರ್ಚ್ ತಿಂಗಳಲ್ಲಿ ಬೆಂಗಳೂರಿನ ಸ್ವದೇಶಿಲೀಗ್‌ನವರು ಮುದ್ರಿಸಿದ್ದ ಕರಪತ್ರವನ್ನು ಬಂಗಾರಪೇಟೆಯಲ್ಲಿ ವಿತರಿಸಿ, ವಿದೇಶಿ ಸಕ್ಕರೆ ಬದಲು ದೇಶೀಯ ಸಕ್ಕರೆಯನ್ನು ಮಾರಾಟ ಮಾಡಲು ವರ್ತಕರಿಗೆ ಒತ್ತಾಯಿಸಲಾಯಿತು. ಅದಕ್ಕೂ ಮೊದಲು ಫೆಬ್ರವರಿ ತಿಂಗಳಲ್ಲಿ ಬಂಗಾರಪೇಟೆಯ ಪುರಸಭಾ ಪ್ರೌಢಶಾಲೆ ಹಾಗೂ ಆಂಗ್ಲ ವರ್ನಾಕ್ಯುಲರ್ ಹೈಸ್ಕೂಲಿನ ವಿದ್ಯಾರ್ಥಿಗಳು ತರಗತಿಗಳನ್ನು ತ್ಯಜಿಸಿ ಬ್ರಿಟೀಷ್ ಸಾಮ್ರಾಜ್ಯಶಾಹಿ ಧೋರಣೆಯ ವಿರುದ್ಧ ಘೋಷಣೆ ಕೂಗುತ್ತ ಪಟ್ಟಣದಲ್ಲಿ ಮೆರವಣಿಗೆ ನಡೆಸಿದ್ದರು. ವಿದೇಶಿ ಸರಕಾರದ ಜನವಿರೋಧಿ ನೀತಿಯನ್ನು ವಿರೋಧಿಸಿ ಸೆಪ್ಟೆಂಬರ್ ತಿಂಗಳಲ್ಲಿ ಚಿಕ್ಕಬಳ್ಳಾಪುರ ಪಟ್ಟಣದಲ್ಲಿ ಹರತಾಳವನ್ನು ಆಚರಿಸಲಾಯಿತು.

**ಕೋಲಾರ ಜಿಲ್ಲೆಯಲ್ಲಿ ಗಾಂಧೀಜಿ (೧೯೩೪)**

ಗಾಂಧೀಜಿಯವರು ೧೯೩೪ರಲ್ಲಿ ಕೈಗೊಂಡ ಮೊದಲ ಕಂತಿನ ಹರಿಜನ ಪ್ರವಾಸ ಸಂದರ್ಭದಲ್ಲಿ ೧೯೩೪ರ ಜನವರಿ ನಾಲ್ಕರಂದು ಹಿಂದೂಪುರದಿಂದ ಹೊರಟು ವಿದುರಾಶ್ವತ್ಥ, ಗೌರಿಬಿದನೂರು ಮಾರ್ಗವಾಗಿ ತುಮಕೂರಿಗೆ ತೆರಳಿದರು. ಆ ಸಂದರ್ಭದಲ್ಲಿ ಗಾಂಧೀಜಿಯವರಿಗೆ ವಿದುರಾಶ್ವತ್ಥದಲ್ಲಿ ನಾಗಯ್ಯರೆಡ್ಡಿಯವರು ಹೂಮಾಲೆ ಹಾಕಿ ಆತ್ಮೀಯ ಸ್ವಾಗತ ಕೋರಿದರು. ಅಲ್ಲಿಂದ ಹೊರಟು ಗೌರಿಬಿದನೂರು ತಲುಪಿದ ಗಾಂಧೀಜಿಯವರ ಸ್ವಾಗತಕ್ಕೆಂದು ಸ್ವಾಗತ ಸಮಿತಿಯಿಂದ ಗೌರಿಬಿದನೂರಿನಲ್ಲಿ ಅದ್ದೂರಿ ವ್ಯವಸ್ಥೆ ಮಾಡಲಾಗಿತ್ತು. ಅವರೊಂದಿಗೆ ಪಾಮಡಿ ಸುಬ್ಬರಾಯಶೆಟ್ಟಿ, ವಿ.ವೆಂಕಟಪ್ಪ ಹಾಗೂ ಕೆಂಗೇರಿಯ ಬ್ರಹ್ಮಚಾರಿ ರಾಮಚಂದ್ರ ಮುಂತಾದವರು ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಸಭೆಯಲ್ಲಿ ಕೋಲಾರ ಜಿಲ್ಲಾ ಬೋರ್ಡು ಹಾಗೂ ಗೌರಿಬಿದನೂರಿನ ಪುರಸಭೆಯವರು ಗಾಂಧೀಜಿಗೆ ಭಿನ್ನವತ್ತಳೆ ನೀಡಿ ಸನ್ಮಾನಿಸಿ ಹರಿಜನ ನಿಧಿಗಾಗಿ ೫೬೦ ರೂ.ಗಳನ್ನು ನೀಡಿದರು. ಅದನ್ನು ಸ್ವೀಕರಿಸಿದ ಗಾಂಧೀಜಿಯವರು ಸ್ಥಳೀಕರು ತೋರಿದ ಆದರಾಭಿಮಾನಗಳಿಗಾಗಿ ಅವರಿಗೆ ವಂದಿಸಿ, ಇಂಗ್ಲಿಷ್‌ನಲ್ಲಿ ಮಾಡಿದ ಭಾಷಣವನ್ನು ಜೊತೆಯಲ್ಲಿದ್ದ ವಿ.ವೆಂಕಟಪ್ಪನವರು ಕನ್ನಡಕ್ಕೆ ಭಾಷಾಂತರಿಸಿದರು.

ಏತನ್ಮಧ್ಯೆ ಸಂಸ್ಥಾನದಲ್ಲಿದ್ದ ಪ್ರಜಾಮಿತ್ರಮಂಡಲಿ (೧೯೧೭) ಹಾಗೂ ಪ್ರಜಾಪಕ್ಷ (೧೯೩೦)ಗಳು ಬ್ರಾಹ್ಮಣೇತರರ ಪಕ್ಷಗಳಾಗಿದ್ದು ಎರಡೂ ಪಕ್ಷಗಳ ಧ್ಯೇಯೋದ್ದೇಶಗಳು ಒಂದೇ ಆಗಿದ್ದವು. ಆದರೆ ಕ್ರಮೇಣ ಪ್ರಜಾಮಿತ್ರಮಂಡಲಿಯು ನಾಯಕರ ಪಕ್ಷವಾಗುಳಿದರೆ, ಪ್ರಜಾಪಕ್ಷವು ಜನಪರ ಪಕ್ಷವಾಗಿತ್ತು. ಶ್ರೀಮಂತರೂ, ಪ್ರಭಾವಶಾಲಿಗಳೂ ಆದ ಪ್ರಜಾಮಿತ್ರಮಂಡಲಿಯ ಸದಸ್ಯರನ್ನು ತಮ್ಮವರನ್ನಾಗಿಸಿಕೊಳ್ಳುವುದು ಲಾಭದಾಯಕವೆಂಬ

ಅಂಶವನ್ನು ಮನಗಂಡ ಪ್ರಜಾಪಕ್ಷದ ಮುಖಂಡರು ಅದರ ಸಖ್ಯ ಬಯಸಿದರು. ತಮ್ಮ ಗುರಿ ಸಾಧನೆಗೆ ಒಂದಾಗಬೇಕೆಂಬ ಅಂಶವನ್ನು ಅರಿತ ಈ ಎರಡು ಪಕ್ಷಗಳು ೧೯೩೪ರ ಡಿಸೆಂಬರ್‌ನಲ್ಲಿ ಒಂದಾಗಿ 'ಪ್ರಜಾ ಸಂಯುಕ್ತ ಪಕ್ಷ'ವು ಉದಯವಾಯಿತು. ೧೯೩೫ರಲ್ಲಿ ನಡೆದ ಅದರ ಮೊದಲ ಅಧಿವೇಶನದಲ್ಲಿ ಅಧ್ಯಕ್ಷರಾಗಿದ್ದ ಕೆ.ಸಿ.ರೆಡ್ಡಿಯವರು ಕಾಂಗ್ರೆಸ್ಸಿನ ಧೋರಣೆಯನ್ನು ಒಪ್ಪಿದರಷ್ಟೇ ಅಲ್ಲದೇ ಎಲ್ಲಾ ಕೋಮಿನವರೂ ತಮ್ಮ ಪಕ್ಷ ಸೇರಬಹುದೆಂದು ಸಾರಿದರು. ಕೋಲಾರದಲ್ಲೇ ಜರುಗಿದ ಮೂರನೆಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ನಾಯಕರು ಕಾಂಗ್ರೆಸ್‌ನ ಧ್ಯೇಯ ಹಾಗೂ ತಮ್ಮ ಪಕ್ಷದ ಧ್ಯೇಯಗಳು ಒಂದೇ ಆಗಿರುವುದರಿಂದ ಎರಡೂ ಪಕ್ಷಗಳು ಒಂದಾಗಬೇಕೆಂದು ಅಭಿಪ್ರಾಯಪಟ್ಟರಾದರೂ ಚುನಾವಣೆಯಿಂದಾಗಿ ಅದು ಅಲ್ಲಿಗೆ ನಿಂತಿತು.

**ನಂದಿಯಲ್ಲಿ ಗಾಂಧೀಜಿ(೧೯೩೬):** ಹರಿಜನೋದ್ಧಾರ ನಿಧಿಗಾಗಿ ದಕ್ಷಿಣ ಭಾರತದಲ್ಲಿ ಪ್ರವಾಸ ಕೈಗೊಂಡಿದ್ದ ಗಾಂಧೀಜಿಯವರು ರಕ್ತದೊತ್ತಡದಿಂದ ಬಳಲುತ್ತಿದ್ದು, ವಿಶ್ರಾಂತಿ ಪಡೆಯಲೆಂದು ಪ್ರವಾಸ ಮಧ್ಯೆ ಬೆಂಗಳೂರು ಮಾರ್ಗವಾಗಿ ನಂದಿಬೆಟ್ಟಕ್ಕೆ ೧೯೩೬ರ ಮೇ ೧೧ ರಂದು ಆಗಮಿಸಿ ಕಾಲ್ನಡಿಗೆಯಲ್ಲೇ ಬೆಟ್ಟವನ್ನೇರಿದರು. ನಂದಿಬೆಟ್ಟದಲ್ಲಿ ಗಾಂಧೀಜಿಯವರು ತಂಗಿದ್ದ ಸಮಯದಲ್ಲೇ ಮೈಸೂರು ಕಾಂಗ್ರೆಸ್ ಪಕ್ಷದಲ್ಲಿ ರೆಡ್ಡಿಯವರ ಪ್ರಜಾಸಂಯುಕ್ತಪಕ್ಷ ವಿಲೀನವಾಗುವುದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಚರ್ಚೆ ನಡೆದವು. ಈ ಸಂಬಂಧ ಬಿ.ಎನ್.ಗುಪ್ತ, ಟಿ.ಸಿದ್ಧಲಿಂಗಯ್ಯ, ವೆಂಕಟಪತಯ್ಯ ಮತ್ತು ಕೆ.ಸಿ. ರೆಡ್ಡಿಯವರು ಗಾಂಧೀಜಿಯವರನ್ನು ನಂದಿಯಲ್ಲಿ ಭೇಟಿಯಾಗಿ ಪ್ರಜಾಸಂಯುಕ್ತ ಪಕ್ಷವು ಕಾಂಗ್ರೆಸ್ಸಿನಲ್ಲಿ ವಿಲೀನಗೊಂಡ ಮೇಲೆ ಕಾಂಗ್ರೆಸ್ಸಿನಲ್ಲಿ ಪ್ರಜಾಸಂಯುಕ್ತ ಪಕ್ಷದ ಸದಸ್ಯರ ಸ್ಥಾನಮಾನವೇನೆಂಬ ಆತಂಕ ತಮ್ಮ ಪಕ್ಷದ ಸದಸ್ಯರಲ್ಲಿದೆ ಎಂಬ ಅಂಶವನ್ನು ಅವರ ಗಮನಕ್ಕೆ ತಂದರು. ಆಗ ನಗುತ್ತಾ ಗಾಂಧೀಜಿಯವರು ಕಾಂಗ್ರೆಸ್ಸಿಗರು ಎಲ್ಲರನ್ನೂ ಅಣ್ಣತಮ್ಮಂದಿರಂತೆ ಪಕ್ಷಕ್ಕೆ ಕರೆದುಕೊಳ್ಳುತ್ತಾರೆಂದು ಮಾರುತ್ತರಿಸಿದರಂತೆ. ತತ್ಪರಿಣಾಮವಾಗಿ ಪ್ರಜಾ ಸಂಯುಕ್ತ ಪಕ್ಷವು ಅಂತಿಮವಾಗಿ ೧೯೩೬ರ ಅಕ್ಟೋಬರ್ ೧೬ರಂದು ಮೈಸೂರು ಕಾಂಗ್ರೆಸ್ ಪಕ್ಷದಲ್ಲಿ ವಿಲೀನಗೊಂಡಿತು.

ಗಾಂಧೀಜಿಯವರು ನಂದಿಬೆಟ್ಟದಲ್ಲಿದ್ದಾಗಲೇ ಹರಿಜನ ನಿಧಿಸಂಗ್ರಹಕ್ಕಾಗಿ ಅವರನ್ನು ತಮ್ಮ ಜಿಲ್ಲೆಗೆ ಕರೆದೊಯ್ಯಬೇಕೆಂಬ ಹೆಬ್ಬಯಕೆ ಕೆ.ಸಿ.ರೆಡ್ಡಿಯವರಿಗಿತ್ತು. ಆಗ ಕೋಲಾರ ಜಿಲ್ಲಾ ಬೋರ್ಡು ಹಾಗೂ ಜಿಲ್ಲಾ ಹರಿಜನ ಸೇವಾ ಸಂಘದ ಅಧ್ಯಕ್ಷರೂ ಆಗಿದ್ದ ಕೆ.ಸಿ.ರೆಡ್ಡಿಯವರು ನಂದಿಯಲ್ಲಿದ್ದ ಗಾಂಧೀಜಿಯವರಿಗೆ ತಮ್ಮ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವಂತೆ ಕೋರಿದರು. ಅದಕ್ಕೊಪ್ಪಿದ ಗಾಂಧೀಜಿಯವರು ೧೯೩೬ರ ಮೇ ೩೧ರಂದು ನಂದಿ ಬೆಟ್ಟದ ಮೇಲಿದ್ದ ಜನರಿಂದ ಬೀಳ್ಕೊಂಡು ಸಂಗಡಿಗರೊಂದಿಗೆ ಬೆಟ್ಟದಿಂದ ಕಾಲ್ನಡಿಗೆಯಲ್ಲೇ ಕೆಳಗಿಳಿದು, ಸುಲ್ತಾನಪೇಟೆಯಲ್ಲಿ ಕಾರನ್ನು ಏರಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರಪೇಟೆ ಹಾಗೂ ಕೋಲಾರ ಚಿನ್ನದ ಗಣಿ ಪ್ರದೇಶಗಳಲ್ಲಿ ಹರಿಜನ ನಿಧಿ ಸಂಗ್ರಹಿಸಿ ಮಾಲೂರು ಮಾರ್ಗವಾಗಿ ಬೆಂಗಳೂರನ್ನು ಅಂದು ರಾತ್ರಿಯೇ ತಲುಪಿದರು. ಒಂದು ದಿನದ ಈ ಜಿಲ್ಲಾ ಪ್ರವಾಸದಲ್ಲಿ ಜಿಲ್ಲೆಯವರಾದ ಕೆ.ಸಿ.ರೆಡ್ಡಿಯವರು ಗಾಂಧೀಜಿ ಮತ್ತವರ ಸಂಗಡಿಗರೊಡನಿದ್ದರು. ಚಿಕ್ಕಬಳ್ಳಾಪುರದ ಪ್ರೌಢಶಾಲೆಯ ಬಳಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಪುರಸಭೆಯವರು ಹರಿಜನರ ಕಲ್ಯಾಣಕ್ಕಾಗಿ ತಾವು ಕೈಗೊಂಡಿರುವ ಕ್ರಮಗಳನ್ನು ಮಾನಪತ್ರದ ಮೂಲಕ ನಿವೇದಿಸಿಕೊಂಡು ೧೦೦ ರೂ.ಗಳ ದೇಣಿಗೆ ನೀಡಿದರು. ಸನ್ಮಾನಕ್ಕೆ ಮಾರುತ್ತರಿಸುತ್ತಾ, 'ಆಲೂಗಡ್ಡೆಯ ಧಾರಣೆ ಬಹಳ ಇಳಿದಿರುವುದರಿಂದ ಇಲ್ಲಿನ ವರ್ತಕರಿಗೆ ಬಹಳ ನಷ್ಟವಾಗಿದೆ. ಆದ್ದರಿಂದ ನಿಧಿಯನ್ನು ಕಡಿಮೆ ನೀಡಿದ್ದಾರೆ ಎಂದು ಚುರುಕು ಮುಟ್ಟಿಸುತ್ತಾ, ನಿನ್ನೆಯಷ್ಟೇ (ಜೂನ್ ನಾಲ್ಕರಂದು) ಮಹಾರಾಜರ ವರ್ಧಂತಿ. ಅವರಿಗೆ ದೇವರು ಆಯುರಾರೋಗ್ಯ ದಯಪಾಲಿಸಲಿ, ಅವರು ಆಳುತ್ತಿರುವ ದೇಶ ರಾಮರಾಜ್ಯವಾಗಲೆಂದು ನಾನೂ

ಹಾರೈಸುತ್ತೇನೆ. ವರ್ಣಭೇದ ತೊಲಗಬೇಕು. ಹರಿಜನರು ದೇವಾಲಯ ಪ್ರವೇಶಿಸಲು ಯಾವ ವಿಧದ ಆತಂಕವೂ ಬೇಡ' ಎಂದು ಇಂಗ್ಲೀಷ್‌ನಲ್ಲಿ ಮಾಡಿದ ಭಾಷಣವನ್ನು ಕೆ.ಸಿ.ರೆಡ್ಡಿಯವರು ಕನ್ನಡಿಸಿದರು. ಹಾದಿಯುದ್ದಕ್ಕೂ ಗ್ರಾಮಗಳ ಬಳಿ ತೋರಣ ಕಟ್ಟಿ ಅಲಂಕರಿಸಿದ್ದ ಗ್ರಾಮಸ್ಥರು ಗಾಂಧೀಜಿಗೆ ಹೂಮಾಲೆ ಅರ್ಪಿಸಿ ಶಕ್ತ್ಯಾನುಸಾರ ದೇಣಿಗೆ ಅರ್ಪಿಸಿದರು. ಮುಂದೆ ಶಿಡ್ಲಘಟ್ಟ ತಲುಪಿದ ಗಾಂಧೀಜಿಯವರಿಗೆ ಪುರಸಭೆಯ ಅಧ್ಯಕ್ಷರು ಮಾನಪತ್ರ ಸಲ್ಲಿಸಿ ನೂರು ರೂ.ಗಳ ದೇಣಿಗೆ ಅರ್ಪಿಸಿದರು. ಶಿಡ್ಲಘಟ್ಟದಿಂದ ಚಿಂತಾಮಣಿಗೆ ಆಗಮಿಸಿದ ಗಾಂಧೀಜಿ, ಪುರಸಭೆಯವರು ನೀಡಿದ ಮಾನಪತ್ರ ಹಾಗೂ ೨೦೦ ರೂ. ದೇಣಿಗೆ ಸ್ವೀಕರಿಸಿ ಮಾತನಾಡುತ್ತಾ 'ಹಿಂದಿ–ಕನ್ನಡ ಭಾಷಾ ವಿವಾದದ ಬಗ್ಗೆ ಪ್ರಸ್ತಾಪಿಸಿ ಹಿಂದಿಯ ಅಗತ್ಯವನ್ನು ಒತ್ತಿ ಹೇಳುತ್ತಾ ಭರತ ಖಂಡದಲ್ಲಿ ರಾಮರಾಜ್ಯ ಸ್ಥಾಪಿಸಲ್ಪಡಲಿ' ಎಂದು ಹಾರೈಸಿ ಅಲ್ಲಿಂದ ಕೋಲಾರದತ್ತ ಪ್ರಯಾಣ ಮುಂದುವರಿಸಿದರು.

ಕೋಲಾರದಲ್ಲಿ ಮಹಾತ್ಮರನ್ನು ಜಿಲ್ಲಾಧಿಕಾರಿ ಹಾಗೂ ಇನ್ನಿತರರು ಆದರದಿಂದ ಸ್ವಾಗತಿಸಿದರು. ಪಟ್ಟಣಕ್ಕೆ ಬರುತ್ತಿದ್ದಂತೆ ಹರಿಜನ ಕೇರಿಗೆ ಭೇಟಿ ನೀಡಿದ ಅವರು ನಂತರ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತ ಅಸ್ಪೃಶ್ಯತೆಯನ್ನು ತೊಡೆದು ಹಾಕದಿದ್ದರೆ ಹಿಂದೂಸ್ಥಾನಕ್ಕೆ ಗೌರವವಿರುವುದಿಲ್ಲ ಎಂದು ಘೋಷಿಸಿದರು. ಇಲ್ಲೂ ೨೦೦ ರೂ.ಗಳನ್ನು ಹರಿಜನ ನಿಧಿಗೆಂದು ನೀಡಲಾಯಿತು. ಅಲ್ಲಿಂದ ಬಂಗಾರಪೇಟೆಯನ್ನು ಮಧ್ಯಾಹ್ನ ತಲುಪಿದ ಅವರನ್ನು ಪುರಜನರು ಪ್ರೀತ್ಯಾದರಗಳಿಂದ ಸ್ವಾಗತಿಸಿದರು. ಪುರಸಭೆಯ ವತಿಯಿಂದ ಮಾನಪತ್ರ ಸಲ್ಲಿಸಲ್ಪಟ್ಟು ನಾಗರಿಕರು ೨೬೧ ರೂ.ಗಳನ್ನು ಹರಿಜನ ನಿಧಿಗೆ ಕಾಣಿಕೆಯಾಗಿ ನೀಡಿದರು. ಸಭೆಯಲ್ಲಿ ಮಾತನಾಡಿದ ಗಾಂಧೀಜಿ, ಖಾದಿಗೆ ಪ್ರೋತ್ಸಾಹ ನೀಡಬೇಕೆಂದು ಕರೆ ನೀಡುತ್ತಾ ವಿದ್ಯಾವಂತರೆಲ್ಲರೂ ಹಿಂದಿ ಕಲಿಯಬೇಕೆಂದು ಸೂಚಿಸುತ್ತಾ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮನಃಪೂರ್ವಕವಾಗಿ ಶ್ರಮಿಸಲು ಎಲ್ಲರಲ್ಲೂ ಮನವಿ ಮಾಡಿಕೊಂಡರು. ಅಲ್ಲಿಂದ ಚಿನ್ನದಗಣಿ ಪ್ರದೇಶಕ್ಕೆ ತೆರಳಿದ ಗಾಂಧೀಜಿಯವರು ಅಲ್ಲಿಯ ಗಣಿಕಾರ್ಮಿಕರು ಹಾಗೂ ಕೂಲಿಯಾಳುಗಳ ಕೇರಿಗೆ (ಹೆನ್ರಿ ಷಾಫ್ಟ್ ಲೇನ್ಸ್) ಭೇಟಿ ನೀಡಿ ಅವರ ವಸತಿ ಗೃಹಗಳನ್ನು ವೀಕ್ಷಿಸಿದರು. ಅನತಿ ದೂರದಲ್ಲಿದ್ದ ರಾಬರ್ಟ್‌ಸನ್‌ಪೇಟೆಯ ಕಿಂಗ್ ಜಾನ್‌ಹಾಲ್‌ನ ಬಯಲಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ ೬೧೭ರೂ.ಗಳನ್ನು ಹರಿಜನ ನಿಧಿಗೆ ಅರ್ಪಿಸಲಾಯಿತು. ಕೂಲಿಕಾರರ ಬದುಕಿನ ಬಗ್ಗೆ ವ್ಯಾಕುಲಚಿತ್ತರಾದ ಗಾಂಧೀಜಿ, ಅವರ ಜೀವನ ಕ್ರಮವನ್ನು ಸುಧಾರಿಸುವಂತೆ ಗಣಿಯ ಆಡಳಿತ ವರ್ಗಕ್ಕೆ ಮನವಿ ಮಾಡಿಕೊಂಡರು. ಅವರ ಬೇಡಿಕೆಗೆ ಪ್ರತಿಫಲ ಲಭಿಸದಿದ್ದರೆ ಅದಕ್ಕಾಗಿ ಕಾರ್ಮಿಕರು ಒತ್ತಾಯ ಮಾಡುವ ಕಾಲ ಬೇಗ ಬಂದೀತೆಂದೂ ಎಚ್ಚರಿಸಿದರು. ಒಂದೇ ದಿನದಲ್ಲಿ ಜಿಲ್ಲೆಯಲ್ಲಿ ಸುಮಾರು ೧೫೦ ಮೈಲಿ ಪ್ರವಾಸ ಮಾಡಿದ ಗಾಂಧೀಜಿ, ಹರಿಜನ ನಿಧಿಗಾಗಿ ಒಟ್ಟು ೧೬೦೦ರೂ.ಗಳನ್ನು ಸಂಗ್ರಹಿಸಿದರು. ಅಲ್ಲಿಂದ ಬೀಳ್ಕೊಂಡ ಗಾಂಧೀಜಿಯವರು ಮಾಲೂರು ಮಾರ್ಗವಾಗಿ ಬೆಂಗಳೂರನ್ನು ಅಂದು ರಾತ್ರಿಯೇ ತಲುಪಿದರು. ಕೋಲಾರ ಜಿಲ್ಲೆಯೂ ಸೇರಿದಂತೆ ಸಂಸ್ಥಾನಕ್ಕೆ, ಇದು ಗಾಂಧೀಜಿಯವರ ಕೊನೆಯ ಭೇಟಿಯಾಗಿತ್ತು.

೧೯೩೭ರ ಮಾರ್ಚ್‌ನಲ್ಲಿ ಪ್ರಜಾಪ್ರತಿನಿಧಿಸಭೆ ಹಾಗೂ ನ್ಯಾಯ ವಿಧಾಯಕ ಸಭೆಗಳಿಗೆಂದು ಸಂಸ್ಥಾನದಲ್ಲಿ ಜರುಗಿದ ಚುನಾವಣೆಯಲ್ಲಿ ೧೦೦ ಸ್ಥಾನಗಳು ಪ್ರಜಾಸಂಯುಕ್ತ ಪಕ್ಷಕ್ಕೆ ಲಭಿಸಿದರೆ, ಕಾಂಗ್ರೆಸ್‌ಗೆ ದಕ್ಕಿದ್ದು ಕೇವಲ ೩೦. ಇದರಿಂದ ಎಚ್ಚೆತ್ತ ಕಾಂಗ್ರೆಸ್, ಸಂಸ್ಥಾನದಲ್ಲಿ ಪಕ್ಷವನ್ನು ಬಲಪಡಿಸುವ ದೃಷ್ಟಿಯಿಂದ ಜಿಲ್ಲಾ ಪ್ರತಿನಿಧಿಗಳನ್ನೊಳಗೊಂಡ ಮೈಸೂರು ಕಾಂಗ್ರೆಸ್ ಬೋರ್ಡ್ ಎಂಬ ಕೇಂದ್ರ ಸಂಸ್ಥೆಯನ್ನು ೧೯೩೭ರ ಬೆಂಗಳೂರು ರಾಷ್ಟ್ರಕೂಟ ಸಭೆಯಲ್ಲಿ ಸ್ಥಾಪಿಸಲು ಮುಂದಾಯಿತು.

ಮೈಸೂರಿನಲ್ಲಿ ೧೯೩೮ರ ಫೆಬ್ರವರಿಯಲ್ಲಿ ಸೇರಿದ್ದ ಮೈಸೂರು ಕಾಂಗ್ರೆಸ್ ಬೋರ್ಡು ಸಭೆಯ ಅಧ್ಯಕ್ಷತೆಯನ್ನು ಟಿ.ಸಿದ್ಧಲಿಂಗಯ್ಯ ವಹಿಸಿದ್ದರು. ಆ ಸಭೆಯಲ್ಲಿ ಸುದೀರ್ಘ ಚರ್ಚೆಯ ನಂತರ, ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸಂಸ್ಥಾನದಲ್ಲಿ, ರಾಷ್ಟ್ರೀಯ ಕಾಂಗ್ರೆಸ್ ಮಾದರಿಯಲ್ಲಿ 'ಮೈಸೂರು ಕಾಂಗ್ರೆಸ್ ಸಂಸ್ಥೆ' ಎಂಬ ನೂತನ ಸಂಘಟನೆಯು ೧೯೩೮ರ ಫೆಬ್ರವರಿ ೨೮ರಂದು ಮೈಸೂರಿನಲ್ಲಿ ಜನ್ಮ ತಾಳಿತು. ಟಿ.ಸಿದ್ಧಲಿಂಗಯ್ಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಇದಕ್ಕೆ

ಸದಸ್ಯರಾಗುವವರು ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯರಾಗಿರಲೇಬೇಕೆಂದು ತೀರ್ಮಾನಿಸಲಾಯಿತು. ಈ ನೂತನ ಸಂಸ್ಥೆಗೆ ಮಹಾರಾಜರ ಅಂಗೀಕಾರ ಪಡೆಯುವುದು; ಸರ್ಕಾರವನ್ನು ನಿಯಂತ್ರಿಸುವುದೇ ಮುಂತಾದವನ್ನು ಶಿವಪುರದಲ್ಲಿ ೧೯೩೮ರ ಏಪ್ರಿಲ್‌ನಲ್ಲಿ ನಡೆಸಬೇಕೆಂದಿದ್ದ ಶಿವಪುರ ರಾಷ್ಟ್ರಕೂಟ ಸಮಾವೇಶದಲ್ಲಿ ಚರ್ಚಿಸಿ ನಿರ್ಧರಿಸಲು ತೀರ್ಮಾನಿಸಲಾಯಿತು. ಏತನ್ಮಧ್ಯೆ ಕಾಂಗ್ರೆಸ್ಸಿನ 'ಜವಾಬ್ದಾರಿ ಸರ್ಕಾರ' ರಚನೆಯ ಬೇಡಿಕೆಯ ಆಗು ಹೋಗುಗಳನ್ನು ಪರಿಶೀಲಿಸಲು 'ಶ್ರೀನಿವಾಸ ಅಯ್ಯಂಗಾರ್ ಸಮಿತಿ'ಯನ್ನು ಸಂಸ್ಥಾನದ ಸರ್ಕಾರವು ರಚಿಸಿತು.

**ಶಿವಪುರ ಕಾಂಗ್ರೆಸ್**

ಮಂಡ್ಯ ಜಿಲ್ಲೆಯ ಮದ್ದೂರು ಬಳಿಯ ಶಿವಪುರದಲ್ಲಿ ಜರುಗಲಿದ್ದ ಶಿವಪುರ ರಾಷ್ಟ್ರಕೂಟಕ್ಕೆ (೧೯೩೮ರ ಏಪ್ರಿಲ್ ೧೧ ರಿಂದ ೧೩) ಟಿ.ಸಿದ್ಧಲಿಂಗಯ್ಯನವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಈ ಸಮಾವೇಶದೊಂದಿಗೆ ಸಂಸ್ಥಾನದಲ್ಲಿ ಸಶಕ್ತ ಸ್ವಾತಂತ್ರ್ಯ ಚಳುವಳಿ ಅಂದಿನಿಂದ ಆರಂಭವಾಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಅಧಿವೇಶನವನ್ನು ನಡೆಯದಂತೆ ಮಾಡಲು ಸಂಸ್ಥಾನದ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸಿ, ಒಂದು ತಿಂಗಳ ಕಾಲ ಶಿವಪುರದ ಎರಡು ಮೈಲಿ ಫಾಸಲೆಯಲ್ಲಿ ಧ್ವಜಾರೋಹಣ ಸಭೆ, ಸಮಾರಂಭಗಳನ್ನು ನಡೆಸಬಾರದೆಂದು ನಿಷೇದಾಜ್ಞೆ ವಿಧಿಸಿತು. ಆದರೆ ಈ ಸಮ್ಮೇಳನವನ್ನು ನಡೆಸೇ ತೀರಬೇಕೆಂದು ಜನತೆ ನಿರ್ಧರಿಸಿತು. ಸರ್ಕಾರದ ನಿಷೇಧವಿದ್ದರೂ ಎಲ್ಲವೂ ಪೂರ್ವ ನಿಗಧಿತ ಕಾರ್ಯಕ್ರಮದಂತೆ ಜರುಗಿ ರಾಷ್ಟ್ರಧ್ವಜವು ಹಾರಿಸಲ್ಪಟ್ಟು ಟಿ.ಸಿದ್ಧಲಿಂಗಯ್ಯ ಸೇರಿದಂತೆ ಅನೇಕ ನಾಯಕರು ಬಂಧನಕ್ಕೊಳಗಾದರು. ಶಿವಪುರ ಸತ್ಯಾಗ್ರಹದ ಎರಡನೆಯ ದಿನವಾದ ಏಪ್ರಿಲ್ ೧೨ರಂದು ಧ್ವಜಾರೋಹಣ ಪೂರೈಸಿದ ಕೆ.ಸಿ.ರೆಡ್ಡಿ, ಎಚ್.ಸಿ.ದಾಸಪ್ಪ, ಹಾಗೂ ವಿ.ವೆಂಕಟಪ್ಪನವರು ಬಂಧನಕ್ಕೊಳಗಾದರು. ಮಾರನೆಯ ದಿನ ಧ್ವಜವನ್ನೇರಿಸಿದ ಕೆ.ಟಿ.ಭಾಷ್ಯಂ, ಎಚ್.ಸಿದ್ಧಯ್ಯ ಹಾಗೂ ಬಳ್ಳಾರಿ ಸಿದ್ದಮ್ಮನವರನ್ನು ಬಂಧಿಸಲಾಯಿತು. ಅಂದು ಎಚ್.ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಅಧಿವೇಶನದಲ್ಲಿ ತಮ್ಮ ತಮ್ಮ ಊರುಗಳಲ್ಲಿ ಧ್ವಜಾರೋಹಣ ಮಾಡುವಂತೆ ಕಾರ್ಯಕರ್ತರಿಗೆ ಕರೆ ನೀಡಲಾಯಿತು. ಅದರಂತೆ ಸಂಸ್ಥಾನದಾದ್ಯಂತ ವ್ಯಾಪಿಸಿದ ಈ ಚಳವಳಿಯು ಶಿವಪುರ ಧ್ವಜ ಸತ್ಯಾಗ್ರಹವೆಂದೇ ಪ್ರಸಿದ್ಧವಾಯಿತು. ಶಿವಪುರದ ಕಾಂಗ್ರೆಸ್ ಅಧಿವೇಶನ ಸಂದರ್ಭದಲ್ಲಿ ಬಂಧಿತರಾಗಿದ್ದ ಟಿ.ಸಿದ್ಧಲಿಂಗಯ್ಯನವರಿಗೆ ಎರಡೂವರೆ ತಿಂಗಳು; ಎಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ ಹಾಗೂ ಎಚ್.ಸಿದ್ಧಯ್ಯನವರಿಗೆ ನಾಲ್ಕು ತಿಂಗಳು ೨೦ ದಿನ; ವಿ.ವೆಂಕಟಪ್ಪ ಮತ್ತು ಕೆ.ಸಿ.ರೆಡ್ಡಿರವರಿಗೆ ಮೂರು ತಿಂಗಳು ೨೦ ದಿನ ಮತ್ತು ಬಳ್ಳಾರಿ ಸಿದ್ದಮ್ಮನಿಗೆ ೨೫ ದಿನಗಳ ಸಾದಾ ಜೈಲು ಶಿಕ್ಷೆಯನ್ನು ಮಂಡ್ಯ ನ್ಯಾಯಾಲಯವು ವಿಧಿಸಿತು. ಅಲ್ಲದೆ, ಸತ್ಯಾಗ್ರಹಕ್ಕೆ ಶಿವಪುರ ಜಿಲ್ಲೆಯಿಂದ ಹೋಗಿದ್ದ ಕೆ.ಸಿ.ವೆಂಕಟರಾಮಯ್ಯ, ಮುತ್ತಪ್ಪ, ಕೆ.ನಾರಾಯಣಸ್ವಾಮಿ, ಕೆ.ವಿ.ಭೈರಪ್ಪ ಮುಂತಾದ ಪ್ರತಿನಿಧಿಗಳೊಂದಿಗೆ ಕೆ.ವೆಂಕಟಕೃಷ್ಣಪ್ಪ ಕೂಡ ಇದ್ದರು. ರಾತ್ರಿವೇಳೆ ಧ್ವಜಸ್ತಂಭದ ರಕ್ಷಣೆಗಾಗಿ ನಿದ್ದೆಗೆಟ್ಟು ಅದನ್ನು ಕಾಯುವುದು, ಹಗಲಲ್ಲಿ ಧ್ವಜದಡಿ ಸತ್ಯಾಗ್ರಹ ನಡೆಸುವುದು ತಮ್ಮಂತಹ ಅನೇಕರ ಕಾಯಕವಾಗಿತ್ತೆಂದು ಕೆ.ವೆಂಕಟಕೃಷ್ಣಪ್ಪ ತಮ್ಮ ಸ್ವಾತಂತ್ರ್ಯ ಸ್ಮೃತಿಯಲ್ಲಿ ದಾಖಲಿಸಿದ್ದಾರೆ. ನಾಗಸಂದ್ರದ ಎನ್.ಸಿ.ನಾಗಯ್ಯರೆಡ್ಡಿಯವರು ಮಹಿಳಾ ಸಂಚಾಲಕಿಯಾಗಿದ್ದ ಗಂಗಸಂದ್ರದ ಗೌರಮ್ಮ ಹಾಗೂ ಇತರರೊಂದಿಗೆ ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ಕೆ.ಸಂಪಂಗಿರಾಮಯ್ಯನವರ ಜೊತೆ ಯಲ್ಲೂರು ನರಸಿಂಹಯ್ಯ ಕೂಡ ಇದರಲ್ಲಿ ಭಾಗವಹಿಸಿದ್ದರು. ಶ್ರೀನಿವಾಸಪುರ ತಾಲೂಕಿನ ಜಿ.ನಾರಾಯಣಗೌಡ (ಹೊಗಳಗೆರೆ)ರು ಶಿವಪುರಕ್ಕೆ ತೆರಳಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

**ವಿದುರಾಶ್ವತ್ಥ ದುರಂತ**

ಶಿವಪುರ ಧ್ವಜಸತ್ಯಾಗ್ರಹದ ಯಶಸ್ಸಿನಿಂದ ಉತ್ತೇಜಿತರಾದ ಕಾಂಗ್ರೆಸ್ಸಿಗರು, ಸಂಸ್ಥಾನದ ಇತರೆಡೆಗಳಲ್ಲೂ ಇದೇ ರೀತಿಯ ಧ್ವಜ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲು ನಿರ್ಧರಿಸಿದರು. ಅದರಂತೆ ಗೌರಿಬಿದನೂರು ತಾಲೂಕಿನ ವಿದುರಾಶ್ವತ್ಥದಲ್ಲಿ ೧೯೩೮ರ ಏಪ್ರಿಲ್ ತಿಂಗಳಲ್ಲಿ ನಡೆಯುವ ಜಾತ್ರೆಯ ಸಂದರ್ಭವನ್ನು ಬಳಸಿಕೊಂಡು ಧ್ವಜಸತ್ಯಾಗ್ರಹವನ್ನು ಆಚರಿಸಿ ಬಹಿರಂಗ ಸಭೆಯನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಆದರೆ ಕಾಂಗ್ರೆಸ್‌ನ ಈ ಕಾರ್ಯಯೋಜನೆಯನ್ನು ತಪ್ಪಿಸಲು ಮುಂದಾದ ಸಂಸ್ಥಾನದ ಸರ್ಕಾರವು ವಿದುರಾಶ್ವತ್ಥದ ಸುತ್ತ ಎರಡು ಮೈಲಿ ಸುತ್ತಳತೆಯಲ್ಲಿ ಮೆರವಣಿಗೆ, ಭಾಷಣ, ಧ್ವಜಾರೋಹಣಗಳನ್ನು ನಿಷೇಧಿಸಿ ಆಜ್ಞೆಯನ್ನು ಹೊರಡಿಸಿತು. ಆದರೆ ಇದಾವುದನ್ನೂ ಲೆಕ್ಕಿಸದೇ ಜಿಲ್ಲೆಯ ಎನ್.ಸಿ. ನಾಗಯ್ಯರೆಡ್ಡಿ, ಎನ್.ಸಿ. ತಿಮ್ಮಾರೆಡ್ಡಿ, ಎಸ್.ಸಿ. ಶ್ರೀನಿವಾಸರಾವ್, ಗೆದೆರೆ ಗ್ರಾಮದ ರಾಮಸ್ವಾಮಿ, ಜಿ.ವೆಂಕಟಸ್ವಾಮಿಗೌಡ, ಮುಂತಾದವರು ಜಿಲ್ಲೆಯಲ್ಲಿ ಸಂಚರಿಸಿ ಜನರಲ್ಲಿ ಸ್ವಾತಂತ್ರ್ಯ ಚಳವಳಿಯ ಬೀಜ ಬಿತ್ತಿದರು. ಅವರ ಕರೆಗೆ ಓಗೊಟ್ಟ ಜಿಲ್ಲೆಯ ಜನತೆ ವಿದುರಾಶ್ವತ್ಥದಲ್ಲಿ ನೆರೆಯಲಾರಂಭಿಸಿದರು. ಜಾತ್ರೆಗೆ ಬಂದಿದ್ದ ಯಾತ್ರಾರ್ಥಿಗಳೂ ಇದರಲ್ಲಿ ಪಾಲ್ಗೊಂಡರು. ೧೯೩೮ರ ಏಪ್ರಿಲ್ ೧೫ರಂದು ಮೀಸಲು ಪಡೆಯ ೩೭ ಮಂದಿ ಉನ್ನತ ಅಧಿಕಾರಿಗಳು ವಿದುರಾಶ್ವತ್ಥದಲ್ಲಿ ಜಮಾಯಿಸಿದರು. ಏಪ್ರಿಲ್ ೧೮ರಿಂದ ೨೧ರವರೆಗೆ ಯಾರೂ ನಿಷೇಧಾಜ್ಞೆಯನ್ನು ಉಲ್ಲಂಘಿಸಲಿಲ್ಲ. ಆದರೆ ಏಪ್ರಿಲ್ ೨೨ರಂದು ನಿಷೇಧಾಜ್ಞೆಯನ್ನು ಮುರಿದ ಎನ್.ಸಿ.ನಾಗಯ್ಯರೆಡ್ಡಿ, ಶ್ರೀಪಾಲಯ್ಯ, ಗೆದೆರೆ ರಾಮಸ್ವಾಮಿ, ವೆಂಕಟಸ್ವಾಮಿ, ನರಸಿಂಹಪ್ಪ, ನಾರಾಯಣಪ್ಪ, ಸೂರ್ಯನಾರಾಯಣ ರಾವ್, ವೆಂಕಟರಾವ್, ಸಂಗಪ್ಪ ಮುಂತಾದ ಕಾಂಗ್ರೆಸ್ ಕಾರ್ಯಕರ್ತರು ಬಂಧನಕ್ಕೊಳಗಾದರು. ಏಪ್ರಿಲ್ ೨೩ರಂದು ಅನೇಕ ಕಾರ್ಯಕರ್ತರು ಸರಕಾರದ ವಿರುದ್ಧ ಕರಪತ್ರಗಳನ್ನು ಹಂಚಿ ಭಾಷಣ ಮಾಡುವ ಮೂಲಕ ವಾಕ್‌ಸ್ವಾತಂತ್ರ್ಯದ ಹಕ್ಕನ್ನು ಸ್ಥಾಪಿಸಿದರು. ರಾಷ್ಟ್ರಧ್ವಜದ ಗೌರವ ಕಾಪಾಡಲು, ಸರ್ಕಾರ ನಿಷೇಧಾಜ್ಞೆಯನ್ನು ಹಿಂದಕ್ಕೆ ಪಡೆಯುವವರೆಗೆ ಜನರೆಲ್ಲರೂ ಸತ್ಯಾಗ್ರಹ, ಚಳವಳಿ ನಡೆಸಬೇಕೆಂದು ಕಾಂಗ್ರೆಸ್ ಪಕ್ಷ ಕರೆ ನೀಡಿತು. ಏಪ್ರಿಲ್ ೨೫ರಂದು ನಡೆದ ಬಹಿರಂಗ ಸಭೆಯಲ್ಲಿ ಸುಮಾರು ೧೦,೦೦೦ ಜನ ಸೇರಿದ್ದರು. ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಟಿ.ರಾಮಾಚಾರ್ ನಾಯಕತ್ವದಲ್ಲಿ ಸತ್ಯಾಗ್ರಹಿಗಳ ತಂಡ ದೇವಾಸ್ಥಾನದ ಹಿಂಭಾಗದಲ್ಲಿ ನಿರ್ಮಿಸಿದ್ದ ಸಭಾವೇದಿಕೆಗೆ ಧ್ವಜಾರೋಹಣ ಮಾಡಲು ಹೋಯಿತು. ಅದನ್ನು ಸುತ್ತುವರಿದು ನಿಂತಿದ್ದ ಪೋಲೀಸರು ಸತ್ಯಾಗ್ರಹಿಗಳಿಗೆ ಹಿಂದೆ ಹೋಗಲು ಹೇಳಿ ತಾವೂ ಹಿಂದೆ ಸರಿಯುವುದಾಗಿ ಹೇಳಿದರು. ಅದರಂತೆ ಟಿ.ರಾಮಾಚಾರ್ ಹಿಂದಕ್ಕೆ ಸರಿದರು. ಆದರೆ ಅದೇ ವೇಳೆಗೆ ಶ್ರೀನಿವಾಸರಾಯರ ನಾಯಕತ್ವದಲ್ಲಿ ಇನ್ನೊಂದು ತಂಡ ಸಭಾವೇದಿಕೆ ಹತ್ತಲು ಮುಂದಾದಾಗ ಅವರಿಗೆ ಚದುರಲು ಪೋಲಿಸರು ಆದೇಶಿಸಿದರು. ಆದರೆ ಯಾರೂ ಕದಲಲಿಲ್ಲ. ಬದಲಿಗೆ ನೆರೆದಿದ್ದವರು ಮುನ್ನುಗ್ಗಲಾರಂಭಿಸಿದರು. ಇದೂ ಸಾಲದೆಂಬಂತೆ ಧ್ವಜಾರೋಹಣಕ್ಕೆ ನಾಲ್ಕಾರು ಮಂದಿ ಮುಂದಾದರು. ಆಗ ಅವರನ್ನು ಬಂಧಿಸಲು ಪೊಲೀಸರು ಯತ್ನಿಸಿದಾಗ ಸೇರಿದ ಜನ ಆಕ್ರೋಶದಿಂದ ಪೋಲೀಸರೊಂದಿಗೆ ಮಾತಿನ ಚಕಮಕಿಗಿಳಿದರು. ಕ್ರಮೇಣ ಹಿಡಿತ ತಪ್ಪಿತು. ಪೊಲೀಸರು ಜನರನ್ನು ಚದುರಿಸಲು ಲಾಠಿ ಪ್ರಹಾರಕ್ಕೆ ಮುಂದಾದರು. ಅದಕ್ಕೂ ಜನಸ್ತೋಮ ನಿಯಂತ್ರಣಕ್ಕೆ ಬಾರದಾದಾಗ ಪೊಲೀಸರು ಗೋಲಿಬಾರ್‌ಗೆ ಮುಂದಾದರು. ಆ ದಿನ ಪೊಲೀಸರು ೯೭ ಸುತ್ತು ಗುಂಡು ಹಾರಿಸಿದರೆಂದು ವೇಪಾ ರಮೇಶಂ ರವರ ವರದಿ ತಿಳಿಸಿದೆ. ಅದರಿಂದ ನೂರಾರು ಮಂದಿ ಗಾಯಾಳುಗಳಾದರು. ಸರ್ಕಾರಿ ದಾಖಲೆ ಪ್ರಕಾರ ಒಂಭತ್ತು (ಜನವಾಡಿಕೆಯಲ್ಲಿ ಮೂವತ್ತೈದು) ಮಂದಿ ಪ್ರಾಣತೆತ್ತರು. ಇಡಗೂರು ಭೀಮಯ್ಯ, ನಾಮಾ ಆಶ್ವತ್ತನಾರಾಯಣ ಶೆಟ್ಟಿ, ನರಸಪ್ಪ, ಹನುಮಂತಪ್ಪ, ಚೌಳೂರು ನರಸಪ್ಪ, ಗಚ್ಚನಗಾರಿ ನರಸಪ್ಪ, ಕಾರಂಡಹಳ್ಳಿ ಮಲ್ಲಯ್ಯ, ವೆಂಕಟಗಿರಿಯಪ್ಪ ಹಾಗೂ ಮರಳೂರಿನ ಗೌರಮ್ಮ ಸರ್ಕಾರಿ ದಾಖಲೆ ಪ್ರಕಾರ ಸತ್ತವರಾಗಿದ್ದರು. ಆ ಸಮಯದಲ್ಲಿ ಗುಡಿಬಂಡೆಯ ರಾಮರಾಯರು ಗಾಯಾಳುಗಳಿಗೆ ಶುಶ್ರೂಷೆ ಮಾಡಿ ವರದಿ ತಯಾರಿಸಿ

ರುಮಾಲೆ ಚನ್ನಬಸವಯ್ಯ ಮತ್ತು ನಂಜುಂಡರಾವ್ ಮೂಲಕ ಪಿ.ಟಿ.ಐ. ಹಾಗೂ ಬಿ.ಬಿ.ಸಿ.ಗಳಿಗೆ ಸುದ್ದಿ ಮುಟ್ಟಿಸಿದ್ದರಿಂದ ವಿದುರಾಶ್ವತ್ಥದ ದುರಂತ ಜಗಜ್ಜಾಹೀರಾಯಿತು. ಅಂದು ಬಂಧಿಸಲ್ಪಟ್ಟವರಲ್ಲಿ ಟಿ.ರಾಮಾಚಾರ್ ಮತ್ತವರ ಅನುಯಾಯಿಗಳಿದ್ದರು.

ವಿದುರಾಶ್ವತ್ಥದಲ್ಲಿ ವಿದುರನಾರಾಯಣನ ಪೂಜೆಯಲ್ಲಿ ತೊಡಗಿದ್ದ ಗರ್ಭಿಣಿ ಗೌರಮ್ಮನಿಗೆ ಗುಂಡು ಬಡಿದು ಸ್ಥಳದಲ್ಲೇ ಮಡಿದಳೆಂಬ ವಾರ್ತೆ ಎಲ್ಲೆಡೆ ಹರಡಿತು. ಅದರ ಬೆನ್ನಲ್ಲೇ ಶಾಲಾ–ಕಾಲೇಜುಗಳು ಮುಚ್ಚಲ್ಪಟ್ಟು ಪ್ರತಿಭಟನಾ ಮೆರವಣಿಗೆಗಳು ಚಿಕ್ಕಬಳ್ಳಾಪುರ ಸೇರಿದಂತೆ ಜಿಲ್ಲೆಯಾದ್ಯಂತ ನಡೆದವು. ಚಿಕ್ಕಬಳ್ಳಾಪುರದ ಕೆ.ಸಂಪಂಗಿರಾಮಯ್ಯ, ಕೆ.ವೆಂಕಟಪ್ಪ, ಕೆ.ವೆಂಕಟಕೃಷ್ಣಪ್ಪ, ಸಂಪತ್‌ಕುಮಾರನ್, ಯಲ್ಲೂದುರು ನರಸಿಂಹಯ್ಯ, ಎ.ಸಿ.ಹನುಮಂತಯ್ಯ, ಎ.ಮುನಿಯಪ್ಪ ಮುಂತಾದವರು ನಿಷೇಧಾಜ್ಞೆ ಮುರಿದು ಸತ್ಯಾಗ್ರಹ ನಡೆಸುವ ಮೂಲಕ ಬಂಧನಕ್ಕೊಳಗಾಗಿ ಮೂರು ತಿಂಗಳು ಕಾರಾಗೃಹದಲ್ಲಿದ್ದರು. ಇದರಲ್ಲಿ ಭಾಗವಹಿಸಿದ್ದ ಶ್ರೀನಿವಾಸಪುರ ತಾಲೂಕಿನ ಹೊಗಳಗೆರೆಯ ಜಿ.ನಾರಾಯಣಗೌಡರು ಬಂಧಿಸಲ್ಪಟ್ಟು ಮೂರು ದಿನ ಸೆರೆಮನೆಯಲ್ಲಿದ್ದರೆಂದು ತಿಳಿದುಬರುತ್ತದೆ. ಅದೇ ವರ್ಷ ಇವರು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸದಸ್ಯರಾದರು. ಈ ದುರಂತವನ್ನು ವಿರೋಧಿಸಿ, ಮೇಲೂರಿನವರು ಸಂಘಟಿಸಿದ್ದ ಶಿಡ್ಲಘಟ್ಟ ತಾಲೂಕು ಸಭೆಗೆ ಮಹಾದೇವ ದೇಸಾಯಿ ಸೇರಿದಂತೆ ಅನೇಕ ನಾಯಕರು ಭಾಗವಹಿಸಿದ್ದು ಉಲ್ಲೇಖಾರ್ಹವಾಗಿತ್ತು.

ವಿದುರಾಶ್ವತ್ಥ ದುರಂತವನ್ನು ಪ್ರತಿಭಟಿಸಿ, ಬೆಂಗಳೂರಿನ ಚಿಕ್ಕ ಲಾಲಾಬಾಗಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕೆ.ಸಿ.ರೆಡ್ಡಿ ಹಾಗೂ ಎನ್.ಸಿ.ತಿಮ್ಮಾರೆಡ್ಡಿ ಭಾಷಣ ಮಾಡಿದ ಸಂದರ್ಭದಲ್ಲಿ ಲಾಠಿ ಚಾರ್ಜು ಆಗಿ ಪೆಟ್ಟು ತಿಂದವರಲ್ಲಿ ಪಿಲ್ಲಗುಂಡ್ಲಹಳ್ಳಿಯ ಪಿ.ವಿ.ಸೀತಾರಾಮ ಕಾಂತಾನಂದಜಿಯವರೂ ಒಬ್ಬರಾಗಿದ್ದು, ಮೋತಕಪಳ್ಳಿಯ ಎಂ.ವಿ.ಕೃಷ್ಣಪ್ಪ ಹಾಗೂ ಕ್ಯಾಸಂಬಳ್ಳಿಯ ಕೆ.ಸಿ.ರೆಡ್ಡಿಯವರ ನೆರೆಯ ಗ್ರಾಮದವರಾಗಿದ್ದ ಇವರು ಅಲ್ಲಿಂದಾಚೆಗೆ ಆಂದೋಲನದಲ್ಲಿ ಪಾಲ್ಗೊಂಡರು.

ದುರಂತದ ನಿಜಾಂಶ ತಿಳಿಯಲೆಂದೇ ಗಾಂಧೀಜಿಯವರು ವಲ್ಲಭಭಾಯಿಪಟೇಲ್ ಹಾಗೂ ಆಚಾರ್ಯ ಕೃಪಾಲಿನಿಯನ್ನು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದ ವಿದುರಾಶ್ವಥಕ್ಕೆ ಕಳುಹಿಸಿದರು. ಸಂಸ್ಥಾನದ ಸರ್ಕಾರವೇ ವೇಪಾ ರಮೇಶಂರನ್ನು ವಿಚಾರಣೆಗೆ ನೇಮಿಸಿತು. ಅಂತಿಮವಾಗಿ ರಾಷ್ಟ್ರ ನಾಯಕರೊಂದಿಗೆ ಒಪ್ಪಂದ ಮಾಡಿಕೊಂಡ ಸಂಸ್ಥಾನದ ಸರ್ಕಾರ, ಸಂಸ್ಥಾನದ ಧ್ವಜದೊಡನೆ ರಾಷ್ಟ್ರಧ್ವಜವನ್ನೂ ಹಾರಿಸಲು ಒಪ್ಪಿಗೆ ನೀಡಿತು. ತತ್ಪರಿಣಾಮವಾಗಿ ೧೯೩೮ರ ಅಕ್ಟೋಬರ್ ೨೬ರಂದು ವಿದುರಾಶ್ವತ್ಥ ದಿನಾಚರಣೆಯನ್ನು ಆಚರಿಸಲಾಯಿತು.

ಮುಳಬಾಗಿಲು ತಾಲೂಕಿನ ಪದಕಾಶ್ಶಿಯವರಾದ ಪಿ.ರಾಮೇಗೌಡರು, ೧೯೩೮ರ ಸತ್ಯಾಗ್ರಹದ ನಂತರ ಬಂಧನಮುಕ್ತರಾಗಿ ಆವನಿಗೆ ಬಂದಿದ್ದ ಹೆಚ್.ಸಿ.ದಾಸಪ್ಪ ಹಾಗೂ ಯಶೋಧರಾ ದಾಸಪ್ಪ ಅವರು ಮಾಡಿದ ಭಾಷಣದಿಂದ ಪ್ರಭಾವಿತರಾಗಿ, ಗೆಳೆಯ ಪುಟ್ಟಣನವರೊಂದಿಗೆ ಹಳ್ಳಿ–ಹಳ್ಳಿಗೆ ಹೋಗಿ ಕಾಂಗ್ರೆಸ್ಸಿಗೆ ಸದಸ್ಯರನ್ನು ನೋಂದಣಿಸುವ ಕಾರ್ಯದಲ್ಲಿ ತೊಡಗಿದರು. ಅಲ್ಲದೆ, ಕೆ.ಸಿ.ರೆಡ್ಡಿ, ಪಟ್ಟಾಭಿರಾಮನ್, ಟಿ.ರಾಮಾಚಾರ್, ಎನ್.ಸಿ.ನಾಗಯ್ಯರೆಡ್ಡಿ ಮುಂತಾದ ನಾಯಕರ ಭಾಷಣಗಳನ್ನು ಗ್ರಾಮೀಣ ಪ್ರದೇಶದಲ್ಲಿ ಏರ್ಪಡಿಸುವ ಮೂಲಕ ಕಾಂಗ್ರೆಸ್ಸಿನ ಜನಪ್ರಿಯತೆಗೆ ಕಾರಣರಾದರು. ಕೆ.ಟಿ.ಭಾಷ್ಯಂ ಅವರು ಪದಕಾಶ್ಶಿಗೆ ೧೯೩೮ರಲ್ಲಿ ಆಗಮಿಸಿದ್ದಾಗ, ಎಂ.ವಿ.ಕೃಷ್ಣಪ್ಪನವರ ಆದೇಶದಂತೆ, ೧೨ ಎತ್ತುಗಳನ್ನು ಹೂಡಿದ ಅಲಂಕೃತ ಎತ್ತಿನ ಬಂಡಿಯಲ್ಲಿ ಭಾಷ್ಯಂರನ್ನು ಸಭಾ ಸ್ಥಳಕ್ಕೆ ಅದ್ದೂರಿ ಮೆರವಣಿಗೆಯಲ್ಲಿ ಕರೆತರಲಾಯಿತು. ಈ ಸಭೆ ನಡೆಸದಿರಲು ಸರ್ಕಾರ ಬೆದರಿಕೆ ಹಾಕಿ ಚಪ್ಪರ ತೆಗೆಯಲು ಸೂಚಿಸಿತ್ತು. ಆದರೆ ಅದಕ್ಕೆ ಜಗ್ಗದೆ ಸಭೆಯನ್ನು ನಡೆಸಲಾಯಿತು. ಆದರೆ ಸಭೆಯ ನಂತರ ರಾಮೇಗೌಡರನ್ನು ಬಂಧಿಸಿ, ಆಸ್ತಿ ಜಪ್ತಿ ಮಾಡುವ ಯತ್ನ ನಡೆಯಿತಾದರೂ ಸ್ಥಳೀಯರ ಬೆಂಬಲವಿದ್ದುದರಿಂದ ಅದು ವಿಫಲವಾಯಿತು. ಬೆಂಗಳೂರಿನ ಭಾಷ್ಯಂ ಪಾರ್ಕ್‌ನಲ್ಲಿ ಜರುಗಿದ ಧ್ವಜಸತ್ಯಾಗ್ರಹ (೨೯–೪–೧೯೩೮)ದಲ್ಲಿ ಪಾಲ್ಗೊಂಡಿದ್ದ ಪುಲಿಗಲ್‌ನ (ಬಾಗೇಪಲ್ಲಿ ತಾ) ಬಾಲಕ

ಪಿ.ಎನ್.ಲಕ್ಷ್ಮಣರಾವ್ ಲಾಠಿ ರುಚಿ ಉಂಡು, ಬಂಧನಕ್ಕೊಳಪಟ್ಟು, ಜೈಲಿನಲ್ಲಿ ರಾಗಿ ಬೀಸುತ್ತಾ ೨೦ ದಿನದ ಸೆರೆವಾಸ ಅನುಭವಿಸಿದರೆಂದು ತಿಳಿದುಬರುತ್ತದೆ. ಈ ನಡುವೆ ೧೯೩೮–೩೯ರಲ್ಲಿ ಸಂಸ್ಥಾನದಾದ್ಯಂತ ತಾಲೂಕು ಮಟ್ಟದಲ್ಲಿ ರೈತಸಭೆಗಳನ್ನು ಹಮ್ಮಿಕೊಳ್ಳಲಾಯಿತು. ಅಸಹಕಾರ ಚಳವಳಿ, ಈಚಲು ಮರಗಳ ನಾಶದಂತಹ ಚಟುವಟಿಕೆಗಳೂ ನಡೆದಿದ್ದವು.

ವಿದುರಾಶ್ವತ ಧ್ವಜ ಸತ್ಯಾಗ್ರಹ (೧೯೩೮) ನಡೆದ ಮರುವರ್ಷವೇ ೧೯೩೯ರ ಏಪ್ರಿಲ್ ೧೧ರಂದು ವಿದುರಾಶ್ವತ್ಥದಲ್ಲಿ ನಡೆದ ಎರಡನೆಯ ಕಾಂಗ್ರೆಸ್ ಸಮಾವೇಶಕ್ಕೆ ಪೂರಕ ವ್ಯವಸ್ಥೆ ಮಾಡುವ ಜವಾಬ್ದಾರಿ ಬಂಗಾರಪೇಟೆಯ ಎಂ.ದೊರೆಸ್ವಾಮಿಯವರದಾಗಿತ್ತು. ಈ ಸಮಾವೇಶದ ಸಿದ್ಧತೆಗಾಗಿ, ೩೦೦೦ ಸ್ವಯಂ ಸೇವಕರು ಹತ್ತು ದಿನ ಮೊದಲಿನಿಂದಲೇ ದೊರೆಸ್ವಾಮಿಯರ ನೇತೃತ್ವದಲ್ಲಿ ದುಡಿದರು. ಚಪ್ಪರಕ್ಕೆ ಬೇಕಾದ ಚಾಪೆಗಳನ್ನು ವಾನಿಯಂಬಾಡಿಯಿಂದ ಸರಕು ರೈಲಿನ ಮೂಲಕ ತರಿಸಿಕೊಳ್ಳಲಾಯಿತು. ಹತ್ತು ಎತ್ತಿನ ಗಾಡಿಗಳನ್ನು ಬಳಸಿಕೊಂಡು ದೂರದ ಸ್ಥಳದಿಂದ ತಂದಿದ್ದ ಎತ್ತರದ ಧ್ವಜಸ್ತಂಭವನ್ನು ನೆಟ್ಟು ಅಲಂಕರಿಸಲಾಯಿತು. ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಹೆಚ್.ಸಿ.ದಾಸಪ್ಪ ಅವರನ್ನು ಅಲಂಕೃತ ಕುದುರೆ ಮೇಲೆ ಕೂರಿಸಿಕೊಂಡು ಮೆರವಣಿಗೆಯಲ್ಲಿ ಸಭಾಸ್ಥಾನಕ್ಕೆ ವಿಜೃಂಭಣೆಯಿಂದ ಕರೆತರಲಾಯಿತು. ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ಎರಡನೆಯ ಅಧಿವೇಶನವು ಅದ್ದೂರಿಯಿಂದ ಜರುಗಿತು.

ಅನಂತರದಲ್ಲಿ ವಿದುರಾಶ್ವತ್ಥದಲ್ಲಿ "ವೀರಸೌಧ" ಸ್ಮಾರಕವನ್ನು ನಿರ್ಮಿಸಲಾಗಿದೆ. ಕೇಂದ್ರ ಸರ್ಕಾರದ ಆಶಯದಂತೆ, ೧೯೮೭ರ ಆಗಸ್ಟ್ ೧೫ರಂದು, 'ಸ್ವಾತಂತ್ರ್ಯ ವೃಕ್ಷ' ಬೆಳೆಸುವ ಯೋಜನೆಯನ್ವಯ, ೪೦ನೆಯ ಸ್ವಾತಂತ್ರ್ಯ ವಾರ್ಷಿಕೋತ್ಸವದ ಸ್ಮರಣಾರ್ಥವಾಗಿ, ದೇಶದ ವಿವಿಧ ಸ್ವಾತಂತ್ರ್ಯ ಸಂಗ್ರಾಮ ಕೇಂದ್ರಗಳಂತೆ, ವಿದುರಾಶ್ವತ್ಥದಿಂದಲೂ ಪವಿತ್ರ ಮಣ್ಣನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಜಿಲ್ಲೆಯ ಅನ್ನಪೂರ್ಣಾದೇವಿ ತಿಮ್ಮಾರೆಡ್ಡಿ ಅವರ ಮೂಲಕ ದೆಹಲಿಗೆ ಕಳುಹಿಸಲಾಯಿತು.

### ಮೈಸೂರಿನ ಹ್ಯಾಮಿಲ್ಟನ್ ಕಟ್ಟಡ (ಟೌನ್‌ಹಾಲ್) ಸತ್ಯಾಗ್ರಹ

ದಬ್ಬಾಳಿಕೆಯಿಂದ ಕೂಡಿದ ಕ್ರೂರ ಆಡಳಿತಕ್ಕೆ ಹೆಸರಾದ ಬ್ರಿಟೀಷ್ ಅಧಿಕಾರಿ ಹ್ಯಾಮಿಲ್ಟನ್ನನ ಹೆಸರನ್ನು ಮೈಸೂರಿನ ಕಟ್ಟಡವೊಂದಕ್ಕೆ ಇಡಲು ಸಂಸ್ಥಾನದ ಸರ್ಕಾರ ಮುಂದಾದಾಗ, ಕಾಂಗ್ರೆಸ್ ಪಕ್ಷವು ೧೯೩೯ರ ಫೆಬ್ರವರಿಯಲ್ಲಿ ಸತ್ಯಾಗ್ರಹಕ್ಕೆ ಕರೆನೀಡಿತು. ಆ ವರ್ಷದ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಮೈಸೂರಿನಲ್ಲಿ ಜರುಗಿದ ಸತ್ಯಾಗ್ರಹಕ್ಕೆ ಬರಲು ಸಂಸ್ಥಾನದ ವಿವಿಧ ಭಾಗಗಳಿಂದ ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಲಾಗಿತ್ತು. ಅದರಂತೆ ಕೋಲಾರ ಜಿಲ್ಲೆಯಿಂದಲೂ ಅನೇಕ ಮಂದಿ ಸತ್ಯಾಗ್ರಹಿಗಳು ಪಾಲ್ಗೊಂಡಿದ್ದರು. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಕಳವಾರದ ಜಿ.ವೆಂಕಟಕೃಷ್ಣಪ್ಪ ಹಾಗೂ ಚಿಕ್ಕಬಳ್ಳಾಪುರದ ಎ.ಮುನಿಯಪ್ಪ ಬಂಧನಕ್ಕೊಳಪಟ್ಟರು. ಯಲ್ದೂರು ನರಸಿಂಹಯ್ಯನವರೂ ಭಾಗವಹಿಸಿ ಬಂಧಿಸಲ್ಪಟ್ಟು ಒಂದು ವರ್ಷ ಕಠಿಣ ಶಿಕ್ಷೆ ಹಾಗೂ ೨೦೦ ರೂ.ಗಳ ಜುಲ್ಮಾನೆಯನ್ನು ವಿಧಿಸಲಾಯಿತು. ಚಿಕ್ಕಬಳ್ಳಾಪುರದ ಜಿ.ವಿ.ವೆಂಕಟಸ್ವಾಮಿ ಹಾಗೂ ಸಂಗಡಿಗರು ಇದರಲ್ಲಿ ಪಾಲ್ಗೊಂಡು ಬಂಧನಕ್ಕೊಳಗಾದರೆಂದು ತಿಳಿದುಬರುತ್ತದೆ. ಕೆ.ವೆಂಕಟರಾಮಪ್ಪ ಈ ಸತ್ಯಾಗ್ರಹದಲ್ಲೂ ಪಾಲ್ಗೊಂಡಿದ್ದು, ಶಿಬಿರ ಮುಚ್ಚಿದಾಗ ಕೆ.ಜಿ.ಎಫ್ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲೆಂದು ಸುಮಾರು ೫೦ ಮಂದಿ ಹಿಂಬಾಲಕರೊಂದಿಗೆ ಬಂಗಾರಪೇಟೆಗೆ ತೆರಳಿದರು.

### ಕೋಲಾರದ ಚಿನ್ನದಗಣಿ ಸತ್ಯಾಗ್ರಹ

ಕೆ.ಜಿ.ಎಫ್‌ಗೆ ಗಾಂಧೀಜಿಯವರು ೧೯೩೬ರಲ್ಲಿ ಆಗಮಿಸಿದ್ದ ಬೆನ್ನಲ್ಲೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರ ಪ್ರವೇಶವನ್ನು ಸ್ಥಳೀಯ ಆಡಳಿತ ನಿರ್ಬಂಧಿಸಿತು. ಗಣಿಪ್ರದೇಶದಲ್ಲಿ ಸುಮಾರು ೨೧,೦೦೦ ಕೂಲಿಕಾರ್ಮಿಕರು ದುಡಿಯುತ್ತಿದ್ದು, ಬ್ರಿಟೀಷ್ ಕಾಯ್ದೆ ೧೭ ಅಲ್ಲಿ ಜಾರಿಯಲ್ಲಿತ್ತು. ಆ ಕಾಯ್ದೆಯಂತೆ

ಯಾರನ್ನು ಬೇಕಾದರೂ ೨೪ ಗಂಟೆಯೊಳಗೆ ಗಡಿಪಾರು ಮಾಡುವ ಅಧಿಕಾರ ಸ್ಥಳೀಯ ಆಡಳಿತಕ್ಕಿತ್ತು. ಏತನ್ಮಧ್ಯೆ ಜಿಲ್ಲೆಯಲ್ಲಿ ಮೈಸೂರು ಕಾಂಗ್ರೆಸ್ಸಿನ ರಾಜಕೀಯ ಚಟುವಟಿಕೆಗಳು ತೀವ್ರಗೊಂಡವು. ಕೋಲಾರ ಚಿನ್ನದ ಗಣಿ ಪ್ರದೇಶದಲ್ಲೂ ಮೈಸೂರು ಕಾಂಗ್ರೆಸ್‌ನ ಚಟುವಟಿಕೆಯು ಬಿರುಸಿನಿಂದ ಸಾಗಿತ್ತು. ಈ ಸಂಬಂಧ ೧೯೩೮ರ ಆಗಸ್ಟ್‌ನಲ್ಲಿ ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾದ ಹೆಚ್.ಸಿ.ದಾಸಪ್ಪನವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಟಿ.ಭಾಷ್ಯಂ, ಟಿ.ಮರಿಯಪ್ಪ ಕೆ.ಆರ್.ಮಾಧವರಾವ್, ಎಸ್.ವಿ.ಕೃಷ್ಣಮೂರ್ತಿರಾವ್, ಎ.ಜಿ.ಬಂದಿಗೌಡ, ಎಂ.ವಿ.ರಾಮರಾವ್ ಹಾಗೂ ಸಾವುಕಾರ್ ಚನ್ನಯ್ಯ ಅವರೊಂದಿಗೆ ಕೋಲಾರ ಚಿನ್ನದ ಗಣಿಯತ್ತ ಪ್ರಯಾಣ ಬೆಳೆಸಿದರು. ಅವರನ್ನು ಕೆ. ಪಟ್ಟಾಭಿರಾಮನ್ ಹಾಗೂ ಟಿ.ರಾಮಾಚಾರ್ ಅವರು ಕೋಲಾರದಲ್ಲಿ ಕೂಡಿಕೊಂಡರು. ಕ್ಯಾಸಂಬಳ್ಳಿಯತ್ತ ಹೊರಟಿದ್ದ ಈ ಗುಂಪಿಗೆ ಗಣಿ ಪ್ರದೇಶದ ಮೂಲಕ ಬರುವಂತೆ ಕೆ.ಸಿ. ರೆಡ್ಡಿಯವರು ಸೂಚಿಸಿದರು. ಅದರಂತೆ ಚಿನ್ನದ ಗಣಿ–ಬೇತಮಂಗಲ ಕೂಡುರಸ್ತೆಯಲ್ಲಿ ರೆಡ್ಡಿಯವರು ಅವರನ್ನು ಎದುರುಗೊಂಡರು. ಆ ವೇಳೆಗಾಗಲೇ ಅಲ್ಲಿ ಪೊಲೀಸ್ ವ್ಯಾನ್ ಇದ್ದು ಸಮೀಪವೇ ಇದ್ದ ಜಿಲ್ಲಾಧಿಕಾರಿ ಸುಂದರರಾವ್ ಅವರು, ಗಣಿ ಪ್ರದೇಶದಲ್ಲಿ ಕಾಂಗ್ರೆಸ್ ಸಮಿತಿ ಸದಸ್ಯರು ಹೋಗಬಾರದೆಂದು ನಿರ್ಬಂಧಿಸಿ ತಡೆಯಾಜ್ಞೆ ನೀಡಿದರು. ಅಲ್ಲೇ ಸಮೀಪದ ಆಲದ ಮರದ ಕೆಳಗೆ ಸಭೆ ನಡೆಸಿ ತಡೆಯಾಜ್ಞೆಯನ್ನು ಮುರಿಯಲು ನಿರ್ಧರಿಸಿದ ಕಾಂಗ್ರೆಸ್ಸಿಗರು, ಗಣಿ ಪ್ರದೇಶವನ್ನು ಪ್ರವೇಶಿಸುವ ಮೂಲಕ ನಿರ್ಬಂಧವನ್ನು ಮುರಿದು ಬಂಧನಕ್ಕೊಳಗಾದರು. ತತ್ಪರಿಣಾಮವಾಗಿ ೧೯೩೮ರ ಆಗಸ್ಟ್‌ನಲ್ಲಿ ಕೆ.ಜಿ.ಎಫ್.ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರ ಪ್ರವೇಶವನ್ನು ಕೆ.ಜಿ.ಎಫ್. ನ್ಯಾಯಾಲಯವು ನಿರ್ಬಂಧಿಸಿತು. ಅಲ್ಲದೇ ಟಿ.ರಾಮಾಚಾರ್, ಕೆ.ಸಿ.ರೆಡ್ಡಿ, ಕೆ.ಸಂಪಂಗಿರಾಮಯ್ಯ, ಕೆ.ಟಿ.ಭಾಷ್ಯಂ, ಹೆಚ್.ಸಿ. ದಾಸಪ್ಪ ಎಸ್.ರಂಗರಾಮಯ್ಯ, ಎಂ.ಗೋವಿಂದರೆಡ್ಡಿ, ಕೆ.ಹೆಂಜೇರಪ್ಪ, ಎಂ.ಮಹಾಬಲರಾವ್ ಹಾಗೂ ಟಿ.ಸುಬ್ರಹ್ಮಣ್ಯರಿಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಲಾಯಿತು. ಇದರ ಪರಿಣಾಮವಾಗಿ ವಕೀಲಿ ವೃತ್ತಿ ನಡೆಸುತ್ತಿದ್ದ ಟಿ.ರಾಮಾಚಾರ್ ಹಾಗೂ ಕೆ. ಸಂಪಂಗಿರಾಮಯ್ಯರಿಗೆ ಜಿಲ್ಲಾ ನ್ಯಾಯಾಲಯವು ವಕಾಲತ್ತು ನಡೆಸದಿರುವಂತೆ ನಿರ್ಬಂಧವನ್ನೂ ಹೇರಿತು.

ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರ ಪ್ರವೇಶದ ನಿರ್ಬಂಧ ಹಾಗೂ ಬಂಧನಗಳನ್ನು ವಿರೋಧಿಸಿ, ಗಣಿ ಪ್ರದೇಶದಲ್ಲಿ ಸತ್ಯಾಗ್ರಹ ನಡೆಸುವ ಸತ್ಯಾಗ್ರಹಿಗಳಿಗೆ, ತರಬೇತಿ ನೀಡಲು ಬಂಗಾರಪೇಟೆಯಲ್ಲಿ ಪಕ್ಷದ ವತಿಯಿಂದ ಸತ್ಯಾಗ್ರಹ ಶಿಬಿರವನ್ನು ತೆರೆಯಲಾಯಿತು. ಅದಕ್ಕೆ ಎಂ.ಆರ್.ದೊರೆಸ್ವಾಮಿಯವರನ್ನು ಶಿಬಿರದ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಶಿಬಿರಕ್ಕೆ ವಿವಿಧೆಡೆಗಳಿಂದ ಬರುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರ ಊಟ, ವಸತಿ ಹಾಗೂ ರೈಲು ಚಾರ್ಜುಗಳನ್ನು ಭರಿಸುವ ನಿಟ್ಟಿನಲ್ಲಿ ಜಿಲ್ಲೆಯ ಎ.ಟಿ.ಲಕ್ಷ್ಮಣ ಮೊದಲಿಯಾರ್ ಹಾಗೂ ರಾಜಾ ಆದಿನಾರಾಯಣ ಶೆಟ್ಟಿಯವರು ಉದಾರ ಆರ್ಥಿಕ ನೆರವನ್ನು ನೀಡುತ್ತಿದ್ದರು. ದಿನಕ್ಕೆ ಹತ್ತು ಜನರಂತೆ ಸತ್ಯಾಗ್ರಹಿಗಳನ್ನು ಮಾರುವೇಷದಲ್ಲಿ ಗಣಿಪ್ರದೇಶದೊಳಗೆ ನುಸುಳಿ ಸತ್ಯಾಗ್ರಹವನ್ನು ನಡೆಸಲು ಪೂರಕವಾದ ಕಾರ್ಯಯೋಜನೆಯನ್ನು ಶಿಬಿರದಲ್ಲಿ ರೂಪಿಸಿದ ನಂತರ ಕಾರ್ಯಗತಗೊಳಿಸಲಾಗುತ್ತಿತ್ತು. ಅಲ್ಲದೇ ಗಣಿಪ್ರದೇಶದ ಸುತ್ತಮುತ್ತಲೂ ಊರಿಂದೂರಿಗೆ ಹೋಗಿ ಸತ್ಯಾಗ್ರಹ ನಡೆಸಲು ಇಲ್ಲಿ ನೀಡುತ್ತಿದ್ದ ತರಬೇತಿ ವ್ಯವಸ್ಥೆಯಲ್ಲಿ, ಎಂ.ದೊರೆಸ್ವಾಮಿಯವರಿಗೆ ಜಿ.ಎಸ್.ಚಿಕ್ಕವೀರಪ್ಪ ಎಂ.ರಾಮಕೃಷ್ಣಯ್ಯ, ಆರ್.ಎಚ್.ರಾಮಕೃಷ್ಣಪ್ಪ ಬಿ.ಜಿ.ಚಿಕ್ಕಸಿದ್ಧಪ್ಪ ಮುಂತಾದವರು ನೆರವು ನೀಡುತ್ತಿದ್ದರು. ಪ್ರತಿದಿನ ೫೦೦ ರಿಂದ ೮೦೦ ಜನ ಸತ್ಯಾಗ್ರಹಿಗಳಿಗೆ ಊಟೋಪಚಾರದ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಈ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಮಂಡ್ಯದಲ್ಲೂ ಶಿಬಿರದ ವ್ಯವಸ್ಥೆ ಮಾಡಲಾಗಿತ್ತೆಂದು ಎಂ.ದೊರೆಸ್ವಾಮಿ ತಮ್ಮ ಸ್ವಾತಂತ್ರ್ಯ ಸ್ಮೃತಿಯಲ್ಲಿ ದಾಖಲಿಸಿದ್ದಾರೆ. ಈ ಸತ್ಯಾಗ್ರಹದಲ್ಲಿ ಮೊದಲ ದಿನದಂದು ಭಾಗವಹಿಸಿದ ೨೧ ಮಂದಿ ಕಾರ್ಯಕರ್ತರು ರೈತರ ವೇಷದಲ್ಲಿ ಮಾರಿಕುಪ್ಪಂ ರೈಲನ್ನೇರಿ, ಬೋಗಿಯಲ್ಲೇ ಖಾದಿ ವಸ್ತ್ರ – ಟೋಪಿ ಧರಿಸಿ, ಕಿಟಕಿಯಿಂದ ಹೊರಕ್ಕೆ ಬಾವುಟ ಚಾಚಿ ಜಯಘೋಷ ಮಾಡುವ ಮೂಲಕ ಸತ್ಯಾಗ್ರಹವನ್ನು ಯಶಗೊಳಿಸಿದರು. ಆದರೆ ರಾಬರ್ಟ್‌ಸನ್‌ಪೇಟೆಯಲ್ಲಿ ಸತ್ಯಾಗ್ರಹಿಗಳನ್ನು ಬಂಧಿಸಿದ ಪೋಲಿಸರು ಮದನಪಲ್ಲಿ ರಸ್ತೆಯಲ್ಲಿ ಕೊಂಡೊಯ್ದು ಕಾಡಿನಲ್ಲಿ ಮೈಲಿಗೊಬ್ಬೊಬ್ಬರಂತೆ ಸತ್ಯಾಗ್ರಹಿಗಳನ್ನು ವ್ಯಾನಿನಿಂದ ಹೊರದೂಡುತ್ತಿದ್ದರು. ಕಾರ್ಗತ್ತಲಿನಲ್ಲಿ ರಾತ್ರಿ ಕಳೆದು ಬೆಳಿಗ್ಗೆ ಒಂದೆಡೆ ಎಲ್ಲರೂ ಸೇರಿದ ನಂತರ, ಸಮೀಪದ ಗ್ರಾಮಸ್ಥರ ನೆರವಿನಿಂದಾಗಿ ಬಂಗಾರಪೇಟೆಗೆ ಹಿಂತಿರುಗಿ ಮತ್ತೆ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮುಂದಾಗುತ್ತಿದ್ದರು. ಈ ಸತ್ಯಾಗ್ರಹವು ನಿರಂತರವಾಗಿ ನಡೆದು, ದಿನಂಪ್ರತಿ ಸತ್ಯಾಗ್ರಹಿಗಳ ಬಂಧನ, ಗಡಿಪಾರುಗಳು ನಡೆದವು. ದಿನಾಂಕ ೨೭–೯–೧೯೩೮ರಂದು

ಶಿಬಿರದ ಮುಖಂಡರಾಗಿದ್ದ ಎಂ.ದೊರೆಸ್ವಾಮಿ ಸೇರಿದಂತೆ ಎಂ.ರಾಮಕೃಷ್ಣಯ್ಯ, ಸಿದ್ಧವೀರಪ್ಪ, ಆದಿನಾರಾಯಣಶೆಟ್ಟಿ, ಸಿದ್ಧಪ್ಪ, ಸರ್ವಜ್ಞಮೂರ್ತಿ ಹಾಗೂ ಇನ್ನಿತರರನ್ನು ಬಂಧಿಸಲಾಯಿತು. ದೊರೆಸ್ವಾಮಿಯವರಿಗೆ ಒಂದೂವರೆ ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ೨೦೦ ರೂ. ದಂಡ ವಿಧಿಸಿ ಮಂಡ್ಯ ಲಾಕಪ್ಪಿಗೆ ಕಳುಹಿಸಲಾಯಿತು. ಎಂ.ರಾಮಕೃಷ್ಣಯ್ಯ ಹಾಗೂ ಇತರರಿಗೆ ಮೂರು ತಿಂಗಳ ಸೆರೆವಾಸವನ್ನೂ ವಿಧಿಸಿ ಕೆ.ಜಿ.ಎಫ್.ನ ಸೆರೆಮನೆಯಲ್ಲಿಡಲಾಯಿತು. ಜಿ.ಎಸ್.ಚಿಕ್ಕವೀರಪ್ಪನವರಿಗೆ ಎರಡು ತಿಂಗಳ ಕಠಿಣ ಸಜೆಯಾಯಿತು. ಈ ಸತ್ಯಾಗ್ರಹದಲ್ಲಿ ಕಳವಾರದ ಕೆ.ವೆಂಕಟಕೃಷ್ಣಪ್ಪ ಮೂರು ಬಾರಿ ಭಾಗವಹಿಸಿದ್ದು, ಮೊದಲ ಬಾರಿ ಗಡಿಪಾರಾದರೇ, ಎರಡನೆಯ ಬಾರಿ ಒಂದು ವಾರ ಕಠಿಣ ಸಜೆ ಹಾಗೂ ಮೂರನೆಯ ಬಾರಿ ಐದು ವಾರ ಕಠಿಣ ಸಜೆ ಹಾಗೂ ಜುಲ್ಮಾನೆ ವಿಧಿಸಿ ಅದನ್ನು ಸಂಗ್ರಹಿಸಲು, ಆಸ್ತಿ ಜಪ್ತಿ ಮಾಡಿ, ಎರಡು ಎಮ್ಮೆ ಹಾಗೂ ಕರುವನ್ನು ಹರಾಜು ಹಾಕಿದರೆಂದು ಕೆ.ವೆಂಕಟಕೃಷ್ಣಪ್ಪ ದಾಖಲಿಸಿದ್ದು, ಸ್ವಾತಂತ್ರ್ಯಾನಂತರ ಭಾರತ ಸರ್ಕಾರವು ಅವರಿಗಾದ ನಷ್ಟವನ್ನು ತುಂಬಿಕೊಟ್ಟಾಗ, ತಮ್ಮ ತಾಯಿಯ ಅಪೇಕ್ಷೆಯಂತೆ ಅದನ್ನು ಕಸ್ತೂರಿ ಬಾ ಕಲ್ಯಾಣನಿಧಿಗೆ ದೇಣಿಗೆಯಾಗಿ ಅರ್ಪಿಸಿದ ಅಂಶವನ್ನೂ ಅವರು ಸ್ಮರಿಸಿಕೊಂಡಿದ್ದಾರೆ. ಚಿಕ್ಕಬಳ್ಳಾಪುರದ ಎಂ.ಮುನಿಯಪ್ಪನವರು ಮೂರು ಬಾರಿ ಪಾಲ್ಗೊಂಡು ಮೂರು ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು. ಚಿಕ್ಕಬಳ್ಳಾಪುರದ ಕೆ.ವೆಂಕಟರಾಯಪ್ಪ ಮತ್ತವರ ಸಂಗಡಿಗರೂ ಪಾಲ್ಗೊಂಡು ಬಂಧನಕ್ಕೊಳಪಟ್ಟರು. ಅವರಲ್ಲಿ ಕೆಲವರನ್ನು ಮಾಗಡಿ ಪ್ರದೇಶಕ್ಕೆ ಗಡಿಪಾರು ಮಾಡಲಾಯಿತು. ಕೆಲವರನ್ನು ಜೈಲಿಗೆ ಕಳುಹಿಸಲಾಯಿತು. ಕೆ.ವೆಂಕಟರಾಯಪ್ಪನವರನ್ನು ಬೆಂಗಳೂರು ಜೈಲಿಗೆ ರವಾನಿಸಲಾಯಿತು. ಇದೂ ಸಾಲದೆಂಬಂತೆ, ಜುಲ್ಮಾನೆಯ ಹೆಸರಲ್ಲಿ ಅವರ ಆಸ್ತಿ ಜಪ್ತಿ ಮಾಡಿ ಅವಮಾನಗೊಳಿಸಲಾಯಿತು. ಇದೇ ತಾಲೂಕಿನ ಜಿ.ವಿ.ವೆಂಕಟಸ್ವಾಮಿಯವರು ಟಿ.ರುದ್ರಪ್ಪ, ಮುನಿನಾಗಪ್ಪ, ಶಿವರುದ್ರಪ್ಪ ಮುಂತಾದ ೨೦ ಮಂದಿ ಸಂಗಡಿಗರೊಂದಿಗೆ ಬಂಗಾರಪೇಟೆಯ ಶಿಬಿರಕ್ಕೆ ತೆರಳಿದರು. ಅಲ್ಲಿಂದ ಇವರ ನಾಯಕತ್ವದಲ್ಲಿ ತೆರಳಿದ ಸತ್ಯಾಗ್ರಹಿಗಳ ತಂಡ ಬೇತಮಂಗಲದಲ್ಲಿ ಸ್ಥಳೀಯರ ನೆರವಿನೊಂದಿಗೆ ಸತ್ಯಾಗ್ರಹ ನಡೆಸಿತು. ಗಣಿಪ್ರದೇಶದ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧನಕ್ಕೊಳಪಟ್ಟು ಚಿತ್ತೂರು ಕಾಡಿಗೆ ಗಡಿಪಾರು ಮಾಡಲ್ಪಟ್ಟರು. ಅಲ್ಲಿಂದ ಹೇಗೋ ಶ್ರೀನಿವಾಸಪುರವನ್ನು ತಲುಪಿದ ಸತ್ಯಾಗ್ರಹಿಗಳು ಮತ್ತೆ ಕೆ.ಜಿ.ಎಫ್‌ಗೆ ಹಿಂತಿರುಗಿ ಮತ್ತೊಮ್ಮೆ ಸತ್ಯಾಗ್ರಹದಲ್ಲಿ ಭಾಗವಹಿಸಿ, ಏಳು ದಿನಗಳ ಸಾದಾ ಶಿಕ್ಷೆಗೆ ಒಳಗಾದರು. ಶ್ರೀನಿವಾಸಪುರ ತಾಲೂಕಿನ ಹೊಗಳಗೆರೆಯ ಜಿ.ನಾರಾಯಣಗೌಡರು ಕೆ.ಜಿ.ಎಫ್. ಗಲಭೆಯಲ್ಲಿ ಭಾಗವಹಿಸಿದ್ದರು.

ಅದೇ ವರ್ಷ 'ಜವಾಬ್ದಾರಿ ಸರ್ಕಾರ'ಕ್ಕಾಗಿ ಒತ್ತಾಯಿಸಿ ನಡೆಸಿದ ಆಂದೋಲನದ ಸಂದರ್ಭದಲ್ಲಿ ಚಿಕ್ಕಬಳ್ಳಾಪುರದ ಟಿ.ಎಸ್.ಸಂಪತ್ ಕುಮಾರನ್, ಕ್ಯಾಸಂಬಳ್ಳಿಯ ಚೇಂಗಲರಾಯರೆಡ್ಡಿ. ಮುಳಬಾಗಿಲಿನ ಎಂ.ವಿ.ಕೃಷ್ಣಪ್ಪ, ಕೋಲಾರದ ಎಂ. ಸರ್ವಜ್ಞಮೂರ್ತಿ ಹಾಗೂ ಕೆ.ಪಟ್ಟಾಭಿರಾಮನ್ ಮುಂತಾದವರು ಬಂಧಿಸಲ್ಪಟ್ಟು ಕಾರಾಗೃಹ ಸೇರಿದರು. ಇದರ ಬೆನ್ನಲ್ಲೇ ವಿದುರಾಶ್ವತ್ಥದ ವಿದುರಾನಗರದಲ್ಲಿ ಏಪ್ರಿಲ್ ೧೨–೧೮ರ ಮಧ್ಯಾವಧಿಯಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸಲಾಯಿತು. ಆದರೆ ಅದರಲ್ಲಿ ಭಾಗವಹಿಸಿ, ಭಾಷಣ ಮಾಡದಿರುವಂತೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಮೇಲೆ ನಿರ್ಬಂಧವನ್ನೇರಲಾಯಿತು.

೧೯೩೮–೪೧ರ ಅವಧಿಯಲ್ಲಿ ಬಂಡಿನಾರಾಣಪ್ಪ (ಭಕ್ತರಹಳ್ಳಿ)ನ ಮುಂದಾಳತ್ವದಲ್ಲಿ ಮಳಮಾಚನಹಳ್ಳಿ ದ್ಯಾವಪ್ಪ, ಮೇಲೂರಿನ ಎಂ.ಎನ್.ವೀರಪ್ಪ, ಕೆ.ಎಂ.ನಂಜುಂಡಪ್ಪ, ಬಿ.ಸಿ.ಮುನಿಸ್ವಾಮಯ್ಯ, ಮಳ್ಳೂರು ಜಿ.ಪಾಪಣ್ಣ ಮುಂತಾದವರು ಕಾಂಗ್ರೆಸ್‌ನ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರೆಂದು ಭಕ್ತರಹಳ್ಳಿಯ ಬಿ.ವೆಂಕಟರಮಣಪ್ಪ ದಾಖಲಿಸಿದ್ದಾರೆ. ೧೯೩೯ರ ಸೆಪ್ಟೆಂಬರ್ ತಿಂಗಳಲ್ಲಿ ಕೆ.ಜಿ.ಎಫ್.ಗೆ ಎರಡು ಮೈಲಿ ದೂರದ ಊರೊಂದರಲ್ಲಿ ವಿ.ವಿ.ಗಿರಿ, ಪಿ.ಆರ್.ಕೆ.ಶರ್ಮ ಹಾಗೂ ಸುಂದರರಾಜ ಅಯ್ಯಂಗಾರ ಮುಂದಾಳತ್ವದಲ್ಲಿ ಕೆ.ಜಿ.ಎಫ್.ನ ಪಿ.ಮುಷ್ಟಂ, ಲಕ್ಷ್ಮಣನ್, ಫಿಲಿಪ್ಸ್ ಮಹಿಮನಾಥನ್ ಮುಂತಾದವರು ಕಾರ್ಮಿಕಸಂಘವನ್ನು

ಕಟ್ಟಿದರು. ಇದೂ ಸಾಲದೆಂಬಂತೆ ಸುಮಾರು ೧೯೪೦ರಲ್ಲಿ ಗೋವಿಂದನ್, ಕೇಶವಲು, ಪೆರುಮಾಳ್ ಮುಂತಾದವರು ಸೇರಿಕೊಂಡು ಅಜಾದ್‌ಯೂತ್ ಲೀಗ್ ಅನ್ನು ಎಂ.ಭಕ್ತವತ್ಸಲಂ ಹಾಗೂ ಶಿವಜ್ಞಾನ ಗ್ರಾಮಣಿಯರ ಹಿರಿತನದಲ್ಲಿ ಸ್ಥಾಪಿಸಿದರು. ೧೯೪೧ರಲ್ಲಿ ನಡೆದ ಚುನಾವಣೆಯಲ್ಲಿ ಪ್ರಜಾಪ್ರತಿನಿಧಿ ಸಭೆಯ ೨೯೮ ಸ್ಥಾನಗಳಲ್ಲಿ ೧೧೬ ಸ್ಥಾನ ಹಾಗೂ ನ್ಯಾಯವಿಧಾಯಕ ಸಭೆಯ ೪೪ ಸ್ಥಾನಗಳಲ್ಲಿ ೧೮ ಸ್ಥಾನಗಳು ಕಾಂಗ್ರೆಸ್ಸಿಗೆ ಲಭಿಸಿ, ಕೆ.ಸಿ.ರೆಡ್ಡಿ ಪ್ರಜಾಪ್ರತಿನಿಧಿ ಸಭೆಯ ನಾಯಕರಾದರೇ, ಟಿ.ಮರಿಯಪ್ಪ ನ್ಯಾಯವಿಧಾಯಕ ಸಭೆಯ ನಾಯಕರಾದರು.

**ವೈಯಕ್ತಿಕ ಸತ್ಯಾಗ್ರಹ:** ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ 'ಜವಾಬ್ದಾರಿ ಸರ್ಕಾರ' ರಚನೆಗಾಗಿ ತಾನು ನಡೆಸುತ್ತಿದ್ದ ಕಾರ್ಯಚಟುವಟಿಕೆಗಳನ್ನು ಮೈಸೂರು ಕಾಂಗ್ರೆಸ್ ರದ್ದುಗೊಳಿಸಿತು. ಅದಕ್ಕೆ ಮೈಸೂರು ಕಾಂಗ್ರೆಸ್ ಸಮಿತಿಯು ಹೊಳೆನರಸೀಪುರ ಸಮಾವೇಶದಲ್ಲಿ ಕೈಗೊಂಡಿದ್ದ ನಿರ್ಣಯವೇ ಕಾರಣವಾಗಿತ್ತು. ಎರಡನೆಯ ಜಾಗತಿಕ ಯುದ್ಧದಲ್ಲಿ ಬ್ರಿಟೀಷರ ಪಾಲ್ಗೊಳ್ಳುವಿಕೆಯನ್ನು ವಿರೋಧಿಸಿ ೧೯೩೯–೧೯೪೧ರಲ್ಲಿ ಗಾಂಧೀಜಿಯವರು ಕೈಗೊಂಡ ವೈಯಕ್ತಿಕ ಸತ್ಯಾಗ್ರಹದ ಪ್ರಥಮ ಸತ್ಯಾಗ್ರಹಿ ವಿನೋಭಾಜಿಯವರಾಗಿದ್ದರು. ಈ ಸತ್ಯಾಗ್ರಹದಿಂದ ಪ್ರಭಾವಿತರಾದ ಚಿಂತಾಮಣಿ ತಾಲೂಕಿನ ಟಿ.ಕೆ.ಗಂಗೀರೆಡ್ಡಿ, ಶಾಲೆ ತ್ಯಜಿಸಿ ಗಾಂಧೀಜಿಯವರನ್ನು ಕಂಡು ತರಬೇತಿ ಪಡೆಯಲೆಂದು ಸುಮಾರು ೧೮೦೦ ಮೈಲಿ ದೂರವಿದ್ದ ವರ್ಧಾಕ್ಕೆ ಕಾಲ್ನಡಿಗೆಯಲ್ಲೇ ಸುಮಾರು ೪೭ ದಿನ ಪ್ರಯಾಣಿಸಿ ವರ್ಧಾ ತಲುಪಿದಾಗ ಗಾಂಧೀಜಿ ಚೀನಾದ ಚಿಯಾಂಗ್–ಕೈ ಷೇಕ್‌ರ ಭೇಟಿಗಾಗಿ ಕಲ್ಕತ್ತಾಕ್ಕೆ ತೆರಳಲು ಸಿದ್ಧರಾಗಿದ್ದುದರಿಂದ ಗಂಗೀರೆಡ್ಡಿಯವರಿಗೆ ಆಶ್ರಮದಲ್ಲಿ ನೆಲೆಸಲು ಸ್ವಲ್ಪ ತೊಂದರೆಯಾಯಿತೆಂದು ತಿಳಿದು ಬರುತ್ತದೆ. ಆದರೆ ೧೯೪೨ರಲ್ಲಿ ಗಾಂಧೀಜಿ 'ಮಾಡು ಇಲ್ಲವೇ ಮಡಿ' ಎಂದು ಕರೆ ನೀಡಿದ ಹಿನ್ನೆಲೆಯಲ್ಲಿ ಸೇವಾಗ್ರಾಮದಿಂದ ತಮ್ಮೂರಿಗೆ ಹಿಂತಿರುಗಿ, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪಾಲ್ಗೊಳ್ಳಲು ಮುಂದಾದರು.

ಏತನ್ಮಧ್ಯೆ ಸಂಸ್ಥಾನದಲ್ಲಿ ಕಾರ್ಮಿಕ ಫೆಡರೇಷನ್ ಸ್ಥಾಪಿಸಲ್ಪಟ್ಟಾಗ ಕೆ.ಟಿ.ಭಾಷ್ಯಂರವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಲಾಯಿತು. ತತ್ಪರಿಣಾಮವಾಗಿ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲೂ ಕಾರ್ಮಿಕ ಸಂಘಗಳು ಸಂಘಟಿಸಲ್ಪಟ್ಟವು. ೧೯೪೨ರಲ್ಲಿ ಕಾರ್ಮಿಕ ಸಂಘಗಳಿಗೆ ಚುನಾವಣೆಗಳು ನಡೆದವು. ಉರಗಾಂ ಗಣಿ ಕಾರ್ಮಿಕರ ಸಂಘಕ್ಕೆ ದಿವಾನ್ ಮಿರ್ಜಾ ಇಸ್ಮಾಯಿಲರ ಪರಮಾಪ್ತ ಮಿತ್ರರಾಗಿದ್ದ ಕೆಂಗೇರಿ ಗುರುಕುಲಾಶ್ರಮದ ಬ್ರಹ್ಮಚಾರಿ ರಾಮಚಂದ್ರ ಅವರೂ, ನಂದಿದುರ್ಗ ಗಣಿ ಸಂಘಕ್ಕೆ ಕೆಂಗುಂದಿಕುಪ್ಪಂನ ಟಿ.ಆರ್.ಎ.ಆಚಾರ್ಯರವರೂ ಮೈಸೂರು ಗಣಿ ಕಾರ್ಮಿಕ ಸಂಘಕ್ಕೆ ಪಿ.ಆರ್.ಕೆ.ಶರ್ಮರವರೂ ಅಧ್ಯಕ್ಷರಾದರೇ, ಚಾಂಪಿಯನ್ ರೀಫ್ ಗಣಿ ಕಾರ್ಮಿಕರ ಸಂಘಕ್ಕೆ, ವಿರೋಧದ ನಡುವೆಯೂ ಕೆ.ಸಿ.ರೆಡ್ಡಿಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಇದು ಸಹಜವಾಗಿ ಇತರ ಸಂಘಗಳ ಅಸೂಯೆಗೆ ಕಾರಣವಾಯಿತು. ರಾಬರ್ಟ್‌ಸನ್‌ಪೇಟೆಯ ಇ.ಡಿ.ಆಸ್ಪತ್ರೆಯ ಮೈದಾನದಲ್ಲಿ ನಡೆದ ಕಾರ್ಮಿಕರ ಸಭೆಯಲ್ಲಿ, ಕಾಂಗ್ರೆಸ್ ಬೆಂಬಲಿತ ಕಾರ್ಮಿಕ ಸಂಘದ ಸದಸ್ಯರು ಹಾಗೂ ವಿರೋಧ ಪಕ್ಷದ ಕಾರ್ಮಿಕರ ನಡುವೆ ದೊಂಬಿ–ಘರ್ಷಣೆ, ದಾಂದಲೆಗಳಾದವು. ಅದನ್ನು ನಿಯಂತ್ರಿಸಲೆಂದು ಪೋಲಿಸರು ನಡೆಸಿದ ಲಾಠಿ ಚಾರ್ಜು–ಗೋಲಿಬಾರ್‌ನಲ್ಲಿ ಮರಿಸ್ವಾಮಿ ಎಂಬ ಅಮಾಯಕ ಕಾರ್ಮಿಕ ಹತನಾದನು. ಚಾಂಪಿಯನ್ ರೀಫ್ ಸಂಘದ ೨೪ ಮಂದಿ ಬಂಧನಕ್ಕೆ ಒಳಗಾದರೆ ಉಳಿದ ಮೂರು ಸಂಘಗಳಿಗೆ ಸೇರಿದಂತೆ ೧೨ ಮಂದಿ ಬಂಧನಕ್ಕೆ ಒಳಗಾಗಿ ಅವರ ಮೇಲೆ ದೊಂಬಿ ಕೇಸನ್ನು ಹಾಕಲಾಯಿತು. ಕೆ.ಸಿ.ರೆಡ್ಡಿ ಅಧ್ಯಕ್ಷರಾಗಿದ್ದ ಚಾಂಪಿಯನ್ ರೀಫ್ ಸಂಘದ ಆರೋಪಿಗಳ ರಕ್ಷಣೆ ಹೊಣೆಯನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ವಹಿಸಲಾಯಿತು. ಎಂ.ರಾಮಕೃಷ್ಣಯ್ಯ ಅವರು ಬಂಧಿತರಿಗಾಗಿ ಜಾಮೀನನ್ನು ಕೋರಿ ಸಲ್ಲಿಸಿದ ಅರ್ಜಿ ತಿರಸ್ಕರಿಸಲ್ಪಟ್ಟಿತು. ಆದರೆ ಮುಂದೆ

ಬೆಂಗಳೂರಿನ ಅಪೆಲೇಟ್ ನ್ಯಾಯಾಲಯದಿಂದ ಪ್ರತಿಯೊಬ್ಬರಿಗೂ ಪ್ರತ್ಯೇಕ ಜಾಮೀನು ಪಡೆದು ಹೊರಕ್ಕೆ ಕರೆತರಲಾಯಿತು.

**ಕ್ವಿಟ್ ಇಂಡಿಯಾ ಚಳವಳಿ**

ಬ್ರಿಟಿಷರಿಗೆ ಭಾರತವನ್ನು ಬಿಟ್ಟು ತೊಲಗುವಂತೆ ಒತ್ತಾಯಿಸುತ್ತಾ, ೧೯೪೨ರ ಆಗಸ್ಟ್ ಎಂಟರಂದು ಅದಕ್ಕಾಗಿ ಸಮಸ್ತ ಭಾರತೀಯರು ಕಂಕಣಬದ್ಧರಾಗಿ ಅಹಿಂಸಾಮಾರ್ಗದಲ್ಲಿ ಸತ್ಯಾಗ್ರಹ ನಡೆಸಬೇಕೆಂದು ಹೇಳುತ್ತಾ 'ಮಾಡು ಇಲ್ಲವೇ ಮಡಿ' ಎಂಬ ಮಂತ್ರವನ್ನು ದೇಶಿಯರಿಗೆ ಮಹಾತ್ಮ ಗಾಂಧೀಜಿ ನೀಡಿದರು. ತತ್ಸಂಬಂಧ ಗಾಂಧೀಜಿ ಸೇರಿದಂತೆ ಅಸಂಖ್ಯಾತ ಕಾಂಗ್ರೆಸ್ ನೇತಾರರನ್ನು ಆಗಸ್ಟ್ ಒಂಭತ್ತರಂದು ಎಲ್ಲೆಂದರಲ್ಲಿ ಬಂಧಿಸಿ ಸೆರೆಮನೆಗೆ ದೂಡಲಾಯಿತು. ಅದನ್ನು ಪ್ರತಿಭಟಿಸಿ ದೇಶದಾದ್ಯಂತ ಸತ್ಯಾಗ್ರಹ, ಹರತಾಳ, ನಿರಶನ, ಮುಷ್ಕರ, ಪ್ರತಿಭಟನಾ ಮೆರವಣಿಗೆಗಳು ನಡೆದವು. ಸತ್ಯಾಗ್ರಹಿಗಳ ಬಂಧನದಿಂದ ಜೈಲುಗಳು ಭರ್ತಿಯಾದವಾದರೂ ಸತ್ಯಾಗ್ರಹಿಗಳಲ್ಲಿ ಉತ್ಸಾಹ ಕುಗ್ಗಲಿಲ್ಲ. ಸತ್ಯಾಗ್ರಹದ ಕಾವೂ ಕಡಿಮೆಯಾಗಲಿಲ್ಲ. ಅದರ ಬಿಸಿ ಸಂಸ್ಥಾನಕ್ಕೂ ತಗುಲಿತು. ಅದೇ ದಿನ ಕಾಂಗ್ರೆಸ್ ಸಂಘಟನೆಗಳನ್ನು ಕಾನೂನುಬಾಹಿರವೆಂದು ಘೋಷಿಸಿ ಅವುಗಳನ್ನು ಅಸಿಂಧುಗೊಳಿಸುವ ಆದೇಶವನ್ನು ಸಂಸ್ಥಾನದ ಸರ್ಕಾರ ಹೊರಡಿಸಿತು. ಗಾಂಧೀಜಿಯ ಬಂಧನವನ್ನು ಪ್ರತಿಭಟಿಸಿ ಚಿಂತಾಮಣಿಯಲ್ಲಿ ಪ್ರಭಾತಪೇರಿ ಬಹಿರಂಗ ಸಭೆಯನ್ನು ಪುಲಿಗಲ್‌ನ ಪಿ.ಎಲ್.ಲಕ್ಷ್ಮಣರಾವ್ ಸಂಘಟಿಸಿದರು. ಶಾಲಾ–ಕಾಲೇಜು ಮುಚ್ಚಲ್ಪಟ್ಟು, ಮಧ್ಯದಂಗಡಿ ಮುಂದೆ ಪಿಕೆಟಿಂಗ್ ನಡೆಸಿದ್ದಕ್ಕಾಗಿ ಗಡಿಪಾರು ಕಾಣಬೇಕಾಯಿತು. ಕೋಲಾರ–ಬೆಂಗಳೂರು ರೈಲು ಮಾರ್ಗ ಹಾನಿಗೊಳಗಾಯಿತು. ರೈಲು ಹಳಿ, ತಾರು ತಂತಿ ನಾಶ ಮುಂತಾದ ವಿಧ್ವಂಸಕ ಕಾರ್ಯ ನಡೆಸಿದ್ದರಿಂದ ಲಕ್ಷ್ಮಣರಾಯರನ್ನು ೧೯೪೨ರ ಸೆಪ್ಟೆಂಬರ್ ಒಂದರಂದು ಚಿಂತಾಮಣಿಯಲ್ಲಿ ಬಂಧಿಸಲಾಗಿ ಬೆಂಗಳೂರು, ಮೈಸೂರು ಶಿರಹಟ್ಟಿ ಸೆರೆಮನೆಗಳನ್ನು ಅವರು ಕಾಣುವಂತಾಯಿತು.

ಅಖಿಲ ಭಾರತ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡು ಮುಂಬಯಿನಿಂದ ಹಿಂತಿರುಗಿದ ಕೆ. ಸಿ. ರೆಡ್ಡಿಯವರನ್ನು ಯಶವಂತಪುರ ರೈಲು ನಿಲ್ದಾಣದಲ್ಲಿ ಆಗಸ್ಟ್–೧೧ರಂದು ಬಂಧಿಸಿ, ದೀರ್ಘ ಕಾಲ ಬೆಂಗಳೂರಿನ ಕಾರಾಗೃಹದಲ್ಲಿಡಲಾಯಿತು. ಶ್ರೀನಿವಾಸಪುರದಲ್ಲಿ ಜರುಗಿದ ಪ್ರತಿಭಟನಾ ಸಭೆಯಲ್ಲಿ ಹಲವರು ಬಂಧಿಸಲ್ಪಟ್ಟರೆ, ಜಿ. ನಾರಾಯಣಗೌಡರು ತಲೆಮರೆಸಿಕೊಂಡರು. ಕೋಲಾರದಲ್ಲಿ ಸಭೆ ನಡೆಸಲಾಯಿತು. ಕಠಾರಿಪಾಳ್ಯದ ಗುಡಿ ಬಳಿಯ ಸಭೆಯಲ್ಲಿ ಭಾಷಣ ಮಾಡಿದ ನಾರಾಯಣಗೌಡರೂ ಬಂಧಿತರಾದರು. ಅಂದೇ ರಾತ್ರಿ ಕೆ. ಸಂಪಂಗಿರಾಮಯ್ಯ, ಕೆ. ಪಟ್ಟಾಭಿರಾಮನ್, ಟಿ.ರಾಮಾಚಾರ್, ಎಂ.ದೊರೆಸ್ವಾಮಿ, ಎಂ.ರಾಮಕೃಷ್ಣಯ್ಯ, ಸರ್ವಜ್ಞಮೂರ್ತಿ, ವೈ.ಆರ್. ಗಂಗೀರೆಡ್ಡಿ, ಬಿ.ಎಲ್. ನಾರಾಯಣಸ್ವಾಮಿ ಮುಂತಾದವರನ್ನು ಕೋಲಾರದಲ್ಲಿ ಬಂಧಿಸಿ, ಆಗಸ್ಟ್ ೧೧ರ ಮುಂಜಾನೆ ಬೆಂಗಳೂರು ಜೈಲಿಗೆ ರವಾನಿಸಲಾಯಿತು. ದೊರೆಸ್ವಾಮಿಯವರನ್ನು ಹಾಸನ ಜೈಲಿಗೆ ವರ್ಗಾಹಿಸಲಾಯಿತು. ಕೆ. ಸಂಪಂಗಿರಾಮಯ್ಯನವರನ್ನು ಬೆಂಗಳೂರು, ಹಾಸನ ಹಾಗೂ ಶಿವಮೊಗ್ಗ ಜೈಲುಗಳಿಗೆ ಅಲೆದಾಡಿಸಲಾಯಿತು. ಎಂ.ರಾಮಕೃಷ್ಣಯ್ಯನವರನ್ನು ಬೆಂಗಳೂರಿನಿಂದ ಶಿವಮೊಗ್ಗ ಜೈಲಿಗೆ ವರ್ಗಾಯಿಸಿ ಸ್ವಲ್ಪ ಕಾಲ ನಂತರ ಮತ್ತೆ ಬೆಂಗಳೂರು ಜೈಲಿಗೆ ಕರೆತಂದರು. ಎನ್. ಸಿ. ನಾಗಯ್ಯರೆಡ್ಡಿ, ಎನ್. ಸಿ. ತಿಮ್ಮರೆಡ್ಡಿ, ಆವಲರೆಡ್ಡಿ, ಅಪ್ಪುಸ್ವಾಮಿರೆಡ್ಡಿ, ಕಳವಾರದ ಕೆ. ವೆಂಕಟಕೃಷ್ಣಪ್ಪ ಮುಂತಾದವರು ಚಿಕ್ಕಬಳ್ಳಾಪುರದ ಲಕ್ಷ್ಮೀ ಮುದ್ರಣಾಲಯದಲ್ಲಿ ಮುದ್ರಿತಗೊಂಡ ಕರಪತ್ರಗಳನ್ನು ವಿತರಿಸಲು ತೊಡಗಿದ್ದು, ಅವರೊಂದಿಗೆ ಕೆ. ವೆಂಕಟರಾಯಪ್ಪ, ಸಿ.ಕೆ.ಬಾಲಕೃಷ್ಣನ್ ಹಾಗೂ ಸಿ.ಆದೆಪ್ಪ ಎಲ್ಲರೂ ಬಂಧಿಸಲ್ಪಟ್ಟರು. ಕೆ. ವೆಂಕಟಕೃಷ್ಣಪ್ಪನವರಿಗೆ ೧೩ ತಿಂಗಳ ಶಿಕ್ಷೆ ವಿಧಿಸಿ ಬೆಂಗಳೂರು ಕೆ.ಆರ್.ಪುರಂಗಳಲ್ಲಿ ಜೈಲಿನಲ್ಲಿಡಲಾಯಿತು. ಚಿಂತಾಮಣಿ ತಾಲೂಕಿನ

ಯಗವಕೋಟೆಯ ಚಂದ್ರಶೇಖರರೆಡ್ಡಿಯವರೂ ಈ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಚಿಕ್ಕಬಳ್ಳಾಪುರದ ಎ. ಮುನಿಯಪ್ಪ ಆರು ತಿಂಗಳು ಸ್ಥಾನಬದ್ಧತೆಗೊಳಪಟ್ಟರು. ಪಿಲ್ಲಗುಂಡ್ಲಹಳ್ಳಿಯ ಪಿ.ವಿ. ಸೀತಾರಾಮ ಶಾಂತಾನಂದಜಿಯವರು ಈ ಸಂದರ್ಭದಲ್ಲಿ ತಲೆಮರೆಸಿಕೊಂಡು ಭೂಗತ ಚಳವಳಿಯಲ್ಲಿ ತೊಡಗಿದ್ದರು. ಇದರಲ್ಲಿ ಭಾಗವಹಿಸಿದ್ದ ಚಿಕ್ಕಬಳ್ಳಾಪುರದವರಾದ ಕೆ.ವೆಂಕಟರಾಯಪ್ಪನವರು ಬಂಧನಕ್ಕೊಳಗಾದರು. ತಾರುತಂತಿಯನ್ನು ಹಾಳುಗೆಡಹುವ ಘಟನೆಗಳೂ ಅಲ್ಲಲ್ಲಿ ನಡೆದವು. ಬೆಂಗಳೂರು–ಗುಂತಕಲ್ ಮೀಟರ್‌ಗೇಜ್ ರೈಲುಮಾರ್ಗದಲ್ಲಿ ತೊಂಡೇಬಾವಿ–ಗೌರಿಬಿದನೂರು ರೈಲು ನಿಲ್ದಾಣಗಳ ನಡುವೆ ರೈಲು ಹಳಿಯನ್ನು ಕಿತ್ತೆಸೆಯಲಾಯಿತು. ತತ್ಪರಿಣಾಮವಾಗಿ ೧೯೪೨ರ ಆಗಸ್ಟ್ ಎಂಟರಿಂದ ಸೆಪ್ಟೆಂಬರ್ ೧೫ರವರೆಗೆ ಈ ವಿಭಾಗದಲ್ಲಿ ರಾತ್ರಿ ವೇಳೆ ಸಂಚರಿಸುತ್ತಿದ್ದ ಪ್ಯಾಸೆಂಜರ್ ರೈಲುಗಳನ್ನು ರದ್ದುಪಡಿಸಲಾಯಿತು. ವಿದ್ಯಾರ್ಥಿಗಳ ಚಳುವಳಿ ೧೯೪೨ರ ಸೆಪ್ಟೆಂಬರ್‌ನಲ್ಲಿ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಭೂಗತ ಚಳವಳಿಗೆ ತೊಡಗಿದ ಚಿಕ್ಕಬಳ್ಳಾಪುರದ ಕೆ.ವೆಂಕಟರಾಯಪ್ಪನವರು ರೈಲ್ವೆ ಹಳಿ ಹಾನಿ, ಅಂಚೆ ಕಚೇರಿ ಲೂಟಿ, ತಾರು–ತಂತಿ ಕಡಿತ ಮುಂತಾದ ವಿಧ್ವಂಸಕ ಕೃತ್ಯಗಳಲ್ಲಿ ಪಾಲ್ಗೊಂಡರು. ಆದರೆ ಸೆಪ್ಟೆಂಬರ್ ಒಂಭತ್ತರಂದು ಬಂಧನಕ್ಕೊಳಗಾಗಿ ೧೩ ತಿಂಗಳ ಕಾರಾಗೃಹ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಬಂಗಾರಪೇಟೆಯ ಜಿ.ಎಸ್.ಚಿಕ್ಕವೀರಪ್ಪನವರೂ ಬಂಧನಕ್ಕೊಳಪಟ್ಟು, ಬೆಂಗಳೂರಿಗೆ ರವಾನಿಸಲ್ಪಟ್ಟರು. ಅನಂತರ ಕೋಲಾರದ ಉಪಕಾರಾಗೃಹದಲ್ಲಿ ಬಂಧನದಲ್ಲಿಡಲಾಯಿತು. ಬಂಗಾರಪೇಟೆಯ ಬಿ.ಜಿ.ಚಿಕ್ಕಸಿದ್ಧಪ್ಪ ಪ್ರಭಾತಪೇರಿ, ಪಿಕೆಟಿಂಗ್ ಹಾಗೂ ಬಹಿರಂಗಸಭೆಗಳನ್ನು ಸಂಘಟಿಸುವ ಮೂಲಕ ಬಂಧನಕ್ಕೊಳಪಟ್ಟು. ೧೬–೯–೪೨ರಲ್ಲಿ ಬೆಂಗಳೂರು ಜೈಲಿಗೆ ವರ್ಗಾಯಿಸಲ್ಪಟ್ಟು ಮುಂದೆ ೧೯೪೩ರ ಜನವರಿ ಒಂದರಂದು ಬಿಡುಗಡೆ ಹೊಂದಿದರು. ಇದರಲ್ಲಿ ಭಾಗವಹಿಸಿದ್ದಕ್ಕಾಗಿ ಚಿಕ್ಕಬಳ್ಳಾಪುರದ ಜಿ.ವಿ.ವೆಂಕಟಸ್ವಾಮಿಯವರ ಜವಳಿ ಅಂಗಡಿಯ ಪರವಾನಗಿಯನ್ನು ಸರ್ಕಾರ ರದ್ದುಮಾಡಿತು. ಮುಳಬಾಗಿಲು ತಾಲೂಕಿನ ಪಿ.ರಾಮೇಗೌಡ ಅವರು ಈ ಚಳವಳಿಯಲ್ಲಿ ಪಾಲ್ಗೊಂಡು ಬಂಧನಕ್ಕೊಳಪಟ್ಟು ಕೆ.ಜಿ.ಎಫ್.ನ ಲಾಕಪ್, ಕೋಲಾರದ ಉಪಜೈಲುಗಳಲ್ಲಿ ಸ್ವಲ್ಪ ದಿನವಿದ್ದು ನಂತರ ಬೆಂಗಳೂರು, ಶ್ರೀರಂಗಪಟ್ಟಣದ ಜೈಲುಗಳಿಗೆ ವರ್ಗಾಯಿಸಲ್ಪಟ್ಟರು. ಕೆ.ಜಿ.ಎಫ್.ನ ಪಿ.ಪುಷ್ಪಂರವರು ಬೆಂಗಳೂರಿನಲ್ಲಿ ಗೋಪ್ಯವಾಗಿ ಮುದ್ರಿತಗೊಳ್ಳುತ್ತಿದ್ದ ಸ್ವಾತಂತ್ರ್ಯ ಸಮರದ ಸಂದೇಶವನ್ನು ಸಾರುವ ಕರಪತ್ರಗಳನ್ನು, ಭೂಗತವಾಗಿ ವಿತರಿಸುತ್ತಿದ್ದು, ಬಂಧನಕ್ಕೊಳಗಾಗಿ ಬೆಂಗಳೂರಿನ ಜೈಲು ಸೇರಿ, ೧೬–೫–೧೯೪೩ರಂದು ಬಿಡುಗಡೆ ಹೊಂದಿದರು. ವರ್ಧಾ ಸೇವಾಗ್ರಾಮದಿಂದ ಹಿಂತಿರುಗಿದ ಟಿ.ಕೆ.ಗಂಗೀರೆಡ್ಡಿಯವರು ಆಗಸ್ಟ ೧೫ರಂದು ಬಂಧಿಸಲ್ಪಟ್ಟು ೨೦ ದಿನಗಳ ಕಾರಾಗೃಹ ಶಿಕ್ಷೆಗೊಳಗಾದರು. ಭಕ್ತರಹಳ್ಳಿಯ ಬಿ.ವೆಂಕಟರಾಮಪ್ಪನವರು ಇದರಲ್ಲಿ ಪಾಲ್ಗೊಂಡರು. ಈ ಅವಧಿಯಲ್ಲಿ ಕೋಲಾರದ ಪ್ರೌಢಶಾಲೆಗಳು ಮೂರು–ನಾಲ್ಕು ವಾರ ಮುಚ್ಚಲ್ಪಟ್ಟು ವಿದ್ಯಾರ್ಥಿಗಳು ಪ್ರಭಾತಪೇರಿ, ಮೆರವಣಿಗೆ ನಡೆಸಿದರು. ಟೌನ್‌ಹಾಲ್‌ನಲ್ಲಿ ನಿತ್ಯ ಎರಡು ಹೊತ್ತು ಪ್ರಭಾತಪೇರಿ–ಭಾಷಣಗಳು ಜರುಗುತ್ತಿದ್ದವು. ಕೆ.ಜಿ.ಎಫ್‌ನಲ್ಲಿದ್ದ ಮೈಸೂರು ಮೈನ್ಸ್ ಪರಿಸರದಲ್ಲಿ ಇದರ ತೀವ್ರತೆ ಅಧಿಕವಾಗಿತ್ತು. ಗಣಿಯಲ್ಲಿದ್ದ ಸಾವಿರಾರು ಕಾರ್ಮಿಕರು ಕೆಲಸ ಬಿಟ್ಟು ಹೊರಬರುವ ಮೂಲಕ ಬ್ರಿಟೀಷರ ದಬ್ಬಾಳಿಕೆಯನ್ನು ಪ್ರತಿಭಟಿಸಿದರು. ಈ ಚಳವಳಿಯು ೧೯೪೨ರಿಂದ ೪೩ರವರೆಗೆ ತೀವ್ರ ಸ್ವರೂಪದಲ್ಲಿ ಜರುಗಿತು. ಏತನ್ಮಧ್ಯೆ, ೧೯೪೩ರ ಜನವರಿ ೨೪ರಂದು ಕೆ.ಸಿ.ರೆಡ್ಡಿ ಬಿಡುಗಡೆ ಹೊಂದಿ ಸೆರೆಮನೆಯಿಂದ ಹೊರಬಂದರು. ಬಂಗಾರಪೇಟೆಯ ಆದಿನಾರಾಯಣ ಶೇಟ್ಟರ ತೋಟದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿವೇಶನವನ್ನು ೧೯೪೪ರಲ್ಲಿ ಹಮ್ಮಿಕೊಳ್ಳಲಾಗಿದ್ದು, ಅಧಿವೇಶನವು ಯಶಸ್ವಿಯಾಯಿತು. ಆನಂತರ ಬೆಂಗಳೂರಿನಲ್ಲಿ ಜರುಗಿದ ಮೈಸೂರು ಕಾಂಗ್ರೆಸ್ಸಿನ ಆರನೆಯ ಅಧಿವೇಶನಕ್ಕೆ (೧೯೪೬) ಕೆ.ಸಿ.ರೆಡ್ಡಿ ಅಧ್ಯಕ್ಷರಾಗಿದ್ದರು. ದೇಶದಾದ್ಯಂತ ಜರುಗಿದ ಸ್ವಾತಂತ್ರ್ಯ ಆಂದೋಲನದ ತೀವ್ರತೆಯಿಂದ ಜರ್ಝರಿತರಾದ ಬ್ರಿಟೀಷರು ೧೯೪೭ರ ಆಗಸ್ಟ್ ೧೪ರಂದು ರಾತ್ರಿ ಕಾಂಗ್ರೆಸ್ಸಿಗೆ

ಅಧಿಕಾರವನ್ನು ಹಸ್ತಾಂತರಿಸಿ ದೇಶ ಬಿಟ್ಟು ತೊಲಗುವ ಮೂಲಕ ಸ್ವತಂತ್ರ ಭಾರತವು ೧೯೪೭ರ ಆಗಸ್ಟ್ ೧೫ರ ಸೂರ್ಯೋದಯವನ್ನು ಹರ್ಷೋದ್ಗಾರದಿಂದ ಸ್ವಾಗತಿಸಿತು.

**ಮೈಸೂರು ಚಲೋ ಚಳವಳಿ**

ಆದರೆ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಒಕ್ಕೂಟದಲ್ಲಿ ವಿಲೀನಗೊಳ್ಳಲು ಮಹಾರಾಜರು ಸಮ್ಮತಿಸಿದ್ದರೂ, ಸಂಸ್ಥಾನವಿನ್ನೂ ಮೈಸೂರು ಅರಸರ ಅಧೀನದಲ್ಲೇ ಇತ್ತು. ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿಗಳು ನಡೆದೇ ಇದ್ದವು. ಏತನ್ಮಧ್ಯೆ ೧೯೪೭ರ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಸಮಾರಂಭವನ್ನು ಮೋತಕಪಲ್ಲಿಯಲ್ಲಿ ಕೆ.ಪಟ್ಟಾಭಿರಾಮನ್ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯಲ್ಲೂ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಲಾಯಿತು. ಮುಂದೆ ೧೯೪೭ರ ಸೆಪ್ಟೆಂಬರ್ ತಿಂಗಳಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಲಾಯಿತು. ಅಂತಿಮವಾಗಿ 'ಮೈಸೂರು ಚಲೋ' ಚಳವಳಿಯನ್ನು ಕಾಂಗ್ರೆಸ್ಸು ಸಂಸ್ಥಾನದಲ್ಲಿ ಹಮ್ಮಿಕೊಂಡಿತು. ಇದಕ್ಕೆ ಕೆ.ಸಿ.ರೆಡ್ಡಿಯವರನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಲಾಯಿತು. ಈ ಸಂಬಂಧ ೧೯೪೭ರ ಸೆಪ್ಟೆಂಬರ್ ಒಂದರಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ನೆರೆದಿದ್ದ ಒಂದು ಲಕ್ಷ ಜನರನ್ನುದ್ದೇಶಿಸಿ, ಕೆ.ಸಿ.ರೆಡ್ಡಿಯವರು ಮಾತನಾಡಿದರು. ಆ ದಿನಗಳಲ್ಲಿ ಆರ್ಕಾಟ್–ಬಾಯ್ಕಾಟ್' 'ತಂಬುಚೆಟ್ಟಿ–ಚಟ್ಟಕಟ್ಟಿ' ಮುಂತಾದ ಘೋಷಣೆಗಳು ಕಾರ್ಯಕರ್ತರ ಬಾಯಲ್ಲಿ ಸರ್ವೇಸಾಮಾನ್ಯವಾದವು. ಆ ಸಂದರ್ಭದಲ್ಲೇ ಸೆಪ್ಟೆಂಬರ್ ಮೂರರಂದು, ಕೆ.ಸಿ.ರೆಡ್ಡಿ, ಟಿ.ಸಿದ್ದಲಿಂಗಯ್ಯ, ಕೆ.ಟಿ.ಭಾಷ್ಯಂ, ಹೆಚ್.ಸಿದ್ದಯ್ಯ, ಕೆ.ಆರ್. ಮಾಧವರಾವ್, ಟಿ.ಸುಬ್ರಹ್ಮಣ್ಯಂ ಮುಂತಾದವರು ಬೆಂಗಳೂರಿನಲ್ಲಿ ಬಂಧಿಸಲ್ಪಟ್ಟರು. ಪ್ರಜಾಪತಿನಿಧಿಸಭಾ ಸದಸ್ಯರಾದ ಕಳವರ ನಂಜಪ್ಪನವರ ಜೊತೆಯಲ್ಲಿ, ಚಿಕ್ಕಬಳ್ಳಾಪುರ ತಾಲೂಕಿನಲ್ಲಿ 'ಜವಾಬ್ದಾರಿ ಸರ್ಕಾರ'ದ ಬೇಡಿಕೆಗಾಗಿ ಪ್ರಚಾರ ಕೈಗೊಂಡಿದ್ದ ಕೆ.ವೆಂಕಟರಾಯಪ್ಪನವರೂ ಕೆ.ಆರ್.ಪುರಂ ಶಿಬಿರದಲ್ಲಿದ್ದಾಗ ಬಂಧಿಸಲ್ಪಟ್ಟು ಬೆಂಗಳೂರು ಜೈಲಿಗೆ ಹೋಗಬೇಕಾಯಿತು. ಈ ಸಂಬಂಧ ಬಂಗಾರಪೇಟೆಯಲ್ಲಿ ಶಿಬಿರವನ್ನು ಏರ್ಪಡಿಸಲಾಗಿದ್ದು, ಇಲ್ಲಿಂದ ಮೈಸೂರಿಗೆ ಸತ್ಯಾಗ್ರಹಿಗಳನ್ನು ಕಳುಹಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ೧೬–೯–೪೭ರಲ್ಲಿ ಬಂಧನಕ್ಕೊಳಗಾದ ಬಂಗಾರಪೇಟೆಯ ಬಿ.ಜಿ.ಚಿಕ್ಕಸಿದ್ಧಪ್ಪನವರು ಅಕ್ಟೋಬರ್ ೧೦ ರಂದು ಬಿಡುಗಡೆಯಾದರು. ನಾಗಸಂದ್ರದ ಎನ್.ಸಿ.ನಾಗಯ್ಯರೆಡ್ಡಿ, ಯಲ್ದೂರು ನರಸಿಂಹಯ್ಯ ಅವರೂ ಇದರಲ್ಲಿ ಭಾಗವಹಿಸಿದ್ದರು.

ಭೂಗತರಾಗಿದ್ದುಕೊಂಡೇ ಕೃಷ್ಣಗಿರಿಯಲ್ಲಿ ಭೂಗತ ಕಚೇರಿಯನ್ನು ಹೊಂದಿದ್ದ ಮೋತಕಪಳ್ಳಿಯ ಎಂ.ವಿ.ಕೃಷ್ಣಪ್ಪನವರು ಭೂಗತ ಚಳವಳಿಯ ನೇತಾರರಲ್ಲಿ ಒಬ್ಬರಾಗಿದ್ದು ಕುಪ್ಪಂ ತಾಲೂಕಿನ ರಾಜಪೇಟೆ ಭೂಗತ ಕೇಂದ್ರದ ಹೊಣೆಯನ್ನು, ಅವರೊಡನೆ ಇದ್ದ ಪಿಲ್ಲಗುಂಟ್ಲಹಳ್ಳಿಯ ಪಿ.ವಿ.ಸೀತಾರಾಮ ಶಾಂತಾನಂದಿಜಿಯವರಿಗೆ ವಹಿಸಿಕೊಡಲಾಗಿತ್ತು. ರಾಜಪೇಟೆಯ ಪಿಲ್ಲಾರೆಡ್ಡಿ ಹಾಗೂ ಕೃಷ್ಣಾ ಜಯರಾಮರೆಡ್ಡಿಯವರು, ಕೆ.ಸಿ.ರೆಡ್ಡಿಯವರ ಸಂಬಂಧಿಕರಾಗಿದ್ದು ಅವರ ಸಹಕಾರವೂ ಲಭಿಸಿತು. ಗಡಿಯಂಚಲ್ಲಿದ್ದ ಗುಟ್ಟಹಳ್ಳಿಯ ಶಿಬಿರಕ್ಕೆ ಕೋಲಾರ, ಮುಳಬಾಗಿಲು, ಕೆ.ಜಿ.ಎಫ್, ಚಿಂತಾಮಣಿ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಕಡೆಗಳಿಂದಲೂ ಯುವಕರು ಬಂದಿದ್ದರು. ಶಿಬಿರಕ್ಕೆ ಭೇಟಿ ನೀಡಿದ ಎಂ.ವಿ.ಕೃಷ್ಣಪ್ಪನವರು 'ಮೈಸೂರು ರಾಜ್ಯ ಜನತಾ ಸರ್ಕಾರ' ಅಸ್ತಿತ್ವಕ್ಕೆ ಬಂದಿದೆಯೆಂದು ಘೋಷಿಸಿ, ಪಿ.ವಿ.ಸೀತಾರಾಮ ಶಾಂತಾನಂದಜಿಯವರನ್ನು ಆಹಾರಮಂತ್ರಿಯನ್ನಾಗಿ ನೇಮಿಸಿರುವುದಾಗಿ ತಿಳಿಸಿದರು. ಈ ಶಿಬಿರಾರ್ಥಿಗಳು ಕ್ಯಾಸಂಬಳ್ಳಿಯ ಆಹಾರ ಉಗ್ರಾಣ ಕಟ್ಟಡಕ್ಕೆ ದಾಳಿ ಮಾಡಿ ಆಹಾರ ಸಾಮಗ್ರಿಗಳನ್ನು ಲೂಟಿ ಮಾಡಿದರು. ಕ್ಯಾಸಂಬಳ್ಳಿ, ಬೇತಮಂಗಲ, ರಾಯಲ್ಪಡು ಹಾಗೂ ಕಾಮಸಂದ್ರ ಪೊಲೀಸ್ ಠಾಣೆಗಳಿಗೆ ಮುತ್ತಿಗೆ ಹಾಕಿ ಆಯುಧಗಳನ್ನು ವಶಪಡಿಸಿಕೊಂಡರು. ಇವರನ್ನು ಬಂಧಿಸಲು ಕೆ.ಜಿ.ಎಫ್.ನ ಪೊಲೀಸರು ಶಿಬಿರಕ್ಕೆ ಮುತ್ತಿಗೆ ಹಾಕಿದರಾದರೂ ಅದನ್ನು ಮುಂದಾಗಿ ತಿಳಿದಿದ್ದ ಶಿಬಿರಾರ್ಥಿಗಳು, ಪೊಲೀಸ್ ದಾಳಿಗೆ ಮೊದಲೇ ನೆರೆಯ ಭೂಮಂಡಲಪುರ ಮಾರ್ಗವಾಗಿ ಬಹು ದೂರ ಹೊರಟುಹೋಗಿದ್ದರು. ಎಂ.ವಿ.ಕೃಷ್ಣಪ್ಪನವರ ಇನ್ನೊಬ್ಬ ಹಿಂಬಾಲಕರಾದ ಮುಳಬಾಗಿಲು

ತಾಲೂಕಿನ ಪಿ.ರಾಮೇಗೌಡರು ಈಚಲುಮರ ಧ್ವಂಸ, ಹೆಂಡದಂಗಡಿ ಮುಂದೆ ನಿರಶನ, ರಸ್ತೆಗಳ ಸೇತುವೆಯ ನಾಶ, ತಾಲೂಕು ಟ್ರೆಜರಿಗಳ ಲೂಟಿಯಂತಹ ಚಳವಳಿಯಲ್ಲಿ ತೊಡಗಿದ್ದು, ಕುರುಬನಹಳ್ಳಿಯಲ್ಲಿ ಈಚಲುಮರ ಕಡಿದು, ಪಿಕೆಟಿಂಗ್ ನಡೆಸಿದರು. ಚಿಂತಾಮಣಿಯ ಟಿ.ಕೆ.ಗಂಗೀರೆಡ್ಡಿಯವರು ತಾವೇ ಯೋಜಿಸಿದ್ದ ರಾಯಲ್ಪಾಡು ಠಾಣೆಯ ಲೂಟಿಯಲ್ಲೂ ಮಹತ್ವದ ಪಾತ್ರವಹಿಸಿದ್ದು, 'ಮೈಸೂರು ಚಲೋ ಪತ್ರಿಕೆ 'ಯನ್ನು ತಾವೇ ಸ್ವತ: ಅಚ್ಚು ಹಾಕಿಸಿ ವಿತರಿಸುತ್ತಿದ್ದರು. ಶ್ರೀನಿವಾಸಪುರ ತಾಲೂಕಿನ ಹೊಗಳಗೆರೆಯ ಜಿ. ನಾರಾಯಣಗೌಡರೂ ಇದರಲ್ಲಿ ಪಾಲ್ಗೊಂಡು ೪೨ ದಿನಗಳ ಸ್ಥಾನಬದ್ಧತೆಗೆ ಒಳಗಾಗಬೇಕಾಯಿತು.

ಭಕ್ತರಹಳ್ಳಿಯವರಾದ ಬಿ.ವೆಂಕಟರಾಮಪ್ಪ ಸೇರಿದಂತೆ ಇತರ ಕಾಂಗ್ರೆಸ್ ಕಾರ್ಯಕರ್ತರು ಜವಾಬ್ದಾರಿ ಸರ್ಕಾರಕ್ಕಾಗಿ ಶಿಡ್ಲಘಟ್ಟದ ತಾಲೂಕು ಕಚೇರಿಯ ಮುಂದೆ ಸತ್ಯಾಗ್ರಹ ನಡೆಸಿದರು. ಎಂ.ಸಿ.ವೀರಪ್ಪ ತಾಲೂಕು ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿದ್ದು ಶಿಡ್ಲಘಟ್ಟ ತಾಲೂಕಿನ ಮೇಲೂರು, ಭಕ್ತರಹಳ್ಳಿ, ಮಳಮಾಚನಹಳ್ಳಿ, ಶಿಡ್ಲಘಟ್ಟ ಪಟ್ಟಣ, ಕೊತ್ತನೂರು, ಬೋದನೂರು, ಕೆ.ಮುತ್ತುಗದಹಳ್ಳಿ ಮುಂತಾದ ಗ್ರಾಮದ ಜನ ಇದರಲ್ಲಿ ಭಾಗವಹಿಸಿದ್ದರು. ಬಹಳ ದಿನ ನಡೆದ ಈ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದ ಸತ್ಯಾಗ್ರಹಿಗಳಿಗೆಂದು ಸೆಪ್ಟೆಂಬರ್ ತಿಂಗಳಲ್ಲಿ ತಿಪ್ಪೇನಹಳ್ಳಿಯವರು ಎತ್ತಿನಗಾಡಿಯಲ್ಲಿ ಊಟ ತಂದು ನೀಡುತ್ತಿದ್ದಾಗ, ಸಿಟ್ಟಿಗೆದ್ದ ಪೊಲೀಸರು ಲಾಠಿ ಪ್ರಹಾರ ನಡೆಸಿ, ಗುಂಡಿನ ಮಳೆ ಸುರಿಸಿದಾಗ, ಭಕ್ತರಹಳ್ಳಿಯ ಕುಂಬಾರದೊಡ್ಡಿ ನಾರಾಯಣಪ್ಪ ಬಲಿಯಾದನಂತೆ. ಆಗ ಅವನ ಶವವನ್ನು ನಿಷೇಧಾಜ್ಞೆ ನಡುವೆ ಮೆರವಣಿಗೆಯಲ್ಲಿ ಶಿಡ್ಲಘಟ್ಟದಿಂದ ತಂದು ಸ್ವಗ್ರಾಮದಲ್ಲಿ ಸಂಸ್ಕಾರ ಮಾಡಲಾಯಿತೆಂದು ತಿಳಿದುಬರುತ್ತದೆ. ಇದೇ ಸಮಯದಲ್ಲಿ ಶಿವಸಮುದ್ರದಿಂದ ಕನಕಪುರ ಮಾರ್ಗವಾಗಿ ಕೆ.ಜಿ.ಎಫ್.ಗೆ ಸರಬರಾಜಾಗುತ್ತಿದ್ದ ವಿದ್ಯುತ್ ಜಾಲವನ್ನು ಧ್ವಂಸಗೊಳಿಸುವ ಯೋಜನೆಯನ್ನು ರಾಮನಗರದ ಸುಬ್ಬರಾಯರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಏತನ್ಮಧ್ಯೆ ತಾಲೂಕು ಕಚೇರಿಗಳು ಕಾರ್ಯಕರ್ತರ ಮುತ್ತಿಗೆಗೆ ಸಿಲುಕಿದವು. ಚಿಕ್ಕಬಳ್ಳಾಪುರದವರಾದ ತಿ.ತಾ.ಶರ್ಮಾ, ಮತ್ತವರ ಪತ್ನಿ ರಾಜಮ್ಮನವರು ಗಾಂಧೀಜಿಯೊಡನೆ ನಿಕಟ ಸಂಬಂಧವನ್ನು ಹೊಂದಿದ್ದು, ೧೯೨೧ರಿಂದಲೂ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದು, ಪತ್ರಿಕೋದ್ಯಮದ ಮೂಲಕ ಸ್ವಾತಂತ್ರ್ಯ ಸೇವೆಗೆ ತಮ್ಮನ್ನು ತೊಡಗಿಸಿಕೊಂಡಿದ್ದವರು. ಸರ್ಕಾರದ ವಿರುದ್ಧ ಲೇಖನ ಸರಮಾಲೆ ಬರೆದ ಪರಿಣಾಮವಾಗಿ ಅವರ ವಿಶ್ವಕರ್ನಾಟಕ ಪತ್ರಿಕೆಯ ಪ್ರಕಟಣೆಯನ್ನು ಸರ್ಕಾರವು ಸ್ವಲ್ಪ ಕಾಲ ರದ್ದುಗೊಳಿಸಿತ್ತು.

ಏತನ್ಮಧ್ಯೆ ಹಿಂದೂಪುರದಲ್ಲಿದ್ದ ಸತ್ಯಾಗ್ರಹಿ ಶಿಬಿರವು ಕೋಲಾರ–ತುಮಕೂರು ಜಿಲ್ಲೆಯ ಚಟುವಟಿಕೆಗಳಿಗೆ ನೆಲೆಯಾಗಿದ್ದು, ಆಜಾದ್ ಮೈಸೂರು ಸರ್ಕಾರವನ್ನೂ ಅಲ್ಲಿ ಸ್ಥಾಪಿಸಲಾಗಿತ್ತು. ತತ್ಪರಿಣಾಮವಾಗಿ ಸಂಸ್ಥಾನದ ಎಲ್ಲೆಡೆಯಿಂದ ಕಾಂಗ್ರೆಸ್ ಕಾರ್ಯಕರ್ತರು ಪ್ರವಾಹೋಪಾದಿಯಲ್ಲಿ ಹರಿದು ಬಂದು (೧೪–೯–೪೭) ಮೈಸೂರಿಗೆ ಮುತ್ತಿಗೆ ಹಾಕಿದರು. ಚಳವಳಿಯಲ್ಲಿ ಸಹಸ್ರಾರು ಜನ ಬಂಧಿಸಲ್ಪಟ್ಟರು. ಆದರೆ ಜನಾಂದೋಲನಕ್ಕೆ ಅಂತಿಮವಾಗಿ ಮಣಿದ ಸಂಸ್ಥಾನದ ಸರ್ಕಾರವು, ಕಾಂಗ್ರೆಸ್ಸಿನೊಂದಿಗೆ ಮಾಡಿಕೊಂಡ ಸಂಧಾನದಂತೆ, ಬಂಧಿತರಾಗಿದ್ದ ಎಲ್ಲಾ ಕಾಂಗ್ರೆಸಿಗರನ್ನು ೧೯೪೭ರ ಅಕ್ಟೋಬರ್ ಆರರಂದು ಬಿಡುಗಡೆ ಮಾಡಿತು. ಅದೇ ತಿಂಗಳ ೨೭ರಂದು ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಕ್ಯಾಸಂಬಳ್ಳಿಯ ಚೆಂಗಲರಾಯರೆಡ್ಡಿಯವರು ಸಂಸ್ಥಾನದ ಮೊದಲ ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಆರು ಮಂದಿ ಕಾಂಗ್ರೆಸಿಗರು ಹಾಗೂ ಮೂರು ಮಂದಿ ಪಕ್ಷೇತರರನ್ನೊಳಗೊಂಡ ಮಂತ್ರಿಮಂಡಲವನ್ನು ರಚಿಸುವ ಮೂಲಕ ಜನಪ್ರಿಯ ಸರ್ಕಾರದ ರಚನೆಗೆ ನಾಂದಿ ಹಾಡಿದರು. ಇದರೊಂದಿಗೆ ಜನತೆಯ 'ಜವಾಬ್ದಾರಿ ಸರ್ಕಾರ'ದ ಕನಸೂ ನನಸಾದಂತಾಯಿತು.

ಭಾರತ ಒಕ್ಕೂಟಕ್ಕೆ ಸಂವಿಧಾನ ರಚಿಸಲ್ಪಟ್ಟಾಗ ಅಸ್ತಿತ್ವದಲ್ಲಿದ್ದ ಮೈಸೂರು ಸಂವಿಧಾನ ಸಭೆಯನ್ನು ಶಾಸನಾಂಗ ಸಭೆಯಾಗಿ ಮಾರ್ಪಡಿಸಲಾಯಿತು. ಭಾರತ ಸಂವಿಧಾನವು ೧೯೫೦ರ ಜನವರಿ ೨೬ರಂದು ಕಾರ್ಯರೂಪಕ್ಕೆ ಬರುತ್ತಿದ್ದಂತೆ ಮೈಸೂರು ಸಂಸ್ಥಾನವು ಒಕ್ಕೂಟದಲ್ಲಿ 'ಬಿ' ಶ್ರೇಣಿಯ ರಾಜ್ಯವಾಗಿ ಸೇರ್ಪಟ್ಟು, ಮೈಸೂರು ರಾಜ್ಯವು ಜನ್ಮ ತಾಳಿತು. ಮಹಾರಾಜರೇ ರಾಜ್ಯದ ಮೊದಲ ರಾಜ್ಯಪಾಲ (ರಾಜಪ್ರಮುಖ)ರಾದರು. ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಕೆ.ಸಿ.ರೆಡ್ಡಿಯವರೇ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿ ಮುಂದುವರಿದರು. ಮುಂದೆ ೧೯೫೨ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಜಯಗಳಿಸಿ ಕೆಂಗಲ್ ಹನುಮಂತಯ್ಯನವರು ರಾಜ್ಯದ ನೂತನ ಮುಖ್ಯಮಂತ್ರಿಗಳಾದರು.

**ಕರ್ನಾಟಕ ಏಕೀಕರಣ**

ಮೈಸೂರು ರಾಜ್ಯ ರೂಪುಗೊಂಡರೂ ಕನ್ನಡ ಮಾತನಾಡುವ ಜನ ಬೇರೆ ಬೇರೆ ಆಡಳಿತಗಳ ನಡುವೆ ಹರಿದು ಹಂಚಿ ಹೋಗಿದ್ದರು. ಮಿಗಿಲಾಗಿ ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ ಭಾಗಗಳು ಹೊರಗುಳಿದವು. ಕನ್ನಡ ಪ್ರದೇಶಗಳ ಏಕೀಕರಣಕ್ಕಾಗಿ ೧೯೨೦ರಿಂದಲೂ ಬೇಡಿಕೆ ಚಳವಳಿಗಳು ಉತ್ತರ ಕರ್ನಾಟಕದಲ್ಲಿ ಕೇಳಿಬರುತ್ತಿದ್ದು, ಆಲೂರು ವೆಂಕಟರಾಯರನ್ನು ಏಕೀಕರಣ ಚಳವಳಿಯ ಪಿತಾಮಹಾರೆಂದೇ ಕರೆಯಲಾಗಿದೆ. ಸ್ವಾತಂತ್ರ್ಯ ಆಂದೋಲನದ ಜೊತೆಜೊತೆಯಲ್ಲೇ ಏಕೀಕರಣಕ್ಕೂ ನಿರಂತರವಾಗಿ ಯತ್ನಗಳು ನಡೆದಿದ್ದವು. ಮಿಗಿಲಾಗಿ ಭಾಷಾವಾರು ಪ್ರಾಂತ್ಯದ ರಚನೆಗಾಗಿ ಬಹುಹಿಂದಿನಿಂದಲೂ ಹೋರಾಟಗಳು ನಡೆಯುತ್ತಿದ್ದು, ಕರ್ನಾಟಕದ ಏಕೀಕರಣಕ್ಕೆ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಕೂಡ ಬದ್ಧವಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದು ಮೈಸೂರು ರಾಜ್ಯ ಉದಯಿಸಿತಾದರೂ, ಕನ್ನಡಿಗರ ಒಗ್ಗೂಡುವ ಕನಸು ಕನಸಾಗಿಯೇ ಉಳಿದಿತ್ತು. ಏಕೀಕರಣಕ್ಕಾಗಿ ಮಾಸ್ತಿ ವೆಂಕಟೇಶ ಐಯ್ಯಂಗಾರ್, ತಿ.ತಾ.ಶರ್ಮಾ, ಕುವೆಂಪು, ಶಿವಮೂರ್ತಿ ಶಾಸ್ತ್ರಿ, ಜಿ.ಪಿ.ರಾಜರತ್ನಂ ಮುಂತಾದ ಗಣ್ಯರು ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು. ಮಿಗಿಲಾಗಿ ಈ ನಿಟ್ಟಿನಲ್ಲಿ ಜರುಗಿದ ಜನಾಂದೋಲನದಿಂದಾಗಿ ೧೯೫೬ರ ನವೆಂಬರ್ ಒಂದರಂದು ಏಕೀಕೃತ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬರುವ ಮೂಲಕ ಬಹುಪಾಲು ಕನ್ನಡ ಪ್ರದೇಶಗಳು ಮೈಸೂರು ರಾಜ್ಯದಲ್ಲಿ ಅಂತರ್ಗತವಾದವು. ಇದು ಕನ್ನಡಿಗರ ಒಂದಾಗುವ ಕನಸನ್ನು ನನಸಾಗಿಸಿತಾದರೂ, ರಾಜ್ಯಕ್ಕೆ ಚಾರಿತ್ರಿಕ ಹಿನ್ನೆಲೆಯಿಂದ ಕೂಡಿದ 'ಕರ್ನಾಟಕ' ಎಂಬ ಹೆಸರನ್ನೇ ಪುನರ್ ನಾಮಕರಣ ಮಾಡಬೇಕೆಂಬ ಕನ್ನಡಿಗರ ಹೆಬ್ಬಯಕೆ ತೀರದ ಬಯಕೆಯಾಗಿಯೇ ಉಳಿದಿತ್ತು. ಆದರೆ ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ, ೧೯೭೩ರ ನವೆಂಬರ್ ಒಂದರಂದು, ರಾಜ್ಯಕ್ಕೆ 'ಕರ್ನಾಟಕ' ಎಂದು ಪುನರ್‌ನಾಮಕರಣ ಮಾಡುವುದರೊಂದಿಗೆ ಅದೂ ಪೂರ್ಣಗೊಂಡಂತಾಯಿತು.

## ಚುನಾವಣೆಗಳು

ಚುನಾವಣೆಯ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವೈಜ್ಞಾನಿಕ ವಿಧಾನ ಆಧುನಿಕ ಯುಗದ ಕೊಡುಗೆ ಎಂದು ಹೇಳಲಾಗುತ್ತದೆ. ಆದರೆ ಚುನಾವಣೆ ಮೂಲಕ ನಾಯಕರನ್ನು ಆಯ್ಕೆ ಮಾಡುವ ವಿಧಾನ ಪ್ರಾಚೀನ ಭಾರತದ ಗಣರಾಜ್ಯಗಳಲ್ಲಿ ಬಹು ಹಿಂದಿನಿಂದಲೂ ರೂಢಿಯಲ್ಲಿತ್ತೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಚೋಳ ಒಂದನೆಯ ಪರಾಂತಕನ ಉತ್ತರಮೇರೂರು (ತಮಿಳುನಾಡು) ತಾಮ್ರಶಾಸನದಿಂದ, ಅಂದಿನ ದಿನಗಳಲ್ಲಿ ಚುನಾವಣೆ ಪದ್ಧತಿ ಎಷ್ಟೊಂದು ವ್ಯವಸ್ಥಿತವಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ಅಸ್ಥಿತ್ವದಲ್ಲಿದ್ದ 'ಸಭಾ', 'ಸಮಿತಿ'ಗಳು ಗ್ರಾಮೀಣ ಆಡಳಿತದಲ್ಲೂ, ಮಹಾಜನರು ಅಗ್ರಹಾರಗಳ ಆಡಳಿತ ನಿರ್ವಹಣೆಯಲ್ಲೂ, ನಖರ– ಶ್ರೇಷ್ಠಿ ಮುಂತಾದ ವರ್ತಕ ಸಂಘಗಳು ನಗರಾಡಳಿತದಲ್ಲೂ ಪಾಲ್ಗೊಳ್ಳುತ್ತಿದ್ದ ಅಂಶವನ್ನು ಮಾರ್ದನಿಸುವ ಅನೇಕ ಶಾಸನಗಳಿವೆ. ಇವನ್ನು ಆಧುನಿಕ ಚುನಾವಣಾ ಪದ್ಧತಿಯ ಪೂರ್ವಭಾವಿ ಹಂತಗಳೆಂದು ಭಾವಿಸಬಹುದಾಗಿದೆ.

ಇನ್ನು ಆಧುನಿಕ ಕಾಲಕ್ಕೆ ಬಂದರೆ, ಬ್ರಿಟಿಷ್ ಭಾರತದಲ್ಲಿ ಚುನಾವಣಾ ಪ್ರಕ್ರಿಯೆಗಳು (೧೮೯೨) ಆರಂಭಗೊಳ್ಳುವುದಕ್ಕೆ ಮೊದಲೇ, ಅಂದಿನ ಮೈಸೂರು ಸಂಸ್ಥಾನದಲ್ಲಿ, ೨೫.೮.೧೮೮೧ರ ಸರ್ಕಾರಿ ಆದೇಶದಂತೆ ೧೮೮೧ರಲ್ಲಿ ಆರಂಭಗೊಂಡ ಪ್ರಜಾಪ್ರತಿನಿಧಿಸಭೆಯು ದೇಶದ ಚುನಾವಣಾ ಪದ್ಧತಿಯಲ್ಲೊಂದು ಮೈಲಿಗಲ್ಲಾಗಿದ್ದು, 'ಜವಾಬ್ದಾರಿ ಸರ್ಕಾರ' ದ ಸ್ಥಾಪನೆಯತ್ತ ಸಂಸ್ಥಾನದ ಸರ್ಕಾರವು ಇಟ್ಟ ಮೊದಲ ದಿಟ್ಟ ಹೆಜ್ಜೆಯಾಗಿತ್ತು. ಸಂಸ್ಥಾನದಲ್ಲಿ ಕಮೀಷನರ್ ಆಡಳಿತ ೧೮೮೧ರಲ್ಲಿ ಅಂತ್ಯಗೊಂಡು ರಾಜ್ಯಾಡಳಿತವನ್ನು ಪುನರ್ ಧಾರಣ ಮಾಡಿದ ಮೈಸೂರು ಅರಸು ಮನೆತನದ ಚಾಮರಾಜೇಂದ್ರ ಒಡೆಯರಿಗೆ ದಿವಾನರಾಗಿದ್ದ ಸಿ. ರಂಗಾಚಾರ್ಲು ಅವರ ಸೇವಾವಧಿಯಲ್ಲಿ ಸ್ಥಾಪಿಸಲ್ಪಟ್ಟ ಈ ಪ್ರಜಾಪ್ರತಿನಿಧಿಸಭೆಗೆ, ಆರಂಭದ ವರ್ಷಗಳಲ್ಲಿ ಪ್ರಮುಖ ಗಣ್ಯರು, ಭೂಮಾಲೀಕರು, ಕೃಷಿಕರು, ಸಾವುಕಾರರು, ಶ್ರೀಮಂತ ವರ್ತಕರು, ಜಾತಿ ಮುಖಂಡರು

ಹಾಗೂ ಸ್ಥಳೀಯ ನಿಧಿ ಬೋರ್ಡುಗಳಿಂದ ಆಯ್ದ ಸದಸ್ಯರನ್ನು ಒಂದು ವರ್ಷದ ಅವಧಿಗೆ ನಾಮಕರಣ ಮಾಡಲಾಗುತ್ತಿತ್ತು. ಜಿಲ್ಲಾಧಿಕಾರಿಗಳು, ತಾಲ್ಲೂಕಿಗೆ ಒಬ್ಬರು ಅಥವಾ ಇಬ್ಬರು ಕೃಷಿಕರು ಹಾಗೂ ಮೂವರು ಅಥವಾ ನಾಲ್ವರು ವರ್ತಕರನ್ನು ಆಯಾ ವರ್ಗದ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಿ ಕಳುಹಿಸಬೇಕಾಗಿತ್ತು. ಪಟೇಲ್ ಬಂಡಿರೆಡ್ಡಿ (ಆನೆಮಡುಗು), ಭೈರಾರೆಡ್ಡಿ (ಗುಮ್ಮನಾಯಕನಪಾಳ್ಯ), ಭೈರಾರೆಡ್ಡಿ (ಶಿಡ್ಲಘಟ್ಟ), ಚನ್ನವೀರಪ್ಪ (ಚಿಕ್ಕಬಳ್ಳಾಪುರ), ಚೌಡೇಗೌಡ (ಮುಳಬಾಗಿಲು) ಮುಂತಾದವರು ಜಿಲ್ಲೆಯನ್ನು ಪ್ರತಿನಿಧಿಸಿದ ಮೊದಲ ಸದಸ್ಯರುಗಳಾಗಿದ್ದರು. ಈ ವ್ಯವಸ್ಥೆ ೧೮೮೭ರವರೆಗೆ ಅಸ್ತಿತ್ವದಲ್ಲಿತ್ತು. ಪ್ರತಿವರ್ಷ ಪ್ರಜಾಪ್ರತಿನಿಧಿಸಭೆಗೆ ಸದಸ್ಯರನ್ನು ನಾಮಕರಣ ಮಾಡಬೇಕಾಗಿದ್ದು, ಹಿಂದಿನ ವರ್ಷದ ಸದಸ್ಯರನ್ನು ಮರು ಆಯ್ಕೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ತಾಕೀತು ಮಾಡಲಾಗುತ್ತಿತ್ತು. ಈ ಅವಧಿಯಲ್ಲಿ ಪ್ರಜಾಪ್ರತಿನಿಧಿಸಭೆಯನ್ನು ರಚಿಸುವಲ್ಲಿ ಜಿಲ್ಲಾಧಿಕಾರಿಗಳ ಪಾತ್ರ ಹಿರಿದಾಗಿತ್ತು. ಆದರೆ ಅದರ ಸದಸ್ಯರಿಗೆ ಯಾವುದೇ ಬಗೆಯ ಹೆಚ್ಚಿನ ಅಧಿಕಾರಗಳಿರದೆ, ಇವು ಅವರಿಗೆ ಕೇವಲ ಸಾಮಾಜಿಕ ಸ್ಥಾನ-ಮಾನಗಳನ್ನು ನೀಡುವ ಅಲಂಕಾರಿಕ ಸ್ಥಾನಗಳಾಗಿದ್ದವು.

ತದನಂತರ ಸಂಸ್ಥಾನದ ಸರ್ಕಾರವು ೧೮೮೭ (ಆಗಸ್ಟ್ ೧೩) ರಲ್ಲಿ ಪ್ರಜಾಪ್ರತಿನಿಧಿಸಭೆಯ ಸಂರಚನೆಗೆ ಸಂಬಂಧಿಸಿದಂತೆ ತಂದ ಸುಧಾರಣೆಯಿಂದಾಗಿ, ಕೃಷಿಕರು, ಇನಾಂದಾರರು, ವರ್ತಕರು, ಕೈಗಾರಿಕೋದ್ಯಮಿಗಳೇ ಮುಂತಾದ ವರ್ಗಗಳಿಂದ ಪ್ರಜಾಪ್ರತಿನಿಧಿಸಭೆಗೆ ಸದಸ್ಯರನ್ನು ನಾಮಕರಣ ಮಾಡಲು "ಆಸ್ತಿ" ಪ್ರಮಾಣ(ತೇರಿಗೆ ಪಾವತಿ)ವನ್ನು ಮಾನದಂಡವಾಗಿ ಬಳಸುವಂತಾಯಿತು. ಸ್ಥಳೀಯ ಆಡಳಿತಸಂಸ್ಥೆ, ಪುರಸಭೆ, ಸಾರ್ವಜನಿಕ ಸಂಘ ಸಂಸ್ಥೆ ಹಾಗೂ ವಿವಿಧ ವರ್ಗದ ಜನರನ್ನು ಪ್ರತಿನಿಧಿಸುವ ರೀತಿಯಲ್ಲಿ ತಾಲೂಕಿಗೆ ಗರಿಷ್ಠ ನಾಲ್ವರು ಸದಸ್ಯರನ್ನು ಆಯ್ದು ಕಳುಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಲಾಯಿತು. ಅದರಂತೆ ೧೮೮೭ರ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರನ್ನೂ ಆಯ್ಕೆ ಮಾಡಲಾಗಿತ್ತು. ಈ ರೀತಿ ಆಯ್ಕೆಯಾದ ಸದಸ್ಯರ ಹೆಸರನ್ನು ಆಯಾ ತಾಲೂಕಿನ ಪ್ರಮುಖ ಸ್ಥಳಗಳಲ್ಲಿ ಜಾಹೀರು ಮಾಡಬೇಕೆಂದೂ ಸೂಚಿಸಲಾಯಿತು. ಆ ಪ್ರಕಾರ ಕೋಲಾರ ಜಿಲ್ಲೆಯ ೧೦ ತಾಲೂಕುಗಳಿಂದ ಗರಿಷ್ಠ ೪೦ ಸದಸ್ಯರನ್ನು ಕಳುಹಿಸಲು ಅವಕಾಶವಿತ್ತು.

೧೮೮೭ರ ಸಾಲಿನ ಆಯ್ಕೆಯಲ್ಲಾದ ದೋಷಗಳನ್ನು ಪರಿಗಣಿಸಿ, ೧೮೮೮ರಲ್ಲಿ ನೂತನ ಆದೇಶವನ್ನು ಹೊರಡಿಸುವ ಮೂಲಕ ಹೆಚ್ಚು ಕಂದಾಯ ಪಾವತಿ ಮಾಡುವ ವ್ಯಕ್ತಿಗಳ ತಾಲೂಕುವಾರು ಪಟ್ಟಿಯನ್ನು ಆಧರಿಸಿ, ಸದಸ್ಯರನ್ನು ಪ್ರಜಾಪ್ರತಿನಿಧಿ ಸಭೆಗೆ ನಾಮಕರಣ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸುವುದರ ಜೊತೆಗೆ, ಮುಖ್ಯ ಕಾರ್ಯದರ್ಶಿಗಳಿಗೂ ಆ ಪಟ್ಟಿಯನ್ನು ಕಳುಹಿಸುವಂತೆ ಸೂಚಿಸಲಾಯಿತು. ಈ ಬಗೆಯ ನಾಮಕರಣ ಮುಖೇನ ಸದಸ್ಯರ ಆಯ್ಕೆ ಪದ್ಧತಿ ೧೮೯೧ರವರೆಗೆ ಮುಂದುವರಿಯಿತು. ಆದರೆ ಪ್ರಜಾಪ್ರತಿನಿಧಿಗಳ ಆಯ್ಕೆಯಲ್ಲಿ ಚುನಾವಣಾ ವಿಧಾನವನ್ನು ೧೮೯೧ರಲ್ಲಿ ಅನುಷ್ಠಾನಕ್ಕೆ ತರುವ ಮೂಲಕ ನಾಮಕರಣ ವ್ಯವಸ್ಥೆಗೆ ವಿದಾಯ ಹೇಳಲಾಯಿತು.

ಪ್ರಜಾಪ್ರತಿನಿಧಿ ಸಭೆಯ ಸಂರಚನೆಗೆ ಸಂಬಂಧಿಸಿದಂತೆ ಸರ್ಕಾರವು ೧೮೯೧ರ ಮೇ ೧೪ರಂದು ಹೊರಡಿಸಿದ ಮಹತ್ವದ ಆದೇಶದನ್ವಯ ತಾಲೂಕಿಗೆ ಮೂರು-ನಾಲ್ಕು ಸದಸ್ಯರನ್ನು, ಅವರು ಬೊಕ್ಕಸಕ್ಕೆ ಸಂದಾಯ ಮಾಡುವ "ಕಂದಾಯ ಮೊತ್ತ"ವನ್ನು ಆಧರಿಸಿ ಆಯ್ಕೆ ಮಾಡಿ ಕಳುಹಿಸುವ ವ್ಯವಸ್ಥೆ ಜಾರಿಗೆ ಬಂದಿತು. ಮತದಾರರನ್ನು ಗುರುತಿಸಲು "ಕಂದಾಯ ಪಾವತಿ" ವ್ಯವಸ್ಥೆಯನ್ನೇ ಮಾನದಂಡವನ್ನಾಗಿ ನಿಗಧಿಪಡಿಸಲಾಯಿತು. ಪುರಸಭೆ, ಸ್ಥಳೀಯ ನಿಧಿ ಬೋರ್ಡ್ ಹಾಗೂ ಇತರ ಸಂಸ್ಥೆಗಳ ಸದಸ್ಯತ್ವವನ್ನು ನಿಗಧಿಪಡಿಸಲಾಯಿತು. ಅದರಂತೆ ಭೂಕಂದಾಯವಾದಲ್ಲಿ ಕೋಲಾರ, ಚಿಂತಾಮಣಿ (ಶ್ರೀನಿವಾಸಪುರ ಉಪತಾಲೂಕು ಸೇರಿದಂತೆ), ಗೌರಿಬಿದನೂರು ತಾಲೂಕುಗಳಲ್ಲಿ ೧೫೦ ರೂ; ಬಾಗೇಪಲ್ಲಿ (ಗುಡಿಬಂಡಾ ಉಪತಾಲೂಕು ಸೇರಿದಂತೆ) ತಾಲೂಕಿನಲ್ಲಿ ರೂ.೨೦೦/-; ಬೌರಿಂಗ್‌ಪೇಟೆ (ಇಂದಿನ ಬಂಗಾರಪೇಟೆ), ಮುಳಬಾಗಿಲು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಹಾಗೂ ಮಾಲೂರು ತಾಲೂಕುಗಳಲ್ಲಿ ೧೦೦ ರೂ.ಗಳ ಕನಿಷ್ಠ

## ಲೋಕಸಭಾ ಚುನಾವಣಾ ಫಲಿತಾಂಶಗಳ ಜಿಲ್ಲಾ ಪಕ್ಷಿನೋಟ (೧೯೫೨–೨೦೦೪)

| | ಚುನಾವಣೆ ವರ್ಷ | ಕೋಲಾರ ಲೋಕಸಭಾ ಕ್ಷೇತ್ರ (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | ಚಿಕ್ಕಬಳ್ಳಾಪುರ / ಹೊಸಕೋಟೆ ಲೋಕಸಭಾ ಕ್ಷೇತ್ರ (*) (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) |
|---|---|---|---|
| ೧ | ೧೯೫೨ | ** ೧) ದೊಡ್ಡತಿಮ್ಮಯ್ಯ (ಭಾ.ರಾ.ಕಾಂ) ೨,೦೩,೯೮೮(೨೮.೪೨)<br>** ೨) ಎಂ. ವಿ. ಕೃಷ್ಣಪ್ಪ (ಭಾ.ರಾ.ಕಾಂ) ೧,೭೨,೫೪೬ (೨೪.೦೩) | ಈ ಕ್ಷೇತ್ರವನ್ನು ೧೯೬೨ರಲ್ಲಿ ನೂತನವಾಗಿ ರೂಪಿಸಲಾಯಿತು. ಆವರೆಗೆ ಕೋಲಾರ ಲೋಕಸಭಾಕ್ಷೇತ್ರವು ದ್ವಿಸದಸ್ಯ ಕ್ಷೇತ್ರವಾಗಿತ್ತು. |
| ೨ | ೧೯೫೭ | ** ೧) ದೊಡ್ಡತಿಮ್ಮಯ್ಯ (ಭಾ.ರಾ.ಕಾಂ) ಅವಿರೋಧ ಆಯ್ಕೆ<br>** ೨) ಕೆ.ಚೆಂಗಲರಾಯರೆಡ್ಡಿ (ಭಾ.ರಾ.ಕಾಂ) ೨,೦೯,೫೪೨ (೫೩.೨೩) | |
| ೩ | ೧೯೬೨ | **ಮೀಸಲು** ಕ್ಷೇತ್ರವೆಂದು ಘೋಷಿಸಲಾಯಿತು.<br>ದೊಡ್ಡತಿಮ್ಮಯ್ಯ (ಭಾ.ರಾ.ಕಾಂ) ೧,೦೪,೧೬೨ (೪೩.೫೪) | ಕೆ.ಚೆಂಗಲರಾಯ ರೆಡ್ಡಿ (ಭಾ.ರಾ.ಕಾಂ) ೧,೨೭,೦೪೭ (೪೯.೮೬)<br>**ಉಪಚುನಾವಣೆ:** (೧೫–೬–೧೯೬೫)<br>ಎಚ್.ಪಿ.ಲಿಂಗಾರೆಡ್ಡಿ (ಭಾ.ರಾ.ಕಾಂ) ೬೭,೭೦೭ (೭೪.೧೮) |
| ೪ | ೧೯೬೭ | ಜಿ.ವೈ.ಕೃಷ್ಣನ್ (ಭಾ.ರಾ.ಕಾಂ) ೧,೩೧,೦೪೧ (೪೭೪೩) | ಈ ಕ್ಷೇತ್ರಕ್ಕೆ **ಹೊಸಕೋಟೆ** ಲೋಕಸಭಾ ಕ್ಷೇತ್ರ ಎಂದು ನಾಮಕರಣ ಮಾಡಲಾಯಿತು.<br>ಎಂ.ವಿ.ಕೃಷ್ಣಪ್ಪ (ಭಾ.ರಾ.ಕಾಂ) ೧,೬೦,೩೭೪(೫೪.೬೧) |
| ೫ | ೧೯೭೧ | ಜಿ.ವೈ.ಕೃಷ್ಣನ್ (ರಾ.ಕಾಂ.(ಜೆ)) ೨,೧೭,೦೩೭ (೮೧.೩೨) | **ಹೊಸಕೋಟೆ** ಲೋಕಸಭಾಕ್ಷೇತ್ರ<br>ಎಂ.ವಿ.ಕೃಷ್ಣಪ್ಪ (ರಾಕಾಂ(ಜೆ)) ೨,೪೦,೨೪೪ (೭೭.೧೬) |
| ೬ | ೧೯೭೭ | ಜಿ.ವೈ.ಕೃಷ್ಣನ್ (ಭಾ.ರಾ.ಕಾಂ) ೧,೯೬,೨೯೦ (೫೫.೮೫) | **ಚಿಕ್ಕಬಳ್ಳಾಪುರ ಕ್ಷೇತ್ರ** ಎಂದು ಪುನರ್ ನಾಮಕರಣ ಮಾಡಲಾಯಿತು.<br>ಎಂ.ವಿ.ಕೃಷ್ಣಪ್ಪ (ಭಾ.ರಾ.ಕಾಂ) ೨,೦೭,೫೯೯ (೫೨.೪೩) |
| ೭ | ೧೯೮೦ | ಜಿ.ವೈ.ಕೃಷ್ಣನ್ (ಕಾಂಗೈ) ೧,೮೭,೨೪೧ (೫೦.೧೯) | ಎಸ್. ಎನ್. ಪ್ರಸನ್ನಕುಮಾರ್, (ಕಾಂಗೈ) ೨,೩೪,೧೭೨ (೫೭.೨೧) |
| ೮ | ೧೯೮೪ | ಜಿ.ವೆಂಕಟೇಶ್(ಜ.ಪ) ೨,೫೫,೬೭೨ (೫೧.೯೨) | ವಿ. ಕೃಷ್ಣರಾವ್ (ಭಾ.ರಾ.ಕಾಂ) ೨,೮೭,೨೯೯ (೫೧.೯೯) |
| ೯ | ೧೯೮೯ | ವೈ.ರಾಮಕೃಷ್ಣ (ಭಾ.ರಾ.ಕಾಂ) ೩,೫೦,೦೯೯ (೫೧.೮) | ವಿ.ಕೃಷ್ಣರಾವ್ (ಭಾ.ರಾ.ಕಾಂ) ೩,೬೭,೬೩೮ (೫೭.೨೪) |
| ೧೦ | ೧೯೯೧ | ಕೆ.ಎಚ್.ಮುನಿಯಪ್ಪ (ಭಾ.ರಾ.ಕಾಂ) ೨,೩೫,೯೦೭ (೪೦.೧೪) | ವಿ.ಕೃಷ್ಣರಾವ್ (ಭಾ.ರಾ.ಕಾಂ) ೩,೯೯,೬೧೪ (೪೭.೪೭) |
| ೧೧ | ೧೯೯೬ | ಕೆ.ಎಚ್.ಮುನಿಯಪ್ಪ (ಭಾ.ರಾ.ಕಾಂ) ೩,೧೦,೩೫೯ (೪೪.೫೯) | ಆರ್.ಎಲ್.ಜಾಲಪ್ಪ (ಜ.ದ) ೩,೩೭,೫೪೭ (೪೪.೭೪) |
| ೧೨ | ೧೯೯೮ | ಕೆ.ಎಚ್.ಮುನಿಯಪ್ಪ (ಭಾ.ರಾ.ಕಾಂ) ೩,೦೪,೭೬೧(೫೬.೬೩) | ಆರ್.ಎಲ್.ಜಾಲಪ್ಪ (ಭಾ.ರಾ.ಕಾಂ) ೩,೬೦,೭೬೧ (೪೪.೪೧) |
| ೧೩ | ೧೯೯೯ | ಕೆ.ಎಚ್.ಮುನಿಯಪ್ಪ (ಭಾ.ರಾ.ಕಾಂ) ೩,೭೧,೯೬೪ (೫೦.೦೦) | ಆರ್.ಎಲ್.ಜಾಲಪ್ಪ (ಭಾ.ರಾ.ಕಾಂ) ೪,೨೨,೫೪೮ (೫೧.೦೦) |
| ೧೪ | ೨೦೦೪ | ಕೆ. ಎಚ್. ಮುನಿಯಪ್ಪ (ಭಾ.ರಾ.ಕಾಂ) ೩,೮೫,೫೮೨ (೪೨.೪೦) | ಆರ್. ಎಲ್. ಜಾಲಪ್ಪ (ಭಾ.ರಾ.ಕಾಂ) ೩,೬೬,೭೦೪ (೪೦.೪೦) |

(**) ೧೯೬೨ರವರೆಗೆ ದ್ವಿಸದಸ್ಯ ಕ್ಷೇತ್ರ.

(*) ೧೯೬೨ರಲ್ಲಿ ನೂತನವಾಗಿ ರಚಿಸಲ್ಪಟ್ಟಿತು.

## ಜಿಲ್ಲಾ ವಿಧಾನಸಭಾ ಚುನಾವಣಾ ಫಲಿತಾಂಶಗಳ ಪಕ್ಷಿನೋಟ–೧ (೧೯೫೭–೧೯೭೮)

| ಚುನಾವಣಾ ವರ್ಷ | | ೧೯೫೭ | ೧೯೬೨ | ೧೯೬೭ | ೧೯೭೨ | ೧೯೭೮ |
|---|---|---|---|---|---|---|
| ಕ್ರಮ ಸಂಖ್ಯೆ | ವಿಧಾನಸಭಾ ಕ್ಷೇತ್ರ | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಶೇಕಡಾವಾರು ಪ್ರಮಾಣ) |
| ೧ | ೨ | ೩ | ೪ | ೫ | ೬ | ೭ |
| ೧. | **ಕೋಲಾರ** | ಕೆ.ಪಟ್ಟಾಭಿರಾಮನ್ (ಪಕ್ಷೇತರ) ೭,೫೯೩ (೪೬.೬೨) | ಡಿ. ಎ. ಅಬ್ದುಲ್ ರಷೀದ್ (ಭಾ.ರಾ.ಕಾಂ) ೧೦,೫೯೫ (೪೪.೬೮) | ಪಿ.ವೆಂಕಟಗಿರಿಯಪ್ಪ (ಪ) ೨೦,೯೮೮ (೫೭.೭೮) | ಪಿ.ವೆಂಕಟಗಿರಿಯಪ್ಪ (ಪ) ೧೩,೨೧೬ (೪೪.೫೬) | ಡಿ.ವೆಂಕಟರಾಮಯ್ಯ (ಭಾ.ರಾ.ಕಾಂ) ೧೪,೬೯೫ (೪೭.೫೨) |
| ೨. | **ವೇಮಗಲ್** | ೧೯೭೨ರಲ್ಲಿ ಈ ಕ್ಷೇತ್ರವನ್ನು ರೂಪಿಸಲಾಯಿತು. | | | ಜಿ. ನಾರಾಯಣಗೌಡ (ಭಾ.ರಾ.ಕಾಂ) ೧೭,೦೧೪ (೫೩.೭೬) | ಸಿ. ಭೈರೇಗೌಡ (ಪ) ೨೧,೨೫೮ (೫೧.೪೯) |
| ೩. | **ಬಂಗಾರಪೇಟೆ** | ಕೆ.ಚೆಂಗಲರಾಯರೆಡ್ಡಿ(ಭಾ.ರಾ.ಕಾಂ) ೧೦,೭೬೧ (೬೩.೩೭)(ಎ) **(S)** | ಈ.ನಾರಾಯಣಗೌಡ (ಪಕ್ಷೇತರ) ೧೩,೪೬೭ (೫೬.೦೪) | ಈ. ನಾರಾಯಣಗೌಡ (ಪ) ೧೯,೬೨೬ (೬೪.೪೦) | ೧೯೭೨ರಲ್ಲಿ ಇದನ್ನು ಬೇತಮಂಗಲ ಕ್ಷೇತ್ರಕ್ಕೆ ಸೇರಿಸಲಾಯಿತು. | |
| ೪. | **ಬೇತಮಂಗಲ** | ೧೯೭೨ರಲ್ಲಿ ಈ ಕ್ಷೇತ್ರವನ್ನು ರೂಪಿಸಲಾಯಿತು. | | | ಈ. ನಾರಾಯಣಗೌಡ (ಭಾ.ರಾ.ಕಾಂ) ೧೮,೦೫೯ (೬೦.೩೯) | ಕೆ.ಎಂ. ದೊರೈಸ್ವಾಮಿನಾಯ್ಡು (ಪ) ೨೦,೩೮೦ (೫೬.೯೨) |
| ೫ | **ಕೆ. ಜಿ. ಎಫ್. **** | ೧) ಪಿ. ಎಂ. ಸ್ವಾಮಿದೊರೈ (ಎಸ್.ಸಿ.ಎಫ್) ೧೯,೧೧೧ (೨೨.೫೧)<br>೨) ಕೆ.ಎಸ್. ವಾಸನ್ (ಸಿ.ಪಿ.ಐ) ೧೮,೦೨೯ (೨೦.೩೮) | ೧) ಎಂ. ಸಿ. ನರಸಿಂಹನ್ (ಸಿ.ಪಿ.ಐ) ೧೯,೭೫೫ (೨೭.೩೫)<br>೨) ಸಿ.ಎಂ. ಅರ್ಮುಗಂ (ಎಸ್.ಪಿ.ಎಫ್.) ೧೯,೫೪೮ (೨೬.೭೭) | ಎಸ್. ರಾಜಗೋಪಾಲ್ (ಸಿಪಿಐ) ೬,೮೮೬ (೨೬.೭೧) | ಎನ್.ರಾಜಗೋಪಾಲ್ (ಭಾ.ರಾ.ಕಾಂ) ೨೦,೦೨೪ (೫೬.೭೫) **(S)** | ಸಿ. ಎಂ. ಆರ್ಮುಗಂ (ಪ) ೧೬,೦೭೭ (೪೭.೧೮) **(S)** |
| ೬ | **ರಾಬರ್ಟ್‌ಸನ್ ಪೇಟೆ** | ೧೯೬೭ರಲ್ಲಿ ಈ ಕ್ಷೇತ್ರವನ್ನು ರೂಪಿಸಲಾಯಿತು. | | ಡಿ. ವೆಂಕಟರಾಮಯ್ಯ, (ಭಾ.ರಾ.ಕಾಂ) ೧೪,೫೫೬ (೬೯.೭೩) | ಇದನ್ನು ೧೯೭೨ರಲ್ಲಿ ಕೆ.ಜಿ.ಎಫ್. ಕ್ಷೇತ್ರಕ್ಕೆ ಸೇರಿಸಲಾಯಿತು. | |
| ೭ | **ಮುಳಬಾಗಿಲು–ಶ್ರೀನಿವಾಸಪುರ **** | ೧. ಟಿ.ಚನ್ನಯ್ಯ, (ಭಾ.ರಾ.ಕಾಂ) ಅವಿರೋಧ ಆಯ್ಕೆ<br>೨. ಜಿ. ನಾರಾಯಣಗೌಡ(ಭಾ.ರಾ.ಕಾಂ) ೨೧,೨೨೫ (೫೨.೩೩) | ೧) ಬಿ.ಎಲ್. ನಾರಾಯಣಸ್ವಾಮಿ (ಪ) ೩೨,೬೬೨ (೩೫.೩೭)<br>೨) ಜಿ. ನಾರಾಯಣಗೌಡ, (ಭಾ.ರಾ.ಕಾಂ), ೧೯,೩೨೭ (೨೦.೯೩) | ಜಿ.ನಾರಾಯಣಪ್ಪ (ಭಾ.ರಾ.ಕಾಂ) ೧೨,೦೭೦ (೬೪.೯೯) | ಟಿ.ಚನ್ನಯ್ಯ (ಭಾ.ರಾ.ಕಾಂ) ೧೯,೧೧೭ (೫೨.೧೧) | ಪಿ. ಮುನಿಯಪ್ಪ (ಪ) ೧೭,೧೧೨ (೪೭.೧೮) |

ಮುಂದುವರಿದಿದೆ.......

| ೧ | ೨ | ೩ | ೪ | ೫ | ೬ | |
|---|---|---|---|---|---|---|
| ೮. | ಶ್ರೀನಿವಾಸಪುರ | ೧೯೬೨ ರಲ್ಲಿ ಮುಳಬಾಗಿಲು–ಶ್ರೀನಿವಾಸಪುರ ದ್ವಿಸದಸ್ಯ ಕ್ಷೇತ್ರವನ್ನು ಪ್ರತ್ಯೇಕಿಸಿ ಇದನ್ನು ಸ್ವತಂತ್ರ ಕ್ಷೇತ್ರವನ್ನಾಗಿ ಘೋಷಿಸಲಾಯಿತು. | | ಜಿ.ನಾರಾಯಣಗೌಡ, (ಭಾ.ರಾ.ಕಾಂ) ೨೦,೩೧೧ (೫೭.೫೯) | ಬಿ.ಎಲ್.ನಾರಾಯಣಸ್ವಾಮಿ (ಪ) ೧೮,೮೦೧(೫೩.೮೮) | ಎಸ್.ಬಾಚಿರೆಡ್ಡಿ ಕಾಂ (ಓ) ೨೯,೬೧೬ (೭೧.೬೩) **(S)** |
| ೯. | ಚಿಂತಾಮಣಿ** | ೧. ಎಂ.ಜಿ.ಆಂಜನೇಯರೆಡ್ಡಿ (ಪ) ೧೭೬೬೩ (೨೫.೩೦)<br>೨. ಟಿ.ಕೆ.ಗಂಗೀರೆಡ್ಡಿ (ಪಕ್ಷೇತರ) ೧೬,೮೪೪ (೨೪.೧೩) | ಟಿ.ಕೆ.ಗಂಗೀರೆಡ್ಡಿ(ಪಕ್ಷೇತರ) ೧೬,೪೧೧ (೫೧.೬೨) **(S)** | ಎಂ.ಸಿ.ಆಂಜನೇಯರೆಡ್ಡಿ (ಪ) ೨೧,೬೬೪ (೫೬.೧೩) | ಟಿ.ಕೆ.ಗಂಗೀರೆಡ್ಡಿ (ಪ) ೨೯,೯೭೫ (೬೦.೩೪) | ಚೌಡಾರೆಡ್ಡಿ (ಪ) ೩೦,೨೭೭ (೫೩.೭೫) |
| ೧೦. | ಮಾಲೂರು | ಎಚ್.ಸಿ.ಲಿಂಗಾರೆಡ್ಡಿ (ಭಾ.ರಾ.ಕಾಂ) ೬,೫೬೦(೪೨.೨೪) | ಎಚ್.ಸಿ.ಲಿಂಗಾರೆಡ್ಡಿ (ಭಾ.ರಾ.ಕಾಂ) ೧೦,೪೯೦ (೫೫.೪೪) | ಎಸ್.ವಿ.ರಾಮೇಗೌಡ (ಪ) ೧೭,೧೩೫ (೫೧.೧೫) | ಎಚ್.ಸಿ.ಲಿಂಗೇರೆಡ್ಡಿ (ಭಾ.ರಾ.ಕಾಂ) ೨೬,೨೮೪ (೭೧.೨೫) | ಎ.ವಿ.ಮುನಿಸ್ವಾಮಿ (ಭಾ.ರಾ.ಕಾಂ) ೨೩,೫೮೧ (೫೮.೩೦) |
| ೧೧ | ಚಿಕ್ಕಬಳ್ಳಾಪುರ ** | ೧. ಜಿ. ಪಾಪಣ್ಣ (ಭಾ.ರಾ.ಕಾಂ) ೨೨,೯೮೨ (೨೬.೮೦)<br>೨. ಎ. ಮುನಿಯಪ್ಪ (ಭಾ.ರಾ.ಕಾಂ) ೨೨,೬೬೬ (೨೬.೪೩) | ೧. ಎಸ್. ಮುನಿರಾಜು (ಭಾ.ರಾ.ಕಾಂ) ೨೯,೧೪೯ (೨೭.೧೯)<br>೨. ಎ.ಮುನಿಯಪ್ಪ (ಭಾ.ರಾ.ಕಾಂ) ೨೬,೬೫೨ (೨೩.೯೭) | ಸಿ.ವಿ.ವೆಂಕಟರಾಯಪ್ಪ (ಪ) ೨೩,೩೬೨ (೬೩.೬೦) | ಕೆ.ಎಂ.ಪುಟ್ಟಸ್ವಾಮಿ (ಭಾ.ರಾ.ಕಾಂ) ೧೬,೩೦೨ (೪೨.೮೭) | ಸಿ.ವಿ.ವೆಂಕಟರಾಯಪ್ಪ ಭಾರಾಕಾಂ, ೨೭,೮೦೪ (೫೫.೮೩) |
| ೧೨. | ಶಿಡ್ಲಘಟ್ಟ | – | ಜೆ.ವೆಂಕಟಪ್ಪ (ಪಕ್ಷೇತರ) ೧೭,೪೯೦ (೫೮.೮೫) | ಎಸ್.ಅವಲರೆಡ್ಡಿ (ಭಾ.ರಾ.ಕಾಂ) ೨೧,೬೯೬ (೫೭.೭೭) | ಟಿ.ವೆಂಕಟರಾಯಪ್ಪ (ಭಾ.ರಾ.ಕಾಂ) ೨೧,೯೦೮ (೫೪.೩೨) | ಜೆ.ವೆಂಕಟಪ್ಪ (ಭಾ.ರಾ.ಕಾಂ) ೩೧,೩೦೮ (೬೦.೮೧) |
| ೧೩. | ಬಾಗೇಪಲ್ಲಿ | ಬಿ.ವಿ.ನಾರಾಯಣರೆಡ್ಡಿ (ಸ.ಪ) ೧೩,೪೪೬ (೫೪.೩೫) | – | ಬಿ.ಸುಬ್ಬರಾಯಪ್ಪ (ಭಾ.ರಾ.ಕಾಂ) ೧೨,೯೪೯ (೫೦.೭೭) | ಎ.ಮುನಿಯಪ್ಪ (ಭಾ.ರಾ.ಕಾಂ) ೧೬,೫೧೭ (೫೧.೬೨) | ಶ್ರೀಮತಿ ರೇಣುಕಾ ರಾಜೇಂದ್ರನ್ (ಭಾ.ರಾ.ಕಾಂ) ೧೯,೪೬೧ (೫೫) |
| ೧೪. | ಗೌರಿಬಿದನೂರು | ಎನ್. ಸಿ. ನಾಗಯ್ಯರೆಡ್ಡಿ(ಭಾ.ರಾ.ಕಾಂ) ೧೪,೦೮೭ (೫೨.೯೨) | ಕೆ.ಎಚ್.ವೆಂಕಟರೆಡ್ಡಿ (ಪ) ೨೫,೨೦೩ (೬೬.೬೮) | ಆರ್.ಎನ್.ಲಕ್ಷ್ಮೀಪತಿ (ಪ) ೨೪,೩೯೧ (೫೯.೩೩) | ಆರ್.ಎಸ್.ಲಕ್ಷ್ಮೀಪತಿ (ಪ) ೨೩,೫೯೮ (೫೨.೯೬) | ವಿ.ಕೃಷ್ಣರಾವ್ (ಭಾ.ರಾ.ಕಾಂ) ೩೦,೪೪೯ (೫೯.೯೦) |
| | ಉಪಚುನಾವಣೆ **(S)** | **೧೯೫೨ ಅಕ್ಟೋಬರ್**<br>ಆರ್. ಕೆ. ಪ್ರಸಾದ್ (ಭಾ.ರಾ.ಕಾಂ) ೫,೬೩೫ (೩೭.೭೩) | **೧೯೬೦ ಏಪ್ರಿಲ್**<br>ಎಂ. ಸಿ. ಆಂಜನೇಯರೆಡ್ಡಿ (ಭಾ.ರಾ.ಕಾಂ) ೧೮,೦೧೮ (೫೧.೪೭) | – | **೧೯೮೨ ನವೆಂಬರ್**<br>ಎಸ್.ಆರ್.ಷಣ್ಮುಗಂ (ಭಾ.ರಾ.ಕಾಂ) ೧೩,೩೭೪ (೩೭.೧೨) | **(S)**<br>ತುರ್ತುಪರಿಸ್ಥಿತಿಯಿಂದಾಗಿ ಉಪಚುನಾವಣೆಗಳು ನಡೆಯಲಿಲ್ಲ |

** ದ್ವಿಸದಸ್ಯ ಕ್ಷೇತ್ರ

## ಜಿಲ್ಲಾ ವಿಧಾನಸಭಾ ಚುನಾವಣೆ ಫಲಿತಾಂಶಗಳ ಪಕ್ಷಿನೋಟ–೨ (೧೯೭೮–೨೦೦೪)

| ಚುನಾವಣೆ ವರ್ಷ | | ೧೯೭೮ | ೧೯೮೩ | ೧೯೮೫ | ೧೯೮೯ | ೧೯೯೪ | ೧೯೯೯ | ೨೦೦೪ |
|---|---|---|---|---|---|---|---|---|
| ಕ್ರಮ ಸಂಖ್ಯೆ | ವಿಧಾನಸಭಾ ಕ್ಷೇತ್ರ | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ,ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ) |
| ೧ | ೨ | ೩ | ೪ | ೫ | ೬ | ೭ | ೮ | ೯ |
| ೧ | ಕೋಲಾರ | ಎಂ.ಅಬ್ದುಲ್ ಲತೀಫ್ (ಕಾಂಗ್ರೆ) ೨೬,೫೭೬ (೪೬.೮೦) | ಕೆ.ಆರ್.ಶ್ರೀನಿವಾಸಯ್ಯ (ಜ.ಪ) ೩೯,೦೦೫ (೬೪.೮೮) | ಕೆ.ಆರ್.ಶ್ರೀನಿವಾಸಯ್ಯ (ಜ.ಪ) ೩೪,೭೦೧ (೫೧.೯೯) | ಕೆ.ಆರ್.ನಿಸಾರ್ ಅಹ್ಮದ್ (ಭಾ.ರಾ.ಕಾಂ) ೩೯,೮೬೦ (೪೫.೫೨) | ಕೆ.ಶ್ರೀನಿವಾಸಗೌಡ (ಜ.ದ) ೪೦,೬೧೨ (೪೩.೯೧) | ಕೆ.ಶ್ರೀನಿವಾಸಗೌಡ (ಜ.ದ) ೫೯,೦೧೭ (೫೪) | ಕೆ. ಶ್ರೀನಿವಾಸಗೌಡ (ಭಾ.ರಾ.ಕಾಂ) ೫೪,೭೫೫ (೪೮.೬೯) |
| ೨. | ವೇಮಗಲ್ | ಎಸ್.ಗೋವಿಂದಗೌಡ (ಕಾಂಗ್ರೆ) ೩೬,೦೦೦ (೫೫.೭೬) | ಸಿ.ಭೈರೇಗೌಡ (ಪಕ್ಷೇತರ) ೪೮,೦೬೧ (೭೧.೮೮) | ಸಿ.ಭೈರೇಗೌಡ (ಜ.ಪ) ೪೯,೪೫ (೬೧.೮೪) | ಸಿ.ಭೈರೇಗೌಡ (ಜ.ಪ) ೪೨,೬೮೭ (೪೮.೮೬) | ಸಿ.ಭೈರೇಗೌಡ (ಜ.ದ.) ೬೬,೦೪೯ (೬೩.೫೧) | ಸಿ.ಭೈರೇಗೌಡ (ಜ.ದ) (ಸಂ.) ೫೬, ೪೪೯ (೫೧) (S) | ಕೃಷ್ಣಾಭೈರೇಗೌಡ (ಭಾ.ರಾ.ಕಾಂ) ೯೫,೫೬೩ (೭೫.೭೩) |
| ೩. | ಬೇತಮಂಗಲ | ಸಿ. ವೆಂಕಟೇಶಪ್ಪ (ಭಾ.ರಾ.ಕಾಂ) ೨೭,೭೧೫ (೫೩.೨೮) | ಸಿ.ವೆಂಕಟೇಶಪ್ಪ (ಭಾ.ರಾ.ಕಾಂ) ೨೦,೨೫೩ (೩೮.೮೬) | ಎ.ಚನ್ನಪ್ಪ (ಜ.ಪ) ೩೮,೮೪೩ (೬೫.೧೨) | ಎಂ.ನಾರಾಯಣಸ್ವಾಮಿ (ಜ.ದ) ೨೮,೧೬೨ (೩೬.೧೫) | ಎಂ.ನಾರಾಯಣಸ್ವಾಮಿ (ಜ.ದ) ೪೩,೧೫೭ (೪೨.೦೫) | ಸಿ.ವೆಂಕಟೇಶಪ್ಪ (ಭಾ.ರಾ.ಕಾಂ) ೭೫,೮೪೪ (೬೯) | ಬಿ.ಪಿ. ವೆಂಕಟಮುನಿಯಪ್ಪ (ಭಾ.ಜ.ಪ) ೪೧,೧೧೭ (೩೩.೫೩) |
| ೪. | ಕೆ.ಜಿ.ಎಫ್ | ಸಿ.ಎಂ.ಆರ್ಮುಗಂ (ಭಾ.ರಿ.ಪ) ೨೧,೯೨೦ (೪೭೫೧) | ಎಂ.ಭಕ್ತವತ್ಸಲಂ (ಎ.ಐ.ಡಿ.ಎಂ.ಕೆ) ೧೬,೨೩೪ (೩೫.೮೫) | ಟಿ.ಎಸ್.ಮಣಿ (ಸಿಪಿಎಂ)೨೮,೩೫ (೫೧.೦೨) | ಎಂ.ಭಕ್ತವತ್ಸಲಂ (ಎ.ಐ.ಡಿ.ಎಂ.ಕೆ) ೩೯,೨೮೮ (೫೧.೧೩) | ಎಸ್.ರಾಜೇಂದ್ರನ್(ಭಾ.ರಿ.ಪ) ೨೭,೨೭೧ (೪೨.೮೮) | ಎಂ.ಭಕ್ತವತ್ಸಲಂ (ಎ.ಐ.ಡಿ.ಎಂ.ಕೆ) ೨೨,೫೫೫ (೩೭) | ಎಸ್. ರಾಜೇಂದ್ರನ್ (ಭಾ.ರಿ.ಪ) ೨೩,೯೯೮ (೪೨.೮೪) |
| ೫ | ಮುಳಬಾಗಿಲು | ಜೆ. ಎಂ. ರೆಡ್ಡಿ (ಕಾಂಗ್ರೆ) ೨೨,೩೦೦ (೩೪.೯೩) | ಬೀರೇಗೌಡ (ಪ) ೩೧,೮೬೨ (೪೯.೯೧) | ಆರ್.ವೆಂಕಟರಾಮಯ್ಯ (ಸಿಪಿಎಂ) ೪೨,೭೧೨ (೬೩.೦೩) | ಎಂ.ವಿ.ವೆಂಕಟಪ್ಪ (ಭಾ.ರಾ.ಕಾಂ) ೩೩,೨೮೫ (೩೬.೮೩) | ಆರ್.ಶ್ರೀನಿವಾಸ (ಜ.ದ) ೪೪,೯೭೭ (೪೧.೪೦) | ಎಂ.ವಿ. ವೆಂಕಟಪ್ಪ (ಭಾ.ರಾ.ಕಾಂ) ೩೯,೭೨೨ (೩೫) | ಆರ್. ಶ್ರೀನಿವಾಸ್ (ಜ.ದ (ಜಾ)) ೪೮,೨೫೦(೩೯.೯೨) |
| ೬ | ಶ್ರೀನಿವಾಸಪುರ | ಕೆ.ಆರ್. ರಮೇಶ್ ಕುಮಾರ್ (ಕಾಂಗ್ರೆ) ೩೧,೮೬೭ (೫೮.೮೬) | ಜಿ.ಕೆ. ವೆಂಕಟಶಿವಾರೆಡ್ಡಿ (ಭಾ.ರಾ.ಕಾಂ) ೩೧,೦೩೧ (೪೯.೩೦) | ಕೆ.ಆರ್. ರಮೇಶ್ ಕುಮಾರ್ (ಜ.ಪ) ೩೮,೦೭೪ (೫೯.೯೦) | ಜಿ.ಕೆ.ವೆಂಕಟಶಿವಾ ರೆಡ್ಡಿ (ಭಾ.ರಾ.ಕಾಂ) ೪೮,೨೩೧ (೫೪.೮೫) | ಕೆ.ಆರ್. ರಮೇಶ್ ಕುಮಾರ್ (ಜ.ದ) ೫೨,೦೪ (೫೧.೧೦) | ಜಿ. ಕೆ. ವೆಂಕಟಶಿವಾ ರೆಡ್ಡಿ (ಭಾ.ರಾ.ಕಾಂ) ೫೨,೯೯೦ (೪೯) | ಕೆ.ಆರ್.ರಮೇಶ್ಕುಮಾರ್ (ಭಾ.ರಾ.ಕಾಂ) ೬೫,೦೪೧ (೫೭.೬೯) |

ಮುಂದುವರಿದಿದೆ.......

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| ೭ | ಚಿಂತಾಮಣಿ | ಚೌಡರೆಡ್ಡಿ (ಕಾಂಗ್ರೆ) ೪೬,೦೬೨ (೬೮.೫೨) | ಚೌಡರೆಡ್ಡಿ (ಭಾ.ರಾ.ಕಾಂ) ೩೯,೫೨೫ (೫೭.೫೩) | ಕೆ.ಎಂ.ಕೃಷ್ಣಾರೆಡ್ಡಿ (ಜ.ಪ) ೪೩,೬೫೫ (೫೪.೫೩) | ಚೌಡರೆಡ್ಡಿ (ಭಾ.ರಾ.ಕಾಂ) ೫೭,೮೯೯ (೫೯.೨೩) | ಕೆ.ಎಂ.ಕೃಷ್ಣಾರೆಡ್ಡಿ (ಜ.ದ) ೫೨,೨೯೩ (೪೭.೫೮) | ಚೌಡರೆಡ್ಡಿ (ಪಕ್ಷೇತರ) ೫೮,೯೭೭ (೫೧) | ಡಾ॥ ಎಂ.ಸಿ. ಸುಧಾಕರ್ (ಭಾ.ರಾ.ಕಾಂ) ೬೬,೨೫೬ (೫೧.೯೫) |
| ೮ | ಮಾಲೂರು | ಪಿ. ಎನ್. ರೆಡ್ಡಿ (ಕಾಂಗ್ರೆ) ೨೩,೬೫೮ (೪೫.೩೭) | ಎ.ನಾಗರಾಜು (ಭಾ.ರಾ.ಕಾಂ) ೨೩,೩೭೧ (೪೩.೧೨) | ಎಚ್.ಬಿ.ದ್ಯಾವರಪ್ಪ (ಜ.ಪ) ೩೨,೬೬೩ (೫೨.೪೧) | ಎ.ನಾಗರಾಜು (ಭಾ.ರಾ.ಕಾಂ) ೪೨,೭೮೮ (೫೩.೪೨) | ಎಚ್.ಬಿ.ದ್ಯಾವರಪ್ಪ (ಜ.ದ) ೪೦,೮೨೮ (೪೩.೦೩) | ಎ.ನಾಗರಾಜು (ಭಾ.ರಾ.ಕಾಂ) ೫೩,೭೬೨ (೫೩) | ಎಸ್.ಎಸ್. ಕೃಷ್ಣಯ್ಯಶೆಟ್ಟಿ (ಭಾ.ಜ.ಪ) ೯,೧೨೦ (೯.೪೪) |
| ೯. | ಚಿಕ್ಕಬಳ್ಳಾಪುರ | ಶ್ರೀಮತಿ ರೇಣುಕಾ ರಾಜೇಂದ್ರನ್ (ಕಾಂಗ್ರೆ) ೩೨,೩೭೮ (೫೫.೫೮) | ಎ.ಮುನಿಯಪ್ಪ (ಪ) ೪೦,೭೫೧ (೬೩.೮೨) | ಕೆ.ಎಂ.ಮುನಿಯಪ್ಪ (ಜ.ಪ) ೩೯,೨೧೬ (೫೭.೮೩) | ಶ್ರೀಮತಿ ರೇಣುಕಾ ರಾಜೇಂದ್ರನ್ (ಭಾ.ರಾ.ಕಾಂ) ೩೯,೯೫೮ (೪೮.೬೦) | ಎಂ.ಶಿವಾನಂದ (ಪ) ೩೯,೫೨೦ (೪೮.೯೩) | ಶ್ರೀಮತಿ ಕೆ.ಅನಸೂಯಮ್ಮ ನಟರಾಜನ್ (ಭಾ.ರಾ.ಕಾಂ) ೩೯,೪೬೦ (೪೦) | ಎಸ್.ಎಂ.ಮುನಿಯಪ್ಪ (ಭಾ.ರಾ.ಕಾಂ) ೪೫೯೯೩(೪೧.೩೬) |
| ೧೦. | ಶಿಡ್ಲಘಟ್ಟ | ಎಸ್. ಮುನಿಶಾಮಪ್ಪ (ಕಾಂಗ್ರೆ) ೩೪,೬೮೩ (೫೨.೭೭) | ವಿ.ಮುನಿಯಪ್ಪ (ಭಾ.ರಾ.ಕಾಂ) ೩೪,೭೫೭ (೫೧.೫೪) | ಎಸ್.ಮುನಿಶಾಮಪ್ಪ (ಜ.ಪ) ೪೪,೯೯೯ (೫೫.೬೮) | ವಿ.ಮುನಿಯಪ್ಪ (ಭಾ.ರಾ.ಕಾಂ) ೫೨,೮೭೦ (೫೬.೪೭) | ವಿ.ಮುನಿಯಪ್ಪ (ಭಾ.ರಾ.ಕಾಂ) ೪೫,೬೭೯ (೪೩.೨೧) | ವಿ.ಮುನಿಯಪ್ಪ (ಭಾ.ರಾ.ಕಾಂ) ೬೦೫೧೪(೫೫) | ಎಸ್.ಮುನಿಶಾಮಪ್ಪ (ಜ.ದಳ.(ಜಾ)) ೬೦,೨೧೨ (೯೬.೮೫) |
| ೧೧. | ಬಾಗೇಪಲ್ಲಿ | ಎಸ್.ಮುನಿರಾಜು (ಕಾಂಗ್ರೆ) ೨೭,೦೫೨ (೪೭.೪೬) | ಎ.ವಿ.ಅಪ್ಪಸ್ವಾಮಿರೆಡ್ಡಿ (ಸಿಪಿಎಂ) ೩೪೯೬೯(೫೮.೭೭) | ಬಿ.ನಾರಾಯಣಸ್ವಾಮಿ (ಭಾ.ರಾ.ಕಾಂ) ೨೦,೪೫೪(೩೫.೩೮) | ಸಿ.ವಿ.ವೆಂಕಟರಾಯಪ್ಪ ೩೭,೨೬೫ (೪೭.೧೫) | ಜಿ.ವಿ.ಶ್ರೀರಾಮರೆಡ್ಡಿ (ಸಿಪಿಎಂ) ೩೫,೮೫೧ (೪೦.೩೨) | ಎನ್.ಸಂಪಂಗಿ (ಪ) ೪೦,೧೮೩ (೩೮) | ಜಿ.ವಿ.ಶ್ರೀರಾಮರೆಡ್ಡಿ (ಸಿಪಿಎಂ) ೫೭,೨೨೨(೫೨.೦೭) |
| ೧೨. | ಗೌರಿಬಿದನೂರು | ಬಿ.ಎನ್.ಕೆ.ಪಾಪಯ್ಯ (ಕಾಂಗ್ರೆ) ೩೩,೭೫೬ (೫೧.೪೧) | ಆರ್.ಎನ್.ಲಕ್ಷ್ಮೀಪತಿ (ಜ.ಪ) ೩೪,೨೬೦(೫೨.೧೬) | ಚಂದ್ರಶೇಖರ್ (ಜ.ಪ) ೩೪,೨೯೧ (೪೭.೪೮) | ಎಸ್.ವಿ.ಅಶ್ವತ್ಥ – ನಾರಾಯಣರೆಡ್ಡಿ (ಭಾ.ರಾ.ಕಾಂ) ೪೦,೯೧೧ (೯೪.೪೦) | ಶ್ರೀಮತಿ ಎನ್.ಜ್ಯೋತಿರೆಡ್ಡಿ (ಜ.ದ) ೪೨,೧೯೯ (೪೩.೩೮) | ಎನ್.ಎಚ್.ಶಿವಶಂಕರ ರೆಡ್ಡಿ (ಪ) ೩೪೫೪೧ (೩೩) | ಎನ್.ಎಚ್.ಶಿವಶಂಕರ್ ರೆಡ್ಡಿ (ಭಾ.ರಾ.ಕಾಂ) ೪೯,೬೩೬ (೪೩.೬೩) |
| | **ಉಪಚುನಾವಣೆಗಳು (S)** | – | – | – | – | – | **೨೦೦೩ ಸೆಪ್ಟೆಂಬರ್** ಸಿ.ಬಿ.ಕೃಷ್ಣಭೈರೇಗೌಡ (ಅ.ಭಾ.ಪ್ರಜ.ದ) ೬೮,೪೪೮ | – |

ಭೂಕಂದಾಯ ಮಿತಿಯನ್ನೂ; ಮನೆ/ಅಂಗಡಿ ಕಂದಾಯ (ಮೊಹತರ್ಫ) ಆದಲ್ಲಿ ಕೋಲಾರ, ಮುಳಬಾಗಿಲು ಹಾಗೂ ಚಿಕ್ಕಬಳ್ಳಾಪುರ ತಾಲೂಕುಗಳಲ್ಲಿ ರೂ. ೧೭ ಹಾಗೂ ಉಳಿದ ಏಳು ತಾಲ್ಲೂಕುಗಳಲ್ಲಿ ರೂ.೧೩ ಅನ್ನು ಕನಿಷ್ಠ ಮಿತಿ ಎಂದು ನಿಗಧಿಪಡಿಸಲಾಯಿತು. ಐದುನೂರು ರೂಪಾಯಿಗಳಿಗಿಂತ ಹೆಚ್ಚು ಮೊತ್ತದ ಆದಾಯವಿರುವ ಒಂದು ಅಥವಾ ಅದಕ್ಕಿಂತ ಹೆಚ್ಚು ಗ್ರಾಮಗಳ ಇನಾಮದಾರತ್ವವನ್ನು ಹೊಂದಿರುವವರೂ ಪ್ರತಿನಿಧಿಗಳಾಗಲು ಅರ್ಹರಾಗಿದ್ದರು. ಅದೇ ತಾಲೂಕಿನವರಾಗಿದ್ದಲ್ಲಿ ಪದವೀಧರರೂ ಪ್ರತಿನಿಧಿಗಳಾಗುವ ಅವಕಾಶವಿತ್ತು. ಈ ರೀತಿ ಅರ್ಹತೆಯನ್ನುಳ್ಳವರಿಗೆ ಒಂದು ತಿಂಗಳು ಮುಂದಾಗಿ ತಿಳಿಸಿ, ಆಷಾಢ ಮಾಸದ ಮೊದಲ ವಾರದಲ್ಲಿ ಆಯಾ ತಾಲೂಕು ಕೇಂದ್ರಗಳಲ್ಲಿ ಅವರನ್ನು ಸಮಾವೇಶಗೊಳಿಸಲಾಗುತ್ತಿತ್ತು. ಆ ಸಭೆಯಲ್ಲಿ ಪ್ರತಿನಿಧಿಗಳನ್ನು ಅವರೇ ಆಯ್ಕೆ ಮಾಡಲು ಅವಕಾಶವಿತ್ತು. ಆ ಪ್ರಕಾರ ಆಯ್ಕೆಗೊಂಡವರ ಪಟ್ಟಿಯನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ರವಾನಿಸುತ್ತಿದ್ದು, ದಸರೆಯ ಬೆನ್ನಲ್ಲೇ ಸಮಾವೇಶಗೊಳ್ಳುವ ಅಧಿವೇಶನದಲ್ಲಿ ಪಾಲ್ಗೊಳ್ಳಲು ಆಯ್ಕೆಗೊಂಡವರಿಗೆ ವ್ಯವಸ್ಥೆ ಮಾಡಲಾಗುತ್ತಿತ್ತು. ಪ್ರತಿನಿಧಿಗಳಾಗಬಯಸುವವರು ೧೮ ವರ್ಷ ದಾಟಿದವರಾಗಬೇಕಿದ್ದು, ಪದವೀಧರರಾದಲ್ಲಿ ೨೫ ವರ್ಷ ದಾಟಿದವರಾಗಿರಬೇಕಿತ್ತು. ಅಲ್ಲದೇ ಶುದ್ಧ ಚಾರಿತ್ರದವರಾಗಿದ್ದು, ಮಾನಸಿಕ ಅಸ್ವಸ್ಥತೆಗೆ ಒಳಗಾಗಿರದೆ ಶಿಕ್ಷಾರ್ಹ ಅಪರಾಧವನ್ನು ಎಸಗಿದವರಾಗಿರಬಾರದಿತ್ತು. ಮತದಾರರನ್ನು ಗುರುತಿಸಲೂ, ಇದೇ "ಕಂದಾಯ ಪಾವತಿ" ಪ್ರಮಾಣವನ್ನೇ ಅನುಸರಿಸಿ, ಮತದಾನದ ಹಕ್ಕನ್ನು ಸೀಮಿತಗೊಳಿಸಿ ನೀಡಲಾಯಿತು. ಆ ಪ್ರಕಾರ ಜಿಲ್ಲೆಯ ಕೋಲಾರ ಹಾಗೂ ಚಿಂತಾಮಣಿ ತಾಲೂಕುಗಳಿಂದ ತಲಾ ನಾಲ್ಕು; ಮಾಲೂರು ತಾಲೂಕಿನಿಂದ ಎರಡು ಹಾಗೂ ಉಳಿದ ತಾಲೂಕುಗಳಿಂದ ತಲಾ ಮೂವರು ಸದಸ್ಯರಂತೆ ಒಟ್ಟು ೨೮ ಸದಸ್ಯರನ್ನು ಆಯ್ಕೆ ಮಾಡಿ ಕಳುಹಿಸಲಾಯಿತು. ಇದೇ ಕಾಯ್ದೆಯನ್ವಯ ಕೋಲಾರ ಚಿನ್ನದ ಗಣಿ ಬೋರ್ಡ್ ಕೂಡ ತನ್ನ ಪ್ರತಿನಿಧಿಯನ್ನು ಕಳುಹಿಸುವಂತಾಯಿತು. ಕೋಲಾರ ಪುರಸಭೆಯಿಂದ ಮೂವರು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಹಾಗೂ ಮುಳಬಾಗಿಲು ಪುರಸಭೆಗಳು ಒಬ್ಬೊಬ್ಬ ಪ್ರತಿನಿಧಿಯನ್ನು ಕಳಿಸಲು ಅವಕಾಶ ನೀಡಲಾಯಿತು. ಚಿಂತಾಮಣಿ ಚಿನ್ನಪ್ಪ, ಹಾಗೂ ಸೀತಾರಾಮಯ್ಯ ಮುಂತಾದವರು ೧೮೯೧ರಲ್ಲಿ ಜಿಲ್ಲೆಯ ಪರವಾಗಿ ಸದಸ್ಯರಾಗಿದ್ದರು.

ಆದರೆ ಚುನಾವಣೆ ನಿಯಮಕ್ಕೆ ಸಂಬಂಧಿಸಿದಂತೆ ೧೮೯೪ರಲ್ಲಿ ತಂದ ತಿದ್ದುಪಡಿಯಿಂದಾಗಿ ಮತದಾರರ ಆಸ್ತಿ/ಕಂದಾಯ ಅರ್ಹತೆ ಪ್ರಮಾಣದ ಮೊತ್ತವನ್ನು ಇಳಿಸುವ ಮೂಲಕ ಮತದಾನದ ಹಕ್ಕು ಹೆಚ್ಚು ಜನರಿಗೆ ಲಭಿಸುವಂತಾಯಿತು. ಆ ಪ್ರಕಾರ ಭೂಕಂದಾಯವಾದಲ್ಲಿ, ಜಿಲ್ಲೆಯ ಬಾಗೇಪಲ್ಲಿ (ಗುಡಿಬಂಡೆ ಉಪತಾಲೂಕು ಸೇರಿದಂತೆ) ತಾಲೂಕಿನಲ್ಲಿ ೧೦೦ ರೂ.; ಕೋಲಾರ, ಚಿಂತಾಮಣಿ (ಶ್ರೀನಿವಾಸಪುರ ಉಪ ತಾಲೂಕು ಸೇರಿದಂತೆ), ಗೌರಿಬಿದನೂರುಗಳಲ್ಲಿ ೭೫ ರೂ. ಹಾಗೂ ಉಳಿದ ತಾಲೂಕುಗಳಲ್ಲಿ ರೂ.೫೦/–; ಮನೆ/ಅಂಗಡಿ ಕಂದಾಯವಾದಲ್ಲಿ ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ ತಾಲೂಕುಗಳಲ್ಲಿ ರೂ.೧೭/– ಹಾಗೂ ಉಳಿದ ತಾಲೂಕುಗಳಲ್ಲಿ ರೂ.೧೩ ಪಾವತಿ ಮಾಡುವ ಎಲ್ಲಾ ತೆರಿಗೆದಾರರಿಗೂ ಮತದಾನದ ಹಕ್ಕು ಲಭಿಸಿತು. ಆದರೆ ಸದಸ್ಯರ ಆಯ್ಕೆಗೆ ೧೮೯೧ರ ಕಾಯ್ದೆಯನ್ವಯ ಇದ್ದ ಆಸ್ತಿ/ಕಂದಾಯ ಅರ್ಹತಾ ಪ್ರಮಾಣವನ್ನೇ ಉಳಿಸಿಕೊಳ್ಳಲಾಯಿತು. ಈ ಕಾಯ್ದೆಯನ್ವಯ ಪ್ರಜಾಪ್ರತಿನಿಧಿಸಭೆಯ ಸದಸ್ಯರ ಕಾಲಾವಧಿಯನ್ನು ಮೂರು ವರ್ಷಗಳಿಗೆ ನಿಗಧಿಪಡಿಸಲಾಯಿತು. ಅಲ್ಲದೇ ಪ್ರತೀ ಮೂರು ವರುಷಕ್ಕೊಮ್ಮೆ ಆಷಾಢಮಾಸದಲ್ಲಿ ಚುನಾವಣೆ ನಡೆಸುವಂತಾಯಿತು. ಅರ್ಹತೆಯುಳ್ಳ ಮತದಾರರ ಪಟ್ಟಿ ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹತೆಯನ್ನು ಹೊಂದಿರುವವರ ನಾಮಪಟ್ಟಿಯನ್ನು ಚುನಾವಣೆಗೆ ಪೂರ್ವಭಾವಿಯಾಗಿ ರಾಜ್ಯಪತ್ರ (ಗೆಜೆಟ್)ದಲ್ಲಿ ಪ್ರಕಟಿಸುವ ಪದ್ಧತಿಯನ್ನು, ೧೯೦೭ರ ಸೆಪ್ಟೆಂಬರ್ ಕಾಯ್ದೆಯ ಮೂಲಕ ಜಾರಿಗೆ ತರಲಾಯಿತು. ವಿದ್ವಾನ್ ರಾಜಗೋಪಾಲಚಾರಿ, ಮೀರ್ ಹುಸೇನ್ ಅಲಿ ಸಾಬ್ (೧೮೯೫) ಹಾಗೂ ಬೌರಿಂಗ್‌ಪೇಟೆಯ ರಾಮಣ್ಣ (೧೮೯೯) ಕೋಲಾರದಿಂದ ಪ್ರತಿನಿಧಿಸಿದವರಲ್ಲಿ

* ೧೯೫೭ರ ಚುನಾವಣೆಯಲ್ಲಿ ತುಮಕೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಸೇರಿದ್ದರು.ಕೋಲಾರದ ಗೋಪಾಲರಾವ್ (೧೯೦೭), ಸಿ.ವಿ. ಗೋಪಾಲರಾವ್ (೧೯೧೭), ಜಿ. ಗಿರ್ದೂಜಿರಾವ್ (೧೯೧೯), ರಾಮಕೃಷ್ಣಯ್ಯ (೧೯೨೦), ವೇಮರೆಡ್ಡಿ (೧೯೨೧–೨೨) ಮುಂತಾದವರೂ ಸದಸ್ಯರಾಗಿದ್ದ ಅಂಶ ವಿವಿಧ ವಾರ್ಷಿಕ ವರದಿಗಳಿಂದ ವೇದ್ಯವಾಗುತ್ತದೆ. ಅಲ್ಲದೆ ಕೆ.ಜಿ.ಎಫ್.ನಿಂದ ಥಾಮಸ್‌ರೀಚರ್ಡ್ಸ್ (೧೮೯೬), ಪಿ. ಬೋಸವರ್ತ್ (೧೯೦೧, ೧೯೦೬ ಹಾಗೂ ೧೯೦೯), ಸಿ. ಎಚ್. ರೀಚರ್ಡ್ಸ್ (೧೯೦೫, ೧೯೧೨, ೧೯೧೪ ಹಾಗೂ ೧೯೨೧) ಆರ್ಥರ್ ಗಿಫರ್ಡ್ (೧೯೧೨), ಕ್ರೂಲ್ಸ್ (೧೯೧೫, ೧೯೧೬ ಮತ್ತು ೧೯೨೧) ಪ್ರತಿನಿಧಿಸಿದ್ದ ಅಂಶವೂ ಉಲ್ಲೇಖಾರ್ಹವಾಗಿತ್ತು.

ಸಂಸ್ಥಾನದ ಆಡಳಿತವು ಬ್ರಿಟಿಷರಿಂದ ಮೈಸೂರು ರಾಜಮನೆತನಕ್ಕೆ ಪುನರ್ಧಾರಣಗೊಂಡ (೧೮೮೧) ಸಂದರ್ಭದಲ್ಲಿ, ಅರಸರ ನೆರವಿಗೆಂದು ರಚಿಸಲ್ಪಟ್ಟಿದ್ದ ಮೂವರು ಕೌನ್ಸಿಲರು ಹಾಗೂ ಪದನಿಮಿತ್ತ ಅಧ್ಯಕ್ಷರಾದ ದಿವಾನರನ್ನು ಒಳಗೊಂಡಿದ್ದ ಎಕ್ಸಿಕ್ಯುಟಿವ್ ಕೌನ್ಸಿಲನ್ನೇ (ಮುಂದೆ ಕಾನ್ಸುಲೇಟಿವ್ ಕೌನ್ಸಿಲ್ ಎಂದಾಯಿತು) ೧೯೦೭ರಲ್ಲಿ ವಿಸ್ತರಿಸಿ, ೧೮ ಸದಸ್ಯರನ್ನೊಳಗೊಂಡ “ಲೆಜಿಸ್ಲೆಟಿವ್ ಕೌನ್ಸಿಲ್” (ನ್ಯಾಯ ವಿಧಾಯಕ ಸಭೆ; ಇಂದಿನ ವಿಧಾನ ಪರಿಷತ್ ಮಾದರಿಯಲ್ಲಿ) ಆಗಿ ಪರಿವರ್ತಿಸುವ ಮೂಲಕ ದ್ವಿಸದನ ಶಾಸಕಾಂಗ ಪದ್ಧತಿಗೆ ೨೨.೬.೧೯೦೭ರಂದು ದಿವಾನ್ ಎ.ಪಿ.ಮಾಧವರಾಯರು ಚಾಲನೆ ನೀಡಿದರು. ಮುಂದೆ, ೧೯೧೩ರಲ್ಲಿ ಇದರ ಸದಸ್ಯ ಬಲವನ್ನು ೨೪ಕ್ಕೆ ಹೆಚ್ಚಿಸಿ, ಸಂಸ್ಥಾನದ ಆಯವ್ಯಯ ಪಟ್ಟಿಯ ಚರ್ಚೆಯಲ್ಲಿ ಪಾಲ್ಗೊಳ್ಳುವ ಅಧಿಕಾರವನ್ನೂ ದಿವಾನ್ ಎಂ.ವಿಶ್ವೇಶ್ವರಯ್ಯನವರು ಅದಕ್ಕೆ ನೀಡಿದರು. ಪ್ರಜಾಪ್ರತಿನಿಧಿ ಸಭೆಯು ವರುಷದಲ್ಲಿ ಎರಡು ಬಾರಿ (ಜೂನ್ ಹಾಗೂ ಡಿಸೆಂಬರ್) ಸಮಾವೇಶಗೊಳ್ಳುವ ವ್ಯವಸ್ಥೆಯೂ ೧೯೧೭ರಿಂದ ಆರಂಭವಾಗಲು ವಿಶ್ವೇಶ್ವರಯ್ಯನವರೇ ಕಾರಣಕರ್ತರಾಗಿದ್ದರು.

ಸಂಸ್ಥಾನದಲ್ಲಿ ಸರಿಸುಮಾರು ಅದೇ ವರ್ಷ ಸ್ಥಾಪಿಸಲ್ಪಟ್ಟ ‘ಪ್ರಜಾಮಿತ್ರಮಂಡಳಿ’ ಪಕ್ಷ (೧೯೧೭)ವು, ಕಾಂಗ್ರೆಸ್ ಪಕ್ಷವನ್ನು ಬ್ರಾಹಣಷಾಹಿ ಪಕ್ಷವೆಂದು ಪರಿಗಣಿಸಿದ್ದುದರಿಂದ, ಕಾಂಗ್ರೆಸಿನ ‘ಜವಾಬ್ದಾರಿ ಸರ್ಕಾರ ರಚನೆ’ ಹೋರಾಟಕ್ಕೆ ವಿರೋಧ ವ್ಯಕ್ತಪಡಿಸಿತು. ಈ ನಡುವೆ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ಹಾಗೂ ಮತದಾರರಿಗೆ ೫೦/– ರೂ.ಗಳ ಭೂಕಂದಾಯ ಇಲ್ಲವೇ ೧೦/– ರೂ.ಗಳ ಮನೆ/ಅಂಗಡಿ ಕಂದಾಯವನ್ನು ಅರ್ಹತಾ ಮೊತ್ತವೆಂದು ೧೯೧೮ರಲ್ಲಿ ಪುನರ್ ನಿಗಧಿಪಡಿಸುವ ಮೂಲಕ, ತಾಲೂಕುಗಳ ನಡುವೆ ಇದ್ದ ತಾರತಮ್ಯತೆಯನ್ನು ತೊಡೆದು ಹಾಕಲಾಯಿತು. ಲೆಜಿಸ್ಲೇಟಿವ್ ಕೌನ್ಸಿಲ್ (ನ್ಯಾಯ ವಿಧಾಯಕ ಸಭೆ)ನ ಸದಸ್ಯರ ಸಂಖ್ಯೆಯನ್ನು ೧೯೧೯ರಲ್ಲಿ ೩೦ಕ್ಕೆ ಹೆಚ್ಚಿಸಲಾಯಿತು. ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕನ್ನು ೧೯೨೨ರಲ್ಲೂ, ಸ್ಪರ್ಧಿಸುವ ಹಕ್ಕನ್ನು ೧೯೨೭ರಲ್ಲೂ ನೀಡಲಾಯಿತು. ಮೈಸೂರು ಸಂಸ್ಥಾನದ ಸನ್ನಿವೇಶಕ್ಕೆ ಹೊಂದುವಂತಹ ಸಂವಿಧಾನಿಕ ವ್ಯವಸ್ಥೆಯನ್ನು ರೂಪಿಸಲು ಬ್ರಿಜೇಂದ್ರನಾಥ ಸೀಲ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ೧೮–೧೦–೧೯೨೨ರಂದು ಸರ್ಕಾರವು ರಚಿಸಿತು. ಆ ಸಮಿತಿಯು ೧೯೨೩ರಲ್ಲಿ ನೀಡಿದ ವರದಿಯನ್ನು ಅಂಗೀಕರಿಸಿ ಸಂವಿಧಾನ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ತತ್ಪರಿಣಾಮವಾಗಿ, ಶಾಸನಸ್ಥ ಸ್ಥಾನ–ಮಾನಗಳನ್ನು ೧೯೨೩ರ ಮಸೂದೆಯ ಮೂಲಕ ಪಡೆದ ಪ್ರಜಾಪ್ರತಿನಿಧಿಸಭೆಯ ಗಾತ್ರ ಹಾಗೂ ಸದಸ್ಯರ ಆಯ್ಕೆಗೆ ಸಂಬಂಧಿಸಿದಂತೆ ಆದ ತಿದ್ದುಪಡಿಗಳಿಂದಾಗಿ ಕೋಲಾರ ಜಿಲ್ಲೆಯ ಸದಸ್ಯರ ಸಂಖ್ಯೆ ೩೪ಕ್ಕೇರಿತು. ಈ ಕಾಯ್ದೆಯನ್ವಯ, ಚುನಾವಣೆಯಲ್ಲಿ ಸ್ಪರ್ಧಿಸುವವರಿಗೆ ಹಾಗೂ ಮತದಾರರಿಗೆ ಇದ್ದ ಆಸ್ತಿ/ ಕಂದಾಯ ಅರ್ಹತಾ ಮೊತ್ತದ ಮಿತಿಯನ್ನು ರೂ. ೨೫/– ಭೂಕಂದಾಯ ಇಲ್ಲವೆ ರೂ.೫/– ಮನೆ/ಅಂಗಡಿ ಕಂದಾಯವೆಂದು ಪುನರ್ ಪರಿಷ್ಕರಿಸುವ ಮೂಲಕ ಚುನಾವಣಾ ಪ್ರಕ್ರಿಯೆಯಲ್ಲಿ ಹೆಚ್ಚು ಜನ ಭಾಗವಹಿಸುವಂತೆ ಮಾಡಲಾಯಿತು. ಅಲ್ಲದೇ ಮತದಾರರ ವಯಸ್ಸನ್ನು ೧೮ ರಿಂದ ೨೧ಕ್ಕೆ ಏರಿಸಲಾಯಿತು. ಮಿಗಿಲಾಗಿ ಮುಸ್ಲಿಮರಿಗೆ ಮೀಸಲು ಸ್ಥಾನ ನೀಡುವ ವ್ಯವಸ್ಥೆಯೂ ೧೯೨೩ರಲ್ಲೇ ಜಾರಿಗೆ ಬಂದಿತು.

ಈ ನಡುವೆ ಕೃಷಿಕರ ಅಭ್ಯುದಯಕ್ಕೆಂದೇ ಸಂಸ್ಥಾನದಲ್ಲಿ “ರೈತ ಸಂಘ”ವು ೧೯೨೭ರಲ್ಲಿ ಸ್ಥಾಪಿಸಲ್ಪಟ್ಟಿತು. ಅದೇ ವರ್ಷ ‘ಪ್ರಜಾಮಿತ್ರ ಮಂಡಳಿ’ ಪಕ್ಷಕ್ಕೆ ಸೇರುವ ಮೂಲಕ ಕ್ಯಾಸಂಬಳ್ಳಿಯ ಕೆ. ಚೆಂಗಲರಾಯ ರೆಡ್ಡಿ, ರಾಜಕೀಯ ರಂಗವನ್ನು ಪ್ರವೇಶಿಸಿದರಾದರೂ ಬಹುಬೇಗ ‘ಪ್ರಜಾಮಿತ್ರ ಮಂಡಳಿ’ಯ ಮಿತಗಾಮಿ ಧೋರಣೆಯಿಂದ ಬೇಸತ್ತು, ೧೯೩೦ರಲ್ಲಿ ಸಮಾನ ಮನಸ್ಕರೊಡಗೂಡಿ ‘ಪ್ರಜಾಪಕ್ಷ’ ಎಂಬ

ನೂತನ ಪಕ್ಷದ ಸ್ಥಾಪನೆಗೆ ಮುಂದಾಗುವ ಮೂಲಕ ಹಿಂದುಳಿದ ವರ್ಗಗಳ ಏಳ್ಗೆಯ ಕನಸನ್ನು ಕಂಡರು. ಏತನ್ಮಧ್ಯೆ ಪ್ರಜಾಪ್ರತಿನಿಧಿ ಸಭೆಗೆ ಜಿಲ್ಲೆಯ ಸದಸ್ಯರ ಸಂಖ್ಯೆ ೧೯೩೦ರಲ್ಲಿ ೩೬ಕ್ಕೇರಿತು. ಅಲ್ಲದೇ ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾದ ಸದಸ್ಯರು, ಪ್ರಮಾಣವಚನ ಸ್ವೀಕರಿಸುವ ಪದ್ಧತಿಯೂ ೧೯೩೦ರ ನಂತರ ಆರಂಭವಾಯಿತು.

ಅದೇ ವರ್ಷ (೧೯೩೦) ನಡೆದ ನ್ಯಾಯವಿಧಾಯಕ ಸಭೆ ಹಾಗೂ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಗಳಲ್ಲಿ ಬಂಗಾರಪೇಟೆ ಕ್ಷೇತ್ರದಿಂದ ಎರಡೂ ಸದನಗಳಿಗೆ ಸದಸ್ಯರಾಗಿ ಆಯ್ಕೆ ಆದ ಕೆ. ಚೆಂಗಲರಾಯ ರೆಡ್ಡಿಯವರು ೧೯೩೭ರವರೆಗೆ ನಿರಂತರವಾಗಿ ಎರಡು ಸಭೆಗಳಿಗೆ ಏಕಕಾಲದಲ್ಲಿ ಆಯ್ಕೆಗೊಂಡುದು ಉಲ್ಲೇಖಾರ್ಹವಾಗಿದೆ. ಏತನ್ಮಧ್ಯೆ ಸಂಸ್ಥಾನದಲ್ಲಿದ್ದ ಪ್ರಜಾಮಿತ್ರ ಮಂಡಳಿ ಹಾಗೂ ಪ್ರಜಾಪಕ್ಷಗಳ ನಾಯಕರು, ಎರಡು ಪಕ್ಷಗಳ ಒಗ್ಗೂಡಿಕೆಯ ಮಹತ್ವವನ್ನು ಮನವರಿಕೆ ಮಾಡಿಕೊಂಡರು. ಅದರ ಪರಿಣಾಮವಾಗಿ, ೧೯೩೪ರ ಡಿಸೆಂಬರ್‌ನಲ್ಲಿ ಈ ಎರಡೂ ಪಕ್ಷಗಳು ಒಂದಾಗುವ ಮೂಲಕ ಪ್ರಜಾ ಸಂಯುಕ್ತ ಪಕ್ಷವು ಜನ್ಮ ತಾಳಿತು. ಮರುವರ್ಷವೇ ಅದರ ಅಧ್ಯಕ್ಷರಾದ ಕೆ.ಸಿ. ರೆಡ್ಡಿಯವರು ೧೯೩೫–೩೬ರವರೆಗೆ ಅಧ್ಯಕ್ಷಗಾದಿಯಲ್ಲಿದ್ದರು. ಈ ನಡುವೆ ೧೯೩೪ರಲ್ಲಿ ೩೫ಕ್ಕೆ ಇಳಿದ ಜಿಲ್ಲೆಯ ಸದಸ್ಯರ ಸಂಖ್ಯೆ ೧೯೩೭ರಲ್ಲಿ ಮತ್ತೆ ೩೯ಕ್ಕೇರಿತು. ೧೯೩೪–೩೬ರ ಅವಧಿಯಲ್ಲಿ ಕೆ.ಚೆಂಗಲರಾಯ ರೆಡ್ಡಿ (ಬೌರಿಂಗ್‌ಪೇಟೆ (ಬಂಗಾರುಪೇಟೆ) ತಾಲೂಕು) ಹಾಗೂ ಎಲ್.ವೇಮರೆಡ್ಡಿ (ಮಾಲೂರು), ಜಿಲ್ಲೆಯಿಂದ ಎದ್ದು ಕಾಣುವ ಸದಸ್ಯರಾಗಿದ್ದು ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರೆಂಬುದಕ್ಕೆ ವಿಫುಲ ದಾಖಲೆಗಳಿವೆ. ಏತನ್ಮಧ್ಯೆ, ಅನಾರೋಗ್ಯದಿಂದ ಬಳಲುತ್ತಿದ್ದ ಗಾಂಧೀಜಿಯವರು ಎರಡನೇ ಬಾರಿಗೆ ನಂದಿಗಿರಿಧಾಮದಲ್ಲಿ ವಿಶ್ರಾಂತಿಗೆಂದು ೧೯೩೬ರಲ್ಲಿ ತಂಗಿದ್ದಾಗ, ತಮ್ಮನ್ನು ಭೇಟಿಯಾದ ಪ್ರಜಾ ಸಂಯುಕ್ತ ಪಕ್ಷದ ಕೆ.ಚೆಂಗಲರಾಯರೆಡ್ಡಿ ಮುಂತಾದ ಧುರೀಣರೊಂದಿಗೆ ಚರ್ಚಿಸಿ, ಕಾಂಗ್ರೆಸ್ ಸೇರುವಂತೆ ಅವರ ಮನವೊಲಿಸುವಲ್ಲಿ ಯಶಸ್ವಿಯಾದರು. ತತ್ಪರಿಣಾಮವಾಗಿ ಆ ವೇಳೆಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ೧೦೦ಕ್ಕೂ ಹೆಚ್ಚು ಸ್ಥಾನಗಳನ್ನು ಹೊಂದಿದ್ದ "ಪ್ರಜಾಸಂಯುಕ್ತ ಪಕ್ಷ" ಹಾಗೂ ಸುಮಾರು ೩೦ ಸ್ಥಾನಗಳನ್ನು ಮಾತ್ರ ಹೊಂದಿದ್ದ ಕಾಂಗ್ರೆಸ್ ಪಕ್ಷಗಳು ೧೯೩೭ರ ಅಕ್ಟೋಬರ್ ೧೬ರಂದು ವಿಲೀನಗೊಂಡು "ಮೈಸೂರು ಕಾಂಗ್ರೆಸ್" ಅಸ್ತಿತ್ವಕ್ಕೆ ಬಂದಿತು. ಈ ನಡುವೆ ಸಂಸ್ಥಾನದಲ್ಲಿ "ಜವಾಬ್ದಾರಿ ಸರ್ಕಾರ"ಕ್ಕಾಗಿ ಒತ್ತಾಯಿಸಿದ ರಾಜಕೀಯ ಪಕ್ಷಗಳ ಒತ್ತಡಕ್ಕೆ ಮಣಿದ ಸಂಸ್ಥಾನದ ಸರ್ಕಾರವು ೧೯೩೮ರಲ್ಲಿ 'ಕೆ. ಆರ್. ಶ್ರೀನಿವಾಸ್ ಅಯ್ಯಂಗಾರ್ ಸಮಿತಿ'ಯನ್ನು ರಚಿಸಿತು. ಆ ಸಮಿತಿ ನೀಡಿದ ವರದಿಯನ್ನು ೧೯೪೦ರಲ್ಲಿ ಭಾಗಶಃ ಒಪ್ಪಿದ ಸರ್ಕಾರವು ಕೌನ್ಸಿಲ್‌ನ (ನ್ಯಾಯವಿಧೇಯಕ ಸಭೆ) ಸದಸ್ಯತ್ವವನ್ನು ೫೦ ರಿಂದ ೯೮ಕ್ಕೂ, ಪ್ರಜಾಪ್ರತಿನಿಧಿಸಭೆಯ ಸದಸ್ಯರ ಸಂಖ್ಯೆಯನ್ನು ೩೨೫ಕ್ಕೂ ಹೆಚ್ಚಿಸಿತು. ಮಿಗಿಲಾಗಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಕಾಲಾವಧಿಯನ್ನು ಮೂರರಿಂದ ನಾಲ್ಕು ವರುಷಗಳಿಗೆ ಹೆಚ್ಚಿಸಿತು. ಮಹಿಳೆಯರು ಹಾಗೂ ಕ್ರಿಶ್ಚಿಯನ್ನರಿಗಾಗಿ ಪ್ರತ್ಯೇಕ ಮೀಸಲು ಸ್ಥಾನವನ್ನು ನೀಡಲಾಯಿತು. ಪದನಿಮಿತ್ತ ದಿವಾನರೇ ಅಧ್ಯಕ್ಷರಾಗಿರುವ ಲೆಜಿಲೇಟಿವ್ ಕೌನ್ಸಿಲ್ (ನ್ಯಾಯ ವಿಧಾಯಕ ಸಭೆ) ಸರ್ಕಾರದ ಕಾರ್ಯಾಂಗವಾಯಿತು. ಮುಂದೆ ೧೯೪೧ರಲ್ಲಿ ಜರುಗಿದ ಚುನಾವಣೆಯಲ್ಲಿ ಮೈಸೂರು ಕಾಂಗ್ರೆಸ್ ಪಕ್ಷವು ತಾನು ಸ್ಪರ್ಧಿಸಿದ್ದ ೧೩೨ ಸ್ಥಾನಗಳ ಪೈಕಿ ೧೦೬ರಲ್ಲಿ ಗೆಲುವು ಪಡೆದಾಗ, ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೊಂಡಿತು. ಆಗ ಜಿಲ್ಲೆಯ ಕೆ.ಚೆಂಗಲರಾಯರೆಡ್ಡಿ ಮುಂತಾದವರು ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗಿದ್ದರು. ಆದರೆ ದೇಶದಾದ್ಯಂತ ನಡೆದ "ಭಾರತ ಬಿಟ್ಟು ತೊಲಗಿ" ಬ್ರಿಟಿಷ್ ವಿರೋಧಿ ಚಳವಳಿಯಿಂದಾಗಿ ಸಂಸ್ಥಾನದಲ್ಲೂ ಕಾಂಗ್ರೆಸ್ ನಾಯಕರು ಬಂಧಿಸಲ್ಪಟ್ಟರು. ಕ್ರಮೇಣ ಚಳವಳಿಯ ಕಾವು ಇಳಿದ ನಂತರ ನಾಯಕರು ಬಿಡುಗಡೆಗೊಂಡು ಸಭಾಕಲಾಪ ಆರಂಭಗೊಂಡಾಗ, ಆವರೆಗೆ ಬಳಕೆಯಲ್ಲಿದ್ದ ವಾರ್ಷಿಕ ಎರಡು (ದಸರಾ ಹಾಗೂ ಹಣಕಾಸು) ಅಧಿವೇಶನಗಳ ಜೊತೆಗೆ ಮೂರನೆಯ ಅಧಿವೇಶನವನ್ನೂ ಕರೆಯುವಂತೆ ಸದಸ್ಯರು ೧೯೪೨ರಲ್ಲಿ ಒತ್ತಾಯಿಸಿದರಾದರೂ, ಸರ್ಕಾರ ಅದಕ್ಕೆ ಸಮ್ಮತಿಸಲಿಲ್ಲ.

ಮುಂದೆ ೧೯೪೫ರಲ್ಲಿ ಪ್ರಜಾಪ್ರತಿನಿಧಿ ಸಭೆಗೆಂದು ನಡೆದ ಚುನಾವಣೆಯಲ್ಲಿ ಜಿಲ್ಲೆಯು ೪೩ ಸ್ಥಾನಗಳನ್ನು ಹೊಂದಿದ್ದು, ಕೋಲಾರದ ಸಿ.ಎಚ್.ವೆಂಕಟರಮಣಪ್ಪ, ಮುಳಬಾಗಿಲಿನ ಎಂ.ವಿ.ಕೃಷ್ಣಪ್ಪ, ಗೂಳೂರಿನ ಜೋಡಿದಾರರಾಗಿದ್ದ ಸೂರ್ಯನಾರಾಯಣ ಜೋಷಿ, ಶಿಡ್ಲಘಟ್ಟದ ಕೆ.ಎಂ.ನಂಜುಂಡಪ್ಪ, ಮಹಿಳಾ ಪ್ರತಿನಿಧಿಯಾಗಿ ಬೋರಿಂಗ್‌ಪೇಟೆಯಿಂದ ಶ್ರೀಮತಿ.ಕೆ.ಸಿ.ಸರೋಜಮ್ಮ (ಕೆ. ಚೆಂಗಲರಾಯರೆಡ್ಡಿ ಮಡದಿ) ಮುಂತಾದವರು ಆಯ್ಕೆಯಾಗಿದ್ದರು.

ಮುಂದೆ (೧೯೪೭ರ ಆಗಸ್ಟ್ ೧೫) ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರವೂ ಸಂಸ್ಥಾನದ ರಾಜಪ್ರಭುತ್ವವು, ರಾಜಕೀಯ ಪಕ್ಷಗಳ "ಜವಾಬ್ದಾರಿ ಸರ್ಕಾರ" ರಚನೆಯ ಬೇಡಿಕೆಯನ್ನು ಕಡೆಗಣಿಸಿದಾಗ ಅದಕ್ಕಾಗಿ ಒತ್ತಾಯಿಸಿ ೧೯೪೭ರ ಅಕ್ಟೋಬರ್ ೧೧ರಂದು "ಮೈಸೂರು ಚಲೋ" ಚಳವಳಿಯನ್ನು "ಮೈಸೂರು ಕಾಂಗ್ರೆಸ್" ಹಮ್ಮಿಕೊಂಡಿತು. ಈ ಚಳವಳಿಗೆ ತಲೆಬಾಗಿದ ಸಂಸ್ಥಾನದ ಸರ್ಕಾರ, ಕಾಂಗ್ರೆಸಿಗೆ ಜವಾಬ್ದಾರಿ ಸರ್ಕಾರ ರಚಿಸಲು ಒಪ್ಪಿಗೆ ನೀಡಿತು. ಅದರಂತೆ ೧೯೪೭ರ ಅಕ್ಟೋಬರ್